೫೮

ಅಕ್ಟೋ - ಡಿಸೆಂ - ೦೪

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿ ತ್ರೈಮಾಸಿಕ

ಕುವೆಂಪು ಜನ್ಮ ಶತಮಾನೋತ್ಸವ - ವಿಶ್ವ ಮಾನವ ವರ್ಷ ೨೦೦೪

- ನವ ವಸಾಹತುಶಾಹಿ ತಲ್ಲಣ : ಟಿಪ್ಪಣಿ/ಆತ್ಮಕಥಾನಕಗಳು
- ಆಡೆನ್, ಬ್ರೆಕ್ಟ್, ಟಾಗೋರ್ ಕವಿತೆಗಳು
- ಮುಸ್ಲಿಂ ಸಂಸ್ಕೃತಿಯ ಅಮ್ಮ ಮತ್ತು ಯುದ್ಧ
- ತುಳು ಕಾದಂಬರಿಗಳು- ಅವಲೋಕನ
- ಬೆಳಗುವ ಪ್ರತಿಮೆಗಳ ಕವಿ: ಗುನ್ನಾರ್ ಎಕ್ಲೋಫ್
- ಅರುಂಧತಿರಾಯ್ : ಎರಡು ಲೇಖನಗಳು



ದಯವಿಟ್ಟು ಗಮನಿಸಿ

ಪ್ರತಿ ಪುಸ್ತಕಕ್ಕೂ ಮುಖ ಬೆಲೆಯ ಶೇ. ೨೦ರಷ್ಟು
ರಿಯಾಯಿತಿ ನೀಡಲಾಗುವುದು.

✿ ✿ ✿

ಶೇ. ೩೩ರಷ್ಟು ರಿಯಾಯಿತಿಯಿದೆ. ಒಂದು ಸಾವಿರ ರೂಪಾಯಿಗಳಿಗೆ
ಮೇಲ್ಪಟ್ಟು ಪುಸ್ತಕಗಳನ್ನು ಖರೀದಿಸಬೇಕು.

✿ ✿ ✿

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕನ್ನಡ ಹಾಗೂ ಇಂಗ್ಲೀಷ್
ಭಾಷೆಗಳಲ್ಲಿ ಪ್ರಕಟಿಸುತ್ತಿರುವ ತ್ರೈಮಾಸಿಕ ಪತ್ರಿಕೆ
'ಅನಿಕೇತನ' ಕ್ಕೆ ಚಂದಾದಾರರಾಗಿರಿ.

ವಾರ್ಷಿಕ ಚಂದಾ	-	೭೦-೦೦
ಅಜೀವ ಚಂದಾ	-	೨೫೦-೦೦
ಬಿಡಿ ಪ್ರತಿ	-	೨೦-೦೦

ವಾರ್ಷಿಕ ಚಂದಾದಾರರ ಗಮನಕ್ಕೆ

*ಅನಿಕೇತನ ವಾರ್ಷಿಕ ಚಂದಾದಾರರಾಗಿರುವವರೆ
ತಮ್ಮ ಚಂದಾ ಅವಧಿ ಮುಗಿದಿದೆ.
ದಯವಿಟ್ಟು ಚಂದಾ ನವೀಕರಿಸಿ*

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ

ಅಕ್ಟೋಬರ್ - ಡಿಸೆಂಬರ್, ೨೦೦೩

ಕುವೆಂಪು ಜನ್ಮ ಶತಮಾನೋತ್ಸವ - ವಿಶ್ವಮಾನವ ವರ್ಷ ೨೦೦೪

ಸಂಪಾದಕರು

ಪ್ರೊ. ಎ. ಚಂದ್ರಶೇಖರ ನಂಗಲಿ

ಲಕ್ಷ್ಮೀಪತಿ ಕೋಲಾರ

ಕರ್ನಾಟಕ ಸಾಹಿತ್ಯ ಅಕಾಡೆಮಿ

ಬೆಂಗಳೂರು

ANIKETHANA : A Literary Journal (Quarterly)
Edited by : **Prof. V. Chandrashekhara Nangali**
Lakshmipathi Kolara
Published by : Registrar, Karnataka Sahithya Academy
Kannada Bhavana, J.C. Road, Bangalore - 2

Pages : xvi + 136

Registration No. 45646/88

ಸಂಪುಟ : ೧೫
ಸಂಚಿಕೆ : ೨
ಪ್ರತಿಗಳು : ೧೨೦೦

ಪ್ರಧಾನ ಸಂಪಾದಕರು
ಡಾ. ಗುರುಲಿಂಗ ಕಾಪಸೆ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು
ವಿ. ಎಸ್. ಮಲ್ಲಿಕಾರ್ಜುನಸ್ವಾಮಿ
ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ. ಸಿ. ರಸ್ತೆ
ಬೆಂಗಳೂರು - ೫೬೦ ೦೦೨

ಬಿಡಿ ಪ್ರತಿ	:	**ರೂ.**	**೨೦/-**
ವಾರ್ಷಿಕ ಚಂದಾ	:	**ರೂ.**	**೭೦/-**
ಆಜೀವ ಚಂದಾ	:	**ರೂ.**	**೨೫೦/-**

ಮುಖಪುಟ ಕಲೆ : ಎಸ್.ಜಿ. ವಾಸುದೇವ್
ಹಿಂಬದಿ ಚಿತ್ರ ಕೃಪೆ : ವಾಸಿಂ ಆರ್. ಕಪೂರ್
ರಕ್ಷಾಪುಟ ವಿನ್ಯಾಸ : ಎಸ್. ಮಂಜುನಾಥ್

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
೧೧೭/೨, ೫ನೇ ಮುಖ್ಯರಸ್ತೆ
ಚಾಮರಾಜಪೇಟೆ, ಬೆಂಗಳೂರು - ೧೮
೨೬೬೧೯೧೨೯, ೨೬೬೧೮೭೫೨

ಅಮೆರಿಕನ್ನರಿಗೆ ಹೂಗಳ ಮೇಲೆ ಹಗೆತನ !

ಸಾಹಿತ್ಯ, ಸಂಸ್ಕೃತಿ ಹಾಗೂ ರಾಜಕಾರಣಗಳ ನಡುವಿನ ಅವಿನಾ ಸಂಬಂಧದ ಮಾತು-ಚರ್ಚೆಗಳು ಇಂದು-ನಿನ್ನೆಯವಲ್ಲ. ಆಂತರಿಕ ಸಂಬಂಧವುಳ್ಳ ಇವುಗಳನ್ನು ಪರಸ್ಪರ ಬೇರ್ಪಡಿಸಿ ನೋಡುವುದು ಸಾಧ್ಯವೇ ಆಗದ ವಿಚಾರ. ಅಮೆರಿಕ ಇಂದು ಎಬ್ಬಿಸುತ್ತಿರುವ ಜಾಗತಿಕ ವಿಷಮ ಕ್ಷೋಭೆಗಳ ದೆಸೆಯಿಂದ ತನ್ನಿಂತಾನೇ ಸ್ಫುಟವಾಗಿ ತೇಲಿಕೊಂಡ ತಿಳಿಸತ್ಯವಿದಾಗಿದೆ. ವಿವಾದಗಳು, ಭಿನ್ನಾಭಿಪ್ರಾಯಗಳ ಆಚೆಗೆ ಪೆಡಂಭೂತವಾಗಿ ನಿಂತಿರುವ ಈ ವಾಸ್ತವ, ಜಗತ್ತಿನ ಎಲ್ಲ ಬಡ ಹಾಗೂ ಅಸಹಾಯಕ ದೇಶ-ಸಮುದಾಯಗಳ ಸಾವು-ಬದುಕಿಗೆ ಸಂಬಂಧಿಸಿದ್ದಾಗಿದೆ. ಈ ಚಾರಿತ್ರಿಕ ವಾಸ್ತವವನ್ನು ಮರೆಯುವುದಾದರೂ ಹೇಗೆ ? ಮರೆತಂತೆ ಮಾತನಾಡುವ ಲೇಖಕ/ಕಲಾವಿದರೆಲ್ಲರೂ ಒಂದೋ ಆತ್ಮವಂಚನೆಯ ಶಿಖರದಲ್ಲಿರುತ್ತಾರೆ, ಇಲ್ಲವೇ ಮುಗ್ಧರೋ, ದುರ್ಬಲರೋ ಆಗಿರುತ್ತಾರೆ. ವಿ.ಎಸ್. ನಯಪಾಲ್‌ರಂತಹವರು ಇಂತಹ ಆತ್ಮವಂಚಕ ಲೇಖಕರ ಮುಂಚೂಣಿಯಲ್ಲಿದ್ದರೆ, ನೋಮ್‌ಚಾಮ್‌ಸ್ಕಿ, ಮಾರ್ಕ್‌ಟ್ವೈನ್, ಡಾ॥ ಆಶೀಷ್‌ನಂದಿ, ಅರುಂಧತಿರಾಯ್, ಮಾರ್ಕ್ವೆಜ್, ಈ ಬಗೆಯ ಲೇಖಕರು ಅಮೆರಿಕನ್ ಸಾಮ್ರಾಜ್ಯಶಾಹಿಯ ಕ್ರೂರ ಹಾಗೂ ಜಟಿಲ ಜಾಲಗಳನ್ನು ಭೇದಿಸಿ, ಅದರ ಅನೈತಿಕ ಮುಖವಾಡಗಳನ್ನು ಬತ್ತಲುಗೊಳಿಸುವ ಘನತೆ ಮತ್ತು ಛಾತಿ ತೋರಿಸಬಲ್ಲವರಾಗಿರುತ್ತಾರೆ.

ಇಂದು ಜಗತ್ತಿನ ಎಲ್ಲ ಲೇಖಕ/ಕಲಾವಿದರ ಎದುರೂ ಈ ಎರಡು ಮಾದರಿಗಳಿವೆ: ಆಯ್ಕೆಗಾಗಿ ಅಲ್ಲ, ಆತ್ಮಾನುಸಂಧಾನಕ್ಕಾಗಿ.

ಅಮೆರಿಕ ಇಂದು ಯಾರಿಗೂ, ಯಾವ ಆಯ್ಕೆಗಳನ್ನೂ ಉಳಿಸುತ್ತಿಲ್ಲ. ಈ ಜಗತ್ತಿನ ಯಾರೂ, ಯಾವುದೊಂದೂ ಅಮೆರಿಕದ ಕರಿ ನೆರಳಿನಿಂದ ತಪ್ಪಿಸಿಕೊಳ್ಳುವಂತಿಲ್ಲ. ಅಮೆರಿಕ ತನ್ನ ಮೇಲೇ ಗೂಢಚಾರ ಕಾವಲು ಹಾಕಿಕೊಳ್ಳುವಂತಹ ಅನುಮಾನದ ವ್ಯಾಧಿಗೆ ಸಿಕ್ಕಿ ನರಳಾಡುತ್ತಿದೆ. ತಾನೂ ನೆಮ್ಮದಿಯಿಂದಿರದು; ಜಗತ್ತನ್ನೂ ಶಾಂತಿ, ನೆಮ್ಮದಿ ಗಳಿಂದಿರಗೊಡದು. ಅಮೆರಿಕ ಎಂಬ ಶಬ್ದವೇ ಇಂದು ಕೋಟ್ಯಂತರ ಜನರ ಪಾಲಿಗೆ ತಲ್ಲಣವಾಗಿದೆ. ತೊಣಚಿ ಹೊಕ್ಕಿಸಿಕೊಂಡ ತೊಂಡುದನವಾಗಿದೆ ! ಶತ್ರುವಿಲ್ಲದೆ

ಬದುಕಲಾರದ ವಿಚಿತ್ರ ಇರುಕಿನಲ್ಲಿ ತೋಕೆ ಸಿಕ್ಕಿಸಿಕೊಂಡ ಮಂಗನಂತಾಡುತ್ತಿದೆ ಅಮೆರಿಕ ಸಿರಿಗರ ಬಡಿದ ಈ ಮಂಗನಿಗೆ ಕ್ಷಣವೊಂದಕ್ಕೆ ಕೋಟಿ ಚೇಳುಗಳು ಕುಟುಕುತ್ತಿವೆ. ಮಾನವ ಇತಿಹಾಸ ತನ್ನೊಂದಿಗೆ ಒಯ್ಯುತ್ತಿರುವ ಕತ್ತಲು-ಈ ಅಮೆರಿಕ.

ಯುರೋಪಮೆರಿಕಾದ ಬಿಳಿಯರ ದೇಶಗಳು ಇಂದು ತಮ್ಮ ಅಮಾನುಷವಾದ ವಸಾಹತುಶಾಹಿ ಹಾಗೂ ನವವಸಾಹತುಶಾಹಿ ಕ್ರೌರ್ಯಗಳ ಮೂಲಕ ಜಾಗತಿಕ ಹಂತದ ವರ್ಣೀಯ ದಲಿತ ಸಾಹಿತ್ಯ ಸೃಷ್ಟಿಗೆ ಕಾರಣವಾಗುತ್ತಿವೆ. ತನ್ನ ಏಕಪಕ್ಷೀಯ ತೀರ್ಮಾನದ ಮೂಲಕ ಅಮೆರಿಕ ಇಂದು ವಿಧಿಸಿರುವ, ವಿಧಿಸುತ್ತಿರುವ ಆರ್ಥಿಕ ದಿಗ್ಬಂಧನಗಳು ಇಡೀ ಬಡದೇಶವೊಂದನ್ನು ಸೆರೆಯಲ್ಲಿಟ್ಟು ಜನರ ಜೀವದ ಉಳಿವಿನ ಎಲ್ಲಾ ಮೂಲಭೂತ ಅವಶ್ಯಕತೆಗಳನ್ನೂ ನಿರಾಕರಿಸುವುದಾಗಿದೆ ಭಾರತದ ನೆಲದಲ್ಲಿ ದಲಿತರಿಗೆ ಸವರ್ಣೀಯ ಸಮಾಜ ವಿಧಿಸುವ ಸಾಮಾಜಿಕ ಬಹಿಷ್ಕಾರದ ಮಿಗಿಲು ಕ್ರೌರ್ಯದ ಜಾಗತಿಕ ರೂಪವೇ ಈ ಆರ್ಥಿಕ ದಿಗ್ಬಂಧನ. ಇಂತಹ ಬಹಿಷ್ಕೃತ ದೇಶಗಳ ಜನರ ಅನುಭವ ಕಥನಗಳು ಅವರ ಘಾಸಿಗೊಂಡ ನೆನಪುಗಳಿಂದ, ಸಾಂದ್ರಗೊಂಡ ಆತ್ಮಕಥಾನಕದ ಪುಟಗಳಂತಿವೆ.

ಕೆಲವು ದಶಕಗಳ ಹಿಂದೆ ಯುರೋಪ್‌ನಲ್ಲಿ ಕೇಂದ್ರೀಕೃತವಾಗಿದ್ದ ಜಾಗತಿಕ ಸಾಹಿತ್ಯದ ಸೃಜನಶೀಲ ಶಕ್ತಿಬಿಂದು ಚಲಿಸಿ, ಆಫ್ರಿಕ, ಲ್ಯಾಟಿನ್ ಅಮೆರಿಕ, ಮಧ್ಯಪ್ರಾಚ್ಯ ಹಾಗೂ ದಕ್ಷಿಣ ಏಷ್ಯಾದ ದೇಶಗಳಿಗೆ ಪಲ್ಲಟಗೊಂಡದ್ದು ಈಗ ಇತಿಹಾಸ. ಬದುಕು ಬೆಚ್ಚಿ ಬೀಳಬಹುದಾದಂತಹ ಬರ್ಬರತೆಗಳು, ರಾಜಕೀಯ ಕಗ್ಗೊಲೆಗಳು, ಮಾನವ ಹಕ್ಕುಗಳ ದಮನ, ವಿಶ್ವಸಂಸ್ಥೆಯ ಕಾನೂನು-ನಿಯಮಗಳನ್ನೆ ಇಕ್ಕಿ ಮೆಟ್ಟುವಂತಹ ಮಿಲಿಟರಿ ಧಾಳಿ-ಆಕ್ರಮಣಗಳು, ಕ್ಷಣ ಕ್ಷಣದ ಆತಂಕ, ತಲ್ಲಣ, ಛಿದ್ರಗೊಂಡ ಬದುಕು, ನಿರಾಶ್ರಿತರ ನರಕಮಯ ಅನುಭವಗಳು, ಅತ್ಯಾಚಾರಗಳ ಸರಮಾಲೆ,ಸೆರೆಮನೆ, ಆಸ್ತಿ-ಪಾಸ್ತಿ ಧ್ವಂಸ, ಭಯಾನಕ ರೋಗಗಳು, ವಿಷಯುಕ್ತ ನೀರು, ಹೆಜ್ಜೆಯಿಟ್ಟೆಡೆ ಭೂಸ್ಫೋಟಕಗಳು, ಬಾಂಬುಗಳ ಮಳೆ, ರಾಸಾಯನಿಕ ಅಸ್ತ್ರಗಳು, ಕ್ರೂರ ರೀತಿಯ ಚಿತ್ರಹಿಂಸೆಗಳು...ಒಂದೇ, ಎರಡೇ? ಈ ಭೂಮಿಯ ಮೇಲಿನ ಮಾನವ ಇತಿಹಾಸದಲ್ಲಿ ಇಡೀ ಮಾನವ ಕುಲ ಅನುಭವಿಸಿರಬಹುದಾದ ಹಿಂಸೆ, ನರಳಿಕೆಗಳ ಪ್ರಮಾಣವೇ ಒಂದು ತೂಕದ್ದಾದರೆ, ಕಳೆದ ೫೦೦ ವರ್ಷಗಳಲ್ಲಿ ವಸಾಹತು ದೇಶಗಳು ಅನುಭವಿಸಿದ ಯಾತನೆಗಳೇ ಮತ್ತೊಂದು ತೂಕದ್ದು. ಈ ಬಗೆಯ ಅನುಭವಗಳು ಸಾಹಿತ್ಯಾಭಿವ್ಯಕ್ತಿಗೆ ಮೀರಿದ ತಲ್ಲಣಗಳು. ಅಳು-ರೋದನ, ಬಿಕ್ಕಳಿಕೆ-ಮೌನ, ವಿಷಾದಗಳೇ ಅದರ ಅಭಿವ್ಯಕ್ತಿ ರೂಪಗಳು. ಅನಾಥಾವಸ್ಥೆಯ-ಅಸಹಾಯಕತೆಯೇ ಅದರ ಸ್ಥಾಯಿಭಾವ.

ಇಂದು ಜಗತ್ತಿನೆಲ್ಲ ಪ್ರಾದೇಶಿಕ ಸಾಹಿತ್ಯ ವಲಯಗಳೂ ಇಂತಹ ಜಾಗತಿಕ ವಿಷಮ ಹಿನ್ನೆಲೆಯಲ್ಲಿ ಸ್ಥಳೀಕ ಹಾಗೂ ವಿಶ್ವಾತ್ಮಕಗಳ ಹೊಸ ಚರ್ಚೆಯನ್ನು ನಡೆಸುತ್ತಿವೆ. ಸಾಮ್ರಾಜ್ಯಶಾಹಿಗಳಿಗೆ ನೀಡಬಹುದಾದ ಸರಿಯುತ್ತರದ ಸಿದ್ಧತೆಯ ಸೂಚನೆಯಿದು. ಭಾರತದಂತಹ ಬೃಹತ್ ದೇಶದ, ಬಹುಭಾಷಾ ಹಾಗೂ ಬಹುಮುಖೀ ಸಂಸ್ಕೃತಿಯ ನೆಲದ ಲೇಖಕ/ಕಲಾವಿದರು ಇವತ್ತಿನ ಈ ಜಾಗತಿಕ ದುರಂತ ಸಂದರ್ಭವನ್ನು ಗಮನಿಸದೆ, ತಮ್ಮ ಪಾಡಿಗೆ ತಾವೆಂಬಂತೆ ಹೊರಗುಳಿಯುವುದು ಆತ್ಮವಂಚನೆಯಷ್ಟೇ ಅಲ್ಲ; ಭ್ರಮಾಧೀನತೆಯಾಗಬಲ್ಲದು, ನಿಶ್ಚೇಷ್ಟಿತ ಸ್ಥಿತಿಯದು; ವಿಸ್ಮೃತಿ ಮತ್ತು ಮೂರ್ಛಾವಸ್ಥೆಗಿಂತ ಏನೇನೂ ಭಿನ್ನವಲ್ಲ.

ಡಾ|| ರಾಮಮನೋಹರ ಲೋಹಿಯಾರವರ ಪ್ರಕಾರ ಮಾನವ ಇತಿಹಾಸವೆಂದರೆ, ಅದು ಕೇವಲ ಅಧಿಕಾರ ಮತ್ತು ಸಂಪತ್ತಿನ ಪಲ್ಲಟಗಳು. ಈ ಪಲ್ಲಟಗಳ ಹಿಂದೆ ಹಿಂಸೆ, ಜನಾಂಗೀಯ ದಬ್ಬಾಳಿಕೆಗಳೇ ಸ್ಫೋಟಗೊಂಡಿವೆ. ಇಡೀ ಪ್ರಪಂಚದ ಸಂಪತ್ತಿನ ಬಹುಪಾಲು ಕೇವಲ ಯುರೋಪಮೆರಿಕಾದ ಬಿಳಿಯರ ಪ್ರದೇಶದಲ್ಲೇ ಯಾಕೆ ಕ್ರೋಡೀಕರಣಗೊಂಡಿದೆ ಎಂಬ ರಹಸ್ಯದಲ್ಲಿ ನಮ್ಮೆಲ್ಲಾ ಪ್ರಶ್ನೆಗಳ ಉತ್ತರಗಳಡಗಿವೆ. ಈ ರಕ್ತಪಿಪಾಸು ಚರಿತ್ರೆಯನ್ನು ಅರ್ಥ ಮಾಡಿಕೊಂಡವರಷ್ಟೇ ಹೊಸ ಮಾನವ ಪ್ರೀತಿಯ ಚರಿತ್ರೆಯನ್ನು ಸೃಷ್ಟಿಸಬಲ್ಲರು. ತರ-ತಮ ಭೇದಗಳಿಲ್ಲದ, ಯಾತನಾಮುಕ್ತ ಸಮಾಜ ಸೃಷ್ಟಿಯಲ್ಲಿ ಸೃಜನಶೀಲ ವಲಯಕ್ಕೆ ಅತ್ಯಂತ ನೈತಿಕವಾದ ಹೊಣೆಗಾರಿಕೆಯಿದೆ. 'ಮಾನವ ಜಾತಿ ತಾನೊಂದೆ ವಲಂ' ಎಂದ ಪಂಪನಿಂದ ಹಿಡಿದು 'ವಿಶ್ವಮಾನವ ಸಂದೇಶ'ವನಿತ್ತ ಕುವೆಂಪುವರೆಗಿನ ಕನ್ನಡದ ಶ್ರೇಷ್ಠ ಸಾಹಿತ್ಯ ಪರಂಪರೆಯ ಸಾರಸಂದೇಶವೂ ಇದೇ. ಈ ಬಗೆಯ ಜೀವ ಪ್ರೀತಿಯ ತಿಳಿವಳಿಕೆಯ ಹಿನ್ನೆಲೆಯಲ್ಲಿ ಸ್ಥಳೀಕ ನೆಲೆಯಿಂದಲೇ ವಿಶ್ವಾತ್ಮಕತೆಯನ್ನು ಅನುಸಂಧಾನಿಸುವ, ಸಮರ್ಥವಾದ ಜೀವಪರ ಸಂಸ್ಕೃತಿಯನ್ನು ಕಟ್ಟುವ ಹಾಗೂ ಸಾಹಿತ್ಯ, ಸಂಸ್ಕೃತಿ ಹಾಗೂ ರಾಜಕಾರಣಗಳ ನಡುವಿನ ಸೌಂದರ್ಯಾತ್ಮಕ ಅಂಶಗಳಿಂದಲೇ ಮಾನವ ಪ್ರೀತಿಯ ಚರಿತ್ರೆಯನ್ನು ನಿರ್ಮಿಸುವವಲ್ಲಿನ ನಮ್ಮ ಪಾತ್ರಗಳನ್ನು ಕೂಡ ನಾವು ಅರಿಯಬೇಕಾದ ಅನಿವಾರ್ಯತೆ ಇಂದು ನಮ್ಮದಾಗಿದೆ.

೨

ಈ ಭೂಮಿಯ ಜೀವೇತಿಹಾಸದ ಅತ್ಯಂತ ದುಃಖಮಯ ದಿನಗಳಿವು. ಬಿಳಿಯರ ಲೂಟಿಗೆ ಸಿಕ್ಕಿ ಬಿಳೀ ಅಸ್ಥಿಪಂಜರದಂತಾಗಿರುವ ಕಪ್ಪು ಸಂಸ್ಕೃತಿಯ ಇಥಿಯೋಪಿಯಾ, ಅಮೆರಿಕವೆಂಬ ಸೀಳುನಾಯಿ ಬೇಟೆಗೆ ಸಿಕ್ಕಿ ಗಾಯಗೊಂಡಿರುವ ವಿಯೆಟ್ನಾಂ, ಪನಾಮಾ, ಎಲ್ ಸಾಲ್ವಡಾರ್, ಚಿಲಿ, ನಿಕರಾಗುವ, ಅಫಘಾನಿಸ್ತಾನ, ಇರಾಕ್, ಪ್ಯಾಲೆಸ್ತೈನ್, ಶಾಂತಸಾಗರದ ಮಾರ್ಷಲ್ ದ್ವೀಪ ಸಮೂಹಗಳು, ಕಾಂಬೋಡಿಯಾ, ರುವಾಂಡ, ಇಂಡೋನೇಷಿಯಾ, ಆಫ್ರಿಕ ದೇಶಗಳು ಹಾಗೂ ಫಿಲಿಫೈನ್ಸ್‌ನೊಂದಿಗೇ-'ಈಗ ಮತ್ಯಾರನ್ನು ಗುದ್ದಲಿ' ಎಂದು ಯುದ್ಧ ತುರಿಕೆಯ ಕಾಲು ಕೆರೆದು ನಿಂತಿರುವ ಅಮೆರಿಕ ಮತ್ತದರ ಕೂಟ ರಾಷ್ಟ್ರಗಳು ಒಟ್ಟಿಗೇ ಬದುಕುತ್ತಿರುವ ವಿಪರ್ಯಾಸ ಈ ಪ್ರಾಚೀನ ಭೂಮಿಯದ್ದಾಗಿದೆ. ಇಡೀ ಭೂಗೋಲವೇ ಇಂದು ಅಮೀಬದಂತೆ ಒಡೆದು ಎರಡಾಗಿ, ಉತ್ತರ ಭೂಗೋಲ ದಕ್ಷಿಣ ಭೂಗೋಲವನ್ನು 'ವಾಮನ' ಪಾದದಿಂದ 'ಬಲಿ'ಗೊಳ್ಳುತ್ತಿದೆ.

ಮನುಷ್ಯ ಇತಿಹಾಸದಿಂದ ಪಾಠ ಕಲಿಯುವುದಿಲ್ಲವೆಂಬುದು ಪದೇ ಪದೇ ಸಾಬೀತಾಗುತ್ತಿದೆ. ಅಥವ ಸಾಮ್ರಾಜ್ಯಶಾಹಿಯ ವಿಕೃತ ಆಡಳಿತದಿಂದಾಗಿ ಚರಿತ್ರೆಯೇ ಅಂಗವಿಕಲತೆಯಿಂದ ನರಳುತ್ತಿರುವಂತಿದೆ. ಈ ಅಂಗವಿಕಲ ಚರಿತ್ರೆಯ ಮುಂದಿನ ಹೆಜ್ಜೆ ಗತಿಯನ್ನು ನಿರ್ಧರಿಸಲು ಕೂಡ ಅಮೆರಿಕವೆಂಬ ದೊಣ್ಣೆನಾಯಕನ ಅಪ್ಪಣೆ ಬೇಕೇ ಬೇಕು !

ಗಾಬರಿಗೊಳ್ಳುವ ಈ ಅಂಕಿ ಅಂಶಗಳನ್ನು ಗಮನಿಸಿ : ಕಳೆದ ಅರ್ಧ ಶತಮಾನದಲ್ಲಿ ೩೦೦ಕ್ಕೂ ಹೆಚ್ಚು ಯುದ್ಧಗಳಾಗಿವೆ. ೨೦೦ ಮಿಲಿಯನ್ ಜನ ಸತ್ತಿದ್ದಾರೆ. ಅರ್ಧ ಕೋಟಿ ಜನರು

ಸಾಮ್ರಾಜ್ಯಶಾಹಿ ಪಿತೂರಿಗೆ ನೇರ ಬಲಿಯಾಗಿದ್ದಾರೆ. ೨೦ ಲಕ್ಷ ಜನ ಅಂಗವಿಕಲರಾಗಿದ್ದಾರೆ. ೬೪ ದೇಶಗಳಲ್ಲಿ ೧೦ ಲಕ್ಷ ಭೂಸ್ಫೋಟಕಗಳನ್ನು ಹುದುಗಿಸಿಡಲಾಗಿದೆ. ೧೦೦ ಮಿಲಿಯನ್ ಭೂಸ್ಫೋಟಕಗಳ ದಾಸ್ತಾನಿದೆ. ವರ್ಷವೊಂದಕ್ಕೆ ೫೦ ಲಕ್ಷದಿಂದ ೧ ಕೋಟಿಯವರೆಗಿನ ಭೂಸ್ಫೋಟಕಗಳನ್ನು ತಯಾರಿಸಲಾಗುತ್ತಿದೆ. ಒಂದು ಅಂದಾಜಿನ ಪ್ರಕಾರ ಇದುವರೆವಿಗೂ ೨೦೦ ಲಕ್ಷ ಕೋಟಿ ರೂ.ಗಳು ಯುದ್ಧಕ್ಕಾಗಿ ಭಸ್ಮವಾಗಿವೆ. ಇದಲ್ಲದೆ ಇಡೀ ಈ ಭೂಗೋಲವನ್ನು ನೂರಾರು ಬಾರಿ ಸರ್ವನಾಶಗೊಳಿಸಬಲ್ಲಷ್ಟು ಅಣುಬಾಂಬುಗಳು ಕಂಪ್ಯೂಟರ್ ತುದಿಗಾಲ ಮೇಲೆ ನಿಂತು ಈ ಭೂಮಿಯ ಕೊನೆಯ ಹುಚ್ಚನೊಬ್ಬನ ಕೊನೆಯ ಆದೇಶಕ್ಕಾಗಿ ಕಾತರಿಸಿ ಕುಳಿತಿವೆ. ಜೊತೆಗೆ ಆಂಥ್ರಾಕ್ಸ್, ಏಜೆಂಟ್ ಆರೆಂಜ್, ಡಿಪ್ಲೀಟೆಡ್ ಯುರೇನಿಯಂನಂತಹ ಹತ್ತಾರು ಬಗೆಯ ಮಾರಣಾಂತಿಕ ರಾಸಾಯನಿಕ ಅಸ್ತ್ರಗಳು, ಸ್ಕ್ರೂವರ್ಮ್, ರೌಂಡ್‌ಅಪ್, ಎಬೋಲಾ, ಸಾರ್ಸ್, ಪ್ಲೇಗ್, ಮ್ಯಾಡ್ ಕೌ, ಬರ್ಡ್‌ಫ್ಲೂ ಬಗೆಯ ಜೈವಿಕ ಅಸ್ತ್ರಗಳು, ನೆಲ-ನೀರು-ಜೀವಗಳನ್ನು ಹಾಳುಗೆಡವುತ್ತಿವೆ.

ಯುರೋಪಮೆರಿಕಾದ ಒಟ್ಟು ಶಸ್ತ್ರಾಸ್ತ್ರ ಮಾರಾಟ ವಹಿವಾಟಿನ ಹಣದಿಂದ ಮೂರು ಭೂಮಿಗಳನ್ನು ಸ್ವರ್ಗ ಸದೃಶವಾಗಿಸಬಹುದೆಂಬುದು ತಜ್ಞರ ಅಂದಾಜು. ಆದರೂ ಅಮೆರಿಕನ್ನರಿಗೆ ಇಂದಿಗೂ ವಿವೇಕ ಮೂಡಿಲ್ಲ. ಅಮೆರಿಕದ ಈ ಸದ್ಯದ ವಾರ್ಷಿಕ ಮಿಲಿಟರಿ ವೆಚ್ಚವೆಷ್ಟು ಗೊತ್ತೆ? ೨೮೮ ಬಿಲಿಯನ್ ಡಾಲರ್‌ಗಳು. ಕ್ಯೂಬಾದ ಇಡೀ ವರ್ಷದ ಮಿಲಿಟರಿ ವೆಚ್ಚದಷ್ಟು ಹಣವನ್ನು ಅಮೆರಿಕ ಕೇವಲ ೧೨ ಗಂಟೆಗಳಲ್ಲಿ ಖರ್ಚು ಮಾಡುತ್ತಿದೆ !

ಅಮೆರಿಕೆಗೆ ಇಡೀ ವಿಶ್ವವನ್ನು ಶ್ವೇತವರ್ಣೀಯರ ಶ್ವೇತಭವನವೇ ಆಳಬೇಕೆಂಬ ಸರ್ವಾಧಿಕಾರೀ ಧೋರಣೆ. ಅದರ ಹಿಂದಿರುವುದು ಜನಾಂಗವಾದೀ ಅಸಹನೆ. ಮೂಲನಿವಾಸಿಗಳನ್ನು ಹಾಗೂ ಕಪ್ಪುವರ್ಣೀಯರನ್ನು ಭೌತಿಕವಾಗಿ, ಮಾನಸಿಕವಾಗಿ ದುರ್ಬಲಗೊಳಿಸಿ, ರಾಜಕೀಯ ಹಾಗೂ ಆರ್ಥಿಕತೆಗಳ ಅಸ್ಥಿರತೆಯ ಮೂಲಕ ಶಾಶ್ವತವಾಗಿ ಗುಲಾಮರನ್ನಾಗಿಸಿಕೊಳ್ಳುವ ಗುಪ್ತ ಹುನ್ನಾರು. ಅದಕ್ಕಾಗಿ ಅಗತ್ಯವಿರುವುದು ಅಧಿಕಾರ ಮತ್ತು ಶಸ್ತ್ರಾಸ್ತ್ರಗಳು. ಈ ಉದ್ದೇಶ ಸಾಧನೆಗಾಗಿ ಬಳಸುತ್ತಿರುವ ತಂತ್ರ ನವವಸಾಹತುಶಾಹಿ ಧೋರಣೆ. ನವವಸಾಹತುಶಾಹಿ ಪರಿಕಲ್ಪನೆ ವಸಾಹತುಶಾಹಿಗಿಂತ ಹೆಚ್ಚು ಭೀಕರವೂ, ನಾಜೂಕಿನದೂ ಹಾಗೂ ಅಪಾಯಕಾರಿಯಾದುದೂ ಆಗಿದೆ. ವಸಾಹತುಶಾಹಿಯೆಂದರೇನೇ ಮೂಲನಿವಾಸಿಗಳ ಸಾಮೂಹಿಕ ನರಮೇಧ. ಭೂಮಿಯ ಹಕ್ಕು ತಪ್ಪಿಹೋಗುವುದು. ಭಾಷೆ, ಸಂಸ್ಕೃತಿ ಹಾಗೂ ಸ್ಥಳೀಯ ಬಹುರೂಪೀ ಆಚರಣಾತ್ಮಕ ಧರ್ಮಗಳು ನಾಶವಾಗುವುದು. ಎಲ್ಲಕ್ಕಿಂತ ಮಿಗಿಲಾಗಿ ಮೂಲನಿವಾಸಿಗಳ ಮನಸ್ಸಿಗೆ ಆವರಿಸುವ ಮರೆವು. ವಸಾಹತುಶಾಹಿ ಪಿತೂರಿಗಳ ದೆಸೆಯಿಂದಾಗಿ ಆಯಾ ದೇಶಗಳ ಮೂಲನಿವಾಸಿ ಜನ ತಮ್ಮ ನೆನಪುಗಳ ಹತ್ಯೆ (Memorycide) ಯ ನಂತರ ಪರಿಹಾರಕ್ಕಾಗಿ ಅಮೆರಿಕಾ, ಯುರೋಪಿನ ಕಡೆ ಮುಖ ಮಾಡುತ್ತಾರೆ. ಕೊಡಲು ಅಮೆರಿಕ, ಯುರೋಪುಗಳಲ್ಲಿ ಏನಿದೆ ? ಸಾವು ಮತ್ತು ಸರ್ವನಾಶದ ಹೊರತು !

ಭಯೋತ್ಪಾದನೆಯ ಮೂಲ ಬೀಜಗಳಿಂದು ಶ್ವೇತಭವನದ ಪಕ್ಷಪಾತ ಧೋರಣೆಯ ಆರ್ಥಿಕ, ವಿದೇಶಿ ಹಾಗೂ ರಕ್ಷಣಾ ನೀತಿಯ ಕುಟಿಲ ಕಡತಗಳಲ್ಲಿ ಹುದುಗಿವೆ. ಒಂದೇ ಒಂದು ದಿನವನ್ನೂ

ಬಿಡದಂತೆ ಕಳೆದ ೫೦ ವರ್ಷಗಳಿಂದ ಈ ಭೂಮಿಯ ಮೇಲೆ ಎಲ್ಲಾದರೊಂದು ಕಡೆ ನಿರಂತರ ಯುದ್ಧ ನಡೆಸುತ್ತಲೇ ಬಂದಿರುವ ಅಮೆರಿಕ ತನ್ನನ್ನು ತಾನು ಕರೆದುಕೊಳ್ಳುವುದು 'ಅತ್ಯಂತ ಶಾಂತಿಯುತ ದೇಶ' ! ಎಂದು.

ಜಗತ್ತಿನ ಹತ್ತು ಭಾಗದ ಬಿಳೀ ಆನೆಗಳ ಐಷಾರಾಮೀ ಜೀವನಕ್ಕಾಗಿ ಈ ಅಮೆರಿಕ ಹರಿಸಿದ ನೆತ್ತರ ನೈಲ್ ನದಿಗಳೆಷ್ಟು ? ನೋವು, ನರಳಿಕೆಗಳಿಗೆ ಕೊನೆಯೆಲ್ಲಿ ? ಯುರೋಪಮೆರಿಕಾಗಳು ಇಂದು ತಯಾರಿಸುತ್ತಿರುವ ಒಂದೊಂದು ಕ್ಷಿಪಣಿ, ಬಾಂಬುಗಳೂ ಜಗತ್ತಿನ ಶೇಕಡ ೫೦ ಭಾಗದ ನಿರ್ಗತಿಕರ ನಾಳಿನ ಅರೆಹೊಟ್ಟೆಯ ತುತ್ತುಗಳನ್ನೂ ಕಿತ್ತುಕೊಳ್ಳುವ ಹುನ್ನಾರಿನದು. ಎಲ್ಲ ಬಡದೇಶಗಳ Non-renewable resource ಗಳನ್ನು ಬರಿದು ಮಾಡಲೆಂದೇ ಮಲ್ಟಿ ನ್ಯಾಷನಲ್ಸ್ ಎಂಬ ಅವತಾರವೆತ್ತಿರುವ ಈ ತ್ರಿವಿಕ್ರಮ ಅವುಗಳ ಸಕಲ ಸ್ವಾತಂತ್ರ್ಯಗಳನ್ನೂ ಕಸಿದುಕೊಂಡು, ತನ್ನ ಮೇಲೇ ಪ್ರತಿಯೊಂದಕ್ಕೂ ಅವಲಂಬಿಸುವಂತೆ (ಆಹಾರ ಧಾನ್ಯಗಳು, ಬೀಜಗಳು, ಕೀಟನಾಶಕಗಳು, ಔಷಧಿಗಳು, ಕೊನೆಗೆ ನೀರು-ನೆರಳು ಇತ್ಯಾದಿ) ಮಾಡಿ ತನ್ನ ಸಾಮ್ರಾಜ್ಯಶಾಹಿ ಇಂಗಿತಗಳಿಗೆ ತಕ್ಕಂತಹ ಅನ್ಯದೇಶಗಳ ರಾಜಕಾರಣವನ್ನು ರೂಪಿಸಿತೊಡಗುತ್ತದೆ. ಸ್ವಾಭಿಮಾನದ ಪ್ರತಿಭಟನೆ ಎದ್ದಲ್ಲಿ, ಇದ್ದೇ ಇದೆಯಲ್ಲ-ಅಣುಬಾಂಬಿಗಿಂತಲೂ ಅಪಾಯಕಾರಿಯಾದ ಆರ್ಥಿಕ ದಿಗ್ಬಂಧನದ ಬ್ರಹ್ಮಾಸ್ತ್ರ !

ವಿಯೆಟ್ನಾಮಿಗಳಿಂದ ಅಮೆರಿಕ ದೇಶಪ್ರೇಮವೆಂದರೇನೆಂಬುದನ್ನು ಕಲಿಯಬೇಕಾಗಿದೆ. ಪುಟ್ಟ ದೇಶವಾದ ಕ್ಯೂಬಾದ ಘನತೆ, ಆತ್ಮಗೌರವಗಳನ್ನರಿಯಬೇಕಿದೆ. ಪ್ಯಾಲೆಸ್ತೈನಿಯರಿಂದ ನೈತಿಕ ಹೋರಾಟವೆಂಬುದನ್ನು ಪರಿಚಯಿಸಿಕೊಳ್ಳಬೇಕಿದೆ. ಪೆಸಿಫಿಕ್ ದ್ವೀಪಗಳ ಮೂಲನಿವಾಸಿಗಳ ಮುಗ್ಧತೆಯನ್ನು ಎದೆಗೆ ತಂದುಕೊಳ್ಳಬೇಕಾಗಿದೆ. ಆದರೆ ಅಮೆರಿಕನ್ ಅಹಂಕಾರದ ಬಾಗಿಲುಗಳು ತೆರೆದುಕೊಂಡಾವೇ ?

ಜನಾಂಗವಾದ ಮತ್ತು ಧರ್ಮದ ಹಿನ್ನೆಲೆಯಲ್ಲಿ ಭಯೋತ್ಪಾದನೆಯನ್ನು ಹುಟ್ಟುಹಾಕಿರುವುದೇ ಅಮೆರಿಕ. ಅದರ ವಿಚಾರಣೆಯನ್ನು ಈ ಜಗತ್ತಿನ ಯಾರೊಬ್ಬರೂ ಕೈಗೆತ್ತಿಕೊಳ್ಳುತ್ತಿಲ್ಲ. ಒಬ್ಬ ಬಿನ್ ಲಾಡೆನ್‌ಗಾಗಿ ಇಡೀ ಅಫಘಾನಿಸ್ತಾನವನ್ನು ಸುಡುಗಾಡು ಮಾಡುವುದರ ಹಿಂದಿನ ಸಾಮ್ರಾಜ್ಯಶಾಹಿ ವಂಚನೆಗಳು ಹಾಗೂ ಒಬ್ಬ ಸದ್ದಾಂಗಾಗಿ ಇಡೀ ಇರಾಕನ್ನು ವಶಪಡಿಸಿಕೊಳ್ಳುವುದರ ಒಳಉದ್ದೇಶಗಳ ಕುರಿತಾಗಿ ಇನ್ನಿತರ ಬಲಿಷ್ಠ ರಾಷ್ಟ್ರಗಳು ಕೂಡ ತುಟಿ ಬಿಚ್ಚುತ್ತಿಲ್ಲ. ವೈರುಧ್ಯಗಳ ಹೇಳಿಕೆ-ನಡವಳಿಕೆಗಳ ಆತ್ಮವಂಚಕತೆಯಲ್ಲೇ ಮುಳುಗಿವೆ. ಅಮೆರಿಕವು ಕೂಡ ತನ್ನಲ್ಲಿರುವ ಎಲ್ಲಾ ಸಮೂಹ ನಾಶಕ ಶಸ್ತ್ರಾಸ್ತ್ರಗಳನ್ನು ನಾಶಪಡಿಸಬೇಕೆಂದು ಹಾಗೂ ಆ ಮೂಲಕ ವಿಶ್ವಾಶಾಂತಿಗೆ ನಾಂದಿ ಹಾಡಬೇಕೆಂದಾಗಲೀ ಅಥವ ಭಯೋತ್ಪಾದಕತೆಯ ತಾಯಿ ಬೇರನ್ನು ಬುಡಸಮೇತ ಕೀಳಬೇಕೆಂದು ವಿಶ್ವಸಂಸ್ಥೆಯಿರಲಿ-ಯಾರೂ ಯಾಕೆ ಕೇಳುತ್ತಿಲ್ಲ ?

ಎಲ್ಲ ದೇಶಗಳ ಸರ್ಕಾರಗಳ ಈ ಧೋರಣೆಯನ್ನು ಇಡೀ ಜಗತ್ತಿನ ಜನಸಮುದಾಯ ಮಾತ್ರ ಸೂಕ್ಷ್ಮವಾಗಿ ಗಮನಿಸುತ್ತಿದೆ. ಸ್ಪೇನ್‌ನಲ್ಲಿ ಸರ್ಕಾರ ಬದಲಾದದ್ದು ಅದರ ತೀವ್ರ ಸೂಚನೆಯಾಗಿದೆ. ಬುಷ್, ಬ್ಲೇರ್‌ಗಳ ಸರ್ಕಾರಗಳು ಕೆಳಗಿಳಿಯುವ ಸಾಧ್ಯತೆಗಳನ್ನು ತಳ್ಳಿಹಾಕಲಾಗುವುದಿಲ್ಲ. ಬಡ ದೇಶಗಳ ಸರ್ಕಾರಗಳು ಕೂಡ ಜನತೆಯ ಹಕ್ಕುಗಳನ್ನು ಮೊಟಕುಗೊಳಿಸಿಯಾದರೂ ಬಹುರಾಷ್ಟ್ರೀಯ ಕಂಪನಿಗಳು ಹಾಗೂ ಕಾರ್ಪೊರೇಟ್ ಜಗತ್ತಿನ

ಹಿತ ಕಾಯುವ ಗುಲಾಮ ನೀತಿ ಅನುಸರಿಸುವುದಾದರೆ ಆಯಾ ದೇಶದ ಜಾಗ್ರತ ಜನಸ್ತೋಮ ಸ್ಥಳೀಯ ಪ್ರಭುತ್ವಗಳ ಲೊಳಲೊಟ್ಟೆಯನ್ನು ಕೂಡ ಬಯಲುಗೊಳಿಸುವ ಛಾತಿ ಪ್ರದರ್ಶಿಸಬೇಕಿದೆ. ಪಶ್ಚಿಮಕ್ಕೆ ಜೀತಗಾರರಾಗಿ ಮಣ್ಣು ಹೊರುವ ಈ ಮಂದಗೇಡಿ ಹಾಗೂ ನಿರಭಿಮಾನಿಗಳಿಗೆ ಮೂಲ ನಿವಾಸಿಗಳೆದೆಯಲ್ಲಿ ಹೊಳೆಯುತ್ತಿರುವ ಆತ್ಮಗೌರವದ ಪರಿಚಯ ಮಾಡಿಕೊಡಬೇಕು.

ಅಮೆರಿಕದ State terrorism ವಿರುದ್ಧ ಯಾವ ಅಂತಾರಾಷ್ಟ್ರೀಯ ನ್ಯಾಯಾಲಯ ಜನಹಿತದ ತೀರ್ಪು ನೀಡಬಲ್ಲದು ? ತೀರ್ಪು ನೀಡಿದರೂ ಜಾರಿ ಮಾಡಬಲ್ಲವರ್‍ಯಾರು ? ಪನಾಮಾದ ೩೦,೦೦೦ ನಾಗರಿಕರ ಸಾವಿಗೆ ಅಮೆರಿಕೆಯೇ ಹೊಣೆಯೆಂದು ಜಾಗತಿಕ ಸರ್ವೋಚ್ಚ ನ್ಯಾಯಾಲಯ ತೀರ್ಪು ನೀಡಿದರೂ ಅಮೆರಿಕ ಕೇರು ಮಾಡಲಿಲ್ಲ. ಅವರ ಒಂದು ಕೂದಲು ಕೂಡ ಅಲುಕಲಿಲ್ಲ. ಯುದ್ಧಗಳನ್ನು ವಿನಾಕಾರಣ ಹುಟ್ಟುಹಾಕಿ ತನ್ನ ಶಸ್ತ್ರಾಸ್ತ್ರಗಳಿಗೆ ಅನಗತ್ಯ ಬೇಡಿಕೆ ಸೃಷ್ಟಿಸಿ, ವಿಶ್ವ ಶಸ್ತ್ರಾಸ್ತ್ರ ಮಾರುಕಟ್ಟೆಯ ಮೂಲಕ ಬಡದೇಶಗಳ ಜನರ ತುತ್ತು ಅನ್ನ ಹಾಗೂ ಹನಿ ಹನಿ ರಕ್ತವನ್ನು ಬಸಿದುಕೊಳ್ಳುತ್ತಿರುವ ಈ ಅಮೆರಿಕ, ತಾನೇ ಸೃಷ್ಟಿಸುವ ವಿಲಕ್ಷಣ ವ್ಯಾಧಿಗಳನ್ನು ಬಡಜನತೆಗೆ ಹಂಚಿ, ತಾನೇ ತಯಾರಿಸುವ ಔಷಧಿಗಳನ್ನು ಮಾರಿ ಬಿಲಿಯಗಟ್ಟಳೆ ಹಣ ದೋಚುವ ಈ ಅಮೆರಿಕ, ತೈಲ ಹಾಗೂ ಕೃಷಿ ಮೂಲಗಳನ್ನು ತನ್ನ ಒಡೆತನದಲ್ಲೇ ಉಳಿಸಿಕೊಳ್ಳಲು ಹುನ್ನಾರಿನ ಮೇಲೆ ಹುನ್ನಾರುಗಳನ್ನು ಹೊಸೆಯುತ್ತಿರುವ ಈ ಅಮೆರಿಕ ಜಗತ್ತಿನೆಲ್ಲ ಭಾಗದ ದೇಸಿ ಸಂಸ್ಕೃತಿಗಳನ್ನು ನಾಶಗೊಳಿಸುತ್ತ, ಕುಲಸಂಬಂಧಿ ದ್ವೇಷ ಬಿತ್ತಿ ನಮ್ಮ ಸಾವುಗಳನ್ನು ಡಾಲರ್‌ಗಳಾಗಿ ಪರಿವರ್ತಿಸಿಕೊಳ್ಳುತ್ತಿದೆ.

ಆತ್ಮಸಾಕ್ಷಿಯನ್ನೆ ಕೊಂದುಕೊಂಡಿರುವ ಓ ಅಮೆರಿಕ, ನೀನು ಸಿಡಿಸಿರುವ ಡಿಪ್ಲೀಟೆಡ್ ಯುರೇನಿಯಂ ಬಾಂಬುಗಳು, ವಿಯೆಟ್ನಾಮಿನ ಮೇಲೆ ಸಿಂಪಡಿಸಿದ ಏಜೆಂಟ್ ಆರೆಂಜ್ ರಾಸಾಯನಿಕ, ಪೆಸಿಫಿಕ್ ದ್ವೀಪಗಳಲ್ಲಿ ಪ್ರಯೋಗಿಸಿದ ಜಲಜನಕ ಹಾಗೂ ಅಣುಬಾಂಬುಗಳು, ಸ್ಕ್ರೂವರ್ಮ್, ಎಬೋಲಾ ತರಹದ ಜೈವಿಕ ಅಸ್ತ್ರಗಳು-ಇವೆಲ್ಲವೂ ಸಮೂಹ ನಾಶಕ ಶಸ್ತ್ರಾಸ್ತ್ರಗಳು ತಾನೇ ? ನಿನಗೆ ದಂಡನೆಯಿಲ್ಲವೇ ? ನೀನು ಹೇಗೆ ನಿದ್ರಿಸುವೆ ಅಮೆರಿಕ ? ನಿನ್ನನ್ನು ದುಃಸ್ವಪ್ನಗಳು ಕಾಡುವುದಿಲ್ಲವೇ ? ನಿರಪರಾಧಿ ಹಾಗೂ ಮುಗ್ಧರಾದ ಸಹಸ್ರಾರು ಮಹಿಳೆಯರಿಂದು ನಿನ್ನ ದೆಸೆಯಿಂದಾಗಿ ದ್ರಾಕ್ಷಿಗೊಂಚಲಿನಂತಹ ಮಾಂಸದ ಮುದ್ದೆಗಳನ್ನು ಹೆರುತ್ತಿದ್ದಾರೆ, ಗೊತ್ತ ?

'ಇರಾಕಿನ ಜನರಿಗೆ ತಮ್ಮ ಆಂತರಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ತಾಕತ್ತಿದೆ. ಅಮೆರಿಕನ್ನರಿಗೆ ಹೇಳಿ, ಅವರ ಕೆಲಸವನ್ನು ಅವರು ನೋಡಿಕೊಳ್ಳಲಿ'. ಇದು ಇರಾಕಿನ ಅತ್ಯಂತ ಹಿರಿಯ ರಾಜಕೀಯ ಮುತ್ಸದ್ದಿಯೊಬ್ಬರ ಮೊಮ್ಮಗಳಾದ ನಸ್ರಾ ಎಂಬಾಕೆಯ ಹಿತವಚನ.

ದಿನಾ ಎಂಬ ಏಳು ವರ್ಷದ ಇರಾಕಿನ ಬಾಲಕಿ ಮೌನಿ ಹಾಗೂ ಸಂವೇದನಾಶೀಲ ಚಿತ್ರಕಲಾವಿದೆ. ಅವಳು ಬಿಡಿಸಿದ ಚಿತ್ರ ದಂಗುಬಡಿಸುವಂತಿದೆ. ಅವಳ ಒಂದು ಚಿತ್ರದಲ್ಲಿ ಅಮೆರಿಕನ್ ಸೈನಿಕನೊಬ್ಬ ಹೂಗಳಿಗೆ ಗುಂಡು ಹಾರಿಸುತ್ತಿದ್ದಾನೆ. ಇದ್ಯಾಕೆ ಹೀಗೆ ಅಂತ ಪ್ರಶ್ನಿಸಿದರೆ ದಿನಾ ಉತ್ತರಿಸುತ್ತಾಳೆ : 'ಅಮೆರಿಕನ್ನರಿಗೆ ಹೂಗಳ ಮೇಲೆ ಹಗೆತನ.'

ಅಮೆರಿಕ ಯುದ್ಧಕ್ಕೆ ಮೊದಲು ತನ್ನ ಬಾಂಬರ್ ಪೈಲಟ್‌ಗಳಿಗೆ ಉದ್ದೇಶಪೂರ್ವಕವಾಗಿಯೇ ಹಿಂಸಾತ್ಮಕ ಲೈಂಗಿಕ ಚಿತ್ರಗಳನ್ನು ತೋರಿಸುತ್ತದೆ. ಈ ಅಸಭ್ಯತೆಯ ಪರಿಣಾಮ ಲಕ್ಷಾಂತರ ಮಹಿಳೆಯರು ಮಿಲಿಟರಿ ದಾಸ್ಯಪದ್ಧತಿಗೆ ದೂಡಲ್ಪಟ್ಟಿದ್ದಾರೆ. ವಸಾಹತುಶಾಹಿ, ಆನಂತರ

ಸಾಮ್ರಾಜ್ಯಶಾಹಿಯ ಮಹಿಳೆಯರ ಕುರಿತ ಈ ಧೋರಣೆಯಿಂದಾಗಿಯೇ ಕಂಫರ್ಟ್ ಸ್ಟೇಷನ್ಸ್ ಅಥವ ಸೈನಿಕ ವೇಶ್ಯಾಗೃಹಗಳು ತಲೆ ಎತ್ತಿದವು. ಫಿಲಿಫಿನೋನಲ್ಲಿರುವ ಅಮೆರಿಕನ್ ಮಿಲಿಟರಿ ನೆಲೆಗಳಿಂದಾಗಿ ಅಲ್ಲಿನ ಮಹಿಳೆಯರು ಅಮೆರಿಕನ್ ಸೈನಿಕರಿಂದ ಹೆತ್ತ ಮಿಶ್ರ ಸಂತತಿಯ ಮಕ್ಕಳು ಇಂದು ತಬ್ಬಲಿಗಳಾಗಿದ್ದಾರೆ. ಅಪ್ರಾಪ್ತ ವಯಸ್ಕ ಬಾಲಕಿಯರೂ ಸೈನಿಕರಿಗೆ ಬಲಿಯಾಗಿದ್ದಾರೆ. ಮಿಲಿಟರಿ ದಾಸಿಯರ ಸಮಸ್ಯೆ ಒಂದು ಪ್ರಮುಖ ಯುದ್ಧಾಪರಾಧ ಎಂಬುದು ಈ ಸಾಮ್ರಾಜ್ಯಶಾಹಿ ಒಕ್ಕೂಟ ರಾಷ್ಟ್ರಗಳ ನಾಯಕರಿಗೆ ಯಾಕೆ ಅರಿವಾಗುವುದಿಲ್ಲ ? ಯಾಕೆಂದರೆ ಬಲಾತ್ಕಾರದಿಂದ ಮಿಲಿಟರಿ ದಾಸಿಯರಾಗಿರುವ ಬಹುತೇಕ ಮಹಿಳೆಯರು ಅನ್ಯಮತೀಯರು, ಕಪ್ಪು ವರ್ಣೀಯರು ಇಲ್ಲವೇ ಏಷ್ಯನ್ನರು. ಅನಾಗರಿಕ ಜನಾಂಗದ ಮಹಿಳೆಯರ ಬಗ್ಗೆ ಯಾಕೆ ಕಾಳಜಿ ವಹಿಸಬೇಕು ಎಂಬುದು ಯುರೋಪಮೆರಿಕ ಪ್ರಭೃತಿಗಳ ಧೋರಣೆ.

ಗಾಂಧಿಯ ಮಾತುಗಳಿವು : 'ವಿನಾಶದ ಹುಚ್ಚುತನ ಸರ್ವಾಧಿಕಾರದ ಹೆಸರಲ್ಲಿ ಬರುತ್ತದೋ ಅಥವ ಸ್ವಾತಂತ್ರ್ಯದ, ಪ್ರಜಾಸತ್ತೆಯ ಪವಿತ್ರ ಹೆಸರಲ್ಲಿ ಬರುತ್ತದೋ ಎಂಬುದು ಮುಖ್ಯವಲ್ಲ. ವಿನಾಶದಿಂದ ವಿಧವೆಯಾದವರಿಗೆ, ಅನಾಥರಿಗೆ, ನಿರಾಶ್ರಿತರಿಗೆ ಏನನ್ನಿಸುತ್ತದೆ ಅನ್ನೋದೇ ಮುಖ್ಯ.' ಹೀಗೆ ಅಮೆರಿಕೆಯ ದೆಸೆಯಿಂದಾಗಿ ಅನಾಥಳಾದ ಹೆಣ್ಣೊಬ್ಬಳ ಮೊರೆ ಮತ್ತು ಎಚ್ಚರಿಕೆಯ ಮಾತುಗಳು ಹೀಗಿವೆ : 'ಈ ಅಮೆರಿಕೆಗೂ, ಅದರ ಸಾಮ್ರಾಜ್ಯಶಾಹಿ ದೌಲತ್ತಿಗೂ ಮಾನವ ಸಹಜ ಲಜ್ಜೆಗಳೆಂಬುದೇ ಇದ್ದಂತಿಲ್ಲ. ಓ, ಅಂಗವಿಕಲ ಇತಿಹಾಸವೇ, ನೀನು ಈ ಅಮೆರಿಕೆಯನ್ನು ಕ್ಷಮಿಸಿದೆಯಾದರೆ, ನಿನಗೆಂದೆಂದಿಗೂ ಕ್ಷಮೆಯೆಂಬುದೇ ಇರುವುದಿಲ್ಲ. ಓ, ಅಮೆರಿಕದ ಅಳಿದುಳಿದ ಹೃದಯವಂತರೇ, ನಿಮ್ಮನ್ನು ಕ್ಷಣಕಾಲ ನಮ್ಮ ಜಾಗೆಯಲ್ಲಿಟ್ಟುಕೊಂಡು ಯೋಚಿಸಿ. ಸುಖವಾಗಿ ಬದುಕುವ ಕನಸು ಮತ್ತು ಅದಕ್ಕೆ ತಕ್ಕಂತೆ ಭವಿಷ್ಯವನ್ನು ರೂಪಿಸಿಕೊಳ್ಳುವುದನ್ನು ನಿಮ್ಮ ಬದುಕಿನ ಹಕ್ಕೆಂದು ನೀವು ತಿಳಿದಿಲ್ಲವೇ ? ನಾವೂ ನಿಮ್ಮಂತೆಯೇ ಕನಸು ಕಟ್ಟುವ ಹಕ್ಕುಳ್ಳವರಲ್ಲವೇ ? ಕನಸು, ಹಕ್ಕುಗಳಿರಲಿ, ಕನಿಷ್ಟ ಗಂಜಿಯುಂಡು ಶಾಂತಿ, ನೆಮ್ಮದಿಗಳಿಂದ ಬದುಕುವುದನ್ನಾದರೂ ನಮ್ಮ ಪಾಲಿಗುಳಿಸಬಾರದೇ ನಮ್ಮ ಕಥೆ, ಪುರಾಣಗಳ ಕ್ರೂರ ರಾಕ್ಷಸ, ಪಿಶಾಚಿಗಳಿಗೆ ನಿಮ್ಮ ಮಾನವ ಕ್ರೌರ್ಯದ ಸಹಸ್ರದಲ್ಲಿ ಒಂದಂಶವೂ ಇಲ್ಲವೆಂಬುದು ನಮಗೀಗ ಮನವರಿಕೆಯಾಗಿದೆ. ನಿಮ್ಮ ಬದುಕೂ ನಮ್ಮದರಷ್ಟೇ ಭಯಾನಕವೂ, ದುಃಖದಾಯಕವೂ ಆದಾಗ ನೀವೇನು ಮಾಡುತ್ತಿದ್ದಿರಿ ? ವಿಷಯುಕ್ತ ರಾಸಾಯನಿಕಗಳಿಂದ ಅಂಗವೈಕಲ್ಯ, ಬುದ್ಧಿಮಾಂದ್ಯತೆಗೀಡಾಗಿ ಹುಟ್ಟುವ ಮುಗ್ಧಕೂಸುಗಳ ಎದೆ ಕಿವುಚುವ ಸಂದರ್ಭ ಊಹಿಸಿಕೊಳ್ಳಿ. ಬಾಂಬಿನ ಸ್ಫೋಟದಿಂದ ಸಿಡಿದು ಮಾಂಸದ ತುಣುಕುಗಳಾಗಿ ಚೆಲ್ಲಿಕೊಳ್ಳುವ ನಿಮ್ಮ ಕೋಮಲ ಕಾಯದ ಮಕ್ಕಳ ಸ್ಥಿತಿ ಊಹಿಸಿಕೊಳ್ಳಿ. ನಿಮ್ಮ ತಾಯಿ, ಅಕ್ಕತಂಗಿ ಇಲ್ಲವೇ ನಿಮ್ಮದೇ ಅಪ್ರಾಪ್ತ ವಯಸ್ಸಿನ ಮಗಳು ಸೈನಿಕರ ಸಾಮೂಹಿಕ ಅತ್ಯಾಚಾರ, ಹಲ್ಲೆಗಳಿಗೀಡಾಗುವುದನ್ನಾದರೂ ಊಹಿಸಬಲ್ಲಿರಾ ?

ನಿಮಗಿಂತಹ ದಾರುಣ ಕಲ್ಪನೆಗಳನ್ನು ಕಲ್ಪಿಸಿಕೊಳ್ಳುವುದು ಕೂಡ ಸಾಧ್ಯವೆಂಬ ನಂಬಿಕೆಯೇ ಇಲ್ಲದಿದ್ದರೂ, ನಿಮ್ಮ ಹೃದಯದಾಳದಲ್ಲಿ ಉಳಿದಿರಬಹುದಾದ ಕ್ರಿಸ್ತನ ಕರುಣೆಯನ್ನು ನಮ್ಮೆದೆಯ ಕಿಚ್ಚಿನ ದೊಂದಿ ಬೆಳಕಲ್ಲಿ ಹುಡುಕುತ್ತಿದ್ದೇವೆ. ಇವು ನಮ್ಮ ನಂಬಿಕೆಯ ಕೊನೆಯ ಮಾತುಗಳಾಗಿದ್ದಾವೆ. ಇದು ನಿಮಗೆ ತಿಳಿದಿರಲೇಬೇಕು. ಎಂದೋ ಒಮ್ಮೆ ನಮ್ಮ ಮನುಷ್ಯ ನಂಬಿಕೆಗಳೂ ನಮ್ಮ ಕೈ ಮೀರಿ ಹೋಗಬಹುದು. ಬದುಕಿನ ಕೊನೆಯ ನಂಬಿಕೆ ಕುಸಿದಾಗ ವಿಶ್ವಭೂಪಟದಿಂದ ಅಮೆರಿಕದ

ಭೌಗೋಳಿಕ ರೇಖೆಗಳು ಮಾಯವಾಗುವ, ವಿಶ್ವಭಾಷಾ ವಲಯದಿಂದಷ್ಟೇ ಅಲ್ಲದೆ ಶಬ್ದ ಸ್ಮೃತಿಗಳಿಂದಲೇ 'ಅಮೆರಿಕ' ಎಂಬ ಜಿಗುಪ್ಸಾಕಾರಕ ಶಬ್ದ ಕಣ್ಮರೆಯಾಗುವ ಕ್ಷಣವೊಂದನ್ನಷ್ಟೇ ಉತ್ಕಟ ಕನಸನ್ನಾಗಿ ನಾವು ಕಾಣಬಹುದೇನೋ ? ಯಾಕೆಂದರೆ ನಮಗೆ ಎಲ್ಲೋ ಇರುವ ಸೈತಾನನ ಭಯವಿಲ್ಲ. ನಮ್ಮೆದುರೇ ಇರುವ, ಸೈತಾನನ್ನೂ ಗಡಗಡ ಹೆದರಿಸಬಲ್ಲಂತಹ ನಿಮ್ಮದೇ ಕ್ರೂರಹೃದಯದ ಸಾವು ಬಡಿತಗಳ ಭಯ. ಸಾವು ನಿಮ್ಮ ಗುಲಾಮನಿರಬಹುದು ; ಆದರೆ ನಮ್ಮ ಸಂಗಾತಿಯೇ ಸಾವು. ಹೀಗಾಗಿ ಈ ಕೊನೆಯ ಮಾತು : ನೋವು ಅನುಭವಿಸುವುದಕ್ಕಿಂತಲೂ, ನೋವನ್ನು ಅರ್ಥ ಮಾಡಿಕೊಳ್ಳುವ ವಿವೇಕವೇ ದೊಡ್ಡದಲ್ಲವೇ ? ಓ, ಅಮೆರಿಕ, ಇಂದು ನಿನ್ನಲ್ಲಿ ಈ ಹಿರಿತನವೇನಾದರೂ ಉಳಿದಿದೆಯೇ ? ದಯವಿಟ್ಟು ಹುಡುಕಿಕೋ, ಆ ವಿವೇಕವೂ ಕಾಲನ ಹೆಜ್ಜೆ ಗುರುತಲ್ಲಿ ಅಳಿಸಿಹೋಗುವ ಮುನ್ನ.'

ಇದು ಅಮೆರಿಕೆಯನ್ನು ಅರ್ಥ ಮಾಡಿಕೊಂಡ ಪ್ರತಿಯೊಂದು ಜೀವಿಯ ಅಂತಿಮ ಮಾತುಗಳಂತಿವೆ. ಜಲಾಲುದ್ದೀನ್ ರೂಮಿಯ ಒಂದು ಪದ್ಯ ಈ ಕ್ಷಣದ ಅಮೆರಿಕೆಗೇ ಅನ್ವಯಿಸುವಂತಿದೆ :

ಸಮಸ್ತ ಜಗತ್ತನ್ನು ವಶಮಾಡಿಕೊಂಡು ಅಲ್ಲೆಲ್ಲಾ
ನನ್ನನ್ನೇ ಸ್ಥಾಪಿಸಿಕೊಳ್ಳುತ್ತೇನೆ ಅಂತಾ
ಎಲ್ಲಿಯತನಕ ಹೇಳುತ್ತಿರುತ್ತೀ ?
ಹಿಮ, ಈ ಜಗತ್ತನ್ನು ಸಂಪೂರ್ಣ ಆವರಿಸಿಕೊಂಡರೂ
ಸೂರ್ಯ ಒಂದೇ ಒಂದು ನೋಟದಲ್ಲಿ ಕರಗಿಸಿ ಬಿಡುತ್ತಾನೆ
ದೇವರ ಕರುಣೆಯ ಸಣ್ಣ ಕಿಡಿ
ವಿಷವನ್ನು ಅಮೃತವನ್ನಾಗಿ ಪರಿವರ್ತಿಸುತ್ತದೆ.
ಎಲ್ಲಿ ಸಂದೇಹವಿದೆಯೋ ಅಲ್ಲಿ
ಅವನು ಖಚಿತತೆ ತೋರುತ್ತಾನೆ.

ವಸಂತಕಾಲ ಕಲ್ಲಿನಲ್ಲಿ ತೋಟವರಳಿಸಲು ಹೇಗೆ ಸಾಧ್ಯ ?
ಅನೇಕ ಬಣ್ಣಗಳ ಹೂ ತೊಡಬೇಕೆಂದರೆ ಭೂಮಿಯಾಗಬೇಕು
ಎದೆ ಬಿರಿಸುವಂತಹ ಕಲ್ಲಾಗಿರುವ ನೀನು
ಒಂದೇ ಒಂದು ಸಲವಾದರೂ ಭೂಮಿಯಾಗು
ನಿನ್ನ ಚಿಂತನೆ ಗುಲಾಬಿಯಾದರೆ
ನೀನೊಂದು ಗುಲಾಬಿ ತೋಟ
ಅದು ಮುಳ್ಳಾದರೆ
ನೀರು ಕಾಯಿಸುವ ಒಲೆಗೆ ಸೌದೆ !

–ರೂಮಿ.

೨

ಅಮೆರಿಕದ ಕುರುಡು ಕಾಲ್ತುಳಿತಕ್ಕೆ ಸಿಕ್ಕಿ ಅರೆಜೀವವಾದ ದೇಶಗಳಿಗೆ ಲೆಕ್ಕವೇ ಇಲ್ಲ. ಅವುಗಳ ಪೈಕಿ ಇರಾಕ್, ಕ್ಯೂಬಾ, ಪ್ಯಾಲೆಸ್ತೈನ್, ವಿಯೆಟ್ನಾಮ್, ಶಾಂತಸಾಗರದ ಮಾರ್ಷಲ್ ದ್ವೀಪ ಗಣರಾಜ್ಯಗಳ ನೊಂದವರ ಕೆಲವು ಅನುಭವ ಕಥನಗಳ ಅನುವಾದಗಳನ್ನು ಈ ಸಂಚಿಕೆಯಲ್ಲಿ ಒಟ್ಟುಗೂಡಿಸಿ ನೀಡಲಾಗಿದೆ. ಅದರೊಂದಿಗೆ ಈ ಅನುಭವ ಕಥನಗಳಿಗೆ ಪೂರಕವಾಗಬಲ್ಲ ರೀತಿಯ ಟಿಪ್ಪಣಿ / ಪ್ರಬಂಧಗಳ ಅನುವಾದಗಳೂ ಸೇರಿವೆ. ಅಮೆರಿಕದ ಸಾಮ್ರಾಜ್ಯಶಾಹಿ ಧೋರಣೆಯ ಕುರಿತಂತಹ ನಮ್ಮ ಹೆಮ್ಮೆಯ ಲೇಖಕಿ ಅರುಂಧತಿರಾಯ್ ಅವರ ಎರಡು ಲೇಖನಗಳ ಅನುವಾದಗಳೂ ಇಲ್ಲಿವೆ. ಕವಿ ಎಲ್ಸಿ. ನಾಗರಾಜ್‌ರವರು 'ಏಷಿಯಾ ಮಹಿಳಾ ಮಾನವ ಹಕ್ಕುಗಳ ಪರಿಷತ್ತಿ'ಗಾಗಿ ಅನುವಾದಿಸಿದ್ದು ಈ ಅನುಭವ ಕಥನ ಹಾಗೂ ಟಿಪ್ಪಣಿಗಳು. ಜೆ. ಬಾಲಕೃಷ್ಣರವರು 'ಅನಿಕೇತನ'ದ ಈ ಸಂಚಿಕೆಗಾಗಿಯೇ ಅರುಂಧತಿರಾಯ್‌ರವರ ಲೇಖನಗಳನ್ನು ಕನ್ನಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸಾಹಿತ್ಯ, ಸಂಸ್ಕೃತಿ ಹಾಗೂ ರಾಜಕಾರಣದ ನಡುವಿನ ಸಂಬಂಧಗಳನ್ನು ವಿಶ್ಲೇಷಿಸುತ್ತ, ಕವಿ, ಕಲಾವಿದರಾದ ನಮ್ಮನ್ನು ನಾವು ಇವತ್ತಿನ ಗೊಂದಲದ ರಾಜಕಾರಣದ ನಡುವೆ ಹುಡುಕಿಕೊಳ್ಳುವ ಪ್ರಯತ್ನದಂಗವಾಗಿ ಸಂಪಾದಕೀಯವೊಂದನ್ನು ನೀಡಿದ್ದೇವೆ. ಆತ್ಮಸಾಕ್ಷಿ ಹಾಗೂ ಮಾನವೀಯತೆಯ ಪ್ರತಿರೂಪಗಳಾಗಬೇಕಿರುವ ಎಲ್ಲರಿಗೂ ಈ ಸಂಚಿಕೆ ಇಷ್ಟವಾಗಬಹುದೆಂಬುದು ನಮ್ಮ ಗಟ್ಟಿ ನಂಬಿಕೆ.

– ಸಂಪಾದಕರು

ಪರಿವಿಡಿ

ಭಾಗ - ೧

ಭಾಗ - ೨

ನವ ವಸಾಹತುಶಾಹಿ ತಲ್ಲಣ:ಟಿಪ್ಪಣಿ/ಆತ್ಮಕಥಾನಕಗಳು

ಅನು : ಎಲ್ಸಿ. ನಾಗರಾಜ್

ಕೃಪೆ : ಎ.ಡಬ್ಲ್ಯೂ.ಹೆಚ್.ಆರ್.ಸಿ.

ಯಾರಾದರೂ ಬದುಕಿದ್ದೀರಾ ?!

ಮೂಲ : ಸುವಾದ್ ಸ್ರೌರ್ ಎಲ್ ಮುರ್ರೈ

ನಾನು ಸುವಾದ್ ಸ್ರೌರ್ ಎಲ್ ಮುರ್ರೈ, ಲೆಬನಾನ್‌ನಲ್ಲಿ ವಾಸವಾಗಿರುವ ಪ್ಯಾಲೆಸ್ಟೈನಿ ನಿರಾಶ್ರಿತೆ.

೧೯೮೨ರಲ್ಲಿ ಇಸ್ರೇಲ್ ಬೈರೂತ್ ನಗರದ ಮೇಲೆ ಆಕ್ರಮಣ ನಡೆಸಿದಾಗ ಸಬ್ರಾ ಮತ್ತು ಷತೀಲಾ ಶಿಬಿರಗಳ ನರಮೇಧದಲ್ಲಿ ನನಗೆ ಮತ್ತು ನನ್ನ ಕುಟುಂಬಕ್ಕೆ ಏನಾಯಿತು ಅಂತಾ ಹೇಳುತ್ತಿದ್ದೇನೆ.

ಸೆಪ್ಟೆಂಬರ್ ೧೭ರ ಸಂಜೆ ೫ ಗಂಟೆ, ಷೆಲ್‌ದಾಳಿ ಮತ್ತು ಗುಂಡಿನಿಂದ ತಪ್ಪಿಸಿಕೊಳ್ಳಲು ನನ್ನ ಸ್ನೇಹಿತರು ಅಡಗಿ ಕುಳಿತಿದ್ದ ನೆಲೆಗಳಿಗೆ ಹೋಗಲು ನಾನು ಮನೆ ಬಿಟ್ಟೆ. ನನ್ನ ಮನೆಯ ತಿರುವಿನಲ್ಲಿ ಮೂರು ಮಂದಿ ನನಗೆದುರಾಗಿ, 'ಇದು ಷತೀಲಾ ಶಿಬಿರವಾ ?' ಅಂತಾ ಕೇಳಿದರು. ತಕ್ಷಣ ನಾನು ಅವರ ಅಪರಿಚಿತ ಶಬ್ದ ಉಚ್ಚಾರಣೆ ಗ್ರಹಿಸಿ, ಈ ಊರಿಗೆ ಹೊಸಬರಿರಬಹುದು ಅಂದುಕೊಂಡೆ; ನಾನು ನಕಾರಾತ್ಮಕ ಉತ್ತರ ಕೊಟ್ಟ ಮೇಲೆ ಅವರು ಹೊರಟುಹೋದರು.

ನನ್ನ ಸ್ನೇಹಿತರು ಅಡಗಿ ಕುಳಿತಿದ್ದ ನೆಲೆಗಳಿಗೆ ಹೋಗಿ ದಾರಿಯಲ್ಲಿ ನಡೆದುದನ್ನ ತಿಳಿಸಿದೆ; ಮತ್ತೆ ಬಂದು ನಿಮ್ಮನ್ನ ಕರೆದುಕೊಂಡು ಹೋಗುವೆನೆಂದು ಹೇಳಿ ಅಲ್ಲಿಂದ ಹೊರಟೆ. ಮನೆ ತಲುಪಿ ತಂಗಿಯರು, ತಮ್ಮಂದಿರಿಗಾಗಿ ಅಡುಗೆ ತಯಾರಿಸಿ ನಂತರ ನನ್ನ ತಮ್ಮ ಮಾಹೆರ್ ಜೊತೆ ನನ್ನ ಸ್ನೇಹಿತರು ಅಡಗಿ ಕುಳಿತಿದ್ದ ಸ್ಥಳಕ್ಕೆ ಹೊರಟೆ; ಆಗ ನನಗೆ ೧೭ ವರ್ಷ ವಯಸ್ಸು, ತಮ್ಮನಿಗೆ ೧೨ ವರ್ಷ.

ನಾವು ಆ ಸ್ಥಳ ತಲುಪುವುದಕ್ಕೆ ಮುಂಚೆ ಭಯಾನಕ ದೃಶ್ಯಗಳು ಕಾಣಿಸತೊಡಗಿದವು. ನೆಲದ ಮೇಲೆ ಬಿದ್ದಿದ್ದ ದೇಹಗಳು, ಹರಿಯುತ್ತಿದ್ದ ರಕ್ತ, ನರಳಿಕೆ ಮತ್ತು ಜನರ ಚೀತ್ಕಾರ. ಇದ್ದಕ್ಕಿದ್ದಂತೆ ಯಾರೋ ನನ್ನ ಹೆಸರು ಹಿಡಿದು ಕರೆದಂತಾಯಿತು. ಅದು ನೆರವಿಗಾಗಿ ಕೂಗಿಕೊಂಡ ನಮ್ಮ

ನೆರೆಮನೆಯ ಅಬೂರ್ರೈದಾನ ಧ್ವನಿ. ಅವನು ಹೇಳಿದ, 'ಅವರು ನಮ್ಮನ್ನ ಕತ್ತರಿಸಿದರು, ಕೊಂದು ಹಾಕಿದರು, ಹುಡುಗಿಯರ ಮೇಲೆ ಅತ್ಯಾಚಾರ ಎಸಗಿದರು, ೧೨ ರಿಂದ ೧೬ ವಯಸ್ಸಿನ ಹುಡುಗಿಯರನ್ನೆಲ್ಲಾ ಎಳೆದುಕೊಂಡು ಹೊರಟುಹೋದರು. ನೀವೂ ಮನೆಯಿಂದ ತಪ್ಪಿಸಿಕೊಳ್ಳಿ. ಅಲ್ಲಿರಬೇಡಿ; ಅವರು ಮತ್ತೆ ಬಂದು ಶಿಬಿರದಲ್ಲಿರುವ ಎಲ್ಲರನ್ನೂ ಕೊಂದುಹಾಕುತ್ತಾರೆ'.

'ಯಾರು ಹೀಗೆ ಮಾಡಿದ್ದು ?' ಅಂತಾ ಕೇಳಲು ಪ್ರಯತ್ನಿಸಿದೆ, ಅಷ್ಟರಲ್ಲಿ ಒಂದು ಧ್ವನಿ ಅರಚಿಕೊಂಡಿತು : 'ನೀವು ನಾಯಿಗಳು, ಇನ್ನೂ ಬದುಕಿದ್ದೀರಾ ? ಸಾಯಲಿಲ್ವಾ ?'

ನಡೆದ ಭಯಾನಕ ಘಟನೆಗಳನ್ನು ತಂದೆ ತಾಯಂದಿರಿಗೆ ತಿಳಿಸಲು ನಾವು ಹಿಂದಕ್ಕೆ ಓಡಿದೆವು; ನಡೆದ ಘಟನೆ ಮತ್ತು ಅಬೂರ್ರೈದಾನ ಸಲಹೆಯನ್ನ ಅಪ್ಪನಿಗೆ ತಿಳಿಸಿದೆವು. ಅಪ್ಪ ಹೇಳಿದರು : 'ನಮಗೆ ಏನೂ ಆಗೋದಿಲ್ಲ, ನಮ್ಮನ್ನ ಸೃಷ್ಟಿಸಿದವನು ದೇವರು, ನಮ್ಮ ಬದುಕನ್ನ ಕೊನೆಗಾಣಿಸುವವನು ಕೂಡ ಅವನೇ'.

ಮರುದಿನ ಬೆಳಗ್ಗೆ, ಅಂದರೆ ಸೆಪ್ಟೆಂಬರ್ ೧೮ರ ಶುಕ್ರವಾರ ಬೆಳಗಿನ ತನಕ ನಾವು ಮನೆಯಲ್ಲೇ ಇದ್ದೆವು. ಆ ರಾತ್ರಿ ನಮ್ಮ ಜೊತೆ ನಮ್ಮ ನೆರೆಮನೆಯ, ಬೇರೆ ಯಾರ ಪರಿಚಯವೂ ಇಲ್ಲದ ಗರ್ಭಿಣಿ ಮಹಿಳೆ ಇದ್ದರು. ಬೆಳಗಿನ ಜಾವ ೪.೩೦ ಗಂಟೆಯಲ್ಲಿ ನಮ್ಮ ನೆರೆಯ ಮಹಿಳೆ ಮತ್ತು ೧೧ ವರ್ಷದ ನನ್ನ ತಮ್ಮ, ಇಲ್ಲಿರುವುದೋ ಬೇಡವೋ ಅಂತಾ ನಿರ್ಧರಿಸಲು ಏನಾಗುತ್ತಿದೆ ಎಂದು ಗ್ರಹಿಸಲು ಮನೆಯ ಚಾವಣಿ ಏರಿದರು. ಬೆಟ್ಟದ ತುದಿಯಲ್ಲಿ ಕುಂತು ಶಿಬಿರದ ಕಡೆಗೆ ನೆಟ್ಟ ಕಣ್ಣುಗಳಿಂದ ನೋಡುತ್ತಿದ್ದ ಇಸ್ರೇಲಿನ ಮಿಲಿಷಿಯಾದವರು ನಮ್ಮನ್ನ ನೋಡಿಬಿಟ್ಟರು, ಅಂತ ನನ್ನ ತಮ್ಮ ಮತ್ತು ನೆರೆಯ ಮಹಿಳೆ ಹೆದರಿ ಕೆಳಗೆ ಬಂದು ಈ ವಿಷಯವನ್ನ ನಮಗೆ ತಿಳಿಸಿದರು. ಇದಾದ ಕೊಂಚ ಹೊತ್ತಲ್ಲಿ ಬಾಗಿಲು ಬಡಿದ ಶಬ್ದ. ಯಾರು ? ಅಂತಾ ಅಪ್ಪ ಕೇಳಿದರು. ತಾವು ಮನೆ ಶೋಧಿಸಲು ಬಂದಿರುವ ಇಸ್ರೇಲಿ ಸೈನಿಕರೆಂಬ ಉತ್ತರ ಬಂತು. ಅಪ್ಪ ಬಾಗಿಲು ತೆರೆದರು. ಬಾಗಿಲ ಹತ್ತಿರ ೧೩ ಮಂದಿ ಶಸ್ತ್ರಸಜ್ಜಿತ ಸೈನಿಕರು ನಿಂತಿದ್ದರು ; ಕೆಲವರು ತಲಬಾಗಿಲಲ್ಲೇ ನಿಂತರು, ಕೆಲವರು ಚಾವಣಿ ಏರಿದರು, ಉಳಿದವರು ನಮ್ಮನ್ನ ಸುತ್ತುಗಟ್ಟಿದರು. ನಾನು, ನನ್ನ ತಂಗಿ ಅಪ್ಪನ ಕಡೆಗೆ ಸರಿದುನಿಂತೆವು. ನಮ್ಮ ನೆರೆಯ ಗರ್ಭಿಣಿಮಹಿಳೆ ಅಮ್ಮನ ಹತ್ತಿರ ನಿಂತಿದ್ದರು. ಸೈನಿಕರನ್ನ ಸ್ವಾಗತಿಸಿದ ಅಪ್ಪ ಕುಳಿತುಕೊಳ್ಳುವಂತೆ ಹೇಳಿದರು. ಅವರ ಪೈಕಿ ಒಬ್ಬ ಸೈನಿಕ ಹೇಳಿದ, 'ಎಲ್ಲವನ್ನೂ ತೆಗೆದುಕೊಂಡು ಹೋಗಲು ಬಂದಿದ್ದೇವೆ'.

'ನಮ್ಮ ಅಮೂಲ್ಯ ಭೂಮಿಯನ್ನೇ ಕಿತ್ತುಕೊಂಡುಬಿಟ್ಟಿರಿ, ಇನ್ನೂ ಏನು ತೊಗೊಂಡು ಹೋಗೋಕೆ ಬಂದ್ರೀ ?' ಅಂತಾ ನಾನು ಕೇಳಿದೆ. 'ಏನ್ ತೊಗೊಂಡು ಹೋಗ್ತೀವಿ ಅಂತಾ ನೋಡ್ತಿರು, ನಿನ್ನ ತಂಗೀನ ಎಳಕೊಂಡು ಹೋಗ್ತೀವಿ'. 'ನಿಮಗೆ ಏನು ಬೇಕೋ ತೊಗೊಂಡು ಹೋಗಿ, ಆದ್ರೆ ನನ್ನ ಮಕ್ಕಳನ್ನ ಮಾತ್ರ ಬಿಟ್ಟುಬಿಡಿ' ಎಂದರು ಅಪ್ಪ. ಸೈನಿಕ ಅಪ್ಪನ ಮುಖಕ್ಕೆ ಗುದ್ದಿದ, ಅಪ್ಪನ ಮುಖದಿಂದ ರಕ್ತ ಸೋರತೊಡಗಿತು. 'ವಯಸ್ಸಾಗಿರುವ ಅಪ್ಪನಿಗೆ ಯಾಕೆ ಹೊಡೆದಿರಿ ?' ಅಂತ ಕೇಳಲು ಮುಂದಾದೆ. ಅಷ್ಟರಲ್ಲಿ ನನಗೂ ಹೊಡೆತ ಬಿತ್ತು. ಕೆಳಗೆ ನೂಕಿದರು. ಅವರುಗಳ ಪೈಕಿ ಒಬ್ಬ ಗಟ್ಟಿಯಾಗಿ, 'ಅವಳನ್ನ ರೂಮಿಗೆ ಎಳಕೊಂಡು ಹೋಗು' ಅಂತಾ ಆಜ್ಞೆ

ಕೊಟ್ಟ. ಎದ್ದು ನಿಂತು, ಕೈಗಳನ್ನ ತಲೆಯಿಂದ ಮೇಲಕ್ಕೆತ್ತುವಂತೆ ಅವರು ನನಗೆ ಆಜ್ಞಾಪಿಸಿದರು. 'ಹಿಂತಿರುಗಿ ನೋಡಕೂಡದು' ಎಂದರು. ಒಂದೂವರೆ ವರ್ಷದ ನನ್ನ ಪುಟ್ಟ ತಂಗಿ ದಿಗಿಲಿನಿಂದ ಅಮ್ಮನನ್ನು ಕರೆದಳು. ಅವರು ನಮ್ಮ ಮೇಲೆ ಗುಂಡು ಹಾರಿಸತೊಡಗಿದರು. ಒಂದೂವರೆ ವರ್ಷದ ನನ್ನ ಪುಟ್ಟ ತಂಗಿಯ ತಲೆ ಗುಂಡೇಟಿನಿಂದ ಛಿದ್ರಗೊಂಡಿತು. ಅಪ್ಪನ ಎದೆಗೆ ಗುಂಡು ತಾಗಿತ್ತು. ಆದರೆ ಇನ್ನೂ ಬದುಕಿದ್ದರು.

ನನ್ನ ತಮ್ಮ ಷಾದಿ (೩ ವರ್ಷ), ಫರೀದ್ (೮ ವರ್ಷ), ಬಸ್ಸಾಮ್ (೧೧ ವರ್ಷ), ತಂಗಿ ಹಜಾರ್ (೭ ವರ್ಷ) ಮತ್ತು ಷಾದಿಯಾ (೧೧ ೧/೨ ವರ್ಷ) ಮತ್ತು ನೆರೆಯ ಗರ್ಭಿಣಿ ಮಹಿಳೆ ಅಲ್ಲೇ ಸತ್ತರು ; ನನ್ನ ತಮ್ಮ ಮಾಹೆರ್ (೧೨ ವರ್ಷ) ಮತ್ತು ಇಸ್ಮೈಲ್ (೯ ವರ್ಷ) ಸ್ನಾನದ ಮನೆಯಲ್ಲಿ ಅಡಗಿದ್ದರು. ನನ್ನ ಅಮ್ಮ ಮತ್ತು ತಂಗಿ ನುಹಾದ್ (೧೬ ವರ್ಷ) ಗೆ ಗಾಯಗಳಾದವು; ಆದರೆ ಬದುಕುಳಿದರು. ನನ್ನ ದೇಹಕ್ಕೆ ಲಕ್ವಾ ಹೊಡೆದಂತಾಗಿತ್ತು, ಹಾಗೇ ಬಿದ್ದಿದ್ದೆ ; ಎಲ್ಲರೂ ಸತ್ತರು ಅಂತಾ ತಿಳಿದ ಸೈನಿಕರು ಅಲ್ಲಿಂದ ಹೊರಟರು.

ನರಳುತ್ತಾ ನಾನು ಕೇಳಿದೆ : 'ಯಾರಾದರೂ ಬದುಕಿದ್ದೀರಾ ?' ಅಮ್ಮ, ತಂಗಿ ಮತ್ತು ಸ್ನಾನದ ಮನೆಯಿಂದ ತಮ್ಮಂದಿರು ಪ್ರತಿಕ್ರಿಯಿಸಿದರು. 'ಇಲ್ಲಿಂದ ತಪ್ಪಿಸಿಕೊಂಡು ಹೋಗಿ ಅಪ್ಪ ಮತ್ತು ನನ್ನ ರಕ್ಷಣೆಗೆ ಯಾರನ್ನಾದರೂ ಕರೆತನ್ನಿ' ಎಂದೆ. ಅವರು ತಪ್ಪಿಸಿಕೊಂಡರು. ಸುತ್ತಲೂ ಬಿದ್ದಿದ್ದ ಕುಟುಂಬದ ಮೃತಶರೀರಗಳ ನಡುವೆ ನಾನು ಮತ್ತು ಗಾಯಗೊಂಡಿದ್ದ ಅಪ್ಪ ; ಜೀವನದಲ್ಲಿ ಎಂದಿಗೂ ಮರೆಯಲಾಗದಂತಹ ಭಯಾನಕ ದೃಶ್ಯ.

ಬೆಳಗ್ಗೆ ೧೦ ಗಂಟೆ ವೇಳೆಗೆ, ತಾವು ಮರೆತುಹೋಗಿದ್ದ ಹಣ ತೆಗೆದುಕೊಳ್ಳಲು ಮಿಲಿಷಿಯಾದ ಮೂವರು ಸೈನಿಕರು ಬಂದರು ; ಅಪ್ಪನ ಕಡೆಗೆ ತೆವಳುತ್ತಿದ್ದ ನನ್ನ ಕಂಡರು. ಕೊಳಕು ಶಬ್ದಗಳಿಂದ ನನ್ನ ಶಪಿಸಿ, 'ನೋಡ್ತಾ ಇರು ನಿನ್ನ ಅಪ್ಪನ ಎದುರಿಗೇ ನಿನ್ನ ಏನು ಮಾಡ್ತೀವಿ !' ಎಂದರು. ಅಪ್ಪನ ಎದುರಲ್ಲೇ, ಒಬ್ಬರಾದ ನಂತರ ಒಬ್ಬರು ನನ್ನ ಛಿದ್ರಗೊಳಿಸಿದರು ; ಕೊನೆಗೆ ನನ್ನ ಎಡಗೈಗೆ ಗುಂಡು ಹಾರಿಸಿ ಹೊರಟುಹೋದರು. 'ದೇವರು ನಿನ್ನ ರಕ್ಷಿಸಲಿ' ಎಂದು ಉಸುರಿದ ಅಪ್ಪ ಕಣ್ಣು ಮುಚ್ಚಿದರು.

ಬೆಕ್ಕುಗಳು ಶವಗಳ ಸುತ್ತ ಗಸ್ತು ತಿರುಗುತ್ತಿದ್ದವು !

ಆ ದಿನ ಸಂಜೆ ಮತ್ತೆ ಬಂದ ಅವರು, ನಾನು ನೀರು ಕುಡಿಯುತ್ತಿದ್ದನ್ನ ಕಂಡು ಸಿಟ್ಟಿಗೆದ್ದರು; ಯಾಕೆಂದರೆ ನಾನಿನ್ನೂ ಬದುಕಿದ್ದೆ. ನನ್ನ ಕಡೆಗೆ ಎರಡು ಸಲ ಗುಂಡು ಹಾರಿಸಿ, ತಲೆ ಮೇಲೆ ಹೊಡೆದರು; ಪ್ರಜ್ಞೆತಪ್ಪಿದೆ. ರಾತ್ರಿ ವೇಳೆಗೆ ಸಪ್ಪಳ ಕೇಳಿ ಎಚ್ಚೆತ್ತೆ ; ಬೆಕ್ಕುಗಳು ಮೃತಶರೀರಗಳ ಸುತ್ತ ಗಸ್ತು ತಿರುಗುತ್ತಿದ್ದವು. ಸುರಕ್ಷಿತವಾಗಿದ್ದ ನನ್ನ ಒಂದು ಕೈಯಿಂದ ಮೃತಶರೀರಗಳ ಮೇಲೆ ಬಟ್ಟೆ ಹೊಚ್ಚಲು ಪ್ರಯತ್ನಿಸಿದೆ ; ಆದರೆ ಪೂರ್ತಿ ಹೊಚ್ಚಲು ಸಾಧ್ಯವಾಗಲೇ ಇಲ್ಲ.

ಮರುದಿನ ಬೆಳಗ್ಗೆ, ಅಂದರೆ ಸೆಪ್ಟೆಂಬರ್ ೧೯ರ ಶನಿವಾರ ಅವರು ಮತ್ತೆ ಬಂದರು ; ನಾನು ಸತ್ತವಳಂತೆ ನಟಿಸಿದೆ. ಭಾನುವಾರ ಬೆಳಗ್ಗೆ ತನ್ನ ಸಂಬಂಧಿಕರು ಮತ್ತು ನೆರೆಹೊರೆಯ ಬಗ್ಗೆ ವಿಚಾರಿಸಲು ಒಬ್ಬ ಲೆಬನಾನಿ ಸೈನಿಕ ಬಂದಿದ್ದ. ನಾನು ಹೆದರಿ ಸೆರವಿಗಾಗಿ ಕಿರುಚಿಕೊಂಡೆ ; ಆದರೆ ಆ ಸೈನಿಕ ತನ್ನ ಜಾಕೆಟ್ಟನ್ನ ತೆಗೆದು ನನ್ನ ನಗ್ನ ಶರೀರದ ಮೇಲೆ ಹೊಚ್ಚಿದ ; ಮುಂದೆ ನನ್ನಿಂದ ಮಾತು

ಹೊರಡಲಿಲ್ಲ. ಸೈನಿಕ ತನ್ನ ಜೊತೆ ನನ್ನ ಕರೆದುಕೊಂಡು ಹೊರಟ. ಶಿಬಿರದಿಂದ ಹೊರಗೆ ಹೆಜ್ಜೆಯಿಡುತ್ತ ಕತ್ತರಿಸಿ, ಊದಿಕೊಂಡಿದ್ದ ಅನೇಕ ಮೃತ ಶರೀರಗಳನ್ನ ಕಂಡೆ ; ದಾರಿಯುದ್ದಕ್ಕೂ ನರಳಿಕೆ, ಚೀರಾಟಗಳನ್ನು ಕೇಳಿದೆ. ಆ ಸೈನಿಕ ನನ್ನನ್ನ ಲೆಬನಾನಿ ರೆಡ್‌ಕ್ರಾಸ್ ಸಂಸ್ಥೆಗೆ ವಹಿಸಿಕೊಟ್ಟ. ಅಲ್ಲಿ ನನಗೆ ತಕ್ಷಣ ಕೃತಕ ಉಸಿರಾಟದ ವ್ಯವಸ್ಥೆ ಮಾಡಿದ ನಂತರ ಅವರು ನನ್ನನ್ನ ಒಂದು ಆಸ್ಪತ್ರೆಗೆ ಕರೆದುತಂದರು. ಆದರೆ ಪ್ಯಾಲೆಸ್ಟೈನಿಗೆ ಸೇರಿದವಳೆಂಬ ಕಾರಣದಿಂದ ನನ್ನನ್ನು ಆಸ್ಪತ್ರೆಗೆ ಸೇರಿಸಿಕೊಳ್ಳಲಿಲ್ಲ. ನಂತರ ನನ್ನನ್ನು ಅಮೆರಿಕನ್ ಯೂನಿವರ್ಸಿಟಿ ಆಸ್ಪತ್ರೆಗೆ ದಾಖಲು ಮಾಡಿದರು. ಅಲ್ಲಿ ತುಂಬಾ ಪತ್ರಕರ್ತರಿದ್ದರು. ಯಾರೊಂದಿಗೂ ಮಾತನಾಡಲಾಗಲಿಲ್ಲ ; ಮಾತನಾಡುವ ಚೈತನ್ಯ ನನ್ನಲ್ಲಿ ಉಳಿದಿರಲಿಲ್ಲ.

ತುರ್ತು ಚಿಕಿತ್ಸಾ ಘಟಕದಲ್ಲಿ ನನ್ನ ಶರೀರದಿಂದ ಗುಂಡುಗಳನ್ನು ಹೊರತೆಗೆಯಲು ಶಸ್ತ್ರಚಿಕಿತ್ಸೆ ನಡೆಸಿದರು. ನಡೆದ ಘಟನೆಗಳು ನೆನಪಾದಾಗ ನನ್ನ ಶರೀರ ಕಂಪಿಸುತ್ತಿತ್ತು ; ನನ್ನ ಬಲಗೈ ಮಾತ್ರ ಸುರಕ್ಷಿತವಾಗಿತ್ತು. ಒಂದು ಪೆನ್ನು ಮತ್ತು ಕಾಗದ ಬೇಕೆಂದು ಡಾಕ್ಟರನ್ನ ಕೇಳಿದೆ. ಒಂದೇ ಒಂದು ವಾಕ್ಯ ಬರೆದೆ ; 'ನನ್ನ ಕುಟುಂಬಕ್ಕೆ ಏನಾಯಿತು ?'

ಆಸ್ಪತ್ರೆಯಲ್ಲಿದ್ದ ಕೆಲವು ಪತ್ರಕರ್ತರು ಮತ್ತು ವರದಿಗಾರರು ನನ್ನ ಕುಟುಂಬವನ್ನ ಹುಡುಕಿಕೊಡುವ ಮಾತು ಕೊಟ್ಟರು. ಕೆಲವು ದಿವಸಗಳ ನಂತರ ಬಂದ ಡಾಕ್ಟರು ಒಂದು ಆಶ್ಚರ್ಯವಿರುವುದಾಗಿ ಹೇಳಿದರು. ನನ್ನ ಅಮ್ಮ! ಗುರುತಿಸಲು ನನ್ನಿಂದ ಸಾಧ್ಯವಾಗಲಿಲ್ಲ ! ನನ್ನ ಅಮ್ಮನೋ ಅಲ್ಲವೋ ಅಂತಾ ಸಂದೇಹ ಶುರುವಾಯಿತು ; ಅಮ್ಮನೊಂದಿಗೆ ಮಾತನಾಡಲಾಗಲಿಲ್ಲ. ನಾನೇ ನಿನ್ನ ಅಮ್ಮ ಅಂತಾ ಸಾಬೀತು ಮಾಡಲು ಕೆಲವು ಘಟನೆಗಳನ್ನು ನೆನಪು ಮಾಡಿದಳು.

ಅಪ್ಪನ ಸಾವು ಅಮ್ಮನಿಗೆ ತಿಳಿದಿರಲಿಲ್ಲ, ಅಮ್ಮ ಕೇಳಿದಳು, ನಾನು ಕಿರುಚಿಕೊಂಡೆ ; ನನ್ನ ಶರೀರ ಕಂಪಿಸುತ್ತಿತ್ತು. ಅಮೆರಿಕನ್ ಯೂನಿವರ್ಸಿಟಿ ಆಸ್ಪತ್ರೆಯ ಚಿಕಿತ್ಸೆ ಮುಗಿದ ನಂತರ, ಹೆಚ್ಚಿನ ಚಿಕಿತ್ಸೆಗಾಗಿ ನಾನು ಬೇರೊಂದು ಆಸ್ಪತ್ರೆಗೆ ಹೋಗಬೇಕೆಂದು ಹೇಳಿದರು. ಆದರೆ ಗಾಜಾ ಆಸ್ಪತ್ರೆಗೆ ಕರೆದುತಂದರು ; ಅದು ಪ್ಯಾಲೆಸ್ಟೈನಿನ ರೆಡ್‌ಕ್ರಿಸೆಂಟ್ ಸೊಸೈಟಿ ಆಸ್ಪತ್ರೆ.

ಎರಡು ವರ್ಷಗಳ ತನಕ ಮಾತು ಹುಟ್ಟಲಿಲ್ಲ!

ಆಸ್ಪತ್ರೆ ಬಾಗಿಲಲ್ಲಿ ಲೆಬನಾನಿ ಸೈನಿಕರನ್ನ ಕಂಡು ನಾನು ಚೀತ್ಕರಿಸಿಕೊಂಡೆ. ನನಗೆ ನಿದ್ರೆ ಬರಿಸುವ ಚುಚ್ಚುಮದ್ದು ಕೊಟ್ಟರು ; ಎಚ್ಚರವಾದಾಗ ಹಾಸಿಗೆಯಲ್ಲಿದ್ದೆ. ಸೈನಿಕರು ಅಥವಾ ಯಾವುದೇ ಮನುಷ್ಯರನ್ನ ನೋಡಲು ನನ್ನಿಂದ ಸಾಧ್ಯವಾಗುತ್ತಿರಲಿಲ್ಲ. ಎಲ್ಲರೂ ನನ್ನ ಕೊಲ್ಲಲು ಬರುತ್ತಿದ್ದಾರೆ ಅಂತಾ ಅನಿಸುತ್ತಿತ್ತು. ತೀವ್ರ ನರದೌರ್ಬಲ್ಯ ನನ್ನ ಬಾಧಿಸುತ್ತಿತ್ತು.

ಲೆಬನಾನಿ ಉತ್ತರ ಭಾಗದಲ್ಲಿರುವ ಟ್ರಿಪೋಲಿಗೆ ಕಳಿಸುತ್ತಿರುವುದಾಗಿ, ಚಿಕಿತ್ಸೆಗಾಗಿ ಅಲ್ಲಿಂದ ಬೇರೆ ದೇಶಕ್ಕೆ ಕರೆದುಕೊಂಡು ಹೋಗುವುದಾಗಿ ಡಾಕ್ಟರು ಹೇಳಿದರು. ಅಮ್ಮ ನನ್ನ ವಸ್ತುಗಳನ್ನೆಲ್ಲ ಸೇರಿಸಿ ಹೊರಡಲು ಸಿದ್ಧತೆ ಮಾಡಿಕೊಂಡಳು. ಒಬ್ಬ ಲೆಬನಾನಿ ಅಂಗರಕ್ಷಕ ಮತ್ತು ಚಾಲಕನನ್ನ ನನ್ನ ಜೊತೆ ಕಳಿಸಿದರು. ಕುಳಿತುಕೊಳ್ಳಲು ಸಾಧ್ಯವಿರಲಿಲ್ಲ. ಹಿಂದಿನ ಸೀಟಲ್ಲಿ ಮಲಗಿದ್ದೆ. ನನ್ನ

ಶರೀರಕ್ಕೆ ಕೃತಕ ಉಸಿರಾಟದ ಉಪಕರಣ ಮತ್ತು ಮೂತ್ರ ವಿಸರ್ಜನೆ ಚೀಲ ಮತ್ತು IVಗಳನ್ನ ಅಳವಡಿಸಲಾಗಿತ್ತು.

ಕರಾವಳಿ ತೀರದಲ್ಲಿ ಟ್ರಿಪೋಲಿ ಕಡೆಗೆ ನಮ್ಮ ಪ್ರಯಾಣ ಮುಂದುವರೆಯಿತು. ಲೆಬನಾನಿನ ಆಂತರಿಕ ಯುದ್ಧಕಾಲದಲ್ಲಿ ಪ್ರಸಿದ್ಧಿಗೆ ಬಂದಿದ್ದ 'ಬಾರ್ಬಾರಾ ಚೆಕ್ ಪಾಯಿಂಟ್' ತಲುಪಿದೆವು. ನಿದ್ರಿಸುತ್ತಿರುವಂತೆ ನಟಿಸಬೇಕೆಂದು ಚಾಲಕ ನನಗೆ ಸೂಚನೆ ಕೊಟ್ಟ. ಚೆಕ್ ಪಾಯಿಂಟ್‌ನಲ್ಲಿದ್ದ ಮಿಲಿಷಿಯಾದವರು ಚಾಲಕ ಮತ್ತು ಅಂಗರಕ್ಷಕನಿಗೆ ಕಾರಿನಿಂದ ಹೊರಬರುವಂತೆ ಸೂಚಿಸಿದರು. ನನ್ನನ್ನ ಚಿಕಿತ್ಸೆಗೆ ಕರೆದುಕೊಂಡು ಹೋಗುತ್ತಿರುವುದಾಗಿ ಅವರು ಹೇಳಿದರು.

ಮಿಲಿಷಿಯಾ ಚೆಕ್ ಪಾಯಿಂಟ್‌ನ ಆ ಇಬ್ಬರೂ ಹೇಳಿದರು : 'ಆ ಹುಡುಗಿ ನಮಗೆ ಗೊತ್ತು!', ಅವರನ್ನ ಕಂಡ ತಕ್ಷಣ ನನಗೆ ಗೊತ್ತಾಯಿತು ; ಹತ್ಯಾಕಾಂಡದ ಸಮಯದಲ್ಲಿ ಅವರು ನಮ್ಮ ಮನೆಯಲ್ಲಿದ್ದರು.

'ಲೆಬನೀಸ್ ಫಲಾಂಜಿಸ್ಟ್' ಎಂಬ ಬರವಣಿಗೆಯಿದ್ದ ಜೀಪಲ್ಲಿ ಮೂವರನ್ನೂ ಅವರು ಕರೆದುಕೊಂಡು ಹೋದರು. ನನಗೆ ಹೇಳಿದರು : 'ನೀನೀಗ ಸಾಯುತ್ತೀ'. ಬಟ್ಟೆ ಕಳಚಿ ಬಾಟಲಿ ಮೇಲೆ ಕುಳಿತುಕೊಳ್ಳುವಂತೆ ನನ್ನ ಅಂಗರಕ್ಷಕನಿಗೆ ಆಜ್ಞೆ ಕೊಟ್ಟರು, ಆಮೇಲೆ ಅವನ ತಲೆಗೆ ಹೊಡೆದರು ; ಆತ ನನ್ನ ಕಣ್ಣೆದುರಲ್ಲೇ ಪ್ರಾಣ ಬಿಟ್ಟ. ನಂತರ ಅವರು ನನ್ನ ಶರೀರಕ್ಕೆ ಅಳವಡಿಸಿದ್ದ ಮೂತ್ರ ಚೀಲ ಮತ್ತು IVಯನ್ನ ಕಿತ್ತು ಬಿಸಾಡಿದರು. ನಾನು ಹೊಚ್ಚಿಕೊಂಡಿದ್ದ ಕಂಬಳಿ ಕಿತ್ತೆಸೆದರು.

ಚಾಲಕನ ಎದುರಲ್ಲೇ, ನನ್ನ ಮೇಲೆ ಅತ್ಯಾಚಾರ ಎಸಗಿ, ಸಮುದ್ರ ತೀರದ ಬಂಡೆಗಲ್ಲಿನ ಮೇಲೆ ಸಾಯಲು ಹಾಕಿದರು. 'ಈಗ ಅವಳೇ ಸತ್ತುಹೋಗುತ್ತಾಳೆ' ಅಂತಾ ಮಾತಾಡಿಕೊಂಡರು. ಇಡೀ ರಾತ್ರಿ ಹಾಗೇ ಬಿದ್ದಿದ್ದೆ, ಚಾಲಕ ನನ್ನನ್ನ ಕರುಣೆಯಿಂದ ನೋಡುತ್ತಿದ್ದ. ಮರುದಿನ ಬಂದ ಅದೇ ಮಿಲಿಷಿಯಾದವರು, ನಾನು ಎಲ್ಲಿಂದ ಬಂದೆನೋ ಅಲ್ಲಿಗೇ ಕರೆದುಕೊಂಡು ಹೋಗುವಂತೆ ಚಾಲಕನಿಗೆ ಆಜ್ಞೆ ಮಾಡಿದರು. ಇನ್ನಷ್ಟು ಹದಗೆಟ್ಟ ಪರಿಸ್ಥಿತಿಯಲ್ಲಿ ನಾನು ಬೈರೂತಿನ ಆಸ್ಪತ್ರೆಗೆ ಹಿಂತಿರುಗಿದೆ. ಮಾತನಾಡಲಾಗುತ್ತಿರಲಿಲ್ಲ, ಯಾರನ್ನೂ ಕಾಣಲು ಇಷ್ಟವಾಗುತ್ತಿರಲಿಲ್ಲ ; ನನ್ನ ದೇಹ ನಿರಂತರವಾಗಿ ಕಂಪಿಸುತ್ತಿತ್ತು.

ಎರಡು ವರ್ಷಗಳ ತನಕ ನನ್ನಿಂದ ಮಾತು ಹುಟ್ಟಲಿಲ್ಲ. ಏಗಬೇಕಾದ ಎಲ್ಲ ಸಂಕಟ, ನೋವು ಅಗಲಿಕೆಗಳನ್ನು ನುಂಗಿಕೊಂಡು ಬದುಕಿದೆ ; ಎಲ್ಲವನ್ನೂ ಎಲ್ಲರನ್ನೂ ಅಗಲಿದ ನನ್ನ ಹೊಸ ಸಂಗಾತಿ ಈಗ ಈ ಗಾಲಿ ಕುರ್ಚಿ ಮಾತ್ರ !

ಪೂರ್ವಿಕ ತಾಯಿನಾಡಿನಿಂದ ನಾನ್ಯಾಕೆ ದೂರವಿರಬೇಕು ?

ಒಮ್ ಅಲಿ, ಪ್ಯಾಲೆಸ್ಟೈನ್ / ಜೋರ್ಡಾನ್

ಇಸ್ರೇಲಿನ ಯಹೂದಿ ಮೂಲಭೂತವಾದಿ ಆಕ್ರಮಣಕಾರರು ನಮ್ಮ ಭೂಮಿಯಿಂದ ನಮ್ಮನ್ನ ಹೊರಗಟ್ಟಿದ ಕಥೆ ಹೇಳುತ್ತಿದ್ದೇನೆ.

ನಾವು ವಾಸಿಸುತ್ತಿದ್ದ ಡೀರ್ ತಾರಿಫ್ ಗ್ರಾಮದ ಮೂಲಕ ಪ್ಯಾಲೆಸ್ಟೈನ್ ಪ್ರವೇಶಿಸಿದ ಇಸ್ರೇಲಿ ಸೈನಿಕ ಪಡೆಗಳು ನನ್ನ ಕುಟುಂಬದ ಸದಸ್ಯರನ್ನ ಕೊಂದರು ; ಬದುಕುಳಿದವರು ನಾವು ಮೂವರು ಡೀರ್ ಅಮಾರ್‌ಗೆ ಓಡಿಹೋದೆವು. ಅಕ್ಕತಂಗಿಯರೊಂದಿಗೆ ೩ ತಿಂಗಳು ಕಣ್ಮರೆಯಾಗಿದ್ದೆ. ಕುಟುಂಬದ ಇತರರು ಎಲ್ಲಿದ್ದಾರೆಂಬ ಸುಳಿವಿರಲಿಲ್ಲ. ಒಂದು ದಿನ ನನ್ನ ಸೋದರ ಸಂಬಂಧಿಯನ್ನ ಆಕೆಯ ತಂದೆಯೊಂದಿಗೆ ಕೊಂದರು. ಆಕೆಯ ರಕ್ತಸಿಕ್ತ ಮೃತಶರೀರ ಒಂದು ವಾರ ಕಾಲ ಸುಡುಬಿಸಿಲಲ್ಲಿ ಬಿದ್ದಿತ್ತು. ಕ್ರಮೇಣ ಅದರಿಂದ ಕೊಳೆತ ವಾಸನೆ ಬರತೊಡಗಿತು.

ಡೀರ್ ಅಮಾರ್‌ನಿಂದ ಹೊರಬಂದ ನಾವು ನಿರಾಶ್ರಿತ ಶಿಬಿರಕ್ಕೆ ಹೋದೆವು ; ಹಸಿವು, ಬಡತನ, ಅಪಮಾನ, ಕಿರುಕುಳದಿಂದ ಬಳಲಿ ಬೆಂಡಾಗಿದ್ದೆವು. ನಾನು ಶಿಕ್ಷಣದಿಂದ ವಂಚಿತಳಾದೆ. ನಾವೆಲ್ಲ ಬೇರೆ ಬೇರೆ ನಿರಾಶ್ರಿತ ಶಿಬಿರಗಳಲ್ಲಿ ಚದುರಿ ಹೋದೆವು ; ವೈದ್ಯಕೀಯ ಉಪಚಾರ, ಶಿಕ್ಷಣ, ಬೆಳಕಿನ ಸೌಕರ್ಯಗಳಿರಲಿಲ್ಲ. ಅಲ್ಲಿ ೩ ವರ್ಷಗಳ ಕಾಲ ಇದ್ದು ನಂತರ ವಿಹದೆತ್ ನಿರಾಶ್ರಿತ ಶಿಬಿರಕ್ಕೆ ಬಂದೆವು. ಅಲ್ಲಿ ನಮಗೆ ತುಂಬಾ ಚಿಕ್ಕ ಮನೆ ಸಿಕ್ಕಿತು. ನಾವು ಒಟ್ಟು ೭ ಮಂದಿ. ಅಲ್ಲಿ ನಮ್ಮ ಮೇಲೆ ನಡೆಸಿದ ಕಿರುಕುಳ, ದಮನವನ್ನು ಹೇಳಿಕೊಳ್ಳಲು ಘಾಸಿಯಾಗುತ್ತಿದೆ. ಅಲ್ಲೂ ಶಾಲೆಗಳಿರಲಿಲ್ಲ, ಸಾಮಾಜಿಕ ಜೀವನವಿರಲಿಲ್ಲ ; ನಮ್ಮದು ಅಂತ ಒಂದು ದೇಶವಿಲ್ಲದೇ ಶಾಶ್ವತ ನಿರಾಶ್ರಿತರಂತೆ ಬದುಕಿದೆವು. ಉದ್ಯೋಗವಿಲ್ಲದ ನಾವು ಅತೀವ ಬಡತನದಿಂದ ನಿರಾಶ್ರಿತ ಶಿಬಿರಗಳಲ್ಲಿ ಹಸಿವನ್ನೇ ಹೊದ್ದು ಮಲಗುತ್ತಿದ್ದೆವು. ವಿದ್ಯುತ್ ಮತ್ತು ನೀರಿನ ಸೌಕರ್ಯಗಳಿರಲಿಲ್ಲ; ನಿರಾಶ್ರಿತ ಶಿಬಿರಗಳಲ್ಲಿ ನಾವು ಜೀವಿಸಿದಂತೆ ಜಗತ್ತಿನ ಯಾರೂ ಜೀವಿಸಿರಲಾರರು. ನಮ್ಮೊಂದಿಗೆ ನಿಂತು, ನಮ್ಮ ಧ್ಯೇಯವನ್ನು ಬೆಂಬಲಿಸಿ, ನಾವು ಪ್ಯಾಲೆಸ್ಟೈನ್‌ಗೆ ಮತ್ತೆ ಮರಳುವಂತಾಗಬೇಕು

ಅಂತಾ ಇಡೀ ಜಗತ್ತನ್ನೇ ಕೇಳುತ್ತಿದ್ದೇವೆ. ಕೊನೆಗಾಣದ ದಮನದ ಬಗ್ಗೆ ಸಾಕ್ಷಿ ಹೇಳುವುದು ಕಷ್ಟ. ಪ್ಯಾಲೆಸ್ಟೈನಿಯನ್ನರನ್ನ ಬಿಟ್ಟು ಉಳಿದೆಲ್ಲರಿಗೂ ತಮ್ಮದು ಅಂತಾ ಒಂದು ದೇಶವಿದೆ.

೧೯೪೮ರಲ್ಲಿ ನಮ್ಮನ್ನ ಭೂಮಿಯಿಂದ ಹೊರತಳ್ಳಿದಾಗ ನಾನಿನ್ನೂ ಮಗು. ನಮ್ಮ ಮನೆ ಮೇಲೆ ಆಕ್ರಮಣ ನಡೆಸಿದ ಯಹೂದಿ ಸೈನಿಕರು, ಓಡಿಹೋಗಬೇಕೆಂದು ಪ್ರತಿಯೊಬ್ಬರಿಗೂ ಆಜ್ಞಾಪಿಸಿದರು. ನನ್ನ ಚಿಕ್ಕಪ್ಪನ ಮಗಳು ತಪ್ಪಿಸಿಕೊಳ್ಳಲು ಪ್ರಯತ್ನಿಸಿದಳು ; ಇಸ್ರೇಲಿ ಸೈನಿಕ, ಅವಳು ರಕ್ತದಲ್ಲಿ ಮುಚ್ಚಿಹೋಗುವತನಕ ಗುಂಡಿನ ಮಳೆಗರೆದ. ಕೊಂಚ ದೂರದಲ್ಲಿ ನಡೆದುಹೋಗುತ್ತಿದ್ದ ಚಿಕ್ಕಮ್ಮ ಉದ್ಗರಿಸಿದಳು. 'ಅಯ್ಯೋ ಪಾಪ ಮಗೂಗೆ ಎಂತ ಯಾತನೆಯ ಸಾವು ಬಂತು, ಅವಳನ್ನ ಕಳಕೊಂಡ ಕುಟುಂಬಕ್ಕೆಷ್ಟು ಸಂಕಟ !' ಅವಳು ತನ್ನ ಮಗಳೇ ಅಂತಾ ಚಿಕ್ಕಮ್ಮನಿಗೆ ಗೊತ್ತಿರಲಿಲ್ಲ. ಆ ಭಯಾನಕ ದೃಶ್ಯವನ್ನು ಬದುಕಿರುವ ತನಕ ಮರೆಯಲು ಸಾಧ್ಯವಿಲ್ಲ.

ಅನಾಗರಿಕ ಆಕ್ರಮಣಕಾರರು ನಮ್ಮ ಭೂಮಿ ಕಸಿದುಕೊಂಡರು. ಅದನ್ನ ಮರಳಿ ಪಡೆಯಲು ನಮ್ಮ ಹೋರಾಟ ; ಪ್ಯಾಲೆಸ್ಟೈನ್ ನನ್ನ ದೇಶ ! ಪ್ಯಾಲೆಸ್ಟೈನ್ ನನ್ನ ನಾಡು ! ಪ್ಯಾಲೆಸ್ಟೈನ್ ನನ್ನ ಭೂಮಿ !

ಇನ್ನೊಂದು ಕಥೆ ಹೇಳಬೇಕು, ಅದು ನಸ್ರಾ ಗ್ರಾಮದ ಬಾಲಕಿಯ ದುರಂತ ಕಥೆ. ಶಿಬಿರದಲ್ಲಿದ್ದ ಅವಳು ಪ್ಯಾಲೆಸ್ಟೈನ್‌ಗೆ ಹೋಗಲು ತುಂಬಾ ಪ್ರಯತ್ನ ನಡೆಸಿದಳು ; ಆದರೆ ಕ್ರೂರ ಇಸ್ರೇಲಿಗಳು ಅವಳ ಬಯಕೆಯನ್ನ ತಿರಸ್ಕರಿಸಿದರು ; 'ನಿನ್ನ ಚಹರೆಗಳನ್ನ ಸಾಬೀತು ಮಾಡುವಂತದು ಏನೂ ಇಲ್ಲ' ಅಂತಾ ಅವರು ಹೇಳಿದರು. ಮುಂದೇನು ಮಾಡಬೇಕೆಂದು ತೋಚದೆ ಕುಂತಿದ್ದ ಆಕೆಯನ್ನ ಕರೆತಂದು ಮಗಳಂತೆ ನೋಡಿಕೊಂಡೆ. ಅಮೆರಿಕ, ರಷ್ಯಾ, ಯೂರೋಪಿನಿಂದ ಬಂದವರಿಗೆ ಅವಕಾಶ ಕಲ್ಪಿಸಿಕೊಡುವವರು, ಈ ಭೂಮಿಗೆ ಸೇರಿದವರನ್ನೇ ಹೊರಗಟ್ಟಿರುವಾಗ, ಹ್ಯಾಗೆ ಹಕ್ಕುಗಳ ಬಗ್ಗೆ ಮಾತನಾಡೋದು ? ನಂಗೆ ಅಚ್ಚರಿ ಆಗ್ತಿದೆ, ನೀವು ಯಾವ ಮಾನವ ಹಕ್ಕುಗಳ ಬಗ್ಗೆ ಮಾತಾಡ್ತಾ ಇದೀರಾ ? ಯಾವ ಅಂತಾರಾಷ್ಟ್ರೀಯ ಕಾನೂನು ? ಎಂತ ಸರ್ಕಾರೇತರ ಸಂಸ್ಥೆಗಳು ? ಎಲ್ಲಿಯ ಸಾಮಾಜಿಕ ಚಳುವಳಿ ? ನೀವು ಏನ್ ಮಾತಾಡ್ತಿದ್ದೀರಾ ?

ನನ್ನ ಜನ, ನನ್ನ ನಾಡು, ನನ್ನ ಭೂಮಿಯ ಕಥೆ ಹೇಳಬೇಕು ಅಂದ್ರೆ ೫೨ ವರ್ಷ ಬೇಕಾಗ್ತದೆ; ೧೯೪೮ ರಿಂದ ಇಲ್ಲಿಯ ತನಕ ಎಲ್ಲಾ ಹೇಳಬೇಕಾಗುತ್ತೆ. ಈ ಜಗತ್ತಿನ ಯಾವ ದೇಶಕ್ಕೂ ನಮ್ಮ ಬಗ್ಗೆ ಕಿಂಚಿತ್ತು ಗೌರವ ಇಲ್ಲ. ಹೇಳ್ತಾರೆ 'ನಿಮ್ಮ ದೇಶಕ್ಕೆ ನೀವು ಹೋಗಿ' ಅಂತಾ, ನಾನು ಕೇಳ್ತಿದ್ದೀನಿ: ಯಾವ ದೇಶಕ್ಕೆ ? ನನ್ನ ತಾಯಿನಾಡು ಬಿಟ್ಟು ನಾನ್ಯಾಕೆ ದೂರ ಹೋಗಬೇಕ್ರೀ ? ಪ್ಯಾಲೆಸ್ಟೈನ್ ನನ್ನ ಪೂರ್ವಿಕರ ನಾಡು ; ಅದು ನನ್ನ ಮಕ್ಕಳು, ಮೊಮ್ಮಕ್ಕಳಿಗೂ ನಾಡು.

ಒಂದಲ್ಲಾ ಒಂದು ದಿನ ನಾನೂ ಕನಸು ಕಟ್ಟುತ್ತೀನಿ, ಪ್ಯಾಲೆಸ್ಟೈನಿನ ಕ್ರಾಂತಿಕಾರಿಗಳನ್ನೆಲ್ಲಾ ಒಟ್ಟುಗೂಡಿಸಿ ಹೋರಾಟದ ತತ್ವಗಳನ್ನ ಅರಿಯುತ್ತೀನಿ ; ಕನಸಿನಲ್ಲಾದರೂ ನಾವು ನಮ್ಮ ಪ್ಯಾಲೆಸ್ಟೈನ್‌ಗಾಗಿ ಹೋರಾಡ್ತೀವಿ ; ಕನಸಿನಲ್ಲಾದರೂ ನಮ್ಮ ತಾಯಿನಾಡಿಗೆ ಹೋಗೇ ಹೋಗ್ತೀವಿ.

ನನ್ನ ತಾಯಿನಾಡನ್ನ ಅವರು ಬಲಪ್ರಯೋಗ, ಆಕ್ರಮಣದಿಂದ ಕಿತ್ತುಕೊಂಡರು ; ನಮ್ಮ ಭೂಮಿಯನ್ನು ಈಗ ದೂರದರ್ಶನದಲ್ಲಿ ಮಾತ್ರ ನೋಡುತ್ತಿದ್ದೇವೆ. ಪ್ಯಾಲೆಸ್ಟೈನ್ ಕ್ರಾಂತಿ ಜೋರ್ಡಾನ್

ದೇಶ ತಲುಪಿದ್ದು ೧೯೬೭ರಲ್ಲಿ. ಆಗ ಇಸ್ರೇಲಿ ಪಡೆಗಳು ನನ್ನ ಸೆರೆಹಿಡಿದವು ; ರಾಜಕೀಯ ಖೈದಿಯಾಗಿ ಅನೇಕ ವರ್ಷಗಳ ಕಾಲ ಸೆರಮನೆಯಲ್ಲಿ ಕಳೆದೆ.

ಈಗ ನನಗಿರುವ ಏಕೈಕ ಬಯಕೆ ಅಂದ್ರೆ ೧೯೪೮ರ ನನ್ನ ಪೂರ್ವಿಕ ತಾಯಿನಾಡಿಗೆ ಹೋಗುವುದು, ೧೯೬೭ರ ದೇಶಕ್ಕಲ್ಲ ; ಹೈಫಾ, ಯಾಫಾ, ತಬಾರಿಯಾ ಬಿತ್‌ಲಬಾನ ಮತ್ತು ಪ್ಯಾಲೆಸ್ಟೈನಿನ ಎಲ್ಲಾ ಗ್ರಾಮಗಳಿಗೂ ನಾವು ಹೋಗಬೇಕು.

ಈ ಬೀಗದ ಕೀಲಿಯನ್ನ ನಾನು ತಾಯಿಯಿಂದ ಪಡೆದಿದ್ದೇನೆ ; ಅದು ಮುಂದೆ ನನ್ನ ಮಕ್ಕಳಿಗೆ, ಮೊಮ್ಮಕ್ಕಳಿಗೆ ಸೇರುತ್ತದೆ.

ಪ್ಯಾಲೆಸ್ಟೈನ್ ಭೂಮಿಗೆ ಮರಳುವ ಆ ಸುದಿನ ಬರುವ ತನಕ ಈ ಕೀಲಿ ನನ್ನಲ್ಲೇ ಇರುತ್ತದೆ; ಆಕ್ರಮಣಕಾರರು ಬಲಪ್ರಯೋಗದಿಂದ ಮುಚ್ಚಿಬಿಟ್ಟಿರುವ ನನ್ನ ತಾಯ್ನಾಡಿನ ಕದಗಳನ್ನ ಒಂದೊಂದಾಗಿ ತೆರೆಯಲು ಈ ಕೀಲಿಯನ್ನ ಬಳಸಿಕೊಂಡೇ ತೀರುತ್ತೇನೆ.

ನಾವು ಬಲಾತ್ಕಾರದಿಂದ ಕಣ್ಮರೆಯಾದ ಭೂತಗಳು

ಲಿಯಾನ ಬಾದ್ರ್, ಪ್ಯಾಲೆಸ್ಟೈನ್

ಚಿಕ್ಕವಳಿದ್ದಾಗ ರಾಜಕೀಯ ಖೈದಿಯಾಗಿದ್ದ ನನ್ನ ತಂದೆ ಬಗ್ಗೆ ಯಾವಾಗಲೂ ಕೇಳುತ್ತಿದ್ದೆ ಅಂತಾ ತಾಯಿ ನನಗೆ ಹೇಳಿದರು. ಅವರ ಗೈರುಹಾಜರಿ ಗುಟ್ಟನ್ನ ನಾನು ಅರ್ಥ ಮಾಡಿಕೊಳ್ಳಲಾಗಿರಲಿಲ್ಲ.

ವಸಾಹತುಶಾಹಿ ವಿರೋಧಿ ಹೋರಾಟ ತಂದೆಯ ಬಂಧನಕ್ಕೆ ಕಾರಣ ಎಂಬ ಮಾತನ್ನ ತಾಯಿ ಹೇಳಿದರು : ತಂದೆಯನ್ನ ಇಕ್ಕಟ್ಟಾದ, ತಿರುಗಾಡಲು ಅವಕಾಶವಿಲ್ಲದ ಸ್ಥಳ, ಸೆರೆಮನೆಯಲ್ಲಿ, ಹೋರಾಟದಲ್ಲಿ ಭಾಗಿಯಾಗದಂತೆ ತಡೆಯಲು, ಮಕ್ಕಳಿಗೆ ಚಾಕಲೇಟ್ ತಂದುಕೊಡದಂತೆ ತಡೆಯಲು ಖೈದಿಯನ್ನಾಗಿ ಇಟ್ಟಿದ್ದಾರೆ. ನನಗೆ ತುಂಬಾ ಸಿಟ್ಟು ಬಂತು, ಹೇಳಿದೆ : ಆ ವಸಾಹತುಶಾಹಿಯನ್ನ ಹಿಡಿದು, ಬಾತ್ ರೂಮಿನಲ್ಲಿ ಕೂಡಿಹಾಕಿ ದೊಣ್ಣೆ ತೊಗೊಂಡು ಬಾರಿಸಬೇಕು. ಬಾಲ್ಯಕಾಲದ ಈ ಪ್ರಸಂಗ ನನಗೆ ಜನಾಂಗದ್ವೇಷದ ಚಿತ್ರಕತೆಯಾಗಿ ಕಾಣುತ್ತಿದೆ. ಜನಾಂಗದ್ವೇಷ ಎಂದರೆ ಹಕ್ಕುಗಳ ನಿರಾಕರಣೆ ; ನೀರು, ಗಾಳಿ, ಭೂಮಿ, ದೇಶ, ಸ್ವಾತಂತ್ರ್ಯ, ಭರವಸೆ ಮತ್ತು ಮಾನವೀಯ ಘನತೆಯ ನಿರಾಕರಣೆ. ಸಾಮಾಜಿಕವಾಗಿ ಕ್ರಿಯಾಶೀಲಳಾಗಿದ್ದ ನನ್ನ ತಾಯಿ, ನಾವು ೧೯೫೦ರ ಪ್ರಾರಂಭದಲ್ಲಿ ಅರಬ್ ಝೆರೂಸಲೆಂ ನಗರದಲ್ಲಿ ವಾಸವಾಗಿದ್ದಾಗ ಹೇಳಿಕೊಟ್ಟ ಪಾಠ ಇದು.

೧೯೬೭ ಜೂನ್‌ನಿಂದ, ನಾನು ನನ್ನ ಮನೆಗೆ ಮರಳಲು ಸಾಧ್ಯವಾಗುತ್ತಿಲ್ಲ. ಯುದ್ಧದಿಂದ ಸ್ಥಳಾಂತರಗೊಂಡ ಪ್ಯಾಲೆಸ್ಟೈನಿಯರು ಮನೆಗಳಿಗೆ ಮರಳುವುದನ್ನ ಇಸ್ರೇಲ್ ತಡೆಯುತ್ತಾ ಬಂದಿದೆ. ಯುದ್ಧ ಪ್ರಾರಂಭವಾದಾಗ ಹೊರದೇಶಗಳಲ್ಲಿದ್ದವರು ಮತ್ತೆ ತಮ್ಮ ದೇಶಕ್ಕೆ ಮರಳಲಾಗುತ್ತಿಲ್ಲ. ಈ ಆಕ್ರಮಣಕಾರಿ ನೀತಿಗೆ ಬಲಿಯಾದವರು ನಾನು, ನನ್ನ ತಂಗಿ. ಯುದ್ಧ ಕಾಲದಲ್ಲಿ ತಂದೆ ನಮ್ಮನ್ನ ಜೋರ್ಡಾನ್ ದೇಶದ ನೆಂಟರ ಮನೆಗೆ ಕಳಿಸಿದರು. ಯುದ್ಧದ ಘೋರ ಅನುಭವಗಳಿಗೆ ನಮ್ಮನ್ನ ಒಡ್ಡುವುದು ಅವರಿಗೆ ಇಷ್ಟವಿರಲಿಲ್ಲ. ತಾಯಿ ತೀರಿಕೊಂಡಿದ್ದರು. ತಂದೆ ಇಲ್ಲದಿರುವಾಗ ನಮ್ಮನ್ನ ನೋಡಿಕೊಳ್ಳಲು ಯಾರೂ ಇರಲಿಲ್ಲ. ನಾವು ಜೋರ್ಡಾನ್ ದೇಶಕ್ಕೆ ದಾಟಿಕೊಂಡ ಕೆಲವೇ

ಗಂಟೆಗಳಲ್ಲಿ ಇಸ್ರೇಲಿ ಸೇನೆ ಬಾಂಬ್ ಸಿಡಿಸಿ ಸೇತುವೆ ಮುರಿದು ಹಾಕಿತು. ೨೭ ವರ್ಷಗಳ ಗಡಿಪಾರಿನ ನಂತರ ನಮ್ಮ ಕುಟುಂಬದ ಪೈಕಿ ಪಶ್ಚಿಮದಂಡೆಗೆ ಮರಳಿದವಳು ನಾನೊಬ್ಬಳೇ. ಓಸ್ಲೋ ಶಾಂತಿ ಒಪ್ಪಂದದ ನಂತರ ನಾನು ಮರಳಿ ಪಶ್ಚಿಮದಂಡೆಗೆ ಬಂದೆ. ತಾಯ್ನಾಡಿನ ಭರವಸೆ ಮತ್ತು ಆಶಾವಾದದಿಂದ ನನ್ನ ಜನರೊಂದಿಗೆ ಮರಳಿದೆ. ಆದರೆ ಶಾಂತಿಯ ಸಾಧ್ಯತೆಗಳು ತಪ್ಪಿಸಿಕೊಳ್ಳುತ್ತಿದ್ದವು. ಈ ಶಾಂತಿ ಒಪ್ಪಂದ ಎನ್ನುವುದು ಸ್ವಾತಂತ್ರ್ಯ ಮತ್ತು ನ್ಯಾಯಕ್ಕೆ ದಾರಿಯಲ್ಲ, ಬದಲಿಗೆ ನಮ್ಮನ್ನ ಗುಲಾಮರನ್ನಾಗಿಸುವ ಮತ್ತೊಂದು ಸಾಧನ ಅಂತಾ ನಮಗೆ ಕ್ರಮೇಣ ಗೊತ್ತಾಗತೊಡಗಿತು. ಇಸ್ರೇಲಿ ಆಕ್ರಮಣ ಮತ್ತು ತಾರತಮ್ಯದೆದುರು ನಮ್ಮ ನ್ಯಾಯದ ಭರವಸೆ ಮತ್ತು ಶಾಂತಿ ಸಾಧ್ಯತೆಗಳು ಕರಗಿಹೋದವು.

ಝೆರೂಸಲೆಂ ನಗರ ನನಗೆ ಕೊಟ್ಟ ಭಾವನೆ ಮತ್ತು ಚಹರೆಗಳನ್ನ ನಿರಾಕರಿಸಲಾಯಿತು. ಮರಳಿದ ನಂತರ ನನಗೆ ಪಶ್ಚಿಮ ದಂಡೆಯ ಚಹರೆ ಚೀಟಿ ಕೊಟ್ಟರು ; ಇದರಿಂದ ನನ್ನ ಝೆರೂಸಲೆಂ ನಗರವನ್ನು ಪ್ರವೇಶಿಸಲು ಸಾಧ್ಯವಿಲ್ಲ. ಈ ದಾಖಲೆಯಲ್ಲಿ ನನ್ನ ಹುಟ್ಟಿದ ಸ್ಥಳವನ್ನು ಝೆರೂಸಲೆಂನಿಂದ ಇಸ್ರೇಲಿಗೆ ಬದಲಾಯಿಸಲಾಗಿತ್ತು. ನಾನು ೧೯೫೦ರಲ್ಲಿ ಹುಟ್ಟಿದ್ದು ಇಸ್ರೇಲಿನಲ್ಲಲ್ಲ ; ಇಸ್ರೇಲ್ ಆಗಿನ್ನೂ ಅರಬ್-ಝೆರೂಸಲೆಂ ನಗರವನ್ನ ಆಕ್ರಮಿಸಿಕೊಂಡಿರಲಿಲ್ಲ. ಪ್ಯಾಲೆಸ್ಟೈನಿಯನ್ನರಿಗೆ ಅರಬ್-ಝೆರೂಸಲೆಂ ನಗರದ ದಕ್ಕುವಿಕೆ ತಡೆಯುವ ಮತ್ತೊಂದು ಇಸ್ರೇಲಿ ವಿಧಾನ ಇದು.

ಈಗಿನ ಬಿಕ್ಕಟ್ಟಿಗೆ ಮೊದಲು, ಶಾಂತಿ ಪ್ರಕ್ರಿಯೆ ವಿಧಾನಗಳ ಕಾಲವೆಂದು ಕರೆಯಲಾದ ಅವಧಿಯಲ್ಲಿ ಕೂಡ, ಯಾವುದೇ ಕಾರಣಕ್ಕಾಗಿ ಪೂರ್ವ ಝೆರೂಸಲೆಂ ನಗರಕ್ಕೆ ಹೋಗಬಯಸುವ ಪ್ಯಾಲೆಸ್ಟೈನಿಯನ್ನರು, ಇಸ್ರೇಲಿ ಮಿಲಿಟರಿ ಅಧಿಕಾರಿಗಳಿಗೆ ಪರವಾನಗಿ ಅರ್ಜಿ ಹಾಕಿಕೊಳ್ಳಬೇಕಿತ್ತು. ಈ ರೀತಿಯ ಸಾಮಾನ್ಯ ತಡೆ ಮತ್ತು ಪರವಾನಗಿ ನೀತಿಗಳು, ನಾನು ಮುಕ್ತವಾಗಿ ಝೆರೂಸಲೆಂ ನಗರಕ್ಕೆ ಹೋಗುವಂತಿಲ್ಲ ಎಂದು ಹೇಳುತ್ತಿವೆ. ಅನೇಕ ಸಲ ನಾನು ತುಂಬಾ ತುರ್ತಾಗಿ ಝೆರೂಸಲೆಂಗೆ ಹೋಗಿ ಬಂದುಬಿಡುವಂತೆ ಒತ್ತಾಯ ಹೇರಿದ್ದಾರೆ ; ನನ್ನ ಕುಟುಂಬದ ಬಳಗ ಕಾಣಲು ನಾನು ಈ ಗಳಿಗೆಗಳನ್ನ ಬಳಸಿಕೊಂಡಿದ್ದೇನೆ. ಝೆರೂಸಲೆಂ ನನ್ನ ಹುಟ್ಟೂರು. ಇಸ್ರೇಲಿ ಮಿಲಿಟರಿ ಪಡೆಗಳು ನಮ್ಮ ಸಂಬಂಧಗಳನ್ನ ಹಾಳುಮಾಡಿವೆ ; ಪಾರಂಪರಿಕ ಕುಟುಂಬ, ಬಂಧುಬಳಗ ಎಲ್ಲವನ್ನೂ ನನಗೆ ನಿರಾಕರಿಸಲಾಗಿದೆ. ೧೯೯೪ರಲ್ಲಿ ನಾನು ಪಶ್ಚಿಮ ದಂಡೆಗೆ ಮರಳಿ ಬಂದಾಗ ಅರಬ್ ಝೆರೂಸಲೆಂನ ಆಲಿವ್ ಬೆಟ್ಟದ ಹತ್ತಿರ ಇದ್ದ ನನ್ನ ಅಜ್ಜಿಯ ಮನೆ ಕೆಡವಿ ಹಾಕಿದ್ದನ್ನ ಕಂಡು ಮನಸು ಬಿಕೋ ಎನಿಸತೊಡಗಿತು. ನನ್ನ ಅಜ್ಜಿ ಜಿಲ್ಕಾ ಶಿಬಾಬಿಯ ಮನೆ ನಾಶ, ನಮ್ಮ ಆಸ್ತಿಪಾಸ್ತಿಗಳನ್ನ ವಶಪಡಿಸಿಕೊಳ್ಳುವ ಇಸ್ರೇಲಿಗಳ ದೀರ್ಘ ಚರಿತ್ರೆಯ ಒಂದು ಭಾಗ. ೧೯೪೦ರ ದಶಕದಲ್ಲಿ ಮೊದಲಿಗೆ ಅರಬ್-ಝೆರೂಸಲೆಂನ ನನ್ನ ಅಜ್ಜ-ಅಜ್ಜಿಯರ ನಾಲ್ಕು ದೆನ್ಯೂಮ್ ಭೂಮಿ ವಶಪಡಿಸಿಕೊಂಡರು. ಆ ಕಾಲಕ್ಕೆ ಆಸ್ತಿ, ವಿಶ್ವ ಸಂಸ್ಥೆಯ ಜವಾಬ್ದಾರಿ ಮತ್ತು ಮೇಲ್ವಿಚಾರಣೆಯಿದ್ದ ಪ್ರದೇಶದಲ್ಲಿತ್ತು. ನನ್ನ ಕುಟುಂಬದಿಂದ ಕಸಿದುಕೊಂಡ ಈ ಆಸ್ತಿಯನ್ನ ಹೀಬ್ರೂ ವಿಶ್ವವಿದ್ಯಾಲಯದ ಉದ್ಯಾನವನ ವಿಸ್ತರಣೆಗೆ ಬಳಸಿಕೊಂಡರು. ಈಗ ಆ ಉದ್ಯಾನವನಕ್ಕೆ ಜ್ಯೂವಿಷ್ ದಾನಿಗಳ ಹೆಸರನ್ನಿಟ್ಟಿದ್ದಾರೆ. ಅವರಿಗೆ ಈ ಝೆರೂಸಲೆಂ ನಗರ ಗೊತ್ತಿರಲಿಲ್ಲ. ಕಳುವಿನ ಭೂಮಿಯಲ್ಲಿ ಈ ಉದ್ಯಾನವನ ಕಟ್ಟಿರುವ ವಿಷಯ ಕೂಡ ಗೊತ್ತಿರಲಿಲ್ಲ.

೧೯೯೯ರಲ್ಲಿ ನಮ್ಮ ಕುಟುಂಬಕ್ಕೆ ಒಂದು ಮಾತು ಕೂಡ ಹೇಳದೆ ಇಸ್ರೇಲಿ ಸೇನೆ ಅರಬ್-ಝೆರೂಸಲೆಂನ ನಮ್ಮ ಮನೆ ಕೆಡವಿ, ನೂರು ದೆನ್ಯೂಮ್ ಭೂಮಿಯಲ್ಲಿ ಆಲಿವ್ ಗಿಡ ಬೆಳೆಸಿತು. ನನ್ನ ಪೂರ್ವಿಕರು ನೆಟ್ಟಿದ್ದ ಆಲಿವ್ ಮರಗಳು ಮತ್ತು ನೂರು ವರ್ಷಗಳ ಪೂರ್ವದ ಮನೆಯನ್ನ ಕಣ್ಣುಮುಚ್ಚಿ ತೆರೆವಷ್ಟರಲ್ಲಿ ನೆಲಸಮ ಮಾಡಿದರು. ನಮ್ಮ ಭೂಮಿಯನ್ನ ಜ್ಯೂವಿಷ್ ವಿದ್ಯಾರ್ಥಿಗಳ ಉದ್ಯಾನವನ್ನಾಗಿ ಪರಿವರ್ತಿಸಿದರು. ನಮಗೆ ಭೂಮಿ ಮತ್ತು ಮನೆ ನಿರಾಕರಿಸಲಾಯಿತು; ಯಾಕೆಂದರೆ ನಾವು ಪ್ಯಾಲೆಸ್ಟೈನಿಯನ್ನರು. ಕಳೆದ ದಶಕದಲ್ಲಿ ಅರಬ್-ಝೆರೂಸಲೆಂ, ಪಶ್ಚಿಮದಂಡೆ ಮತ್ತು ಗಾಜಾ ಪಟ್ಟಿಯ ಪ್ಯಾಲೆಸ್ಟೈನಿ ಭೂಮಿಯನ್ನ ಅತಿಕ್ರಮಿಸಿಕೊಂಡಿದ್ದಾರೆ. ವಸತಿ ಗೃಹಗಳನ್ನ ಕಟ್ಟಲು ಮತ್ತು ವಸತಿ ಸಮುಚ್ಚಯಗಳಿಗೆ ಸಂಪರ್ಕ ರಸ್ತೆ ನಿರ್ಮಾಣ ಮಾಡಲು ಅವರು ನಮ್ಮ ಭೂಮಿ ವಶಪಡಿಸಿಕೊಂಡರು ; ತಮ್ಮನ್ನ ತಾವೇ, ನಮ್ಮ ಭೂಮಿಯ ಮಾಲೀಕರನ್ನಾಗಿ ಘೋಷಿಸಿಕೊಂಡು, ನಮ್ಮ ಇರುವಿಕೆಯ ಚಹರೆಗಳನ್ನ ಹುಸಿಗೊಳಿಸಿದ್ದಾರೆ ಮತ್ತು ನಿರಾಕರಿಸಿದ್ದಾರೆ. ನಮ್ಮ ಪುರಾತನ ಮನೆಗಳ ಅವಶೇಷಗಳು ಮತ್ತು ಆಲಿವ್ ಮರಗಳಿದ್ದ ಜಾಗದಲ್ಲಿ ವಸತಿ ಸಮುಚ್ಚಯಗಳನ್ನ ಕಟ್ಟಿಕೊಂಡಿದ್ದಾರೆ. ಹೆಚ್ಚು ಕಡಿಮೆ ಪ್ರತಿದಿನ ಒಂದು ಪ್ಯಾಲೆಸ್ಟೈನಿ ಮನೆ ಮುರಿಯುತ್ತಿದ್ದಾರೆ. ನಮ್ಮ ಬಾಳುಗಳನ್ನ ಹಾಳುಗೆಡವುತ್ತಿರುವ ಅವರಿಗೆ ಅಳುಕು, ವಿಷಾದಗಳಿಲ್ಲ ; ನಾಚಿಕೆ ಮೊದಲೇ ಇರಲಿಲ್ಲ.

ಅನೇಕ ಪ್ರಕರಣಗಳಲ್ಲಿ ಮನೆಗಳ ಧ್ವಂಸ ಅಥವಾ ಭೂಮಿ ವಶಕ್ಕೆ ನೆಪಗಳನ್ನ ಕಂಡುಕೊಂಡಿದ್ದಾರೆ. ಅರಬ್-ಝೆರೂಸಲೆಂನಲ್ಲಿ ಪ್ಯಾಲೆಸ್ಟೈನಿಯನ್ನರು ಕಾನೂನುಬಾಹಿರವಾಗಿ ಮನೆಗಳನ್ನ ಕಟ್ಟಿಕೊಂಡರೆಂದು ಅನೇಕ ಸಲ ಇಸ್ರೇಲಿ ಅಧಿಕಾರಿಗಳು ಹೇಳಿಕೊಳ್ಳುತ್ತಿರುತ್ತಾರೆ. ಅಂದರೆ ಪ್ಯಾಲೆಸ್ಟೈನಿ ಕುಟುಂಬಗಳ ಮನೆ ಕಟ್ಟಿಕೊಳ್ಳುವ, ವಿಸ್ತರಿಸಿಕೊಳ್ಳುವ ಹಕ್ಕುಗಳನ್ನು ಇಸ್ರೇಲಿ ಅಧಿಕಾರಿಗಳು ನಿರಾಕರಿಸಿದ್ದಾರೆ. ಇತರೆ ಪ್ರಕರಣಗಳಲ್ಲಿ 'ಪ್ಯಾಲೆಸ್ಟೈನಿಯನ್ನರು ಮನೆ ಮತ್ತು ಭೂಮಿಯನ್ನ ನಮಗೆ ಮಾರಿದರು' ಅಂತಾ ಬೊಗಳೆ ಬಿಡುತ್ತಾರೆ. ಭೂಮಿ ಅತಿಕ್ರಮಿಸಿಕೊಳ್ಳುವ ದಿವಸ ಪ್ಯಾಲೆಸ್ಟೈನಿಯನ್ನರ ಮನೆ ಮುಂದೆ ಅವತರಿಸುವ ಇಸ್ರೇಲಿಗಳು, ನಕಲಿ ಭೂ ದಾಖಲೆ ಅಥವಾ ಕಾನೂನುಬಾಹಿರವಾಗಿ ಗಳಿಸಿಕೊಂಡ ಕ್ರಯಪತ್ರಗಳನ್ನ ಝಳಪಿಸುತ್ತಾರೆ. ಬಹುತೇಕ ಈ ಎಲ್ಲ ಪ್ರಕರಣಗಳಲ್ಲಿ ಪೋಲಿಸರು ಅಥವಾ ಸೈನಿಕರು ಅವರೊಂದಿಗಿರುತ್ತಾರೆ. ಪ್ಯಾಲೆಸ್ಟೈನಿ ಕುಟುಂಬಗಳನ್ನ ತೆರವು ಮಾಡುವಂತೆ ಬಲಾತ್ಕರಿಸಿ ಮನೆಗಳನ್ನ ಕೈವಶ ಮಾಡಿಕೊಳ್ಳುತ್ತಾರೆ. ಭೂ ಒಡೆತನ ಸಾಬೀತು ಮಾಡಲು ಪ್ಯಾಲೆಸ್ಟೈನಿ ಕುಟುಂಬಗಳು ನ್ಯಾಯಾಲಯಕ್ಕೆ ಮೊರೆ ಹೋಗಬಹುದು ; ಆದರೆ ಅಲ್ಲಿ ಏನೂ ಬಗೆಹರಿಯುವುದಿಲ್ಲ.

೧೯೯೦ರಿಂದ ಇಸ್ರೇಲಿ ಅಧಿಕಾರಿಗಳು ವಿಧಿಸಿರುವ ನಿರ್ಬಂಧ ಮತ್ತು ಪರವಾನಗಿ ನೀತಿಗಳು ಪ್ಯಾಲೆಸ್ಟೈನಿ ಜನತೆಯ ಚಲನೆಗಳನ್ನ ಪ್ರತಿಬಂಧಿಸುತ್ತಿವೆ. ಇಸ್ರೇಲಿ ಮಿಲಿಟರಿ ಸೇನೆಯ ಪರವಾನಗಿ ಇಲ್ಲದ ಪ್ಯಾಲೆಸ್ಟೈನಿ ನಾಗರಿಕರು ಮುಕ್ತವಾಗಿ ಪವಿತ್ರ ನಗರ ಪ್ರವೇಶಿಸುವಂತಿಲ್ಲ. ಪ್ಯಾಲೆಸ್ಟೈನಿನಲ್ಲಿ ನೋಂದಣಿಯಾಗಿರುವ ಹಸಿರು ಪ್ಲೇಟಿನ ಕಾರು ಇಸ್ರೇಲ್ ನಿಯಂತ್ರಣದಲ್ಲಿರುವ ಪ್ರದೇಶದಲ್ಲಿ ಹಾದುಹೋಗುವಂತಿಲ್ಲ ; ಅರಬ್ ಝೆರೂಸಲೆಂಗೆ ಕೂಡ ವಿಶೇಷ ಪರವಾನಗಿ ಇಲ್ಲದೇ ಪ್ರವೇಶಿಸುವಂತಿಲ್ಲ ; ಈ ಪರವಾನಗಿ ಸಿಗುವುದು ತುಂಬಾ ಅಪರೂಪ. ಗಾಜಾ ಪ್ರವೇಶಿಸಬಯಸುವ

ಪಶ್ಚಿಮ ದಂಡೆಯವರು ಮತ್ತು ಪಶ್ಚಿಮ ದಂಡೆ ಪ್ರವೇಶಿಸಬಯಸುವ ಗಾಜಾದವರು ಮೊದಲು ಇಸ್ರೇಲಿ ಅಧಿಕಾರಿಗಳ ಪರವಾನಗಿಗೆ ಅರ್ಜಿ ಸಲ್ಲಿಸಿಕೊಳ್ಳಬೇಕು.

ಪಶ್ಚಿಮ ದಂಡೆಯಲ್ಲಿದ್ದ ನನ್ನ ಚಿಕ್ಕಮ್ಮನ ಮಗಳು, ಗಾಜಾ ಪಟ್ಟಿಯ ತರುಣನನ್ನ ಪ್ರೀತಿಸತೊಡಗಿದಾಗ ಚಿಕ್ಕಮ್ಮ ಬಿಕ್ಕಿ ಬಿಕ್ಕಿ ಅತ್ತಳು. ಮದುವೆ ಮಾಡಿಕೊಂಡ ದಂಪತಿಗಳು ಗಾಜಾಗೆ ಹೊರಟುಹೋಗುತ್ತಾರೆ, ಮತ್ತೆ ಎಂದಿಗೂ ಮಗಳನ್ನ ಕಾಣಲಾರೆ ಅಂತಾ ದುಃಖ ಉಮ್ಮಳಿಸಿ ಬರುತ್ತಿತ್ತು. ಈ ದುಃಖ ಸಾಲದೆಂಬಂತೆ ನನ್ನ ಚಿಕ್ಕಮ್ಮನ ಮಗಳ ಗಂಡ ಮದುವೆಯಾದ ೨ ವರ್ಷಗಳಲ್ಲಿ ತೀರಿಕೊಂಡ. ಅವನಿಗೆ ಲ್ಯುಕೇಮಿಯಾ ಕಾಯಿಲೆಯಾಗಿತ್ತು. ಇಸ್ರೇಲಿ ನಿರ್ಬಂಧದ ದೆಸೆಯಿಂದಾಗಿ ಆತನಿಗೆ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಲು ಸಾಧ್ಯವಾಗಲೇ ಇಲ್ಲ. ಓಸ್ಲೋ ಶಾಂತಿ ಪ್ರಕ್ರಿಯೆಗಳ ಇಡೀ ಅವಧಿಯಲ್ಲಿ ಇಸ್ರೇಲಿ ಅತಿಕ್ರಮಣಕಾರಿಗಳು ನಮ್ಮದೇ ದೇಶದೊಳಗೆ ನಮ್ಮನ್ನ ಸೆರೆಯಾಳುಗಳನ್ನಾಗಿ ಪರಿವರ್ತಿಸಿದರು. ಈ ಶಾಂತಿ ಪ್ರಕ್ರಿಯೆಗಳಿಂದ ನಮ್ಮ ಮೇಲಿನ ಇಸ್ರೇಲಿ ನಿರ್ಬಂಧಗಳನ್ನ ತಡೆಯಲಾಗಲಿಲ್ಲ. ನಮ್ಮ ಭೂಮಿಯ ಅತಿಕ್ರಮಣ, ಮನೆಗಳ ಧ್ವಂಸ, ಗಿಡಮರಗಳ ನಾಶ, ಆಕ್ರಮಿಸಿಕೊಂಡ ನಮ್ಮ ಭೂಮಿಯಲ್ಲಿ ಇಸ್ರೇಲಿ ವಸತಿ ನಿರ್ಮಾಣವನ್ನ ತಡೆಯಲಾಗಲಿಲ್ಲ. ನಮ್ಮ ರಾಜಕೀಯ, ನಾಗರಿಕ, ಆರ್ಥಿಕ, ಸಾಮಾಜಿಕ ಹಕ್ಕುಗಳನ್ನ ಇಸ್ರೇಲಿ ಅತಿಕ್ರಮಣಕಾರರು ನಿರಂತರ ಉಲ್ಲಂಘಿಸಿದರೂ ಶಾಂತಿಯ ಅವಕಾಶಕ್ಕಾಗಿ ನಾವು ಕೃತಜ್ಞರಾಗಿರಬೇಕೆಂದು ನಿರೀಕ್ಷಿಸಲಾಯಿತು. ನಮ್ಮ ಭೂಮಿಗೆ ಬೇಲಿ ಹಾಕಿ ಬಂಧೀಖಾನೆಯನ್ನಾಗಿ ಪರಿವರ್ತಿಸಿದ ಅತಿಕ್ರಮಣಕಾರರಿಗೆ ನಾವು ಕೃತಜ್ಞರಾಗಿರಬೇಕಾ ?

ಸ್ವಾತಂತ್ರ್ಯದ ನಮ್ಮ ಹಕ್ಕು ಕುರಿತ ಯಾವುದೇ ಶಬ್ದ ಮತ್ತು ಘೋಷಣೆ, ನಿರಾಶ್ರಿತರ ಹಕ್ಕನ್ನ ಖಚಿತಪಡಿಸಿಕೊಳ್ಳುವ ಯಾವುದೇ ಪ್ರಯತ್ನವನ್ನ ಸಮಸ್ಯಾತ್ಮಕ, ಶಾಂತಿ ವಿಧಾನಗಳಿಗೆ ಮಾರಕ ಎಂದು ಪರಿಗಣಿಸಿದ್ದಾರೆ. ಮಿಲಿಯಗಟ್ಟಲೆ ಪ್ಯಾಲೆಸ್ಟೈನಿ ನಿರಾಶ್ರಿತರ ಬಗ್ಗೆ ಮಾತನಾಡುವುದು, ಕ್ಷಮಿಸಲಾಗದ ಅಪರಾಧ ಎಂದು ತಿಳಿದಿದ್ದಾರೆ. ತಮ್ಮ ಮನೆಗಳನ್ನ ತೊರೆಯುವಂತೆ ಬಲಾತ್ಕಾರಕ್ಕೊಳಗಾದ, ದೇಶಭ್ರಷ್ಟರಾಗಿ ಬದುಕುತ್ತಿರುವ, ಡಜನುಗಟ್ಟಳೆ ನಿರಾಶ್ರಿತ ಶಿಬಿರಗಳಲ್ಲಿ ಚದುರಿಹೋಗಿರುವ ಬದುಕುಗಳ ಕುರಿತು ಮಾತನಾಡುವುದನ್ನ, ಅಂತಾರಾಷ್ಟ್ರೀಯ ಕಾಯಿದೆಗಳು ಖಚಿತಪಡಿಸಿರುವ ಪ್ಯಾಲೆಸ್ಟೈನಿ ನಿರಾಶ್ರಿತರ ಮರಳುವಿಕೆಯನ್ನ ಇಸ್ರೇಲಿ ಯಹೂದಿಗಳು ನಿರಂತರ ಉಲ್ಲಂಘಿಸುತ್ತಿದ್ದಾರೆ ; ಆದರೆ ಜಗತ್ತಿನ ಯಾವುದೇ ಪ್ರದೇಶದ ಜ್ಯೂವಿಷರು (ಯಹೂದಿಗಳು) ಇಸ್ರೇಲಿನಲ್ಲಿ ವಾಸಿಸಲು, ಇಸ್ರೇಲಿ ಕಾನೂನುಗಳು ಅವಕಾಶ ಮಾಡಿಕೊಡುತ್ತವೆ. ನಮ್ಮ ಕುಟುಂಬಗಳ ಬೇರು ಕಿತ್ತು ನಮ್ಮನ್ನ ವಂಚಿಸಿದ್ದಾರೆ. ಜಗತ್ತಿನ ಹಲವೆಡೆ ನಾವು ಚದುರಿಹೋಗಿದ್ದೇವೆ. ಆಕ್ರಮಣದ ವಿರುದ್ಧ ಪ್ರತಿಭಟಿಸಿದ ನಮ್ಮ ಮೇಲೆ ಹಿಂಸೆಯ ಆರೋಪ ಹೊರಿಸಿದ್ದಾರೆ, ಅಥವಾ ಶಾಂತಿಯ ಸದವಕಾಶ ಹಾಳು ಮಾಡುತ್ತಿರುವ ಆರೋಪ ಹೊರಿಸಿದ್ದಾರೆ. ನಮ್ಮ ಹೋರಾಟ ಬಗ್ಗುಬಡಿಯಲು ಇಸ್ರೇಲಿ ಆಕ್ರಮಣಕಾರಿ ಸೇನೆ ಕಾರ್ಯಾಚರಣೆ ನಡೆಸಿ ನಿರ್ಬಂಧವನ್ನ ಬಿಗಿಗೊಳಿಸಿದೆ.

ಸೆಪ್ಟೆಂಬರ್ ೨೦೦೦ದ ಬಿಕ್ಕಟ್ಟಿನ ನಂತರ ಚಲನೆ ಮೇಲಿನ ನಿರ್ಬಂಧಗಳು ತೀವ್ರವಾಗಿವೆ. ಪ್ಯಾಲೆಸ್ಟೈನಿ ಜನತೆಯ ಚಲನೆಗಳನ್ನ ನಿಯಂತ್ರಿಸಲು ಪಶ್ಚಿಮ ದಂಡೆ ಮತ್ತು ಗಾಜಾಗಳಲ್ಲಿ ಹೆಚ್ಚು ತನಿಖಾ ಅಡ್ಡೆಗಳನ್ನ ನಿರ್ಮಾಣ ಮಾಡಿದ್ದಾರೆ. ಮುಖ್ಯ ರಸ್ತೆಗಳ ಸಂಪರ್ಕ ಕಡಿದುಹಾಕಿದ್ದಾರೆ

ಮತ್ತು ಮುಖ್ಯರಸ್ತೆಗಳ ವಾಹನ ಸಂಚಾರವನ್ನ ಇಸ್ರೇಲಿಗಳಿಗೆ ಮೀಸಲಾಗಿಡಲಾಗಿದೆ. ಹಳ್ಳಿಗಳು, ಶಿಬಿರಗಳು ಮತ್ತು ಸುತ್ತಮುತ್ತಲಿನ ನಗರಗಳ ಸಂಪರ್ಕ ಕಡಿದು ಹಾಕಿದ್ದಾರೆ. ಪ್ಯಾಲೆಸ್ಟೈನಿಯನ್ನರು ಸ್ಥಳದಿಂದ ಸ್ಥಳಕ್ಕೆ ನಡೆದುಹೋಗಬೇಕು. ಈ ದಾರಿಗಳಲ್ಲಿ ಅಲ್ಲಲ್ಲಿ ಅಡೆತಡೆಗಳು. ೬೦ ವರ್ಷದ ಮುದುಕರು ಕೂಡ ನಡೆದುಹೋಗುವಂತಹ ಒತ್ತಾಯ. ತಡೆಗಟ್ಟೆ ಮತ್ತು ಬೇಲಿಗಳನ್ನ ದಾಟಲು ದಣಿದ ಪಾದಗಳು, ಬೇಸಗೆಯ ಉರಿಬಿಸಿಲಲ್ಲಿ ಕಣಿವೆಗಳನ್ನ ದಾಟಲು ಮರಗಿಡಗಳ ಮೂಲಕ ಹಾಯಬೇಕು. ಇಂತಹ ಪ್ರಕರಣಗಳಲ್ಲಿ ಗಾಡಿಗಳು ಮತ್ತು ಕತ್ತೆಗಳನ್ನ ಬಳಸಲಾಗುತ್ತದೆ. ಆದರೆ ಇಲ್ಲಿಂದ ಕೆಲವೇ ಮೀಟರುಗಳ ದೂರದ ಮುಖ್ಯರಸ್ತೆಯಲ್ಲಿ ಇಸ್ರೇಲಿ ನಿವಾಸಿ ತನ್ನ ಸ್ವಂತ ಕಾರಲ್ಲಿ ಪ್ರಯಾಣ ಮಾಡಬಹುದು. ನಾವು ಬಲಾತ್ಕಾರಕ್ಕೆ ಗುರಿಯಾಗಿ ಕಣ್ಮರೆಯಾದ ಭೂತಗಳು. ಆದರೂ ನಮಗೆ ಇರುವಿಕೆಯ ನಿರಾಳತೆಯಿಲ್ಲ ; ಮಿಲನ್ ಕುಂದೇರನ Unbearable lightness of being ಕಾದಂಬರಿಯ ವೈದೃಶ್ಯವಾಗಿ, ಪ್ರತಿ ಪ್ಯಾಲೆಸ್ಟೈನಿಯನ್ನರಿಗೂ ತಮ್ಮ ಮನೆಯಲ್ಲಿ ಕೂಡಿಹಾಕಿರುವಂತಹ ಅನುಭವ. ನಮ್ಮ ಪ್ರತಿಕ್ರಿಯೆಗಳನ್ನ ಆಪಾದನೆಯಂತೆ ಮತ್ತು ಇಸ್ರೇಲಿನ ಭದ್ರತೆಗೆ ಧಕ್ಕೆ ಎಂಬಂತೆ ಕಾಣಲಾಗುತ್ತಿದೆ ಮತ್ತು ನಮ್ಮ ದೈನಂದಿನ ಕೆಲಸಗಳನ್ನ ತಡೆಯುತ್ತಿದ್ದಾರೆ. ವಿಶ್ವವಿದ್ಯಾಲಯಕ್ಕೆ ಹೋಗುವುದು ಅಪಾಯ, ನೆರೆಹಳ್ಳಿಯ ನೆಂಟರ ಮನೆಗೆ ಹೋಗುವುದು ಒಂದು ಕಠಿಣ ಸವಾಲು, ನೂರಾರು ಕೆಲಸಗಾರರು ಕೆಲಸದ ಸ್ಥಳ ತಲುಪುವುದು ದುಸ್ತರ. ಸರಕು ಸಾಗಾಣಿಕೆ ಮತ್ತು ಇತರೆ ಸೇವೆಗಳಿಗೆ ನಿರ್ಬಂಧ, ನಮ್ಮ ಆರ್ಥಿಕ ಪರಿಸ್ಥಿತಿ ಕುಂಠಿತಗೊಂಡಿದೆ. ಕೃಷಿ ಉತ್ಪನ್ನಗಳನ್ನ ಮಾರಾಟ ಮಾಡಲು ರೈತರು ಕತ್ತೆಗಳೊಂದಿಗೆ ಅಂಕುಡೊಂಕಾದ ದುರ್ಗಮ ಹಾದಿಗಳಲ್ಲಿ ಸಾಗಬೇಕು. ಇಸ್ರೇಲಿ ಸರಕುಗಳನ್ನ ಬಳಸುವಂತೆ ಒತ್ತಾಯಿಸುತ್ತಾರೆ ; ಯಾಕೆಂದರೆ ಪ್ಯಾಲೆಸ್ಟೈನಿ ಉತ್ಪನ್ನಗಳನ್ನ ಪಡೆದುಕೊಳ್ಳುವುದು ತುಂಬಾ ಕಷ್ಟ.

ಅನೇಕ ಗ್ರಾಮೀಣ ಮಹಿಳೆಯರಿಗೆ ತನಿಖಾ ಅಡ್ಡಗಟ್ಟೆಗಳಲ್ಲೇ ಹೆರಿಗೆಯಾಗಿದೆ ; ಯಾಕೆಂದರೆ ಪಕ್ಕದ ನಗರ ದಾಟಿಹೋಗಲು ಇಸ್ರೇಲಿ ಸೈನಿಕರು ಅವಕಾಶ ಕೊಟ್ಟಿಲ್ಲ. ಹೃದಯಬೇನೆ, ಅಸ್ತಮಾದಂತಹ ತೀವ್ರ ಕಾಯಿಲೆಗಳಿರುವ ಅನೇಕ ಪ್ಯಾಲೆಸ್ಟೈನಿಯನ್ನರು ತನಿಖಾ ಅಡ್ಡಗಟ್ಟೆಗಳಲ್ಲಿ ಗಂಟೆಗಟ್ಟಳೆ ಕಾದು ಕುಳಿತದ್ದು ದಾಖಲೆಯಾಗಿದೆ ; ಇವು ಸಾವಿನ ಅಡ್ಡಗಟ್ಟೆಗಳಾಗಿ ಪರಿಣಮಿಸಿವೆ. ಶಾಲೆಗೆ ಅಥವಾ ವಿಶ್ವವಿದ್ಯಾಲಯಕ್ಕೆ ಹೋಗುವ ಸಾವಿರಾರು ವಿದ್ಯಾರ್ಥಿಗಳು ಅಪಾಯಕಾರಿಯಾಗಿ ಕಾಣುತ್ತಾರೆ. ಬಿರ್ಜೈತ್ ವಿಶ್ವವಿದ್ಯಾಲಯಕ್ಕೆ ಹೋಗುವ ದಾರಿಯನ್ನ ಇಸ್ರೇಲಿ ಸೈನಿಕರು ಆಗಾಗ ಮುಚ್ಚುತ್ತಾರೆ ; ದಾಟಲು ಪ್ರಯತ್ನಿಸಿದವರ ಮೇಲೆ ಗುಂಡು ಹಾರಿಸುತ್ತಾರೆ. ತರಗತಿಗೆ ಹೋಗುತ್ತಿದ್ದ ನನ್ನ ಸಹೋದ್ಯೋಗಿಯನ್ನ ಗುಂಡಿಟ್ಟು ಕೊಂದರು. ವಿಶ್ವವಿದ್ಯಾಲಯದ ಆಕೆಯ ಸೋದರನನ್ನ ತಡೆಗಟ್ಟೆ ಹತ್ತಿರ ಕೊಂದುಹಾಕಿದರು. ಇಸ್ರೇಲಿ ಮಿಲಿಟರಿ ವಿಧಿಸುವ ಈ ಪ್ರತಿಬಂಧಕಾಜ್ಞೆ ಮತ್ತು ನಿರ್ಬಂಧಗಳನ್ನು ಅನೇಕ ಸಲ ಸಾಮುದಾಯಿಕ ಶಿಕ್ಷೆ ಅಂತಾ ಕರೆಯುತ್ತಾರೆ ; ಇದು ನಮ್ಮ ಸ್ವಂತ ಭೂಮಿಯಲ್ಲಿ ನಮ್ಮನ್ನ ಸೆರೆಯಾಳುಗಳನ್ನಾಗಿ ಮಾಡಿದೆ. ಗೋಡೆಗಳು, ಬೇಲಿ, ತಡೆಗಟ್ಟೆಗಳು, ಅಡ್ಡಗಟ್ಟೆಗಳು ಮತ್ತು ರಸ್ತೆ ನಿರ್ಬಂಧಗಳು ಆವರಿಸಿಕೊಂಡಿರುವ ದೊಡ್ಡ ಶಿಬಿರಗಳಲ್ಲಿ ವಾಸಿಸುತ್ತಿರುವಂತೆ ಅನಿಸುತ್ತಿದೆ. ಪ್ರತಿದಿನ ಇಸ್ರೇಲಿ ಸೈನಿಕರು ಜನರನ್ನ ಗುಂಡಿಟ್ಟು ಕೊಲ್ಲುತ್ತಾರೆ ; ರಸ್ತೆ, ಕಚೇರಿ ಮತ್ತು ಮನೆಗಳ ನಡುವೆ ಎಲ್ಲೆಂದರಲ್ಲಿ. ಈ ಕೊಲೆಗಡುಕತನ, ಆಕ್ರಮಣವನ್ನ

ಪ್ರತಿರೋಧಿಸುತ್ತೇವೆ. ಯಾಕೆಂದರೆ ನಮಗೆ ಕನಸುಗಳಿವೆ. ಆಲಿವ್ ಗಿಡಗಳನ್ನ ನೆಡುವ, ಅವುಗಳ ಚಿಗುರು ಮತ್ತು ಸುಗ್ಗಿಯ ಕನಸು. ಆದರೆ ಪ್ರತಿವರ್ಷ ಇಸ್ರೇಲಿ ಸೈನಿಕರು ಹತ್ತಾರು ಸಾವಿರ ಮರಗಳನ್ನ ಕಡಿದುರುಳಿಸುತ್ತಿದ್ದಾರೆ.

ಮುಖ್ಯರಸ್ತೆಗಳಲ್ಲಿ ನಡೆವ ಕನಸು ಕಾಣುತ್ತೇವೆ, ಸೇನೆಯ ಬೆದರಿಕೆ ಅಥವಾ ಇಸ್ರೇಲಿಗಳ ದಾಳಿವಿಮಾನಗಳ ಭಯವಿಲ್ಲದಂತೆ. ನಮ್ಮ ಮನೆಗಳನ್ನ ಕಟ್ಟಿಕೊಳ್ಳುವ ಕನಸು, ಪೂರ್ವಿಕರ ಮನೆಗಳನ್ನ ಜೀರ್ಣೋದ್ಧಾರ ಮಾಡಿಕೊಳ್ಳುವ ಕನಸು. ಆದರೆ ಇಸ್ರೇಲಿ ಸೈನಿಕ ಪಡೆಗಳು ನಮ್ಮ ಮನೆಗಳನ್ನ ಧ್ವಂಸ ಮಾಡಿ ಸಾವಿರಾರು ಹೆಕ್ಟೇರು ಭೂಮಿ ಅತಿಕ್ರಮಿಸಿಕೊಂಡಿವೆ ; ಹರಿವ ನೀರನ್ನ ಮೊಗೆದುಕೊಳ್ಳುವ ಕನಸು, ಆದರೆ ಇಸ್ರೇಲಿ ನಿವಾಸಿಗಳು ಖಾಲಿಮನೆ, ಗೃಹಸಮುಚ್ಚಯಗಳ ಹುಲ್ಲುಹಾಸಿಗೆ ನೀರೆರೆಯುತ್ತಾರೆ. ೫ ಕಿ.ಮೀ. ದೂರದಲ್ಲಿ ವಾಸಿಸುತ್ತಿರುವ ನಮ್ಮ ಕುಟುಂಬಗಳನ್ನ ಕಾಣಬಯಸುತ್ತೇವೆ, ವರ್ಷಗಳೇ ಕಳೆದರೂ ನೆಂಟರಿಷ್ಟರು, ಬಂಧು, ಬಳಗದ ಮುಖ ಕಾಣದೇ ಬಾಳು ನಡೆಸಬೇಕು. ನಮ್ಮ ಪವಿತ್ರ ನಗರದಲ್ಲಿ ಪ್ರಾರ್ಥಿಸುವ ಕನಸು, ಹಲವು ಧರ್ಮ-ಸಂಸ್ಕೃತಿ ಆಧ್ಯಾತ್ಮಿಕತೆಯ ಝೆರೂಸಲೆಂ ನಗರದ ಕನಸು, ಆದರೆ ನಮ್ಮ ಮಸೀದಿ ಮತ್ತು ಚರ್ಚುಗಳಿಗೆ ನಮಗೆ ಪ್ರವೇಶ ನಿರಾಕರಿಸಲಾಗಿದೆ.

ಸಾರ್ವಭೌಮ ಪ್ಯಾಲೆಸ್ಟೈನ್ ದೇಶದ ಕನಸು, ಆದರೆ ಸ್ವಾತಂತ್ರ್ಯ, ಸ್ವಾಯತ್ತತೆಗಳಿಲ್ಲದೇ ಬದುಕುತ್ತಿದ್ದೇವೆ. ಭವಿಷ್ಯದ ಅಲೆಗಳು, ಆಕ್ರಮಣ ಮತ್ತು ವಸಾಹತುಶಾಹಿಯನ್ನ ಕೊಚ್ಚಿಹಾಕುತ್ತವೆ ಅಂತಾ ಕನಸು ಕಾಣುತ್ತೇವೆ, ಯಾಕೆಂದರೆ ಜಗತ್ತಿನ ಅತ್ಯಂತ ಕ್ರೂರಿ ಯಜಮಾನ ತನ್ನ ಮುಖವಾಡದಿಂದ ಜಗತ್ತನ್ನ ಹೆಚ್ಚು ದಿನಗಳ ಕಾಲ ವಂಚಿಸುತ್ತಿರಲು ಸಾಧ್ಯವಿಲ್ಲ.

ಸಮೂಹನಾಶಕ ಕೃತ್ಯವಾಗಿ ಆರ್ಥಿಕ ದಿಗ್ಬಂಧನ ಮತ್ತು ಯುರೇನಿಯಂ ಇಂಧನ ಬಳಕೆ

ಸಮೀರ ಬಯಾತಿ, ಇರಾಕ್

ದಿಗ್ಬಂಧನದಿಂದ ಇರಾಕ್‌ನಲ್ಲಿ ಪ್ರತಿಕ್ಷಣ ೧೨ ಮಕ್ಕಳು ಅಸುನೀಗುತ್ತಿದ್ದಾರೆ. ಪ್ರತಿ ತಿಂಗಳು ೯೦೦೦ ಮಕ್ಕಳು ಸಾಯುತ್ತಿದ್ದಾರೆ. ಕಳೆದ ೧೦ ವರ್ಷಗಳಿಂದ ನಮ್ಮ ೧,೦೦೦,೦೦ ಮಕ್ಕಳು ತೀರಿಕೊಂಡಿದ್ದಾರೆ. ದಿಗ್ಬಂಧನದ ವರ್ಷಗಳಲ್ಲಿ ಒಟ್ಟು ಸುಮಾರು ೧೫ ಲಕ್ಷ ಮಕ್ಕಳು ತೀರಿಕೊಂಡಿದ್ದಾರೆ; ಸಮಾಜದ ಉಳಿದ ವಯಸ್ಕ ಮಹಿಳೆಯರು ಇದರಲ್ಲಿ ಸೇರಿಲ್ಲ. ಸಾವು, ರೋಗ-ರುಜಿನದ ದುರಂತಗಳು ಹೆಚ್ಚುತ್ತ ಹೋಗುತ್ತಿವೆ. ಇರಾಕಿನ ಎಲ್ಲ ಜನ ಇಂತಹ ದುರಂತವನ್ನೇ ಬದುಕುತ್ತಿದ್ದಾರೆ. ತಂದೆ ತಾಯಿಗಳ ದುಃಖದ ಕಣ್ಣೀರು ಜಗತ್ತಿನ ಪ್ರತಿದಿನದ ಶೋಕವಾಗಿದೆ. ಹಸಿವು ನಮ್ಮ ಮಕ್ಕಳನ್ನ ಕೊಂದುಹಾಕುತ್ತಿದೆ; ಅದು ನನ್ನ ತಾಯಿ, ಅಣ್ಣ, ತಮ್ಮ, ತಂದೆ, ಅಕ್ಕ, ಗೆಳೆಯ, ನೆರೆಹೊರೆಯ ಎಲ್ಲರನ್ನೂ ಬಲಿ ತೆಗೆದುಕೊಂಡಿದೆ. ಅದು ಕೇಳಿಸಿಕೊಳ್ಳದಂತೆ ಈ ಲೋಕ ಕಿವಿ, ಕಣ್ಣುಗಳನ್ನ ಮುಚ್ಚಿಕೊಂಡಿದೆ ; ಅಂತಾರಾಷ್ಟ್ರೀಯ ಕಾನೂನಿನ ಹೆಸರಿನಲ್ಲಿ ವಿಧಿಸಲಾಗಿರುವ ಈ ಅಮಾನವೀಯ ದಿಗ್ಬಂಧನ ನನ್ನ ನಾಡು ಮತ್ತು ಜನತೆಯನ್ನ ನಿತ್ಯ ಶೋಕಕ್ಕೆ ತಳ್ಳಿದೆ.

ಆದರೆ ಭರವಸೆ ಸಾಯಬಾರದು, ನೀವು ಕೂಡ ಈ ಭರವಸೆಯ ಭಾಗವಾಗಿರಬೇಕೆಂದು ಬಯಸುತ್ತೇನೆ. ಕಾನೂನು ಅಧ್ಯಯನ ನನ್ನ ಮುಖ್ಯ ಕೆಲಸ. ನಾನು ಅಧ್ಯಯನ ಮಾಡಿದುದನ್ನ ಇಲ್ಲಿ ಪ್ರಸ್ತಾಪಿಸಬೇಕು ಎಂಬುದು ನನಗೆ ಚೆನ್ನಾಗಿ ಗೊತ್ತು. ಪ್ರತಿಕ್ಷಣ, ಪ್ರತಿಗಂಟೆ, ಪ್ರತಿದಿನ ಸಮಾಧಿಯಾಗುತ್ತಿರುವಂತೆ ಸಂಕಟಪಡುತ್ತಿರುವ ಇರಾಕಿ ಮಹಿಳೆ ನಾನು ; ಇರಾಕಿನಲ್ಲಿ ಯಾವುದೇ ಭರವಸೆ, ಕನಸು, ಸಂತೋಷ ಮತ್ತು ಭವಿಷ್ಯ ಇಲ್ಲದಂತೆ ನಾಶವಾಗಿಬಿಟ್ಟಿದೆ. ಇರಾಕಿನಂತಹ ನಾಡಿನಲ್ಲಿ ಜನ ಹಸಿವಿನಿಂದ ಸಾಯುತ್ತಿದ್ದಾರೆ ಎಂದರೆ ಯಾರು ನಂಬುತ್ತಾರೆ ? ಹರಿವ ಸಮೃದ್ಧ ನದಿ, ಸಂಪನ್ಮೂಲಗಳಿಂದ ಚರಿತ್ರೆಯುದ್ದಕ್ಕೂ ಕೋಟ್ಯಂತರ ಜನರನ್ನ ಆಕರ್ಷಿಸಿದ ನಾಡಿನಲ್ಲಿ ಈಗ ಆಹಾರವಿಲ್ಲ, ಔಷಧಿಯಿಲ್ಲ, ಚಿಕಿತ್ಸೆಯಿಲ್ಲ ; ಶಾಲೆಗಳು ಮುಚ್ಚಿಹೋಗಿವೆ. ಮೊದಲಿಗೆ ಇರಾಕ್,

ಜ್ಞಾನ ಮತ್ತು ವಿಜ್ಞಾನದ ಮೂಲಸ್ಥಾನ ಎಂಬುದು ನಮಗೆಲ್ಲ ತಿಳಿದಿರುವ ವಿಚಾರ. ಇರಾಕ್ ಇಂತಹ ಘೋರ ದುರಂತದಲ್ಲಿರುವಾಗ, ಬೆಳೆದು ಬಾಳಬೇಕಾದ ಮಕ್ಕಳು ಅನ್ನ, ಆಹಾರ, ಔಷಧಿಗಳಿಲ್ಲದೇ ಅಂಗವಿಕಲರಾಗುತ್ತಿರುವಾಗ ಮನಸ್ಸಾಕ್ಷಿ ಇಟ್ಟುಕೊಂಡ ಈ ಜಗತ್ತು ಹ್ಯಾಗೆ ನಿದ್ರಿಸಲು ಸಾಧ್ಯ? ಅಂತಾರಾಷ್ಟ್ರೀಯ ನೆರವು ಸಂಸ್ಥೆಗಳ ಪ್ರಕಾರ ೧೬ ವರ್ಷ ವಯಸ್ಸಿನ ಒಳಗಿರುವ ಸುಮಾರು ೧೦ ಮಿಲಿಯನ್ ಮಕ್ಕಳ ಬೆಳವಣಿಗೆ ಮತ್ತು ಮನಸ್ಸು ಕುಂಠಿತಗೊಂಡು ಅಂಗವಿಕಲರಾಗುತ್ತಿದ್ದಾರೆ. ದೈಹಿಕವಾಗಿ ಮತ್ತು ಮಾನಸಿಕವಾಗಿ ಅಂಗವಿಕಲರಾದ ಯುವಕರಿಂದ ಇರಾಕ್ ಯಾವ ಭವಿಷ್ಯತ್ತನ್ನು ಕಟ್ಟಿಕೊಳ್ಳಲು ಸಾಧ್ಯ ?

ಆರ್ಥಿಕ ದಿಗ್ಬಂಧನ ವಿಧಿಸಿ ಹತ್ತು ವರ್ಷಗಳಾಗಿವೆ. ಅದರ ಪರಿಣಾಮ, ಫಲಿತಾಂಶ, ಉದ್ದೇಶ ಮತ್ತು ಸತ್ಯಗಳನ್ನ ಅರ್ಥ ಮಾಡಿಕೊಳ್ಳಲು ಇಷ್ಟು ದೀರ್ಘಕಾಲ ಸಾಕು. ಮಾನವೀಯ ನೆಲೆಗಳಲ್ಲಿ ಇದು ಘೋರ ಅಪರಾಧ ; ಹಿಂದೆ ಎಂದೂ ರಾಜಕೀಯ ಮಟ್ಟದಲ್ಲಿ ವರ್ಣಿತವಾಗದಂತಹ ಘೋರ ದುರಂತ. ಇದು ಸ್ವತಂತ್ರ ಇರಾಕ್ ದೇಶವನ್ನ ಛಿದ್ರಗೊಳಿಸುವ ಕೆಡುಕಿನ ಉದ್ದೇಶಗಳನ್ನ ಅನಾವರಣಗೊಳಿಸುತ್ತದೆ. ಸಾವಿರಾರು ವರ್ಷಗಳಿಂದ ಕಟ್ಟಲಾದ ನಾಗರಿಕತೆ ಮತ್ತು ಜನತೆಯ ಸಾಮೂಹಿಕ ಮಾರಣಹೋಮ. ಅದು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹೀಗೆ ಎಲ್ಲ ಜೀವ ನೆಲೆಗಳ ಮೇಲೆ ತೀವ್ರ ಪರಿಣಾಮ ಉಂಟುಮಾಡಿದೆ. ಮಗು, ಮಹಿಳೆ, ಪುರುಷ, ಯುವಕ ಅಥವಾ ವೃದ್ಧ ಯಾರೇ ಇರಲಿ, ಇರಾಕಿನ ಪ್ರತಿ ಮನುಷ್ಯರ ಅನೇಕ ನೋವು ನರಳಿಕೆಗಳಲ್ಲಿ ಇದು ನೇರಪಾತ್ರ ವಹಿಸಿದೆ. ಹೊಸ ಜಾಗತಿಕ ರಚನೆ, ಜಾಗತೀಕರಣಗಳನ್ನ ಇದು ಚೆನ್ನಾಗಿ ನಿರೂಪಿಸಿದೆ. ಬೇರೆ ಸಂಸ್ಕೃತಿಗಳಿಗೆ ಸೇರದ ಜನತೆಯ ಭರವಸೆ, ಆಸೆ, ಆಕಾಂಕ್ಷೆ ಮತ್ತು ಮೂಲ ಮಾನವ ಹಕ್ಕುಗಳನ್ನ ಉಲ್ಲಂಘಿಸುವುದೇ ಇದರ ಸೂತ್ರ. ಅಂತಾರಾಷ್ಟ್ರೀಯ ಕಾನೂನುಗಳ ಕೆಲವು ಅನುಬಂಧಗಳು ಮತ್ತು ಅಂತಾರಾಷ್ಟ್ರೀಯ ತತ್ವಗಳು ಹೇಳುವಂತೆ ಆರ್ಥಿಕ ದಿಗ್ಬಂಧನ ಮಾನವೀಯತೆಯ ಮೇಲೆ ಎಸಗುವ ಘೋರ ಅಪರಾಧ. ಬಡ ದೇಶದ ಮೇಲೆ ಬಲಿಷ್ಠ ದೇಶವೊಂದು ನಡೆಸುವ ಭಯೋತ್ಪಾದನೆಯೆಂದರೆ ಇದೇ.

ಇರಾಕಿನ ಮೇಲೆ ವಿಧಿಸಲಾದ ದಿಗ್ಬಂಧನ ತಮ್ಮ ಮೂಲ ಉದ್ದೇಶಗಳಿಂದ ದಾರಿ ತಪ್ಪಿದೆ. ಅದರ ಕಾನೂನು ಆಧಾರ, ನ್ಯಾಯ ಸಮ್ಮತಿ, ನೈತಿಕತೆಗಳು ಭಗ್ನಗೊಂಡಿವೆ. ಕಳೆದ ೧೧ ವರ್ಷಗಳಿಂದ ಇರಾಕಿನ ಮೇಲೆ ವಿಧಿಸಲಾಗಿರುವ ಆರ್ಥಿಕ ದಿಗ್ಬಂಧನ ಮತ್ತು ನಿರಂತರ ಆಕ್ರಮಣಗಳಿಂದ, ಅಂತಾರಾಷ್ಟ್ರೀಯ ಕಾನೂನುಗಳ ಉಲ್ಲಂಘನೆ ಅತಿರೇಕಕ್ಕೆ ಹೋಗಿದೆ. ಈ ಆರ್ಥಿಕ ದಿಗ್ಬಂಧನ ಇರಾಕಿನ ಸಾರ್ವಭೌಮತ್ವದ ಉಲ್ಲಂಘನೆ, ಅಲ್ಲಿನ ಜನತೆಯ ಏಕತೆ, ಅಸಹಾಯಕ ಪರಿಸ್ಥಿತಿಯ ಲಾಭ ಪಡೆಯುವ ಹುನ್ನಾರ.

ವಿಶ್ವಸಂಸ್ಥೆ ಮತ್ತು ಭದ್ರತಾ ಮಂಡಳಿ ಶಾಸನಗಳಲ್ಲಿ ಆರ್ಥಿಕ ದಿಗ್ಬಂಧನಕ್ಕೆ ಸಮ್ಮತಿ ಇದ್ದರೂ, ವಿಶ್ವಸಂಸ್ಥೆ, ಅಂತಾರಾಷ್ಟ್ರೀಯ ಕಾನೂನಿನ ಅರಿವಿರುವ ನನ್ನ ಅಭಿಪ್ರಾಯದ ಪ್ರಕಾರ ನ್ಯಾಯ ಸಮ್ಮತವಲ್ಲದ ಕಠೋರ ಪರಿಸ್ಥಿತಿಗೆ ಕಾರಣವಾಗಿರುವ, ಅಭಿವೃದ್ಧಿಗೆ ಅವಕಾಶವಿಲ್ಲದಂತೆ ಇರಾಕನ್ನು ನೂರಾರು ವರ್ಷಗಳ ಹಿಂದಿನ ಪರಿಸ್ಥಿತಿಗೆ ತಳ್ಳುವ ಈ ಆರ್ಥಿಕ ದಿಗ್ಬಂಧನ ಮುಂದುವರೆಯುವಂತಿಲ್ಲ.

ವಿಶ್ವಸಂಸ್ಥೆಯ ಹಿಂದಿನ ಮಹಾಕಾರ್ಯದರ್ಶಿ ಬುಟ್ರೋಸ್ ಘಾಲಿ, ವಿಶ್ವಸಂಸ್ಥೆಯ ಉದ್ದೇಶ ಮತ್ತು ಇರಾಕ್‌ನ ಮೇಲೆ ವಿಧಿಸಿರುವ ದಿಗ್ಬಂಧನದ ಪರಿಣಾಮಗಳನ್ನ ಕುರಿತ, ನ್ಯಾಯಸಮ್ಮತವಲ್ಲದ ಅಸಂಬದ್ಧತೆಗಳನ್ನು ಅನೇಕ ವರದಿಗಳ ಮೂಲಕ ಭದ್ರತಾ ಮಂಡಳಿಯ ಗಮನಕ್ಕೆ ತಂದಿದ್ದರು. ಈ ಅಂಶಗಳು ಮುಚ್ಚಿಹಾಕಲಾದ ಕೆಲವು ಸತ್ಯಗಳನ್ನ ಕಾಣಿಸುತ್ತವೆ. ಭದ್ರತಾ ಮಂಡಳಿ ಮತ್ತು ವಿಶ್ವಸಂಸ್ಥೆಗಳ ಮೇಲೆ ಅಮೆರಿಕ ತಾನು ಹೊಂದಿರುವ ಹತೋಟಿಯನ್ನ, ತನ್ನ ಹಿತಾಸಕ್ತಿಗನುಗುಣವಾಗಿ ಬಳಸಿಕೊಳ್ಳುತ್ತಿದೆ. ದಿಗ್ಬಂಧನವನ್ನ ಜನರ ಬದುಕಿನ ಹಕ್ಕನ್ನ ಕಿತ್ತುಕೊಳ್ಳುವ ದಮನಕಾರಿ ಅಸ್ತ್ರವನ್ನಾಗಿ ದುರುಪಯೋಗಪಡಿಸಿಕೊಂಡಿದೆ.

ಆರ್ಥಿಕ ದಿಗ್ಬಂಧನ ಕುರಿತ ಅಮೆರಿಕದ ಸಮರ್ಥನೆಯಲ್ಲಿ ಅನೇಕ ತಪ್ಪುಕಲ್ಪನೆ ಮತ್ತು ದಾರಿ ತಪ್ಪಿಸುವ ಹೇಳಿಕೆಗಳಿವೆ ; ಅದರಲ್ಲಿ ಯಾವುದೇ ಚಿಂತನೆ, ಅರಿವಿನ ಅಂಶಗಳಿಲ್ಲ. ಅದು ಕಾಣಿಸುವ ಸತ್ಯ ಅಮೆರಿಕದ ಮನೋಧರ್ಮಕ್ಕೆ ಅನುಗುಣವಾದ ಕುಬ್ಜ ಸತ್ಯ. ಇರಾಕಿನಲ್ಲಿ ಪರಿವರ್ತನೆ ತರಲು ಇರುವ ದಾರಿ ಒಂದೇ, ಅದರ ಮೇಲಿನ ಆರ್ಥಿಕ ದಿಗ್ಬಂಧನವನ್ನ ತೆರವುಗೊಳಿಸುವುದು ; ಇರಾಕಿನ ಜನ ಈ ಪರಿವರ್ತನೆಯನ್ನ ಸ್ವಾಗತಿಸುತ್ತಾರೆ ಮತ್ತು ಒಪ್ಪಿಕೊಳ್ಳುತ್ತಾರೆ. ದಿಗ್ಬಂಧನದ ಮೂಲಕ ಪರಿವರ್ತನೆ ತರುವುದು, ಕೊಲ್ಲಿ ದೇಶಗಳಲ್ಲಿ ದಿಗ್ಬಂಧನದ ಮೂಲಕ ಭದ್ರತೆಯನ್ನ ಖಚಿತಪಡಿಸುವಷ್ಟೇ ಅಪಹಾಸ್ಯದ, ಡಾಂಭಿಕತೆಯ ಘೋಷಣೆ. ಜನರ ಕಾಯಿಲೆಗಳನ್ನು ಗುಣಪಡಿಸುತ್ತ, ಆಸ್ಪತ್ರೆಗಳಿಗೆ ಔಷಧಿ ಸರಬರಾಜು ಮಾಡುತ್ತ, ಮಕ್ಕಳನ್ನು ಶಾಲಾ ಕಾಲೇಜುಗಳಿಗೆ ಕಳಿಸುತ್ತ, ಮಕ್ಕಳ ಆಟ ಪಾಠಕ್ಕಾಗಿ ಹಂಬಲಿಸುತ್ತ ಸಹಜ ಜೀವನ ನಡೆಸುತ್ತಿದ್ದ ಇರಾಕಿನ ಜನತೆ ಕೊಲ್ಲಿ ದೇಶಗಳ ಭದ್ರತೆಗೆ ಯಾವ ತೊಂದರೆ ಉಂಟು ಮಾಡಿದ್ದರು ? ಇರಾಕಿ ಜನತೆ ಹಸಿವಿನಿಂದ ಬಳಲುತ್ತಿರುವಾಗ, ಕೊಲ್ಲಿ ದೇಶಗಳಲ್ಲಿ ಶಾಂತಿ ಮತ್ತು ಭದ್ರತೆಗೆ ಬೆಂಬಲ ಕೊಡುವ ಮಾತನ್ನ ಯಾರು ಆಡುತ್ತಿದ್ದಾರೋ ಅವರು ಅಪ್ರಾಮಾಣಿಕರು. ಕೊಲ್ಲಿ ದೇಶಗಳ ಜನತೆ ಈ ಅಪಹಾಸ್ಯದ ಡಾಂಭಿಕ ಪ್ರಹಸನವನ್ನು ಅರ್ಥ ಮಾಡಿಕೊಳ್ಳುತ್ತಾರೆ.

ಮೂಲ ಸೌಕರ್ಯಗಳ ವಿನಾಶ, ಆರ್ಥಿಕ ದಿಗ್ಬಂಧನದ ದೆಸೆಯಿಂದಾಗಿ ಅನೇಕ ಬಿಕ್ಕಟ್ಟುಗಳು ತುಂಬಿರುವ ದೇಶವೊಂದರ ನೆರೆಹೊರೆಯವರಾಗಿರುವುದು ಎಷ್ಟು ಕಷ್ಟ ಎಂಬುದು ಅವರಿಗೆ ಅರಿವಾಗಲಿದೆ.

ನೆರೆಹೊರೆಯ ಇಸ್ರೇಲ್‌ನಂತಹ ದೇಶಗಳು ತಮ್ಮ ರಕ್ಷಣಾ ವ್ಯವಸ್ಥೆಗಳನ್ನ ಬಲಪಡಿಸಿಕೊಳ್ಳುತ್ತಿರುವಾಗ ಇರಾಕ್ ತನ್ನ ರಕ್ಷಣಾ ವ್ಯವಸ್ಥೆ ಶಸ್ತ್ರಾಸ್ತ್ರ ಸರಬರಾಜು ಹೆಚ್ಚಿಸಿಕೊಳ್ಳುವುದನ್ನು ತಡೆಯುವುದು ಕೂಡ ಒಂದು ಪ್ರಹಸನ. ಈ ವಿಷಯವನ್ನ ಇರಾಕಿನ ಜನತೆಗೆ ತೊಂದರೆಯಾಗದಂತಹ, ಹೆಚ್ಚಿನ ಸಾಮರ್ಥ್ಯ ಇರುವ ವಿಧಾನಗಳಿಂದ ಪರಿಹರಿಸಬಹುದು. ಇದು ಅಂತಾರಾಷ್ಟ್ರೀಯ ವೀಕ್ಷಕರ ಉದ್ದೇಶವಾಗಿತ್ತು; ಚೀನಾ, ರಷಿಯಾ ಮತ್ತು ಫ್ರಾನ್ಸ್ ದೇಶಗಳು, ಸಮೂಹ ನಾಶಕ ಶಸ್ತ್ರಗಳನ್ನ ಹೊಂದದಂತೆ ಇರಾಕ್ ಖಚಿತಪಡಿಸಿದರೆ ಸಾಕು ಎಂಬ ನಿಲುವು ತಳೆದಿದ್ದವು. ಇನ್ನೊಂದು ಮಾರ್ಗವೆಂದರೆ, ಆರ್ಥಿಕ ದಿಗ್ಬಂಧನ-ತಯಾರಕರು ಮತ್ತು ವಹಿವಾಟುದಾರರನ್ನ ಗುರಿಯಾಗಿಸಿಕೊಳ್ಳಬೇಕಿತ್ತು. ಮುಗ್ಧ ಜನರನ್ನ ಶಿಕ್ಷಿಸುವ ಬದಲು, ತಾವು ಭಾಗೀದಾರರಲ್ಲದ ನೀತಿಗಳ ಮೂಲಕ ದೇಶವನ್ನ

ಸರ್ವನಾಶಗೊಳಿಸುವ ಬದಲು ಶಸ್ತ್ರ ತಯಾರಕರು ಮತ್ತು ವಹಿವಾಟುದಾರರ ಮೇ ಆರ್ಥಿಕ ದಿಗ್ಬಂಧನ ಹೇರಬಹುದಿತ್ತು.

ಕಳೆದ ೧೧ ವರ್ಷಗಳಿಂದ ಇರಾಕಿನ ಪರಿಸ್ಥಿತಿಯ ನನ್ನ ಅನುಭವದ ಪ್ರಕಾರ, ಇರಾಕಿ ಜನರನ್ನ ಹೊರತುಪಡಿಸಿ ಈ ವಿಷಯದಲ್ಲಿ ಭಾಗೀದಾರರಾಗಿರುವ ಅಮೆರಿಕ ಮತ್ತು ಇತ ದೇಶಗಳು ಪರಿಸ್ಥಿತಿಯನ್ನ ಈಗ ಹೇಗಿದೆಯೋ ಹಾಗೇ ಮುಂದುವರಿಸಿಕೊಂಡಿವೆ ; ಈ ಹುನ್ನಾರ ಹಿಂದೆ ಅವರ ಹಿತಾಸಕ್ತಿಗಳು ಅಡಗಿವೆ. ಆರ್ಥಿಕ ದಿಗ್ಬಂಧನವನ್ನ ಮುಂದುವರೆಸಿ, ತನ್ನ ಹಿತಾಸಕ್ತಿಗ ಬೇಳೆ ಬೇಯಿಸಿಕೊಳ್ಳಲು ಅಮೆರಿಕ, ಇಡೀ ಇರಾಕ್ ವ್ಯವಸ್ಥೆಯನ್ನ ರಹಸ್ಯ ಪೆಟ್ಟಿಗೆಯಲ್ಲಿ ಹಾ ಮುಚ್ಚಿಡಲು ಹವಣಿಸುತ್ತಿದೆ.

ಈ ಅಮೆರಿಕಾಗೆ ಇರಾಕಿನ ಮೇಲಿನ ದಿಗ್ಬಂಧನದ ಬಗ್ಗೆ ಯಾಕೆ ಇಂತಹ ಮಹಾನ್ ಆಸಕ್ತಿ ಇದು ಅಮೆರಿಕದಲ್ಲಿ ಡೆಮೊಕ್ರಾಟ್ ಮತ್ತು ರಿಪಬ್ಲಿಕನ್ ರಾಜಕೀಯ ಪಕ್ಷಗಳ ನಡುವಿನ ಸ್ಪರ್ಧೆ ಮತ್ತು ತನ್ನ ಆಂತರಿಕ ಸಮತೋಲನಕ್ಕಾಗಿ ಸದಾ ಕಾಲ ಹೊರಗಿನ ಶತ್ರು ಎಂಬ ಪರಿಕಲ್ಪನೆಯನ ಜೀವಂತವಾಗಿಡುವ ಅಮೆರಿಕದ ಸಾರ್ವಜನಿಕ ನೀತಿಗೆ ಸಂಬಂಧಪಟ್ಟಿದ್ದು ; ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಮೆರಿಕ ಇರಾಕನ್ನ ತನ್ನ ಶತ್ರು ದೇಶ ಎಂಬ ಕಲ್ಪನೆಯನ್ನ ಮುಂದುವರೆಸಿಕೊಂಡ ಹೋಗುತ್ತದೆ. ಕೊಲ್ಲಿ ದೇಶಗಳಲ್ಲಿ ತನ್ನ ಮಿಲಿಟರಿ ನೆಲೆಗೆ ಅಂತಾರಾಷ್ಟ್ರೀಯ ಅಂಗೀಕಾ ದೊರಕಿಸಿಕೊಳ್ಳುವುದು, ಅಲ್ಲಿನ ತೈಲ ನಿಧಿಯ ಮೇಲೆ ಹತೋಟಿ ಸಾಧಿಸುವುದು, ಶಸ್ತ್ರಾಸ್ತ್ರಗಳನ ಮಾರುವುದು ಅಮೆರಿಕದ ಪ್ರಮುಖ ಉದ್ದೇಶಗಳು. ಅದರ ಬಲಿಪಶುಗಳು ಇರಾಕಿನ ಮುಗ ಜನತೆ.

೧೯೯೧ರಲ್ಲಿ ನಡೆದ ಕೊಲ್ಲಿ ಯುದ್ಧದ ನಂತರ ಮಧ್ಯಪ್ರಾಚ್ಯದಲ್ಲಿ ಆಗಿರುವ ಶಸ್ತ್ರಾಸ್ತ್ರ ವಹಿವಾಟ ಅಂದಾಜು ೧೭೦ ಮಿಲಿಯನ್ ಡಾಲರ್‌ಗಳಷ್ಟು ; ಇದೆಲ್ಲವೂ ಅರಬ್-ಇಸ್ರೇಲ್ ಜಗಳದಿಂ ಇರಾಕನ್ನು ಹೊರತುಪಡಿಸಲು ಮಾತ್ರ ಆಗಿರುವ ವಹಿವಾಟು.

ಇದೆಲ್ಲಕ್ಕಿಂತ ಕೆಟ್ಟದ್ದೆಂದರೆ, ಅಮೆರಿಕ ಮತ್ತು ಬ್ರಿಟನ್ ಮನುಷ್ಯ ಮತ್ತು ನಿಸರ್ಗವನ್ನ ಹಾಳ ಮಾಡುವ, ಅಂತಾರಾಷ್ಟ್ರೀಯ ನಿಷೇಧಕ್ಕೆ ಒಳಗಾಗಿರುವ ಯುರೇನಿಯಂ ಇಂಧನವನ್ನ ಒಳಗೊಂಡ ಶಸ್ತ್ರಾಸ್ತ್ರಗಳ ಸ್ಫೋಟಕ ಸಾಮರ್ಥ್ಯ ಅಳೆಯಲು ಇರಾಕ್ ದೇಶವನ್ನೇ ಶಸ್ತ್ರಾಸ್ತ್ರ ಪರೀಕ್ಷಾ ಮೈದಾನವನ್ನಾ ಪರಿವರ್ತಿಸಿರುವುದು. ಅಮೆರಿಕದ ಸೈನ್ಯ ಇರಾಕ್ ನಗರಗಳ ಮೇಲೆ ೩೦೦ ಟನ್‌ಗಳಷ್ಟು ವಿಕಿರಣಯು ಯುರೇನಿಯಂ ಶಸ್ತ್ರಾಸ್ತ್ರಗಳನ್ನ ಎಸೆದಿದೆ. ಈ ಪ್ರದೇಶದಲ್ಲಿ ವಾಸಿಸುವ ಜನತೆಯ ವಿಕಿರಣ ಪ್ರತಿರೋಧ ಶಕ್ತಿ ವರ್ಷಕ್ಕೆ ೧೧ ಮೈಕ್ರೋಗಳೆಂದು ನಮಗೆಲ್ಲ ಗೊತ್ತು.

ಈ ಶಸ್ತ್ರಾಸ್ತ್ರಗಳಿಂದ ಹೊಮ್ಮುವ ವಿಕಿರಣದಿಂದ ಕ್ಯಾನ್ಸರ್ ರೋಗ ಮತ್ತು ಇತರೆ ಪ್ರಾಣಾಂತಿ ರೋಗಗಳ ಪ್ರಮಾಣ ಹೆಚ್ಚಾಗಿದೆ. ಇರಾಕಿನ ಜನಸಮುದಾಯದಲ್ಲಿ ೧೯೯೦ರ ವೇಳೆಗೆ ೪,೩೪೦ ಕ್ಯಾನ್ಸರ್ ರೋಗಿಗಳಿದ್ದರೆ, ಅದು ೨೦೦೦ದ ವೇಳೆಗೆ ೧೨,೦೦೦ಕ್ಕೆ ಏರಿದೆ ; ಅಂದರೆ ಕ್ಯಾನ್ಸರ್ ರೋಗಿಗಳ ಪ್ರಮಾಣದಲ್ಲಿ ನೂರುಪಟ್ಟು ಹೆಚ್ಚಳ ಕಂಡುಬಂದಿದೆ. ಉಳಿದಂತೆ ಮಕ್ಕಳಲ್ಲಿ ರೂಪ ವಿಚ್ಛಿದ್ರತೆ, ಪುರುಷರು, ಮಹಿಳೆಯರಲ್ಲಿ ನಿರ್ವೀರ್ಯತೆ, ಮೂತ್ರಪಿಂಡ ದೋಷ, ಅಕಾಲಿ

ಕುರುಡು ಮುಂತಾದ ಸಮಸ್ಯೆಗಳು ತಲೆದೋರಿವೆ. ವಾತಾವರಣದಲ್ಲಿ ಹರಡಿಕೊಳ್ಳುತ್ತಿರುವ ಯುರೇನಿಯಂ ಅಣುವಿಕಿರಣದ ದೆಸೆಯಿಂದಾಗಿ ಮುಂದಿನ ೨೫ ವರ್ಷಗಳಲ್ಲಿ ಮನುಷ್ಯ ಜೀವಗಳ ರೂಪದಲ್ಲಿ ಅತಿರೇಕದ ಬದಲಾವಣೆಗಳು ಕಾಣಿಸಿಕೊಳ್ಳಲಿವೆಯೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಇದರ ಜೊತೆ ಶಕ್ತಿಯುತ ಯುರೇನಿಯಂ ಪರಮಾಣು ವಿದಳನದಿಂದ ಇರಾಕಿನ ನೀರು ಮತ್ತು ಮಣ್ಣು ಸಂಪೂರ್ಣ ನಾಶವಾಗಿ ತನ್ನ ಗುಣ ಕಳೆದುಕೊಂಡಿದೆ. ಈ ಭಯಾನಕ ಅನುಭವದ ಬಗ್ಗೆ ನೀವೆಲ್ಲರೂ ಚಿಂತಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಡೆಮಾಕ್ರಾಟರೇ ಆಳುತ್ತಿರಲೀ, ರಿಪಬ್ಲಿಕನ್ ಪಕ್ಷವೇ ಅಧಿಕಾರದಲ್ಲಿರಲಿ, ಅಮೆರಿಕ ತನ್ನ ರಾಕ್ಷಸ ಪ್ರವೃತ್ತಿಯನ್ನ ಬಿಟ್ಟುಕೊಡುವುದಿಲ್ಲ. ಇದರ ಜೊತೆ ಅಮಾನವೀಯ ಆರ್ಥಿಕ ದಿಗ್ಬಂಧನದಿಂದ ಅವರು ಮಾನವ ಕುಲದ ಘೋರ ದುರಂತಕ್ಕೆ ಕಾರಣವಾಗಿದ್ದಾರೆ; ಇಡೀ ಇರಾಕ್ ದೇಶವನ್ನೇ ಸರ್ವನಾಶಗೊಳಿಸಹೊರಟಿದ್ದಾರೆ.

ಇಲ್ಲಿ ಹೊತ್ತು ಹುಟ್ಟಿ ಮುಳುಗಲು ಕೂಡ ದಂಡನಾಯಕರ ಅಪ್ಪಣೆ ಬೇಕು !

ಕೈಫಾ ಅಫೀಫೀ, ಲೆಬನಾನ್

ಇಸ್ರೇಲಿ ಕೊಪ್ಪಕಲಾ ಪಡೆಗಳು ದಕ್ಷಿಣ ಲೆಬನಾನ್‌ನಲ್ಲಿ ನನ್ನನ್ನು ಬಂಧಿಸಿ, ಸರಪಳಿಗಳಿಂದ ಕಟ್ಟಿ, ಕಣ್ಣಿಗೆ ಕಂದುಪಟ್ಟಿ ಕಟ್ಟಿ ಅವರ ಶಿಬಿರಕ್ಕೆ ಕರೆದೊಯ್ದರು. ನನ್ನನ್ನ ಒಂದು ಕೋಣೆಗೆ ಕರೆದುತಂದರು. ೨x೨ ಮೀಟರ್ ಅಳತೆಯ ಮಿಲಿಟರಿ ಕಡತಗಳಿಂದ ಆ ಕೋಣೆ ತುಂಬಿಹೋಗಿತ್ತು. ಅಲ್ಲೊಂದು ಮೇಜು ಮತ್ತು ಕುರ್ಚಿ. ಅದರಲ್ಲಿ ವಿಚಾರಣಾಧಿಕಾರಿ ಕುಳಿತುಕೊಂಡಿದ್ದ ; ವಿಚಾರಣೆಯ ಕಿರುಕುಳ ಆರಂಭಿಸಿದರು. ಅತ್ಯಾಚಾರ ಎಸಗುವ ಬೆದರಿಕೆ ಹಾಕಿದರು. ನನ್ನನ್ನ ಒಂದು ಕತ್ತಲ ಕೋಣೆಗೆ ಕರೆದೊಯ್ದರು. ಆ ಕೋಣೆಯಲ್ಲಿದ್ದ ರಾಕ್ಷಸಾಕಾರದ ಮನುಷ್ಯನ್ನ ಕಂಡು ದಿಗ್‌ಭ್ರಮೆಗೊಂಡೆ. ನನ್ನ ಮೇಲೆ ಆಕ್ರಮಣ ನಡೆಸಲು ಅವನು ಸಜ್ಜಾಗಿ ನಿಂತಿದ್ದ. ನನ್ನ ಹತ್ತಿರ ಬರತೊಡಗಿದ. ಹೀಗೆ ಐದಾರು ಸಲ ಹತ್ತಿರ ಬಂದು ಹಿಂದಕ್ಕೆ ಹೋಗುತ್ತಿದ್ದ; ಅವನು ಮಾತಾಡಲಿಲ್ಲ. ೧೫ ನಿಮಿಷಗಳ ನಂತರ, ತಪ್ಪೊಪ್ಪಿಕೊಂಡರೆ ಅತ್ಯಾಚಾರದಿಂದ ಬಚಾವಾಗಬಹುದೆಂದು ತಿಳಿಸಿದ. 'ನೀವು ನಮ್ಮ ದೇಶದ ಮೇಲೆ ಅತ್ಯಾಚಾರ ಮಾಡಿದಿರಿ' ಎಂದೆ.

ಅವನು ನನ್ನನ್ನ ಒದ್ದು, ಕೂದಲು ಹಿಡಿದು ಎಳೆದಾಡಿದ. ನಂತರ ನನ್ನನ್ನ ಹಸು ಸಾಗಾಣಿಕೆ ವಾಹನದ ಇಕ್ಕಟ್ಟಿನ ಡಬ್ಬಿಗೆ ತಳ್ಳಿದರು. ಆ ಡಬ್ಬಿಯ ಸುತ್ತ ಗ್ಯಾಸೋಲಿನ್ ಚೆಲ್ಲಿದರು ; ಇದ್ದಕ್ಕಿದ್ದಂತೆ ಸ್ಫೋಟದ ಶಬ್ದ ಕೇಳಿಬಂತು. ಬೇರೆಯವರು ಪಾಠ ಕಲಿಯುವಂತಾಗಲು ನಿನ್ನ ಜೀವಂತವಾಗಿ ಸುಡುತ್ತೇವೆ ಅಂತಾ ಬೆದರಿಕೆ ಹಾಕಿದರು. ನನ್ನನ್ನ ಟ್ರಕ್ಕಿನ ಸೀಟಿಗೆ ಕಟ್ಟಿಹಾಕಿದರು. ಅತ್ಯಾಚಾರ ಎಸಗಿ ಕೊಂದು ಹಾಕುವುದಾಗಿ ಬೆದರಿಸಿದರು. ನಾನು ಆಗ ತುಂಬಾ ಚಿಕ್ಕವಳು. ನಾವು ಆಲ್‌ಖಿಯಾನ್ ಜೈಲಿಗೆ ಬಂದೆವು. ಅದನ್ನ ನಾವು ಸಾವಿನ ಜೈಲು ಅಂತಾ ಕರೀತಿದ್ವಿ. ನನ್ನ ಒಂದು ಸೆಲ್ಲಿನೊಳಗೆ ಹಾಕಿದರು. ೨x೧ ಮೀ. ಅಳತೆ ಸೆಲ್ಲಿನಲ್ಲಿ ತುಂಬಾ ಕತ್ತಲು, ಅಲ್ಲಿ ತೆಳ್ಳಗಿನ ಒಂದು ಕಂಬಳಿ ಇತ್ತು; ಪ್ರತಿದಿನ ಮಹಿಳಾ ಪೊಲೀಸ್ ಪೇದೆಯೊಬ್ಬಳು ವಿಚಾರಣೆಗಾಗಿ ನನ್ನನ್ನ ಮರ್ಜೊಯಾನ್‌ಗೆ

ಕರೆದುಕೊಂಡು ಹೋಗುತ್ತಿದ್ದಳು. ವಿಚಾರಣೆಗೆ ಮೊದಲು ಕಣ್ಣಿಗೆ ಪಟ್ಟಿ ಕಟ್ಟುತ್ತಿದ್ದರು. ನನ್ನ ತಲೆಯನ್ನು ಕೆಟ್ಟ ವಾಸನೆಯ ಚೀಲದಿಂದ ಮುಚ್ಚುತ್ತಿದ್ದರು.

ಪ್ರತಿದಿನ ನಾನು ನೆಲದಲ್ಲೇ ಮಲಗುತ್ತಿದ್ದೆ. ತುಂಬಾ ಚಳಿಯಿಂದ ನಡುಗುತ್ತಿದ್ದೆ ; ಬಟ್ಟೆಗಳೆಲ್ಲ ಹರಿದು ಚಿಂದಿಯಾಗಿದ್ದವು. ಆಲ್‌ಖಿಯಾನ್ ಸೆರೆಮನೆಯಲ್ಲಿ ನನ್ನ ಈ ವಿಚಾರಣೆಯ ಹಂತ ಮುಗಿದು ದೈಹಿಕ ಕಿರುಕುಳ ಶುರುವಾಯಿತು. ಬಂಧೀಖಾನೆ ಅಂಗಳದಲ್ಲಿ ಇಡೀ ರಾತ್ರಿ, ಕಣ್ಣಿಗೆ ಪಟ್ಟಿ ಕಟ್ಟಿಕೊಂಡು ನಿಲ್ಲಬೇಕಾಯಿತು ; ಕೈ ಮತ್ತು ಕಾಲಿಗೆ ಸರಪಳಿ ಹಾಕುತ್ತಿದ್ದರು. ಬೆಳಗ್ಗೆ ಬಾತ್‌ರೂಮಿನಲ್ಲಿ ಮಂಡಿಯೂರಿ ಕುಳಿತುಕೊಳ್ಳಲು ಆಜ್ಞಾಪಿಸುತ್ತಿದ್ದರು. ಕುಳಿತುಕೊಂಡಾಗ ತುಂಬಾ ಹೊತ್ತು ತಲೆಯ ಮೇಲೆ ನೀರು ಸುರಿಯುವ ವ್ಯವಸ್ಥೆ ಮಾಡಿದ್ದರು. ಈ ಬಾತ್‌ರೂಮಿಗೆ ಉಳಿದ ಖೈದಿಗಳ ಚೀತ್ಕಾರ, ಅಳಲು ಕೇಳಿಬರುತ್ತಿತ್ತು.

ಮಹಾತ್ಮ ಗಾಂಧಿಯವರ ಹತ್ಯೆ ಮತ್ತು ಇಸ್ರೇಲ್ ದೇಶ ಸ್ಥಾಪನೆ ನಡುವೆ ೬ ತಿಂಗಳ (ಜನವರಿಯಿಂದ ಮೇ ೧೯೪೮) ಕಾಲ ವ್ಯತ್ಯಾಸವಿದೆ. ಪ್ಯಾಲೆಸ್ಟೈನಿನಲ್ಲಿ ಯಹೂದಿಗಳ ರಾಷ್ಟ್ರೀಯ ವಸತಿ ಬಗ್ಗೆ ಗಾಂಧಿಯವರಿಗೆ ಸಹಾನುಭೂತಿ ಇಲ್ಲದಿರುವುದನ್ನ ೧೯೩೦ರ ಅವರ ಬರಹಗಳು ತೋರುತ್ತದೆ. ಆಂಗ್ಲರಿಗೆ ಇಂಗ್ಲೆಂಡ್, ಫ್ರೆಂಚರಿಗೆ ಫ್ರಾನ್ಸ್ ಸೇರಿರುವಂತೆ ಪ್ಯಾಲೆಸ್ಟೈನ್ ಅರಬ್ಬರಿಗೆ ಸೇರಿದ್ದು ಎಂಬುದು ಅವರ ಚಿಂತನೆ. ಭೂಮಿ ಮೇಲಿನ ಇತರೆ ಜನರಂತೆ ಯಹೂದಿಗಳು ತಾವು ಹುಟ್ಟಿ ಬೆಳೆದ, ಬದುಕುತ್ತಿರುವ ಜರ್ಮನ್ ದೇಶವನ್ನ ತಮ್ಮ ರಾಷ್ಟ್ರವನ್ನಾಗಿ ಮಾಡಿಕೊಳ್ಳಬೇಕು.

ಜರ್ಮನಿಯಲ್ಲಿರುವ ಯಹೂದಿಗಳು ಜರ್ಮನಿಯನ್ನು ತಮ್ಮ ರಾಷ್ಟ್ರೀಯ ವಸತಿಯನ್ನಾಗಿ ಮಾಡಿಕೊಂಡು, ತಮ್ಮ ವಿರುದ್ಧದ ಆಚರಣೆಗಳಿಗೆ ನಾಗರಿಕ ಪ್ರತಿರೋಧದ ಉದಾಹರಣೆ ಅನುಸರಿಸಬೇಕೆಂದು ಗಾಂಧಿ ಒತ್ತಾಯಿಸಿದ್ದರು.

ಒಂದು ದಿನ ನಾವು ೬ ಮಂದಿ ಮಹಿಳೆಯರು ಸೆಲ್‌ನಲ್ಲಿದ್ವಿ. ಅವರು ಬಂದು ಬಾಗಿಲು ತೆಗೆದು ನನ್ನ ಹೊರಗೆ ಕರೆದರು. ನನ್ನ ಕೈ ಕಾಲುಗಳಿಗೆ ಸರಪಳಿ ಕಟ್ಟಿ, ನನ್ನ ತಲೆಯನ್ನ ಚೀಲದಿಂದ ಮುಚ್ಚಿದರು. ನಂತರ ಇನ್ನೊಂದು ದೊಡ್ಡ ಚೀಲದಲ್ಲಿ ಹಾಕಿ ಮಿಲಿಟರಿ ಜೀಪಿಗೆ ಎಸೆದರು. ನನ್ನ ಉಸಿರು ಕಟ್ಟತೊಡಗಿತು, ನಾನು ಒದ್ದಾಡಿದೆ ; ಅವರು ಚೀಲವನ್ನ ತೆಗೆದರು. 'ನನ್ನ ಉಸಿರು ಕಟ್ಟುತ್ತಿದೆ' ಎಂದೆ. 'ನಿನ್ನ ಕೊಂದುಬಿಡುತ್ತೇವೆ ಈಗ' ಎಂದರು. 'ನಾನು ಜೈಲಿನ ಗೆಳತಿಯೊಬ್ಬಳ ಚಪ್ಪಲಿ ಮೆಟ್ಟಿಕೊಂಡಿದ್ದೇನೆ, ಅವುಗಳನ್ನ ಆಕೆಗೆ ತಲುಪಿಸಿ' ಎಂದು ಕೇಳಿಕೊಂಡೆ. ಅವರು ಗಟ್ಟಿಯಾಗಿ ನಗತೊಡಗಿದರು. ಜೀಪು ಮುಂದಕ್ಕೆ ಚಲಿಸಿತು. ಮುಂದೆ ನನಗೆ ಪ್ರಜ್ಞೆ ತಿಳಿದದ್ದು, ಅವರು ನನ್ನ ಮುಖಕ್ಕೆ ನೀರು ಎರಚಿದಾಗಲೇ; ಜೈಲಿನ ಸೆಲ್ಲಿನಲ್ಲಿದ್ದೆ. ಅನೇಕ ಗಂಡಸರು ಒಳಪ್ರವೇಶಿಸಿದರು; ಅವರು ಪ್ರಶ್ನೆ ಕೇಳಲು ಬಂದಿದ್ದ ಪತ್ರಕರ್ತರು. ಪತ್ರಕರ್ತರು ಕೇಳಿದ ಪ್ರಶ್ನೆಗಳಿಗೆಲ್ಲ ನನ್ನ ಬದಲು ಮಹಿಳಾ ಪೊಲೀಸ್ ಅಧಿಕಾರಿಯೇ ಉತ್ತರ ಕೊಡುತ್ತಿದ್ದಳು; ಅವಳ ಉತ್ತರಗಳಲ್ಲಿ ಅಸತ್ಯದ ಕತ್ತಲಿತ್ತು. ಒಂದು ಗಂಟೆಯ ನಂತರ ನನ್ನ ಆಲ್-ಖಿಯಾನ್ ಸೆರೆಮನೆಗೆ ಕರೆದೊಯ್ದರು. ನನ್ನನ್ನ

ಆಲೂಗಡ್ಡೆಯ ಚೀಲದಂತೆ ಹೊರಕ್ಕೆಸೆದರು. ನನ್ನ ಕಾಲುಗಳಲ್ಲಿ ರಕ್ತ ಸುರಿಯುತ್ತಿತ್ತು; ಇಂದಿಗೂ ಆ ಹಳೆಯ ನೋವು ನನ್ನ ಮನದಲ್ಲಿ ಉಳಿದಿದೆ.

ನಂತರ ವಿಚಾರಣೆ ಕೊಠಡಿಗೆ ಕರೆದೊಯ್ದರು, ಅಲ್ಲಿ ನನ್ನನ್ನ ಚಾಟಿಯಿಂದ ಥಳಿಸಿದರು. ನನ್ನ ಕೈಗಳ ಮೇಲೆ ನೀರು ಎಸೆಯುತ್ತಿದ್ದರು. ನಂತರ ವಿದ್ಯುತ್ ಷಾಕ್ ಕೊಟ್ಟರು. ಇದು ಪ್ರತಿದಿನ, ಅವರಿಗೆ ಆಯಾಸವಾಗುವ ತನಕ ಮುಂದುವರೆಯುತ್ತಿತ್ತು. ಒಂದೊಂದು ಸಲ ನನಗೆ ವಿಚಾರಣೆ ಮುಗಿದುಹೋಯಿತಾ ಅಂತಾ ಆಶ್ಚರ್ಯವಾಗುತ್ತಿತ್ತು. ನಂತರ ಗೊತ್ತಾಯಿತು ; ಅವರು ನನ್ನನ್ನ ಏಜೆಂಟ್ ಆಗಿ ಪರಿವರ್ತಿಸುವ ಉದ್ದೇಶ ಹೊಂದಿದ್ದರು. ಕಿರುಕುಳ ಮತ್ತು ಅನ್ಯಾಯದ ಈ ಸೆರೆಮನೆಯಲ್ಲಿ ಕುಟುಂಬದಿಂದ, ಸ್ನೇಹಿತರಿಂದ ದೂರವಾಗಿದೀನಿ ಅಂತಾ ಅನಿಸುತ್ತಿರಲಿಲ್ಲ. ಯಾಕೆಂದರೆ ಆಲ್ ಖಿಯಾಮ್‌ನ ಸೆರೆಮನೆಯಲ್ಲಿ ಮನುಷ್ಯ ಯಾವುದೇ ಭಾವನೆ, ಭಾವನಾತ್ಮಕತೆ ಇಲ್ಲದೆ ಬದುಕುತ್ತಾನೆ. ಕಿರುಕುಳ ಎಂಬುದು ಒಂದು ಬಟ್ಟಲು, ಆ ಬಟ್ಟಲಿನಿಂದ ಎಲ್ಲರೂ ಕುಡಿಯುತ್ತಾರೆ. ಅವರು ನಮ್ಮನ್ನ ಒತ್ತಾಯಿಸುತ್ತಾರೆ, ನಾವು ಅಸಹಾಯಕರು. ನಾವು ಅವರಿಗೆ ನಿಷ್ಠರಾಗಿ, ಇರುವುದನ್ನ ಇರುವ ಹಾಗೆ ಒಪ್ಪಿಕೊಳ್ಳಬೇಕು. ಕೊಲೆಬೆದರಿಕೆ, ಅತ್ಯಾಚಾರಗಳೇ ನಾವು ಪ್ರತಿನಿತ್ಯ ತಿನ್ನುವ ರೊಟ್ಟಿ ; ಕಿರುಕುಳ, ಚಿತ್ರಹಿಂಸೆ, ಹಸಿವು, ದೌರ್ಜನ್ಯದ ವಿರುದ್ಧ ಸೆಣಸಾಡುತ್ತ ನಾನು ಮನುಷ್ಯ ಜೀವ ಎಂಬುದೇ ಮರೆತುಹೋಗಿದೆ; ಹೆಣ್ಣು ಎಂಬುದನ್ನ ಮಾತ್ರ ಮರೆತಿಲ್ಲ. ನನ್ನ ಮುಟ್ಟಿನ ಅವಧಿಯಲ್ಲಿ ಅವರು ಹಿಂಸೆಯನ್ನ ಹೆಚ್ಚು ಮಾಡುತ್ತಿದ್ದರು. ಅಲ್ಲಿನ ಅನಾರೋಗ್ಯಕರ ಕೊಳಕು ವಾತಾವರಣದ ಜೊತೆಗೆ ಮಾನಸಿಕ ಹಿಂಸೆ, ಜೊತೆಗೆ ಅಪಮಾನ. ನನ್ನ ರಕ್ತದಲ್ಲಿ ನಾನೇ ಈಜಾಡಿದ್ದೇನೆ. ನನಗೆ ಅವಶ್ಯಕ ಒಳ ಉಡುಪುಗಳಿರಲಿಲ್ಲ; ಆ ತೆಳ್ಳಗಿನ ಕಂಬಳಿ ಚೂರನ್ನ ಆಗಾಗ ಹರಿದುಕೊಳ್ಳುತ್ತಿದ್ದೆ. ಅದನ್ನೇ ಬಟ್ಟೆಯಾಗಿ ಬಳಸಿದ್ದರಿಂದ ನನ್ನ ಜನನಾಂಗಕ್ಕೆ ಸೋಂಕು ತಗುಲಿತು. ಅಯ್ಯೋ, ನಾನು ಮಲಗುತ್ತಿದ್ದ ಆ ಸೆಲ್ಲನ್ನ ನೀವು ನೋಡಬೇಕಿತ್ತು ! ಕತ್ತಲಿನ ಜೊತೆ ತೇವ ಇಡುಗಿಬಿಡುತ್ತಿತ್ತು. ಒಂದು ತೆಳ್ಳಗಿನ ಹಾಸಿಗೆ, ಎರಡು ತೆಳ್ಳಗಿನ ಕಂಬಳಿಗಳು. ಶೌಚಾಲಯದ ಬಳಕೆಗಾಗಿ ಒಂದು ಸಣ್ಣ ಬಕೀಟು, ಗೋಡೆಗಳಿಂದ ನೀರು ಸುರಿಯುತ್ತಿತ್ತು. ನನ್ನ ಇಡೀ ದೇಹ ಊದಿಕೊಂಡಿತ್ತು. ನನ್ನ ಮೂತ್ರಪಿಂಡದಲ್ಲಿ ಗಾಯವಾಗಿತ್ತು. ಚಳಿ ತುಂಬಾ ಕ್ರೂರವಾಯಿತು. ಅವರು ಬಾಗಿಲು ತೆರೆದು ಒಳಬಂದರು ; ನಾನು ಪ್ರಜ್ಞಾಹೀನಳಾಗಿ ಬಿದ್ದಿದ್ದೆ. ನನ್ನನ್ನ ಆಸ್ಪತ್ರೆಗೆ ವರ್ಗಾಯಿಸಲಾಯಿತು. ಅಂದೇ ಹಿಂದಕ್ಕೆ ಕರೆತಂದರು ; ಯಾವ ಔಷಧಿ ಉಪಚಾರವನ್ನೂ ಮಾಡಲಿಲ್ಲ. ನನ್ನನ್ನ ಒಂದು ತೆಳು ಕಂಬಳಿ ಮೇಲೆ ಹಾಕಿ, ಇನ್ನೊಂದು ತೆಳು ಕಂಬಳಿ ಹೊದಿಸಿದರು. ಆಗ ವಿಚಾರಣಾ ಅಧಿಕಾರಿ ಬಂದ. 'ಗಾಯ ವಾಸಿಯಾಗಿದೆಯಾ ?' ಅಂತಾ ಕೇಳಿದ. ತೋರಿಸಲು ನಾನು ಸ್ವೆಟರ್ ಎತ್ತಿದಾಗ ಅವನು ನನ್ನ ಮೂತ್ರಪಿಂಡದ ಪ್ರದೇಶದಲ್ಲಿ ಸಿಗರೇಟ್ ಹೊಸಕಿದ. ಆ ಗಾಯ ಈಗಲೂ ಇದೆ. ಇದೇ ಕೊನೆಯಿರಬಹುದು, ಇನ್ನು ನನಗೆ ಸಾವು ಅಂತ ಎಷ್ಟು ಸಲ ಯೋಚಿಸಿದ್ದೇನೆ ; ಆದರೆ ಸಾವನ್ನ ನಾನು ಕಾಣಲಾಗಲೇ ಇಲ್ಲ.

ಆಲ್ ಖಿಯಾಮ್ ಸೆರೆಮನೆಯಲ್ಲಿ ಎಲ್ಲವೂ ನಿಷಿದ್ಧ. ಮಾತನಾಡುವುದು, ನಗುವುದು, ಅಳುವುದು, ಓದು, ಬರವಣಿಗೆ, ನಿದ್ರೆ ಪ್ರತಿಯೊಂದೂ ನಿಷಿದ್ಧ. ಜೈಲಿನಲ್ಲಿ ಯಾವಾಗ ಸೂರ್ಯ ಕಾಣಬೇಕು, ಯಾವಾಗ ಕಾಣಬಾರದು ಅಂತ ನಿರ್ಧರಿಸುವವರು ಕೂಡ ಮಿಲಿಟರಿ ಅಧಿಕಾರಿಗಳೇ.

ನಾನು ಮತ್ತು ಉಳಿದ ಖೈದಿಗಳು ಈ ವೇದನೆ ಮತ್ತು ಬೇಸರದ ವಿರುದ್ಧ ನಿರಂತರ ಹೋರಾಡಿದೆವು. ಇನ್ನು ಮುಂದೆ ಶಿಕ್ಷೆ ಎಷ್ಟು ಕಠಿಣವಾಗುತ್ತದೆ ಎಂದು ಹೆದರಲೇಕೂಡದೆಂದು ನಿರ್ಧರಿಸಿದೆವು; ಅದಕ್ಕೆ ಹೊಂದಿಕೊಂಡುಬಿಟ್ಟೆವು. ಗುಲಾಮಗಿರಿ ಮತ್ತು ಅನ್ಯಾಯದ ವಿರುದ್ಧ ನಾವು ಪ್ರತಿಭಟಿಸುವುದನ್ನ ಮಾತ್ರ ಬಿಟ್ಟುಕೊಡಲಿಲ್ಲ. ಅಲ್ಲಿನ ಕೆಟ್ಟ ಆಹಾರ, ಕಳಪೆ ಔಷಧಿ, ಅಪಮಾನದ ವಿರುದ್ಧ ನಮ್ಮ ಶಿಬಿರದಲ್ಲಿ ಅತೃಪ್ತಿ ಅಸಮಾಧಾನ ಹೊಗೆಯಾಡುತ್ತಿತ್ತು. ನಾವು ಬಾಗಿಲುಗಳನ್ನ ಬಡಿದು, ಮುಳ್ಳುತಂತಿಗಳನ್ನ ಕಿತ್ತೆಸೆದೆವು. ಅಲ್ಲಿಗೆ ಬಂದ ಬಂಧೀಖಾನೆ ಅಧಿಕಾರಿ ನನಗೆ ಎಲ್ಲೆಂದರಲ್ಲಿ ಒದ್ದು, ಎಲ್ಲರ ಮುಂದೆ ಕೂದಲು ಹಿಡಿದು ಎಳೆದಾಡಿದ. ನನ್ನನ್ನ ಕೋಣೆಗೆ ಎಳೆದೊಯ್ದು, ಉರಿಯುತ್ತಿದ್ದ ಸ್ಟವ್ವಿನ ಮೇಲೆ ನೂಕಿದ. ನನ್ನ ಪ್ಯಾಂಟು ಸುಟ್ಟುಹೋಯಿತು. ಬೆಂಕಿ ನನ್ನ ಕಾಲಿಗೆ ರಾಚುತ್ತಿತ್ತು. ಈ ಪ್ರತಿಭಟನೆಯನ್ನ ನಿಲ್ಲಿಸುವಂತೆ ಹೇಳಿದ. ನಮ್ಮ ಒತ್ತಾಯಗಳಿದ್ದದ್ದು ಒಳ್ಳೆ ಆಹಾರ, ಔಷಧಿ, ಉಪಚಾರ ಮತ್ತು ಬಟ್ಟೆಗಾಗಿ. ನಾವು ಸಮಾಧಾನವಾಗಿರುವಾಗ ನಮ್ಮೊಡನಿದ್ದ ಪುರುಷ ಖೈದಿಗಳ ಚೀತ್ಕಾರ ಕೇಳಿಸುತ್ತಿತ್ತು. ಅವರಿಗೆ ಕಿರುಕುಳ ಕೊಡುತ್ತಿದ್ದರು. ಅವರ ಸೆಲ್ಲುಗಳಿಗೆ ಬಾಂಬುಗಳನ್ನ ಎಸೆದರು. ಇಬ್ಬರು ಪುರುಷ ಸಂಗಾತಿಗಳು ಹುತಾತ್ಮರಾದರು. ಕ್ರಿಸ್‌ಮಸ್ ಹಬ್ಬ ಮತ್ತು ಹೊಸ ವರ್ಷವನ್ನು ನಾನು ಎಂದಿಗೂ ಮರೆಯುವಂತಿಲ್ಲ. ಆ ದಿನ ನಾವು ಬಂಧೀಖಾನೆಯ ನ್ಯಾಯಾಲಯ ಆವರಣದ ಚಳಿಯಿಂದ ತತ್ತರಿಸುತ್ತಿದ್ದೆವು. ಆಲ್-ಖಿಯಾನ್ ಬಂಧೀಖಾನೆಯ ಖೈದಿಯಾಗಿ ೫ ವರ್ಷಗಳಾದವು. ಪ್ರತಿಯೊಂದು ಶಬ್ದ, ಕೀಲಿ ಕೈಗಳ ಸದ್ದು, ಕೆಮ್ಮು, ಹೆಜ್ಜೆ ಸಪ್ಪಳ ಎಲ್ಲವೂ ನಮ್ಮಲ್ಲಿ ಯಾರಾದರೂ ಒಬ್ಬರನ್ನ ಚಿತ್ರಹಿಂಸೆಗಾಗಿ ಇಲ್ಲಿಂದ ಬೇರ್ಪಡಿಸುತ್ತಾರೆಂದು ಹೆದರಿಸುತ್ತಿದ್ದವು. ಸೆರೆಮನೆಯಲ್ಲಿರುವ ನನಗೆ ಚರ್ಮವ್ಯಾಧಿ ಕಾಣಿಸಿಕೊಂಡಿತು. ಔಷಧಿ ಕೊಳ್ಳಲು ನನ್ನಲ್ಲಿ ಹಣವಿರಲಿಲ್ಲ; ದಿನಗಳೆದಂತೆ ರೋಗ ವ್ಯಾಪಿಸಿಕೊಳ್ಳುತ್ತಲೇ ಇತ್ತು. ರೋಗಗಳಿಗೆ ಕೂಡ ನಾವು ಹೊಂದಿಕೊಂಡುಬಿಟ್ಟಿದ್ದೆವು; ಸಹಿಸಿಕೊಳ್ಳುತ್ತಿದ್ದೆವು. ಅವರು ನನ್ನ ತಲೆಗೆ ಅಪ್ಪಳಿಸಿದ ನೀರಿನಿಂದ ತಲೆ ವಿಪರೀತ ನೋಯುತ್ತಿತ್ತು. ೨೦ ದಿವಸಗಳ ಕಾಲ ಏನನ್ನೂ ತಿನ್ನಲು, ಕುಡಿಯಲು ಆಗಲಿಲ್ಲ ; ಕಣ್ಣು ಮುಚ್ಚಿ ನಿದ್ರಿಸಲಾಗಲಿಲ್ಲ. ನನ್ನ ಪರಿಸ್ಥಿತಿ ತೀರ ಹದಗೆಡುವ ತನಕ ನನಗೆ ಯಾವುದೇ ಔಷಧ ಉಪಚಾರ ಸಿಗಲಿಲ್ಲ. ಕುಟುಂಬದ ಸಂಪರ್ಕ ತಪ್ಪಿಹೋಗಿತ್ತು. ನನ್ನ ಬಗ್ಗೆ ಅವರಿಗೆ ಯಾವ ಸುದ್ದಿಯೂ ತಿಳಿದಿರಲಿಲ್ಲ. ರೆಡ್‌ಕ್ರಾಸ್ ಸಂಸ್ಥೆ ಕೂಡ ನನ್ನ ಭೇಟಿ ಮಾಡಲಿಲ್ಲ. ನನಗೆ ಬಟ್ಟೆ, ಔಷಧಿ ಎಂತದೂ ಸಿಗಲಿಲ್ಲ. ಆದರೂ ದೈನಂದಿನ ಜೀವನದಲ್ಲಿ ನಾವು ಕ್ರಿಯಾಶೀಲರಾಗಿದ್ದೆವು. ಬೇಸರ ಕಳೆಯಲು, ಅವರು ಬ್ರೆಡ್ ಚೀಲಗಳನ್ನ ಕಟ್ಟಲು ಬಳಸುತ್ತಿದ್ದ ಪ್ಲಾಸ್ಟಿಕ್ ವೈರ್‌ಗಳಿಂದ ಸಲಕರಣೆಗಳನ್ನ ತಯಾರಿಸಿಕೊಂಡು, ಸ್ವಾತಂತ್ರ್ಯ ಮತ್ತು ಪ್ರತಿಭಟನೆಯ ಚಿತ್ರಗಳ ಕಸೂತಿ ಹಾಕತೊಡಗಿದೆವು. ನಮ್ಮ ಹುಟ್ಟಿದ ಹಬ್ಬ ಹಾಗೂ ಇತರೆ ಹಬ್ಬಗಳನ್ನ ಆಚರಿಸುತ್ತಿದ್ದೆವು. ಇವುಗಳನ್ನೆಲ್ಲ ನಿಷೇಧಿಸಲಾಗಿತ್ತು ; ಆದರೂ ನಾವು ಆಚರಿಸಿದೆವು. ನಮ್ಮ ಕ್ರಿಯಾಶೀಲತೆ ಅವರ ಗಮನಕ್ಕೆ ಬಂದರೆ ನಮ್ಮನ್ನ ಏಕಾಂತದ ಸೆಲ್ಲುಗಳಿಗೆ ಹಾಕಿ ಚಿತ್ರಹಿಂಸೆ ಕೊಡುತ್ತಿದ್ದರು.

ನಾನು ಆಲ್ ಖಿಯಾನ್ ಸೆರೆಮನೆ ಬಿಟ್ಟು ೫ ವರ್ಷಗಳಾದವು. ಆದರೆ ನಾನು ಏನನ್ನೂ ಮರೆತಿಲ್ಲ. ನನ್ನ ಕಾಲುನೋವು, ಮೂತ್ರಪಿಂಡ ಸಮಸ್ಯೆ, ನನ್ನ ಮಂಡಿಯ ಹೊಡೆತಗಳು, ನನ್ನ ಸೆರೆಮನೆ ವಾಸವನ್ನ ಗಡಿಯಾರದಷ್ಟು ನಿಖರವಾಗಿ ನೆನಪಿಸುತ್ತವೆ. ಮರೆಯುವುದು ಹೇಗೆ ? ಆ

ಪುರಾತನ ಟೈಗ್ರಿಸ್ ಮತ್ತು ಯೂಫ್ರಟಿಸ್ ನದಿಗಳ ಸಂಗಮದ, ದಕ್ಷಿಣದ ಷಾತ್-ಅಲ್-ಅರಬ್ ಹತ್ತಿರದ ಬಸ್ರಾ ತುಂಬಾ ಸುಂದರ ನಗರ ; ಇಲ್ಲಿನ ಆರೋಗ್ಯ ಪರಿಸ್ಥಿತಿಯದು ಇನ್ನೊಂದು ಕತೆ. ಡಾಕ್ಟರೊಬ್ಬರು ಹುಟ್ಟಿನೊಂದಿಗೆ ಬರುವ ಅಸಹಜತೆ, ಕ್ಯಾನ್ಸರ್ ಮತ್ತು ಜನ್ಮಹಾನಿಕಾರಕಗಳ ಬಗ್ಗೆ ಕೊಲ್ಲಿ ಯುದ್ಧ ಆರಂಭದಿಂದ ಈ ತನಕ ಅಧ್ಯಯನ ನಡೆಸಿ ಅದನ್ನ ಹಿರೋಷಿಮಾ ನಗರದ ಪರಮಾಣು ಸ್ಫೋಟದ ಪರಿಣಾಮಗಳೊಂದಿಗೆ ಹೋಲಿಸಿ ನೋಡಿದ್ದಾರೆ. ಡಾ. ಜೆನಾಮ್ ಆಲಿ ನಿಗೂಢ ಸಹಜಾತ ವೈಪರೀತ್ಯಗಳನ್ನ ದಾಖಲಿಸಿದ್ದಾರೆ. ಅವರು ಸಂಗ್ರಹಿಸಿರುವ ೧೯೯೮ರ ಚಿತ್ರಗಳು ಮನುಷ್ಯನ ರಕ್ತ ತಣ್ಣಗಾಗಿಸುವಷ್ಟು ಭಯಾನಕ. ಪೂರ್ಣ ಅವಧಿ ಮುಗಿಸಿದ್ದೂ ಪೂರ್ಣ ಬೆಳವಣಿಗೆಯಾಗಿರದ ಶಿಶುಗಳು, ದಕ್ಷಿಣ ಪೆಸಿಫಿಕ್ ಸಾಗರವನ್ನ ನೆನಪಿಸುವ ದ್ರಾಕ್ಷಿಗೊಂಚಲಿನಂತಹ ಶಿಶುಗಳು. ಒಂದು ಮಗುವಿಗೆ ಮುಖವಿಲ್ಲ, ಇನ್ನೊಂದಕ್ಕೆ ಕಣ್ಣಿಲ್ಲ, ತಿರುಚಿದ ತುಟಿಗಳು ಅಥವಾ ತುಟಿಗಳೇ ಇಲ್ಲದ ಶಿಶುಗಳು. ಸಣಕಲು ಮಗುವಿಗೆ ದೊಡ್ಡ ತಲೆಬುರುಡೆ, ಒಳಗೆ ಮಿದುಳಿಲ್ಲ ; ಪುಟ ತಿರುವಿದಂತೆಲ್ಲ ಕಾಣಿಸಕೊಳ್ಳುವುದು ದುರಂತಗಳು ಮಾತ್ರ. ಎಲ್ಲರೂ ತಾರುಣ್ಯದಲ್ಲಿರುವ ತಂದೆ ತಾಯಿಗಳು, ನಮಗೆ ಗೊತ್ತಿರುವಂತೆ ಅವರ ಕುಟುಂಬದ ಚರಿತ್ರೆಯಲ್ಲಿ ಯಾವ ಶಾರೀರಿಕ ಅಸಹಜತೆಗಳೂ ಇರಲಿಲ್ಲ. ನಮ್ಮ ಪ್ರಯೋಗಶಾಲೆಗಳು ಇದನ್ನ ಖಚಿತಪಡಿಸಿವೆ. ಮುಂದಿನದು ಪುಸ್ತಕಗಳಲ್ಲಿ ದಾಖಲಾಗಿಲ್ಲ. ೧೯೯೦ರಿಂದ ಅನೇಕ ಪಠ್ಯಪುಸ್ತಕಗಳು ಮತ್ತು ವೈದ್ಯಕೀಯ ಪತ್ರಿಕೆಗಳನ್ನ ಆರ್ಥಿಕ ದಿಗ್ಬಂಧನ ಸಮಿತಿ ನಿಷೇಧಿಸಿದೆ ; ಅವು ಇರಾಕಿಗೆ ತಲುಪುವುದು ತಡ.

ಸದ್ದಾಂಪೀಡಿಯಾಟ್ರಿಕ್ ಆಸ್ಪತ್ರೆಯಲ್ಲಿ ೪ ವರ್ಷದ ಮಗು ಸಹಾರ ಸಾಯುತ್ತಿದ್ದಳು. ಅವಳಿಗೆ ತೀವ್ರ ಮೈಲಾಯಿಡ್ ಲ್ಯುಕೇಮಿಯಾ ಕಾಯಿಲೆಯಿತ್ತು. ಆಕೆಯ ಮೂಗು ಮತ್ತು ಒಸಡುಗಳಿಂದ ರಕ್ತ ಒಸರುತ್ತಿತ್ತು. ಆಕೆಗೆ ಪ್ರತಿದಿನ ೧೦-೧೫ ಯೂನಿಟ್‌ಗಳ platelets ಅಗತ್ಯವಿತ್ತು. ಆದರೆ ಡಾಕ್ಟರುಗಳಿಗೆ ಸಿಗುತ್ತಿದ್ದು ಒಂದು ಮಾತ್ರ. ಅಮೆರಿಕ ಮತ್ತು ಬ್ರಿಟನ್‌ಗಳಲ್ಲಿ ಲ್ಯುಕೇಮಿಯಾ ವಾಸಿ ಮಾಡಬಹುದಾದ ಕಾಯಿಲೆ. ಆದರೆ ನಮ್ಮಲ್ಲಿ ಕಿಮೋಥೆರಪಿ ಸೌಲಭ್ಯಗಳಿಲ್ಲದೆ ಒಬ್ಬ ರೋಗಿಯನ್ನ ಕೂಡ ಗುಣಪಡಿಸಲಾಗಿಲ್ಲ. ಕಳೆದ ೮ ವರ್ಷಗಳ ಅವಧಿಯಲ್ಲಿ ಕೇವಲ ಪರಿಹಾರಗಳನ್ನ ಮಾತ್ರ ಕೊಡಲಾಗಿದೆ ಎನ್ನುತ್ತಾರೆ ಡಾ. ರಾದ್ ಅಲ್ ಜನಾಬಿ, ಇಲ್ಲಿನ ಚೀಫ್ ರೆಸಿಡೆಂಟ್. ೧೯೯೪-೯೫ ಮತ್ತು ೯೬ರಲ್ಲಿ ನಮಗೆ ಯಾವ ಉಪಚಾರವೂ ಇರಲಿಲ್ಲ. ಪ್ರತಿರೋಗಿ ಕೂಡ ಸಾಯಬೇಕಾಯಿತು. ಕೊಲ್ಲಿ ಯುದ್ಧದ ನಂತರ ಇರಾಕಿನಲ್ಲಿ ಕ್ಯಾನ್ಸರ್, ಲ್ಯುಕೇಮಿಯಾ ಮತ್ತು ಜನ್ಮಹಾನಿ ಪ್ರಮಾಣ ಏಳುಪಟ್ಟು ಹೆಚ್ಚಾಗಿದೆ. ಈ ಕಾಯಿಲೆಗಳ ಹೆಚ್ಚಳ ಅಮೆರಿಕ ಮತ್ತು ಬ್ರಿಟನ್ ದೇಶಗಳು ಬಳಸಿದ ಯುರೇನಿಯಂ ಶಸ್ತ್ರಗಳಿಂದ ಉಂಟಾದದ್ದು. ಈ ಶಸ್ತ್ರಗಳು ದೇಶಾದ್ಯಂತ ವಿಕಿರಣಯುಕ್ತ ಧೂಳನ್ನ ಹರಡಿವೆ. ಇದರ ಬಗ್ಗೆ ನಡೆದಿರುವ ಅಧ್ಯಯನಗಳ ಪ್ರಕಾರ (ಅಮೆರಿಕದ ಜಾನ್ ಹಾಪ್ಕಿನ್ಸ್ ವಿಶ್ವವಿದ್ಯಾಲಯ ಕೂಡ ಭಾಗಿಯಾಗಿರುವ) ವಿಕಿರಣ ಧೂಳು ಅಂತರ್ಜಲ ಮತ್ತು ಮಣ್ಣಿನ ಮೂಲಕ ಆಹಾರ ಸರಪಳಿಗೆ ಸೇರಿಕೊಂಡಿದೆ.

ದಾದಿಯೊಬ್ಬಳು ಬಟ್ಟೆಯಲ್ಲಿ ಸುತ್ತಿದ ಒಂದು ಪಿಂಡಿ ತಂದರು. ಅದು ಸ್ಟೆರೈಲ್ ಮಾಡಿದ ಹೊದಿಕೆ. ಹೊದಿಕೆ ಸರಿಸಿದಾಗ ಆ ಪುಟ್ಟ ಜೀವ ಗೊರಗೊರ ಸದ್ದು ಮಾಡುತ್ತಿತ್ತು. ಅದಕ್ಕೆ ಕಣ್ಣು, ಮೂಗಿರಲಿಲ್ಲ. ಮುದ್ದಾದ ಪುಟ್ಟ ಬಾಯಿ. ನಾಲಿಗೆ, ಕೈಗಳಿರಲಿಲ್ಲ. ಜನನಾಂಗವಿರಲಿಲ್ಲ. ತಿರುಚಿಕೊಂಡ ಪುಟ್ಟ ಕಾಲುಗಳು ತೊಡೆಯಿಂದ ಮೇಲಕ್ಕೆ ಮಾಂಸದ ಮುದ್ದೆಗೆ ಅಂಟಿಕೊಂಡಿದ್ದವು. ಇಂತಹ

ಮಕ್ಕಳನ್ನ ಪ್ರತಿದಿನ ನೋಡುತ್ತೇವೆ ಎಂದರು ಡಾ. ಜನೀನ್. ಹೆರಿಗೆ ವಿಭಾಗದ ದಾದಿ ಬುಷ್ರಾ ನಾಸರ್ ಹೇಳಿದರು : ನೀವು ನೋಡಿದ ಮಗು ನನ್ನ ಸಹೋದ್ಯೋಗಿಯದು, ನನ್ನ ಹೊಟ್ಟೆಯಿಂದ ಎಂಥಾ ಮಗು ಹುಟ್ಟುತ್ತೋ ಅಂತಾ ಭಯವಾಗುತ್ತಿದೆ. ಅಲ್ಟ್ರಾಸೌಂಡ್ ಮತ್ತು ಸ್ಕ್ಯಾನಿಂಗ್ ಉಪಕರಣಗಳಿಲ್ಲದೇ (ದಿಗ್ಬಂಧಿಸಲಾಗಿದೆ) ಹುಟ್ಟುವ ತನಕ ಮಗು ಎಂತದೆಂದೂ ತಿಳಿಯುವುದಿಲ್ಲ. ಕೆಲವು ಸಲ ದುಃಖಿತರಾವ ತಾಯಂದಿರು ನಮ್ಮ ಮೇಲೆ ಮುಗಿಬೀಳುತ್ತಾರೆ. ಈ ಪ್ರಕರಣದಲ್ಲಿ ನಾವು ನೋಡಿದ ಮಗು ಆರೋಗ್ಯಕರವಾಗಿ ೮ ಪೌಂಡ್ ತೂಕವಿತ್ತು. ಆದರೆ ಅದರ ಪಾಲನೆಗೆ ಬಿಸಿನೀರಿಲ್ಲ. ಜಿರಲೆಗಳು ಹಾಸಿಗೆ ಮೇಲೆಲ್ಲಾ ಹರಿದಾಡುತ್ತಿವೆ. ಸೋಂಕು ನಾಶಕದ ಮೇಲೆ ದಿಗ್ಬಂಧನ ವಿಧಿಸಲಾಗಿದೆ. ದಿನದಲ್ಲಿ ೧೮ ಗಂಟೆ ಕಾಲ ವಿದ್ಯುತ್ ಇರುವುದಿಲ್ಲ ; ಹುಟ್ಟಿದ ಕ್ಷಣದಿಂದ ಈ ನಿಷ್ಪಾಪಿ ಮಗು ಮಾನವ ಲೋಕದ ಇಂಥಾ ಕಷ್ಟಕೋಟಲೆಗಳಿಗೆ ಗುರಿಯಾಗಿದೆ. ತಾಯಂದಿರು 'ಏನು ತೊಂದರೆ ಇಲ್ವಾ ?' ಅಂತಾ ಕೇಳುವಾಗ ಅವರ ಪ್ರಶ್ನೆಗಳಲ್ಲಿ ಭಯ ಆವರಿಸಿಕೊಂಡಿರುತ್ತದೆ. ಬಸ್ರಾ ನಗರದ ಹತ್ತಿರ ಮಣ್ಣಲ್ಲಿ ಯುರೇನಿಯಂ ಧಾತುಗಳಿಂದ ಉಂಟಾದ ವಿಕಿರಣ ಪ್ರಮಾಣ ನೈಸರ್ಗಿಕ ಹಿನ್ನೆಲೆಯ ವಿಕಿರಣಕ್ಕಿಂತ ಶೇ. ೮೪ರಷ್ಟು ಹೆಚ್ಚಾಗಿದೆ.

ನಾವು ವಾರ್ಡ್ ತಲುಪುವುದಕ್ಕೆ ಎರಡು ನಿಮಿಷ ಮೊದಲು ಮಗುವೊಂದು ತೀರಿಕೊಂಡಿತ್ತು. ಮಗುವಿನ ತಾಯಿ ಕಿರುಚುತ್ತಾ ಯಾರ ಸಮಾಧಾನಕ್ಕೂ ಸಿಗದೇ ಆಸ್ಪತ್ರೆಯಿಂದ ಹೊರಕ್ಕೆ ಓಡಿಹೋದಳು. ವಿಶ್ವಾಸದ ನಿಲುವಿನ ಅಜ್ಜಿ ಷಿಯಾ ಕಣ್ಣಿಂದ ನೀರಿಳಿಯುತ್ತಿತ್ತು. ಮಗುವಿನ ಮಂಚದ ಬದಿಗೆ ನಿಂತು ಪುಟ್ಟ, ಪರಿಪೂರ್ಣ ತಲೆ ಮತ್ತು ಮುಖವನ್ನ ಮೆಲ್ಲಗೆ ಸವರಿದೆ, ಈ ಮಗುವನ್ನ ಬದುಕಿಸಿಕೊಳ್ಳಬಹುದಿತ್ತು ಎಂಬ ಭಾವನೆಯಲ್ಲಿ. ಆ ಮಗು ಬದುಕಲು ಬೇಕಿದ್ದುದು ಆಮ್ಲಜನಕ ಮಾತ್ರ ; ಆದರೆ ಅದು ಸಿಗುವಂತಿರಲಿಲ್ಲ.

ನಾವು ಅಲ್ಲಿಂದ ಹೊರಬರುತ್ತಿದ್ದಂತೆ ಇಬ್ಬರು ಡಾಕ್ಟರುಗಳು ಮತ್ತು ಒಬ್ಬ ಸೈನಿಕ ನಮ್ಮನ್ನ ಕಂಡು ಕಿರುಚಿಕೊಂಡರು : "ನಿಮಗೆ ಬೇಕಿರುವುದು ವರದಿ ಮಾತ್ರ, ನಿಮಗೆ ಫೋಟೋ ಬೇಕು ಅಷ್ಟೇ. ೬ನೇ ಮಹಡಿಯಲ್ಲಿ ಎರಡು ವರ್ಷದ ಮಗು ಸತ್ತಿದೆ. ಡಾಕ್ಟರು ತಮ್ಮ ಕೈಲಾದ ಪ್ರಯತ್ನಗಳನ್ನೆಲ್ಲ ಮಾಡಿದರು. ಆ ಮಗುವಿಗೆ ಬೇಕಾಗಿದ್ದದ್ದು ಆಮ್ಲಜನಕ ಮಾತ್ರ-ಆಮ್ಲಜನಕ ಇಲ್ಲದೇ ಎರಡು ವರ್ಷದ ಮಗು ಸತ್ತುಹೋಯ್ತು. ನಮ್ಮಿಂದ ನಿಮಗೆ ಇನ್ನೂ ಏನು ಬೇಕು." ನಾವು ಹೊರಟೆವು. ಗ್ಲಾಸ್ಗೊಗನಲ್ಲಿ ತರಬೇತಿ ಪಡೆದ ವಿಶ್ವವಿಖ್ಯಾತ ಡಾಕ್ಟರು ಹೇಳಿದರು : ನಮ್ಮ ಆಸ್ಪತ್ರೆಗಳ ಸ್ಥಿತಿ ನೋಡಿದ್ದೀರಿ, ಮತ್ತೆ ಬಾಂಬ್ ಸಿಡಿಸಿದರೆ ಏನು ಮಾಡುವುದು ? ಬ್ರಿಟಿಷ್ ದಂಡನಾಯಕ ಜನರಲ್ ಮಾಡ್ ಸ್ಥಾಪಿಸಿದ ಈ ಆಸ್ಪತ್ರೆ ಇರಾನ್-ಇರಾಕ್ ಯುದ್ಧದಲ್ಲಿ ದಾಳಿಗೀಡಾಗಿ ಇಬ್ಬರು ಡಾಕ್ಟರು ಸತ್ತರು. ಕೊಲ್ಲಿ ಯುದ್ಧದಲ್ಲಿ ಎಂತಹ ನಿರಂತರ ದಾಳಿ ನಡೆಯಿತೆಂದರೆ, ಜನ ಸತ್ತವರನ್ನ ಎತ್ತಿಕೊಳ್ಳದೇ ಓಡುತ್ತಿದ್ದರು. ಡಾ. ಆಲಿ ಹೇಳಿದರು : ಬೀದಿಗಳಲ್ಲಿ ಜನರ ಮೃತ ಶರೀರಗಳನ್ನ ನಾಯಿಗಳು ತಿನ್ನುತ್ತಿವೆ. ಈ ತರಹ ಮತ್ತೆ ಆಗಬಾರದು ಅಂತಾ ಹೇಳಿದೆ.

ಬಸ್ರಾ ಬಿಟ್ಟು ಬಾಗ್ದಾದ್ ತಲುಪಿದೆವು. ಮರುದಿನ ಬೆಳಗ್ಗೆ ಬಸ್ರಾ ನಗರದ ಮೇಲೆ ಬಾಂಬ್ ದಾಳಿಯಾದ ಸುದ್ದಿ ಬಂತು.

(ಮೂಲ: ಫೆಲಿಸಿಟಿ ಅರ್ಬುಥ್ನಾಟ್ **The health of the Iraqi people**)

ಯಾಕೆ ಎಚ್ಚರವಹಿಸಬೇಕು ? ಅಲ್ಲಿರುವುದು ೯೮ ಸಾವಿರ ಜನ ಮಾತ್ರ !

ಚಿಮೊಕೊ ತಮಾಯೇಸೆ, ರೊಂಗೆಲೀಪ್ ದ್ವೀಪ

ನನ್ನ ಹೆಸರು ಚಿಮೊಕೊ ತಮಾಯೇಸೆ. ಮಾರ್ಷಲ್ ದ್ವೀಪ ಸಮೂಹಗಳ-ರೊಂಗೆಲೀಪ್ ದ್ವೀಪದ ನಿವಾಸಿ. ಮಾರ್ಷಲ್ ದ್ವೀಪಗಳು ಮೈಕ್ರೊನೇಷಿಯಾ ಎಂದು ಕರೆಯಲಾಗುವ ಪ್ರದೇಶದಲ್ಲಿವೆ; ಶಾಂತಸಾಗರದ ಉತ್ತರ ದಿಕ್ಕಲ್ಲಿ. ೨ನೇ ಮಹಾಯುದ್ಧಕ್ಕೆ ಮೊದಲು ಇಡೀ ಮೈಕ್ರೊನೇಷಿಯಾ ಪ್ರದೇಶಗಳ ಉಸ್ತುವಾರಿಯನ್ನ ಜಪಾನಿನ ರಾಜಾಡಳಿತಕ್ಕೆ ವಹಿಸಿಕೊಡಲಾಗಿತ್ತು. ಯುದ್ಧದ ನಂತರ ಈ ಪ್ರದೇಶಗಳ ಧರ್ಮದರ್ಶಿತ್ವ ರೂಪಿಸಿದ ವಿಶ್ವಸಂಸ್ಥೆ ಉಸ್ತುವಾರಿಯನ್ನ ಅಮೆರಿಕಾಗೆ ವಹಿಸಿಕೊಟ್ಟಿತು. ಈ ಧರ್ಮದರ್ಶಿತ್ವದ ಪ್ರಕಾರ ಅಮೆರಿಕ, ಮೈಕ್ರೊನೇಷಿಯ ಪ್ರದೇಶಗಳ ಜನಸಮುದಾಯದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ವಾವಲಂಬನೆ ರೂಪಿಸಬೇಕಿತ್ತು. ಆದರೆ ತನ್ನ ಪರಮಾಣು ಸ್ಫೋಟ ಪರಿಶೀಲನೆಗಳಿಗೆ ತಕ್ಕ ನಿವೇಶನ ಮಾಡಿಕೊಂಡುಬಿಟ್ಟಿತು ; ಸ್ವಂತ ಭೂಮಿ ಬದಲು ದೂರದ ಭೂಮಿಯಲ್ಲಿ, ಮಾರ್ಷಲ್ ದ್ವೀಪ ಸಮೂಹಗಳ ಪೈಕಿ ಬಿಕಿನಿ ದ್ವೀಪವನ್ನ ಆಯ್ಕೆ ಮಾಡಿಕೊಂಡರು.

೧೯೫೪ರ ಮಾರ್ಚ್ ತಿಂಗಳಲ್ಲಿ 'ಬ್ರೇವೊ' ಎಂಬ ಸಂಕೇತ ನಾಮದ ಜಲಜನಕ ಬಾಂಬನ್ನ ಬಿಕಿನಿ ದ್ವೀಪದಲ್ಲಿ ಸ್ಫೋಟಿಸಲಾಯಿತು. ಈ ಬ್ರೇವೊ, ಹಿರೋಷಿಮಾ ನಗರದ ಮೇಲೆ ಸಿಡಿಸಿದ ಪರಮಾಣು ಬಾಂಬಿಗಿಂತ ೭೫೦ ಪಟ್ಟು ಹೆಚ್ಚು ಶಕ್ತಿಶಾಲಿ ಎಂದು ಅಂದಾಜು. ೧೫ ಮೆಗಾಟನ್ ಸಾಮರ್ಥ್ಯದ ಸಿಡಿತದಿಂದ ದ್ವೀಪವೆ ಆವಿಯಾಯಿತು, ಹೊಂದಿಕೊಂಡಂತಿದ್ದ ಎರಡು ನಡುಗಡ್ಡೆಗಳು ಅಳಿಸಿಹೋದವು ; ಮೈಲುದ್ದದ ಕುಳಿ ಉಂಟಾಯಿತು.

ಬ್ರೇವೊ ಶಸ್ತ್ರಪರೀಕ್ಷೆಗೆ ೭೨ ಗಂಟೆಗಳಿಗೆ ಮೊದಲೆ ಈ ಪ್ರದೇಶದಲ್ಲಿ ಬೀಸುತ್ತಿದ್ದ ಗಾಳಿಯಿಂದ ವಿಕಿರಣ ರೊಂಗೆಲೀಪ್ ಮತ್ತು ಇತರೆ ದ್ವೀಪಗಳಿಗೆ ಕೂಡ ಹರಡಿಕೊಳ್ಳುವುದೆಂದು ಅಮೆರಿಕಾದ ಅಧಿಕಾರಿಗಳಿಗೆ ಗೊತ್ತಿತ್ತು ಅಂತಾ ಅಮೆರಿಕದ ಇತ್ತೀಚಿನ ಅವರ್ಗೀಕೃತ ದಾಖಲೆಗಳು ತೋರುತ್ತಿವೆ.

ದ್ವೀಪಗಳಲ್ಲಿ ಗಾಳಿ ಕೆಳಮುಖವಾಗಿ ಬೀಸುತ್ತಿತ್ತು. ೨ ದಿನಗಳ ನಂತರ ಜನರನ್ನ ಸ್ಥಳಾಂತರಿಸುವ ತನಕ ಯಾವುದೇ ಮುನ್ನೆಚ್ಚರಿಕೆ ಕ್ರಮಗಳನ್ನ ತೆಗೆದುಕೊಂಡಿರಲಿಲ್ಲ. ಆದರೆ ಕಾಲ ಮಿಂಚಿಹೋಗಿತ್ತು. ಈಗಾಗಲೇ ಜನ ಪರಮಾಣು ವಿಕಿರಣಕ್ಕೆ ಬಲಿಯಾಗಿದ್ದರು. ಜನರನ್ನ ಪ್ರಯೋಗ ಶಾಲೆಗಳಲ್ಲಿ "ಗಿನೀಪಿಗ್"ಗಳನ್ನಾಗಿ ಬಳಸಿಕೊಳ್ಳಲು ಹಾಗೇ ಬಿಡಲಾಗಿತ್ತು ಎಂಬ ಮಾತು ಚಾಲ್ತಿಯಲ್ಲಿದೆ.

೩ ವರ್ಷಗಳ ನಂತರ ೧೯೫೭ರಲ್ಲಿ ರೊಂಗೆಲೀಪ್‌ಗೆ ಜನ ಮರಳಬಹುದೆಂದು ಹೇಳಿದರು. ಇದು ಅವಸರದ ತೀರ್ಮಾನ. ರೊಂಗೆಲೀಪ್‌ಗೆ ಮರಳಿದವರ ಪೈಕಿ ನಾನೂ ಒಬ್ಬಳು. ಆ ಭೂಮಿಯ ಆಹಾರ ತಿಂದೆ. ವಿಕಿರಣ ಉಪಚಾರಕ್ಕೊಳಗಾದ ಸಮುದ್ರ ಆಹಾರ ತಿಂದು ಹಿಂಸಾತ್ಮಕ ಕಾಯಿಲೆಗೊಳಗಾದೆ ; ಸತ್ತುಹೋಗುತ್ತೇನೆ ಅನಿಸತೊಡಗಿತು. ನನ್ನ ಪರೀಕ್ಷಿಸಿದ ಡಾಕ್ಟರು, 'ಪರಮಾಣು ವಿಕಿರಣಕ್ಕೆ ತುತ್ತಾದ ಜನರ ದೇಹದ ಪ್ರಮಾಣಕ್ಕಿಂತ ಹೆಚ್ಚಿನ ವಿಕಿರಣ ನಿನ್ನ ದೇಹದಲ್ಲಿದೆ' ಅಂತಾ ಹೇಳಿದರು. ಈಗ ನನಗೆ ಥೈರಾಯಿಡ್ ಸಮಸ್ಯೆಗಳಿವೆ, ಥೈರಾಯಿಡ್ ಶಸ್ತ್ರಚಿಕಿತ್ಸೆಯಾಗಿದೆ ; ನನ್ನ ಗಂಟಲುಗಳಲ್ಲಿ ಉರಿಯುವ ಹುಣ್ಣುಗಳ ಬೆಳವಣಿಗೆ ಪರಿಶೀಲಿಸಿದ ಡಾಕ್ಟರು ಇನ್ನೊಂದು ಶಸ್ತ್ರಚಿಕಿತ್ಸೆಯಾಗಬೇಕೆಂದು ಹೇಳುತ್ತಿದ್ದಾರೆ. ನನಗೆ ೧೨ ಮಕ್ಕಳು, ಒಂದು ಮಗು ದೈಹಿಕ ಅಂಗವಿಕಲ, ಇನ್ನೊಂದು ಮಗುವಿನ ಬೆಳವಣಿಗೆ ಕುಂಠಿತವಾಗುವ ಚಹರೆಗಳು ಕಾಣಿಸುತ್ತಿವೆ. ನಾನು ಹೇಳಿದ ಕ್ಯಾನ್ಸರ್ ರೋಗಗಳು, ಅದರಲ್ಲೂ ಪರಮಾಣು ವಿಕಿರಣಕ್ಕೆ ಬಲಿಯಾದ ಮಾರ್ಷಲ್ ದ್ವೀಪದ ಕುಟುಂಬಗಳಲ್ಲಿ ತುಂಬಾ ಸಾಮಾನ್ಯ. ನಮ್ಮೆಲ್ಲ ಆರೋಗ್ಯ ಸಮಸ್ಯೆಗಳು ವಿಕಿರಣದಿಂದ ಉಂಟಾಗಿವೆ ಅಂತಾ ನಾವು ಬಲವಾಗಿ ನಂಬುತ್ತೇವೆ.

ನಾನೀಗ ಕೇಳುವ ಪ್ರಶ್ನೆ : ಯಾಕೆ ಅಮೆರಿಕ, ಅಮೆರಿಕದಲ್ಲೇ ಎಲ್ಲಾದರೂ ಪರಮಾಣು ಪರೀಕ್ಷೆ ನಡೆಸೋದು ಬಿಟ್ಟು ನಮ್ಮ ಪೆಸಿಫಿಕ್ ದ್ವೀಪಗಳಲ್ಲಿ ನಡೆಸ್ತಿದೆ ? ಮಾರ್ಷಲ್ ದ್ವೀಪಗಳು ಕೆಳ ಹಂತದ ಹವಳ ದ್ವೀಪಗಳು. ಅಮೆರಿಕದ ಭೂ ವಿಸ್ತಾರಕ್ಕೆ ಹೋಲಿಸಿದರೆ ಪುಟ್ಟ ದ್ವೀಪಗಳು. ಉತ್ತರ ಸ್ಪಷ್ಟ : ಅಲ್ಲಿ ವರ್ಣೀಯ ಜನ ವಾಸಿಸುತ್ತಿದ್ದಾರೆ ? ಯಾಕೆ ಕೇರ್ ಮಾಡಬೇಕು ? ಈ ರೀತಿಯ ಚಿಂತನೆ ಅಮೆರಿಕ ಸರ್ಕಾರದ ಕಾರ್ಯದರ್ಶಿ ಹೆನ್ರಿ ಕಿಸಿಂಜರನ ಹೇಳಿಕೆಯಲ್ಲಿ ಸ್ಪಷ್ಟವಾಗಿದೆ: "ಅಲ್ಲಿರುವುದು ಕೇವಲ ೯೮ ಸಾವಿರ ಜನ, ಎಚ್ಚರಿಕೆ ಯಾಕೆ ತೆಗೆದುಕೊಳ್ಳಬೇಕು ?"

ಬಿಕಿನಿ ಮತ್ತು ನೆರೆಹೊರೆಯ ಜನರನ್ನ ಮಾತೃಭೂಮಿಯಿಂದ ಬೇರ್ಪಡಿಸಿ ಇವತ್ತಿಗೆ ೫೦ ವರ್ಷಗಳಾಗುತ್ತ ಬಂದಿವೆ ; ಅಲ್ಲಿಗೆ ಮರಳುವಂತಹ ಸುರಕ್ಷಿತ ದಿನ ಬಂದೇ ಬರುತ್ತದೆಂದು ಅವರಿನ್ನೂ ಕಾಯುತ್ತಿದ್ದಾರೆ. ರೊಂಗೆಲಾಪ್ ದ್ವೀಪದ ನನ್ನ ಜನ ಮತ್ತೆ ರೊಂಗೆಲಾಪ್‌ಗೆ ಮರಳಿ ವಸತಿ ಹೂಡುವಂತಿಲ್ಲ ; ಅದು ವಿಕಿರಣದಿಂದ ತೀವ್ರ ಮಲಿನಗೊಂಡಿದೆ.

ಈಗ ನಾವು ಕ್ಯಾನ್ಸರ್ ಸಂಬಂಧೀ ಕಾಯಿಲೆಗಳಿಂದ ಬಳಲುತ್ತಿದ್ದೇವೆ. ನಮ್ಮ ಮಕ್ಕಳು ಕೂಡ ಯಾತನೆ ಅನುಭವಿಸುತ್ತಿದ್ದಾರೆ. ನಮ್ಮಲ್ಲಿ ಅನೇಕರು ಮಾರ್ಷಲ್ ದ್ವೀಪಗಳನ್ನ ತೊರೆದು, ವೈದ್ಯಕೀಯ ಸೌಲಭ್ಯಗಳ ಹತ್ತಿರದಲ್ಲಿರಲು ಹವಾಯಿ ನಗರದಲ್ಲಿ ವಾಸಿಸುತ್ತಿದ್ದೇವೆ. ಇದು ನಾವು ಅನುಭವಿಸುತ್ತಿರುವ, ನಮ್ಮ ಕಾಲದ ಅಮೆರಿಕದ ಜನಾಂಗ ದ್ವೇಷಿ ಪರಮಾಣೀಕರಣ.

ಗುರುತಿಸಲಾಗದ ಕೂಸಿಗೆ ಜನ್ಮ ಕೊಟ್ಟೆ !

ಆಲ್ಮೈರಾ ಮತಾಯೊಷಿ, ಮಾರ್ಷಲ್ ದ್ವೀಪ ಗಣರಾಜ್ಯ.

ನನ್ನ ಹೆಸರು ಆಲ್ಮೈರಾ ಮತಾಯೊಷಿ, ಮಾರ್ಷಲ್ ದ್ವೀಪ ಗಣರಾಜ್ಯದ, ರೊಂಗೆಲಾಪ್‌ನಿಂದ ಬಂದಿದ್ದೇನೆ. ೧೯೪೬ರಿಂದ ೧೯೫೮ರ ತನಕ ಅಮೆರಿಕ ಮಿಲಿಟರಿ ಪಡೆ ಮಾರ್ಷಲ್ ದ್ವೀಪ ಸಮೂಹಗಳ ಪೈಕಿ ಬಿಕಿನಿ ಮತ್ತು ಎನೆವೇತಾಕ್ ದ್ವೀಪಗಳನ್ನ ತನ್ನ ಪರಮಾಣು ಬಾಂಬ್ ಪರೀಕ್ಷೆಗಳ ಬಯಲನ್ನಾಗಿ ಬಳಸಿಕೊಂಡಿತು. ಈ ದ್ವೀಪಗಳಲ್ಲಿ ೬೭ ಜಲಜನಕ ಮತ್ತು ಪರಮಾಣು ಬಾಂಬುಗಳನ್ನ ಸಿಡಿಸಿತು. ೧೯೫೪ ಮಾರ್ಚ್ ಮೊದಲ ದಿನ ಜಲಜನಕ ಬಾಂಬ್‌ಗಳ ಪೈಕಿ ಅತಿದೊಡ್ಡ 'ಬ್ರೇವೊ' ಬಾಂಬನ್ನ ಬಿಕಿನಿ ದ್ವೀಪದಲ್ಲಿ ಸಿಡಿಸಿತು. ಅದರ ಅಗಾಧತೆ ಬಿಕಿನಿ ದ್ವೀಪವನ್ನ ಹಾಳು ಮಾಡಿತು. ಅದರ ಅಕ್ಕಪಕ್ಕದಲ್ಲಿನ ೩ ದ್ವೀಪಗಳು ಆವಿಯಾದವು ; ಪರಮಾಣು ಬಾಂಬ್ ಸಿಡಿತ ಸಮುದ್ರದಲ್ಲಿ ಮೈಲಿ ವ್ಯಾಸದ ಕುಳಿಯುಂಟುಮಾಡಿ ೧,೧೪,೦೦೦ ಅಡಿಗಳ ಎತ್ತರಕ್ಕೆ ಮೋಡಗಳನ್ನ ಉಗುಳಿತು.

ರೊಂಗೆಲಾಪ್, ಬಿಕಿನಿ ದ್ವೀಪದ ಆಗ್ನೇಯದಲ್ಲಿ ೧೦೦ ಮೈಲು ದೂರದಲ್ಲಿದೆ. ಮಾರ್ಚ್ ೧ರ ಬೆಳಗ್ಗೆ ನಾನು ಕಿವಿಗಡಚಿಕ್ಕುವ ಶಬ್ದಕ್ಕೆ ಎಚ್ಚರಗೊಂಡೆ ; ಆ ಶಬ್ದ ಎಲ್ಲ ದಿಕ್ಕುಗಳಿಂದ ಬರುವಂತಿತ್ತು. ದಿಗಂತ ಮಳೆಬಿಲ್ಲಿನ ಏಳು ಬಣ್ಣಗಳಿಂದ ಬೆಳಗುತ್ತಿತ್ತು. ರೊಂಗೆಲಾಪ್ ದ್ವೀಪ ವಾಸಿಗಳು ಎದ್ದು ತಮ್ಮ ಬೆಳಗಿನ ಕೆಲಸಗಳಲ್ಲಿ ತೊಡಗಿದ್ದರು. ರೊಂಗೆಲಾಪ್ ದ್ವೀಪ ನಿವಾಸಿಗಳಿಗೆ ಪರಮಾಣು ಶಸ್ತ್ರಾಸ್ತ್ರ ಪರೀಕ್ಷೆ ಚಿರಪರಿಚಿತ. ಸ್ಫೋಟದಿಂದ ಅವರು ಅಷ್ಟೇನು ವಿಚಲಿತರಾಗಲಿಲ್ಲ. ಆದರೆ ಆ ಸ್ಫೋಟದ ಸಮಯ ಅವರಿಗೆ ತಿಳಿದಿರಲಿಲ್ಲ. ಹಿಂದೆ ಪರಮಾಣು ಪರೀಕ್ಷೆಗೆ ಮುಂಜಾಗರೂಕತೆ ಕ್ರಮವಾಗಿ ನಮ್ಮನ್ನ ಸುರಕ್ಷಿತ ಸ್ಥಳಗಳಿಗೆ ವರ್ಗಾಯಿಸುತ್ತಿದ್ದರು. ಆದರೆ ಅಂದು ಮನೆಯಲ್ಲಿದ್ದೆವು. ಸ್ಫೋಟದ ನಂತರ ಆಸರೆ ಹುಡುಕಿಕೊಳ್ಳುವ ಅಥವಾ ಎಚ್ಚರ ವಹಿಸುವ ಬಗ್ಗೆ ಯಾರೂ ಚಿಂತಿಸುತ್ತಿರಲಿಲ್ಲ. ಅನೇಕ ಗಂಟೆಗಳ ನಂತರ ಆಕಾಶ ಕತ್ತಲುಗಟ್ಟಿಕೊಂಡಿತು. ಹೊರಗೆ ಆಟವಾಡುತ್ತಿದ್ದ ಮಕ್ಕಳು ಮತ್ತು ಮೀನು ಹಿಡಿಯುತ್ತಿದ್ದ ದೊಡ್ಡವರ ಮೇಲೆ ಹಳದಿಬಣ್ಣದ ಪುಡಿ ಉದುರತೊಡಗಿತು. ಹಳದಿ ಪುಡಿ ನಾವು ಕುಡಿಯುವ ನೀರಿನ ಮೂಲಗಳು ಮತ್ತು ಗಿಡಗಂಟೆಗಳನ್ನೆಲ್ಲಾ

ಕಲುಷಿತಗೊಳಿಸಿತು. ಹರಡಿದ ಪುಡಿಯ ಪದರ ೨ ಅಂಗುಲದಷ್ಟಿತ್ತು ; ಆರೋಗ್ಯ ಕಾರ್ಯಕರ್ತ ಕುಡಿಯಲು ಅಲ್ಲಿನ ನೀರು ಬಳಸಬಾರದೆಂದು ಎಚ್ಚರಿಕೆ ಕೊಟ್ಟ.

ಮಕ್ಕಳು ಮತ್ತು ದೊಡ್ಡವರಲ್ಲಿ ನಿಶ್ಶಕ್ತಿ ಕಾಣಿಸಿಕೊಂಡಿತ್ತು, ನಾವು ಜಾಗ್ರತರಾದೆವು. ಸಾವಿರ ಸೂಜಿಗಳಿಂದ ಚುಚ್ಚಿದರೆ ಕಾಣಿಸಿಕೊಳ್ಳುವ ನವೆಯಂತೆ ಅವರು ಸುಟ್ಟಗಾಯಗಳ ನವೆ ಅನುಭವಿಸತೊಡಗಿದರು; ನಡುಕ, ವಿಪರೀತ ಜ್ವರ, ವಾಂತಿ, ಬಾಯಲ್ಲಿ ಹುಣ್ಣುಗಳು ಕಾಣಿಸಿಕೊಂಡವು. ಹಿಂದೆಂದೂ ಅನುಭವಿಸಿರದ ವಿಚಿತ್ರ ರೋಗಗಳು. ಮರುದಿನ ಎಲ್ಲರನ್ನೂ ಸುರಕ್ಷಿತ ಸ್ಥಳಕ್ಕೆ ವರ್ಗಾಯಿಸಲು ಅಮೆರಿಕದ ಮಿಲಿಟರಿ ಹಡಗು ಬಂತು. ಮಿಲಿಟರಿ ವಿಮಾನಗಳು ಗರ್ಭಿಣಿ ಮಹಿಳೆಯರನ್ನ ಅಲ್ಲಿಂದ ತೆರವುಗೊಳಿಸಿದವು. ಆ ಗರ್ಭಿಣಿ ಮಹಿಳೆಯರ ಪೈಕಿ ನಾನು ಕೂಡ ಒಬ್ಬಳು. ಯಾವುದೇ ಪದಾರ್ಥ ಅಥವಾ ನೆನಪಿಗಾಗಿ ಏನೊಂದನ್ನೂ ತೆಗೆದುಕೊಳ್ಳಬಾರದೆಂದು ಪ್ರತಿಯೊಬ್ಬರಿಗೂ ಸೂಚನೆ ಕೊಡಲಾಗಿತ್ತು. ನಮ್ಮ ಬಟ್ಟೆ, ಚೀಲಗಳನ್ನ ಮಾತ್ರ ತೆಗೆದುಕೊಂಡು ಮಾತೃಭೂಮಿ ತೊರೆದೆವು. ಹಡಗಿನ ನಮ್ಮ ಪ್ರಯಾಣ ತುಂಬಾ ವಿಚಿತ್ರ. ನಮ್ಮನ್ನ ಸರಕಿನಂತೆ ಸಾಗಾಣಿಕೆ ಹಡಗಿಗೆ ತುಂಬಲಾಗಿತ್ತು. ವಯಸ್ಕರು ಮತ್ತು ಮಕ್ಕಳನ್ನ ಬಲೆಗಳಿಂದ ಗಾಳಿಯಲ್ಲಿ ನೇತುಹಾಕಿ, ಮೈಮೇಲಿನ ಅಣುವಿಕಿರಣ ಧೂಳನ್ನ ಶರೀರ ಹೀರಿಕೊಳ್ಳುವ ಮುಂಚೆ ತೊಳೆಯಲು ರಬ್ಬರ್ ಪೈಪುಗಳಿಂದ ರಭಸವಾಗಿ ನೀರು ಚಿಮ್ಮಿಸುತ್ತಿದ್ದರು.

ನೀರಿನ ರಭಸಕ್ಕೆ ಅವರು ಚೀರಿಕೊಳ್ಳುತ್ತಿದ್ದರು. ಈಗಾಗಲೇ ಕಾಯಿಲೆಯಾಗಿದ್ದ ಯುವಕರು ಚಳಿಗೆ ನಡುಗತೊಡಗಿದರು. ಪ್ರತಿಯೊಬ್ಬರ ಸಮ್ಮುಖದಲ್ಲಿ ಹಳೆಯ ಬಟ್ಟೆಗಳನ್ನ ತೆಗೆದು ಬಿಸಾಡುವಂತೆ ಸೂಚನೆ ಕೊಡಲಾಯಿತು. ಇದು ನಮ್ಮ ಪರಂಪರೆ ಮತ್ತು ಪದ್ಧತಿಗೆ ಅಮೆರಿಕನ್ನರು ತೋರಿದ ಅಗೌರವ ; ಈ ಘಟನೆ ನೆನೆದರೆ ಇಂದಿಗೂ ನನ್ನ ಮನಸ್ಸು ಭಾರವಾಗುತ್ತದೆ.

ನಾವು ಅಣುವಿಕಿರಣಕ್ಕೆ ಒಳಗಾಗಿದ್ದೇವೆಂದು ನಮಗೆ ಗೊತ್ತಿತ್ತು. ಮಕ್ಕಳು ಮತ್ತು ಯುವಕರು ಕಾಯಿಲೆಗೊಳಗಾದರು. ಇದ್ದಕ್ಕಿದ್ದಂತೆ ನಮ್ಮ ಬಾಯಿ ಮತ್ತು ಶರೀರಗಳಲ್ಲಿ ಹುಣ್ಣುಗಳೆದ್ದವು. ತಲೆಗೂದಲು ಉದುರಿ, ಹುಣ್ಣಿನ ಹುರುಕುಗಳು ಕಾಣಿಸಿಕೊಂಡವು.

ಮುಂದಿನ ವರ್ಷಗಳಲ್ಲಿ ನಾವು ಕ್ಯಾನ್ಸರ್ ಸಂಬಂಧಿ ಕಾಯಿಲೆಗಳಿಗೆ ಒಳಗಾದೆವು ; ಇದು ಅಣುವಿಕಿರಣದಿಂದ ಉಂಟಾದುದೆಂದು ನಮಗೆ ಚೆನ್ನಾಗಿ ಗೊತ್ತಿತ್ತು. ಜನರಲ್ಲಿ ಥೈರಾಯಿಡ್ ಗ್ರಂಥಿ ಕ್ಯಾನ್ಸರಿನ ಪ್ರಮಾಣದ ಹೆಚ್ಚಳ ಕಂಡುಬಂತು. ಮಹಿಳೆಯರು ಅನೇಕ ವೇದನೆಗಳಿಗೆ ಒಳಗಾಗಿದ್ದಾರೆ. ಅಕಾಲಿಕ ಹೆರಿಗೆ, ಅಸಹಜ ಗರ್ಭ, ವರ್ಣಿಸಲಾಗದ ವಿರೂಪ ಶಿಶುಗಳಿಗೆ ಜನ್ಮಕೊಟ್ಟಿದ್ದಾರೆ. ಮಹಿಳೆಯರ ಸಂತಾನೋತ್ಪತ್ತಿ ಅಂಗಗಳು ಸಂಪೂರ್ಣ ಹಾಳಾಗಿವೆ.

ನಾನೇ ಹೆತ್ತ ಮಗು, ಮಗುವೆಂದು ಗುರುತಿಸಲಾಗದಂತೆ ವಿರೂಪಗೊಂಡಿತ್ತು. ನನಗೆ ಒಟ್ಟು ೫ ಮಕ್ಕಳು. ಒಂದು ಮಗುವಿನ ದೈಹಿಕ ಬೆಳವಣಿಗೆ ಕುಂಠಿತವಾಗಿದೆ. ಇತ್ತೀಚೆಗೆ ನನ್ನ ಥೈರಾಯಿಡ್ ಗ್ರಂಥಿಯಲ್ಲಿ ಊತ ಕಾಣಿಸಿಕೊಂಡಿತು, ಪರೀಕ್ಷಿಸಿದ ವೈದ್ಯರು ಅದರ ಮೇಲೆ ನಿಗಾ ಇಡಬೇಕೆಂದು ಸೂಚಿಸಿದರು. ವೈದ್ಯರು ಮತ್ತು ಉತ್ತಮ ವೈದ್ಯಕೀಯ ಅನುಕೂಲಕ್ಕೋಸ್ಕರ ನಾನೀಗ ಹವಾಯಿಯಲ್ಲಿದ್ದೇನೆ.

ನಮ್ಮೆಲ್ಲರಿಗೂ ರೊಂಗೆಲಾಪ್ ದ್ವೀಪಕ್ಕೆ ಮರಳುವ ಬಯಕೆ ; ಆದರೆ ಮರಳಲಾಗುವುದಿಲ್ಲ. ಮಾನವ ವಾಸಕ್ಕೆ ಯೋಗ್ಯವಿಲ್ಲದಂತೆ ಅಲ್ಲಿನ ಮಣ್ಣು ವಿಕಿರಣದಿಂದ ಕಲುಷಿತಗೊಂಡಿದೆ. ೧೯೫೪ರಲ್ಲಿ ನಮ್ಮನ್ನ ಮಾತೃಭೂಮಿಯಿಂದ ತೆರವುಗೊಳಿಸಿದಾಗ, ಸಧ್ಯದಲ್ಲೇ ಇಲ್ಲಿಗೆ ಮರಳಿ ಬರುತ್ತೇವೆ ಎಂಬ ವಿಶ್ವಾಸವಿತ್ತು. ಆದರೆ ಹಾಗಾಗಲಿಲ್ಲ. ತಮ್ಮ ಮಾತೃಭೂಮಿ ಮೇಲೆ ಮತ್ತೆ ಕಾಲಿಡದಂತೆ ನಮ್ಮ ಅನೇಕ ಪೂರ್ವಿಕರು ಮತ್ತು ಹಿರಿಯರು ತೀರಿಕೊಂಡರು. ಒಂದಲ್ಲಾ ಒಂದು ದಿವಸ ರೊಂಗೆಲಾಪ್ ದ್ವೀಪ ಅಣುವಿಕಿರಣ ಮುಕ್ತವಾಗಿ, ನಾವು ಮರಳಿ ತಾಯ್ನಾಡಿಗೆ ಮರಳುವಂತಹ ಸುರಕ್ಷಿತ ಸ್ಥಳವಾಗುತ್ತದೆ ಎಂಬ ಭರವಸೆ ಹೃದಯದಲ್ಲಿ ಇನ್ನೂ ಹಸಿರಾಗಿದೆ.

ಮಾರ್ಷಲ್ ದ್ವೀಪಗಳಲ್ಲಿ ಪರಮಾಣು ಪರೀಕ್ಷೆ

ಮೂಲ : ರೋಸಾಲಿ ಬರ್ಟೆಲ್

೧೯೫೪ರ ಮಾರ್ಚ್ ೧ರಂದು ಪೆಸಿಫಿಕ್ ಸಾಗರದಲ್ಲಿ ಅಮೆರಿಕ ಮಿಲಿಟರಿ ನಡೆಸಿದ ಪರಮಾಣು ಪರೀಕ್ಷಾ ಸ್ಫೋಟ ಮಾರ್ಷಲ್ ದ್ವೀಪಗಳಲ್ಲಿ ಬಿಳಿ ವಿಕಿರಣಯುಕ್ತ ಪುಡಿ ಉದುರಿಸಿತು. ಈ ಸ್ಫೋಟ ೧೭ ಮೆಗಾಟನ್ ಸಾಮರ್ಥ್ಯದ್ದು. ೧೯೪೫ ಆಗಸ್ಟ್ ೬ ಮತ್ತು ೯ರಂದು ಜಪಾನಿನ ಹಿರೋಷಿಮಾ, ನಾಗಾಸಾಕಿ ಮೇಲೆ ಸಿಡಿಸಿದ ಬಾಂಬ್‌ಗಳಿಗಿಂತ ಸಾವಿರ ಪಟ್ಟು ಹೆಚ್ಚು ಬಲಶಾಲಿ ಹೈಡ್ರೋಜನ್ ಬಾಂಬ್. ಈ ಸ್ಫೋಟದಿಂದ ಮಾರ್ಷಲ್ ದ್ವೀಪವಾಸಿಗಳಲ್ಲಿ ಭಯಂಕರ ವಿಕಿರಣ ಸಂಬಂಧಿ ಕಾಯಿಲೆಗಳು ತಲೆದೋರಿದವು. ಇದೆಲ್ಲಾ ಅನಿರೀಕ್ಷಿತ, ಗಾಳಿಯ ದಿಕ್ಕು ಬದಲಾಗಿದ್ದೇ ಜನರ ಮೇಲಿನ ದುಷ್ಪರಿಣಾಮಕ್ಕೆ ಮುಖ್ಯ ಕಾರಣ ಎಂದಿತು ಅಮೆರಿಕ. ಆದರೆ ಅಮೆರಿಕ ಹವಾಮಾನ ತಜ್ಞರು ಇದನ್ನ ಅಲ್ಲಗಳೆದರು. ಸ್ಫೋಟದ ಸಮಯದಲ್ಲಿ ಹಾಗೂ ನಂತರ ದ್ವೀಪಗಳಲ್ಲಿ ನೆಲೆಗೊಂಡಿದ್ದ ಈ ತಜ್ಞರು ಎನ್ವೆಟಕ್‌ನಲ್ಲಿನ ತಮ್ಮ ಮಿಲಿಟರಿ ಅಧಿಕಾರಿಗಳಿಗೆ ಗಂಟೆಗೊಮ್ಮೆ ಹವಾಮಾನ ವರದಿ ರವಾನಿಸುತ್ತಿದ್ದರು.

ಬಿಕಿನಿ ದ್ವೀಪಗಳಿಂದ ಸುಮಾರು ೧೦೦ ಮೈಲಿ ದೂರದ ರೊಂಗೆಲಾಪ್ ವಾಸಿಗಳು ಈ ಸ್ಫೋಟದ ಪಾತ ಅನುಭವಿಸಿದ ಮೊದಲಿಗರು. ಸ್ಫೋಟದ ೪-೬ ಗಂಟೆಗಳೊಳಗೆ ಈ ಪಾತ ರೊಂಗೆಲಾಪ್ ದ್ವೀಪ ತಲುಪಿತ್ತು. ಮುಂದಿನ ಒಂದು ಗಂಟೆಯಲ್ಲಿ ರೊಂಗೆಲಾಪ್‌ನಲ್ಲಿದ್ದ ೨೮ ಅಮೆರಿಕನ್ ಹವಾಮಾನ ತಜ್ಞರನ್ನೂ ತಲುಪಿತ್ತು. ನಂತರ ಬಿಕಿನಿಯಿಂದ ೨೮೦ ಮೈಲಿ ದೂರವಿದ್ದ ಯುಟೆರಿಕ್ ತಲುಪಲು ೨೨ ಗಂಟೆ ತೆಗೆದುಕೊಂಡಿತ್ತು. ಈ ಸ್ಫೋಟ ರೊಂಗೆಲಾಪ್ ತೀರದಿಂದ ೧೦೦ ಮೈಲಿಗಳಷ್ಟು ದೂರದಲ್ಲಿ ಘಟಿಸಿದ್ದರಿಂದ ಹಿರೋಷಿಮಾ ನಾಗಸಾಕಿಗಳಲ್ಲಿ ಆದಂತೆ ಸ್ಫೋಟದ ನೇರ ಹೊಡೆತಕ್ಕೆ ಅಥವಾ ಅದರ ಬೆಂಕಿಗೆ ರೊಂಗೆಲಾಪ್‌ನ ಜನ ತುತ್ತಾಗಲಿಲ್ಲ.

ಇದರ ಮೇಲೆ ಮಿಲಿಟರಿ ಕಾವಲಿದ್ದುದರಿಂದ ಘಟಿಸಿದ ಯಾವುದೇ ಅನಾಹುತಕಾರಿ ಪ್ರಕರಣಗಳು ಮಾಧ್ಯಮಗಳಿಗೆ, ಸಾರ್ವಜನಿಕರಿಗೆ ತಿಳಿಯಲಿಲ್ಲ. ಅಣ್ವಸ್ತ್ರ ಪರೀಕ್ಷೆ ಬಗ್ಗೆ ಅಲ್ಲಿನ ಜನರಿಗೆ ಯಾವುದೇ ಸುಳಿವಿರಲಿಲ್ಲ. ಪರೀಕ್ಷಾ ನಂತರ ವಿಕಿರಣಕ್ಕೆ ತುತ್ತಾದ ಯಾರನ್ನೂ ಪರೀಕ್ಷಿಸಲಿಲ್ಲ.

ವಿಕಿರಣ ತೀಕ್ಷ್ಣವಾಗಿದ್ದು, ಗ್ಯಾಮಾ ಕಿರಣದ ಪರಿಮಾಣ ಯುಟಿರಿಕ್‌ನಲ್ಲಿ ೧೪, ರೊಂಗೆಲಾಪ್‌ನಲ್ಲಿ ೧೭೫ ರಮ್* ಇತ್ತು. ಒಬ್ಬ ನ್ಯೂಕ್ಲಿಯರ್ ಕಾರ್ಮಿಕನಿಗೆ ಒಂದು ವರ್ಷಕ್ಕೆ ೫ ರಿಂದ ೧೨ ರಮ್, ಸಾಮಾನ್ಯರಿಗೆ ವರ್ಷಕ್ಕೆ ೦.೫ ರೆಮ್ ವಿಕಿರಣ ತಡೆದುಕೊಳ್ಳುವ ಶಕ್ತಿ ಮಾತ್ರ ಇದೆ. ಈ ಪರಿಮಾಣದ ವಿಕಿರಣದಿಂದ ಅಂತಹ ಆರೋಗ್ಯ ಹಾನಿ ಇಲ್ಲ; ಇದು ಸುರಕ್ಷಿತ ಪರಿಮಾಣವೆಂದು ಅಣು ವಿಜ್ಞಾನಿಗಳು ಹೇಳುತ್ತಾರೆ. ಬಿಕಿನಿ ಹೈಡ್ರೋಜನ್ ಬಾಂಬ್ ಸ್ಫೋಟದ ಮೂಲಕ ಜಾಗತಿಕ ಅಣ್ವಸ್ತ್ರ ಸ್ಪರ್ಧೆ ಕಿಲೋಟನ್‌ನಿಂದ ಮೆಗಾ ಟನ್ ಶ್ರೇಣಿಗೆ ಏರಿತು. ಮಾರ್ಷಲ್ ದ್ವೀಪಗಳಲ್ಲಿ ಸಿಡಿಸಿದ ಬಾಂಬ್‌ನಿಂದ ಮೊದಲ ೫ ವರ್ಷಗಳವರೆಗೆ ವಿಕಿರಣಕ್ಕೆ ತುತ್ತಾದ ರೊಂಗೆಲಾಪ್ ಮಹಿಳೆಯರಲ್ಲಿ ಗರ್ಭಪಾತ, ಅವಧಿ ಪೂರ್ವ ಪ್ರಸವಗಳು ಸಾಮಾನ್ಯ ಕಾಯಿಲೆಗಳಾಗಿ ಪೀಡಿಸಿದವು. ಉಳಿದವರಲ್ಲಿ ಹೆಚ್ಚಿನವರು ಅಂಗ ಊನರಾದರು. ಇಂತಹ ಮಕ್ಕಳಲ್ಲಿ ಆರೋಗ್ಯದ ಅಸಹಜತೆ ಗುರುತಿಸಲು ಅಧ್ಯಯನಕಾರರಿಗೆ ೮ ವರ್ಷ ಬೇಕಾಯಿತು. ಸ್ಫೋಟದ ಬಗ್ಗೆ ಹೀಗೆ ಹೇಳಿದ್ದಾರೆ :

ಜಿರ್ಬ್ಯಾಟನ್ (೬೦ ವರ್ಷ) : ನಾವು ಬರುವ ವೇಳೆಗೆ ಬಹಳ ಜನ ಸಾಯುತ್ತಿದ್ದರು. ಅವರಲ್ಲಿ ಲಿಬಿಲಾ ಎನ್ನುವ ಮಹಿಳೆಯ ಕಂದು ಬಣ್ಣ ಕಪ್ಪಾಗಿ ನಂತರ ಬಿಳಿ ಬಣ್ಣವಾಯಿತು. ಆಕೆಯ ಮುಖದ ಚರ್ಮ ಬದಲಾಗಿದ್ದನ್ನು ಕಂಡ ಕೆಲವರು ಭಯಗೊಂಡರು. ಕೆಲವರು 'ಆಕೆಯ ಮುಖ ಈಗ ರಾಕ್ಷಸರಂತೆ ಕಾಣುತ್ತಿದೆ' ಎಂದರು. ಈ ವಿರೂಪನ್ನು ನಾನು ಎಂದೂ ಕಂಡಿರಲಿಲ್ಲ. ಆದರೆ ವರ್ಷಗಳ ಹಿಂದೆ ನಾನು ಮಜೂರಾದಲ್ಲಿದ್ದಾಗ ಜಪಾನಿ ಡಾಕ್ಟರುಗಳು ಹಿರೋಷಿಮಾದಲ್ಲಿ ವಿಕಿರಣಕ್ಕೆ ಬಲಿಯಾದ ಫೋಟೋ ತಂದಿದ್ದರು. ಲಿಬಿಲಾ ಸಾಯುವ ಮುನ್ನ ಆ ಫೋಟೋಗಳ ತರಹ ಕಂಡುಬಂದಳು.

ಎಜ್ರಾ ಲೆಬನ್ (೫೨ ವರ್ಷ) : ವಿಷಾನಿಲ ನಿಮ್ಮಿಂದ ದೂರ ಹೋಗಿಬಿಡುತ್ತದೆ ಎಂದು ಡಾ. ಕೋನಾರ್ಡ್ ಹೇಳಿದಾಗ ನಾನು ನಂಬಲಿಲ್ಲ. ಆ ವಿಷಾನಿಲ ಇನ್ನೂ ನಮ್ಮ ದ್ವೀಪದಲ್ಲಿದೆ. ಆ ಡಾಕ್ಟರು ಸತ್ಯ ಏನೆಂದು ನಮಗೆ ಹೇಳಲಿಲ್ಲ; ಇತ್ತ ನಿಜವಾಗಿ ಏನಾಗುತ್ತಿದೆ ಎಂದು ತಿಳಿಸಿ, ಅರ್ಥ ಮಾಡಿಕೊಳ್ಳಲೂ ನೆರವಾಗಲಿಲ್ಲ. ನಮ್ಮ ಜೀವನಾಧಾರವಾದ ಬೆಳೆಗಳು ನಾಶವಾಗಿವೆ, ಇದು ವಿಷಾನಿಲ ಕೃತ್ಯ ಎಂದು ನನ್ನ ನಂಬಿಕೆ. ಈಗ ನನ್ನ ಆರೋಗ್ಯ ಹದಗೆಟ್ಟಿದೆ. ಸಾಯುವವರೆಗೂ ಪ್ರತಿದಿನ ಮಾತ್ರೆ ನುಂಗಬೇಕು. ಅಮೆರಿಕದವರು ಬಂದು ನಮ್ಮ ಮೇಲೆ ಬಾಂಬ್ ಎಸೆದು ಹೋದರು, ನಿಧಾನವಾಗಿ ಕ್ಷೀಣಿಸುತ್ತಿದ್ದೇವೆ.

ಮೂಲ : **No Immediate Danger : Prognosis for a Radio Active Earth**

---

* REM = Radiation exposure per minute.

ಮಾನವ ಹಕ್ಕು : ಉಲ್ಲಂಘನೆಯ ಮುಂಚೂಣಿಯಲ್ಲಿ ಅಮೆರಿಕ

ಮಾಯ್‌ದಾ ಆಳ್ವರೆಸ್ ಸುದ್ರೆಸ್, ಕ್ಯೂಬಾ

ಫಿಡೆಲ್ ಕ್ಯಾಸ್ಟ್ರೋ, ಚೆ ಗೆವಾರ ನಾಯಕತ್ವದ ಕ್ಯೂಬಾದ, ೧೯೫೯ ಜನವರಿ ಕ್ರಾಂತಿ ಅಂತಾರಾಷ್ಟ್ರೀಯ ವಿದ್ಯಾಮಾನಗಳ ಪೈಕಿ ಪ್ರಮುಖವಾಗಿ ಕಾಣಿಸಿಕೊಂಡಿತು. ಅಮೆರಿಕ ಬೆಂಬಲಿತ ಪಲ್ಜೆನ್ಸಿಯೋ ಬಾಟಿಸ್ಟಾ ಎಂಬ ಸರ್ವಾಧಿಕಾರಿಯ ಆಡಳಿತವನ್ನು ಕಿತ್ತೆಸೆದು, ಅನ್ನ ಆಹಾರ, ಬಟ್ಟೆ, ವಸತಿ, ಶಿಕ್ಷಣ, ಉದ್ಯೋಗ ಮತ್ತು ಸಮಸ್ತ ಜನತೆಯ ಆರೋಗ್ಯದ ಬಗ್ಗೆ ಕಾಳಜಿ ವಹಿಸತೊಡಗಿತು. ಕ್ಯೂಬಾದ ಪಾಲಿಗೆ ಇದೊಂದು ಐತಿಹಾಸಿಕ ತಿರುವು.

ಕ್ರಾಂತಿ ನಂತರ ಕ್ಯೂಬಾ ಕೈಗೊಂಡ ಅನೇಕ ಕ್ರಮಗಳ ಪೈಕಿ ಒಂದಾಗಿದ್ದ ಭೂಸುಧಾರಣೆಯಿಂದ ತಕ್ಷಣ ಅಮೆರಿಕ ದೇಶಕ್ಕೆ ಇರುಸು ಮುರುಸಾಯಿತು. ೧೮೦೦ ಮತ್ತು ೧೯೦೦ರ ಮೊದಲ ಭಾಗದಲ್ಲಿ ಕ್ಯೂಬಾ ದೇಶದ ಬಹುಪಾಲು ಭೂ ಒಡೆತನ ಅಮೆರಿಕದ ಹಿತಾಸಕ್ತಿ ಕಾಯುವ ವ್ಯಕ್ತಿ ಮತ್ತು ಕಂಪನಿಗಳ ಹಿಡಿತದಲ್ಲಿತ್ತು. ಕ್ಯೂಬಾ ದೇಶದ ಜನತೆಗೆ ತಮ್ಮದೇ ಭೂಮಿಯ ವಿಷಯದಲ್ಲಿ ಯಾವುದೇ ಅಭಿಪ್ರಾಯವಿರದ ಪರಿಸ್ಥಿತಿ. ೧೯೫೯ರಲ್ಲಿ ಕ್ಯೂಬಾದೇಶದ ಶೇ. ೭೫ರಷ್ಟು ಭೂಮಿ ಪರದೇಶಿಗಳ ಒಡೆತನದಲ್ಲಿತ್ತು. ಅಮೆರಿಕ, ಕ್ಯೂಬಾ ದೇಶದಲ್ಲಿ ಹೊಂದಿದ್ದ ಭೂಮಿಯನ್ನ ಕ್ರಾಂತಿಕಾರಿ ಸರ್ಕಾರ ಮುಟ್ಟುಗೋಲು ಹಾಕಿಕೊಂಡಿತು ಅಥವಾ ರಾಷ್ಟ್ರೀಕರಣಗೊಳಿಸಿ ಪರಿಹಾರ ಘೋಷಿಸಿತು. ಪರಿಹಾರ ತಿರಸ್ಕರಿಸಿದ ಅಮೆರಿಕ ಸೇಡಿನಿಂದ ಆರ್ಥಿಕ ದಿಗ್ಬಂಧನ ವಿಧಿಸಿತು. ಕ್ಯೂಬಾದ ಎಡಪಂಥೀಯ ದೃಢತೆಯಿಂದಾಗಿ ಅದಾಗಲೇ ಕೋತಿಯ ವಕ್ರಮುಖವಿರಿಸಿಕೊಂಡಿದ್ದ ಅಮೆರಿಕಾಗೆ ಕ್ಯೂಬನ್ನರು ತಮ್ಮ ತಾಯ್ನೆಲದ ಹಕ್ಕು ತಮ್ಮದೇ ಎಂಬ ಸಹಜ ಸ್ವಾತಂತ್ರ್ಯದ ಹಾಗೂ ಆತ್ಮಗೌರವ ನಿಲುವು ತಳೆದದ್ದಂತೂ ಹೆಂಡ ಕುಡಿಸಿ, ಚೇಳು ಕುಟುಕಿದಂತಾಯಿತು. ಆಗ ಸೋವಿಯತ್ ಒಕ್ಕೂಟ ಕ್ಯೂಬಾದೊಂದಿಗೆ ಗೆಳೆತನ ಮತ್ತು ಆದ್ಯತೆಯ ವಾಣಿಜ್ಯ ಸಂಬಂಧ ಬೆಳೆಸಲು ಮುಂದಾಯಿತು. ಕ್ಯೂಬಾ ಒಪ್ಪಿಗೆ ಕೊಟ್ಟಿತು ; ನಾಲ್ಕು ದಶಕಗಳ ಕಾಲ ಕ್ಯೂಬಾ ಮತ್ತು ಅಮೆರಿಕ ನಡುವೆ ಈ ಒಂದೇ ಕಾರಣಕ್ಕಾಗಿ ವೈರತ್ವ ಮತ್ತು ಸಂಘರ್ಷ ಬೆಳೆದುಬಂತು.

೧೯೮೯ರಲ್ಲಿ ಸೋವಿಯತ್ ಒಕ್ಕೂಟದ ವಿಘಟನೆ ನಂತರ ಅಮೆರಿಕ ಕ್ಯೂಬಾ ಹೊರತಾಗಿ ಕಮ್ಯೂನಿಸ್ಟ್ ರಾಷ್ಟ್ರಗಳೊಂದಿಗೆ ಗೆಳೆತನಕ್ಕೆ ಮುಂದಾಯಿತು. ವಿಶ್ವದಲ್ಲೇ ಬಹುದೊಡ್ಡ ಕಮ್ಯೂನಿಸ್ಟ್ ರಾಷ್ಟ್ರವಾಗಿರುವ ಚೀನಾಗೆ ತುಂಬಾ ಹತ್ತಿರದ ಗೆಳೆಯನ ಸ್ಥಾನ ಕೊಟ್ಟಿತು ! ದೀರ್ಘಕಾಲ ಯುದ್ಧಮಾಡಿ, ತಾನು ಸರ್ವನಾಶ ಮಾಡಿದ ವಿಯೆಟ್ನಾಂನ ವಿರುದ್ಧ ವಿಧಿಸಿದ್ದ ದಿಗ್ಬಂಧನವನ್ನು ಕೂಡ ತೆರವು ಮಾಡಿತು. ಎಲ್ಲ ದೇಶಗಳ ಜೊತೆ ಹೊಸ ಸ್ನೇಹಕ್ಕೆ ಕೈಚಾಚಿದ ಅಮೆರಿಕ ಕ್ಯೂಬಾ ವಿರುದ್ಧ ಆರ್ಥಿಕ ದಿಗ್ಬಂಧನವನ್ನ ಕಠಿಣಗೊಳಿಸಿತು. 'ಕ್ಯೂಬಾದಲ್ಲಿ ಪ್ರಜಾಸತ್ತೆ-೧೯೯೨' ಎಂಬ ವೈರುಧ್ಯದ ಕಾನೂನು ಜಾರಿಗೆ ತಂದು ಅಮೆರಿಕದ ಸಹಚರ ದೇಶಗಳ ಜೊತೆಗೂ ಕ್ಯೂಬಾ ವ್ಯಾಪಾರ ವಹಿವಾಟು ನಡೆಸದಂತೆ ತಾಕೀತು ಮಾಡಿತು ; ಇದರಿಂದಾಗಿ ಕ್ಯೂಬಾ ೭೦೦ ಮಿಲಿಯನ್ ಡಾಲರ್‌ಗಳಷ್ಟು ವಹಿವಾಟಿನಿಂದ ವಂಚಿತವಾಯಿತು. 'ಹೆಮ್ಸ್‌ಬರ್ಟನ್' ಎಂಬ ಕಾನೂನು ಜಾರಿಗೆ ತಂದು, ದಿಗ್ಬಂಧನದ ಯಾವುದೇ ಅಂಶವನ್ನು ಸಡಿಲಿಸಲು ಅಮೆರಿಕದ ಅಧ್ಯಕ್ಷರಿಗೆ ಇದ್ದ ವಿವೇಚನಾಶೀಲ ಅಧಿಕಾರವನ್ನ ಕೂಡ ಮೊಟಕುಗೊಳಿಸಿತು. ಕ್ಯೂಬಾದಲ್ಲಿ ಎಂತಹ ಆಡಳಿತವಿರಬೇಕೆಂಬುದು ಕ್ಯೂಬಾ ಜನತೆ ತೀರ್ಮಾನಿಸಿರುವ ಸಂಗತಿ. ಇದರಲ್ಲಿ ಯಾವುದೇ ಸಂಬಂಧವಿಲ್ಲದ ಅಮೆರಿಕಕ್ಕೇನು ಕೆಲಸ ? ಅದು ಯಾಕೆ ತನ್ನ ಉದ್ದ ಮೂಗು ತೂರಿಸಬೇಕು ?

ಮೊದಲು ಕ್ಯೂಬಾ, ಸೋವಿಯತ್ ಒಕ್ಕೂಟದೊಂದಿಗೆ ಹೊಂದಿದ್ದ ಗೆಳೆತನ ಮುಂದುಮಾಡಿ ಆರ್ಥಿಕ ದಿಗ್ಬಂಧನ ಸಮರ್ಥಿಸಿಕೊಳ್ಳುತ್ತಿದ್ದ ಅಮೆರಿಕ, ನಂತರದ ದಿವಸಗಳಲ್ಲಿ ದ. ಅಮೆರಿಕ ಮತ್ತು ಆಫ್ರಿಕಾಗಳಲ್ಲಿ ಕ್ಯೂಬಾ ಸಶಸ್ತ್ರ ಕ್ರಾಂತಿಕಾರಿ ಹೋರಾಟ ಪ್ರಚೋದಿಸುತ್ತಿದೆ ಎಂದು ಬುಡಬುಡಿಕೆಯ ಸುಳ್ಳು ಹೇಳುತ್ತ ದಿಗ್ಬಂಧನವನ್ನು ಸಮರ್ಥಿಸಿಕೊಳ್ಳತೊಡಗಿತು ; ಇಂದು ಅಂತಹ ಯಾವ ಹೋರಾಟಗಳೂ ನಡೆಯುತ್ತಿಲ್ಲ. ನಂತರವಂತೂ ಕ್ಯೂಬಾದೊಂದಿಗೆ ಸಂಬಂಧ ಸುಧಾರಣೆಗೆ ಮುಂಚೆ ಅಲ್ಲಿನ ಎಡಪಂಥೀಯ ಸರ್ಕಾರವನ್ನ ಕಿತ್ತೆಸೆಯಬೇಕು ಎನ್ನತೊಡಗಿತು.

ಈಗ ಅಮೆರಿಕ ಆರ್ಥಿಕ ದಿಗ್ಬಂಧನವನ್ನ ವೈಚಾರಿಕವಾಗಿ ಸಮರ್ಥಿಸಿಕೊಳ್ಳಲು, ಜಗತ್ತಿನ ಯಾವುದೇ ದೇಶಗಳಲ್ಲೂ ಆಗಿರದಷ್ಟು ಘೋರ ಮಾನವಹಕ್ಕುಗಳ ಉಲ್ಲಂಘನೆ ಕ್ಯೂಬಾ ದೇಶದಲ್ಲಿ ಮಾತ್ರ ಆಗಿಬಿಟ್ಟಿದೆ ಅಂತ ತಗಡು ಬಡಿದುಕೊಂಡು ತಿರುಗಾಡುತ್ತಿದೆ ! ಎಲ್ಲ ರೀತಿಯ ನರಮೇಧ, ಕಿರುಕುಳ, ಜನತೆಯ ಕಣ್ಮರೆ, ಮಕ್ಕಳು, ಮಹಿಳೆಯರ ನಿಂದನೆ, ಅಲ್ಪಸಂಖ್ಯಾತರ ದಮನ ಈ ಎಲ್ಲವೂ ನಿರಾಂತಕವಾಗಿ ಮತ್ತು ವ್ಯವಸ್ಥಿತವಾಗಿ ನಡೆಯುತ್ತಿರುವ ದೇಶಗಳ ಜೊತೆ ಅಮೆರಿಕಾದ ಸ್ನೇಹ ಚೆನ್ನಾಗೇ ಇದೆ. ಇಸ್ರೇಲ್‌ನೊಂದಿಗಿನ ಅದರ ಸ್ನೇಹದ ಉದಾಹರಣೆಯೇ ಈ ಮಾತಿಗೆ ನಿದರ್ಶನ. ಆದರೆ ಈ ಯಾವ ವಿಷಯದಲ್ಲೂ ಮಾನವ ಹಕ್ಕು ಸಂಘಟನೆಗಳು ಕ್ಯೂಬಾ ಕಡೆಗೆ ಬೆರಳು ತೋರಿಲ್ಲ ; ಇದು ಗಮನಾರ್ಹ. ಆದರೂ ಅಮೆರಿಕ ತಗಡು ಬಡಿಯುವುದನ್ನ ನಿಲ್ಲಿಸಿಲ್ಲ. ಕ್ಯೂಬಾ ದೇಶ ಅಮೆರಿಕಾದ ರಾಷ್ಟ್ರೀಯ ಭದ್ರತೆಗೇನಾದರೂ ಬೆದರಿಕೆ ಒಡ್ಡಿದೆಯಾ ಅಂದರೆ ಅದೂ ಇಲ್ಲ, ಅಷ್ಟೇಕೆ ಕ್ಯೂಬಾ ತನ್ನ ರಕ್ಷಣೆಗಾಗಿ ೧ ವರ್ಷ ಕಾಲ ಖರ್ಚು ಮಾಡುವಷ್ಟು ಹಣವನ್ನ, ಅಮೆರಿಕ ರಕ್ಷಣಾ ಇಲಾಖೆ ಕೇವಲ ೧೨ ಗಂಟೆಗಳಲ್ಲಿ ಖರ್ಚು ಮಾಡುತ್ತಿದೆ ಅಂತಾ ರಕ್ಷಣಾ

ಮಾಹಿತಿ ಅಧ್ಯಯನ ಕೇಂದ್ರದ ಅಂಕಿಅಂಶಗಳೇ ಹೇಳುತ್ತವೆ. ಆದರೂ ಜಗತ್ತು ಅಮೆರಿಕನ್ ಮಾಧ್ಯಮಗಳ ತಗಡು ನೈತಿಕತೆಯನ್ನೆ ನಂಬುವಂತಾಗಿರುವುದು ದುರಂತವೇ ಸರಿ.

ಇಷ್ಟೆಲ್ಲ ಅಮೆರಿಕನ್ ಕಾಟಗಳ ನಡುವೆಯೂ ಸರ್ಕಾರಿ ಬೆಂಬಲಿತ ಕೃಷಿವ್ಯವಸ್ಥೆ ಮತ್ತು ಪಡಿತರ ವ್ಯವಸ್ಥೆ ಮೂಲಕ ಸಮಸ್ತ ಜಗತ್ತಿನ ಅಭಿವೃದ್ಧಿಶೀಲ ರಾಷ್ಟ್ರಗಳ ಪೈಕಿ ಹಸಿವು ಮತ್ತು ಪೋಷಕಾಂಶ ಕೊರತೆಯನ್ನ ಸಂಪೂರ್ಣ ನಿರ್ಮೂಲನ ಮಾಡಿದ ಮೊದಲ ದೇಶ ಕ್ಯೂಬಾ. ಕ್ಯೂಬಾದ ಸಾರ್ವಜನಿಕ ಆರೋಗ್ಯ ವ್ಯವಸ್ಥೆ, ಕೌಟುಂಬಿಕ, ಪ್ರಾಥಮಿಕ ವೈದ್ಯಕೀಯ ಕಾರ್ಯಕ್ರಮ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗಿಂತ ಮಿಗಿಲಾದ ವೈದ್ಯಕೀಯ ಸೇವೆಯನ್ನ ಒದಗಿಸುತ್ತಿವೆ ; ಇದನ್ನ ವಿಶ್ವಸಂಸ್ಥೆ ಜಗತ್ತಿನ ಮಾದರಿ ವೈದ್ಯಕೀಯ ವ್ಯವಸ್ಥೆ ಎಂದು ಪ್ರಶಂಸಿಸಿದೆ. ಇತರೆ ಅಭಿವೃದ್ಧಿಶೀಲ ರಾಷ್ಟ್ರಗಳನ್ನ ಪೀಡಿಸುವ ಅಂಟುರೋಗಗಳು ಮತ್ತು ಉಪದ್ರವಗಳನ್ನ ಕ್ಯೂಬಾ ಸಂಪೂರ್ಣವಾಗಿ ನಿಗ್ರಹಿಸಿದೆ. ಕ್ಯೂಬನ್ನರು ಈಗ ಸಾವಿಗೊಳಗಾಗುತ್ತಿರುವುದು, ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲೂ ಇರುವ ಹೃದಯಬೇನೆ ಮತ್ತು ಕ್ಯಾನ್ಸರ್ ರೋಗಗಳಿಂದ ಮಾತ್ರ.

ಸೋವಿಯತ್ ಒಕ್ಕೂಟ ಕುಸಿದು ಅಮೆರಿಕಾದ ಆರ್ಥಿಕ ದಿಗ್ಬಂಧನ ಮತ್ತಷ್ಟು ಕಠೋರ ರೂಪ ತಾಳಿರುವುದರಿಂದ ಮತ್ತು ಕೆಲವು ಆಂತರಿಕ ಅಸಮರ್ಥತೆ ದೆಸೆಯಿಂದಾಗಿ ಕ್ಯೂಬಾ ಆಹಾರ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಸಾಧಿಸಿದ್ದ ವಿಸ್ಮಯಕಾರಿ ಬೆಳವಣಿಗೆಯಲ್ಲಿ ಈಗ ಕೊಂಚ ಮಟ್ಟಿಗಿನ ಹೊಂದಾಣಿಕೆಗಳು ಕಾಣಬರುತ್ತಿವೆ. ಅಮೆರಿಕ ವಿಧಿಸಿರುವ ಆರ್ಥಿಕ ದಿಗ್ಬಂಧನ ತುಂಬಾ ಕಠೋರ ಯಾಕೆಂದರೆ ಅಮೆರಿಕಾದ ಕಂಪನಿಗಳಷ್ಟೇ ಅಲ್ಲ, ಅದರ ಸಹಚರರು ಕೂಡ ಕ್ಯೂಬಾ ದೇಶಕ್ಕೆ ಆಹಾರ ಪದಾರ್ಥ ಮತ್ತು ಔಷಧಿಗಳನ್ನ ಮಾರುವಂತಿಲ್ಲ ; ಈ ದಿಗ್ಬಂಧನದ ದೆಸೆಯಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಸಿಗುವ ಅರ್ಧದಷ್ಟು ಔಷಧಿಗಳನ್ನ ಕ್ಯೂಬಾ ಖರೀದಿಸುವಂತಿಲ್ಲ. ಕ್ಯೂಬಾ ಜನತೆಗ್ಯಾಕೆ ಈ ಶಿಕ್ಷೆ ? ಈ ವಿಷಯದಲ್ಲಿ ಇತರ ದೇಶಗಳು ಅಮೆರಿಕದೊಂದಿಗೆ ಯಾಕೆ ಸಹಕರಿಸಬೇಕು ?

ಕ್ಯೂಬಾದಲ್ಲಿ ೧೯೯೧ರಲ್ಲಿ ಸಿಗುತ್ತಿದ್ದ ೧೩೦೦ ರೀತಿಯ ಔಷಧಿಗಳ ಪೈಕಿ ಈಗ ವೈದ್ಯರಿಗೆ ಸಿಗುತ್ತಿರುವುದು ೮೯೦ ಮಾತ್ರ. ಇವುಗಳ ಪೈಕಿ ಕ್ಯಾನ್ಸರ್, ಮಧುಮೇಹ, ಹೃದಯಬೇನೆ ಮತ್ತು ಅಸ್ತಮಾ ಕಾಯಿಲೆಗಳನ್ನ ಗುಣಪಡಿಸುವ ಔಷಧಿಗಳಲ್ಲಿ ಕೆಲವು ಆಗಾಗ ಮಾತ್ರ ಸಿಗುತ್ತವೆ. ಕ್ಯೂಬಾದ ನೀರುಸರಬರಾಜು ವ್ಯವಸ್ಥೆ ಈಗ ತೀರಾ ಹದಗೆಟ್ಟಿದ್ದು, ನೀರಿನಿಂದ ವಿಷಮಶೀತ ಜ್ವರ ಮತ್ತು ಹೆಪಟೈಟಿಸ್ ರೋಗಗಳು ಹೆಚ್ಚುತ್ತಿವೆ. ಪೋಷಕಾಂಶಗಳ ಕೊರತೆ ಕಂಡುಬಂದಿದೆ ; ಗರ್ಭಿಣಿ ಮಹಿಳೆಯರು ತೀವ್ರ ಸಮಸ್ಯೆ ಎದುರಿಸುತ್ತಿದ್ದಾರೆ ಮತ್ತು ಹುಟ್ಟುವ ಮಕ್ಕಳ ತೂಕ ಇಳಿಕೆ ಕಂಡುಬಂದಿದೆ. ೧೯೮೯-೧೯೯೩ರ ಅವಧಿಯಲ್ಲಿ ಮನುಷ್ಯರು ಸೇವಿಸುವ ಆಹಾರದ ಕ್ಯಾಲೊರಿ ಪ್ರಮಾಣದಲ್ಲಿ ಶೇ. ೩೩ರಷ್ಟು ಇಳಿಕೆಯಾಗಿದೆ. ಆಹಾರದ ಕೊರತೆಗೂ, ೧೯೯೩-೯೪ರಲ್ಲಿ ಕಾಣಿಸಿಕೊಂಡ ನರದೌರ್ಬಲ್ಯ ಸಮಸ್ಯೆಗೂ ನೇರ ಸಂಬಂಧವಿದೆ. ಪತ್ತಾರು ಸಾವಿರ ಜನರ ಮೇಲೆ ಇದರ ಪರಿಣಾಮ ಉಂಟಾಗಿದ್ದು ೨೦೦ ಮಂದಿ ಶಾಶ್ವತವಾಗಿ ದೃಷ್ಟಿ ಕಳೆದುಕೊಂಡಿದ್ದಾರೆ.

ಕ್ಯೂಬಾ ದೇಶವನ್ನ ಕೇವಲ ತನ್ನ ಸಾಮ್ರಾಜ್ಯಶಾಹಿ ದರ್ಪದಿಂದ ದಂಡಿಸಲು ಹೊರಟ ಅಮೆರಿಕ ತನ್ನ ಸಂವಿಧಾನ ಮತ್ತು ಅಂತಾರಾಷ್ಟ್ರೀಯ ಕಾನೂನುಗಳನ್ನೇ ಉಲ್ಲಂಘಿಸಿಕೊಂಡಿದೆ ;

ಅಮೆರಿಕಾದ ನಾಗರಿಕರು ಕ್ಯೂಬಾಗೆ ಪ್ರಯಾಣ ಮಾಡುವಂತಿಲ್ಲ ; ಯಾವುದೇ ರೀತಿಯ ಸಾಮಾಜಿಕ, ಶೈಕ್ಷಣಿಕ ಜವಾಬ್ದಾರಿ ಇರುವ ಕೆಲಸಗಳಿಗಾಗಿ ಕ್ಯೂಬಾದಲ್ಲಿ ಹಣ ಖರ್ಚು ಮಾಡುವಂತಿಲ್ಲ ; ಹಾಗೆ ಮಾಡುವುದಾದರೆ ಅಮೆರಿಕ ಸರ್ಕಾರದಿಂದ ವಿಶೇಷ ಅನುಮತಿ ಪಡೆದುಕೊಳ್ಳಬೇಕು ! ಈ ದಿಗ್ಬಂಧನಗಳನ್ನ ಉಲ್ಲಂಘಿಸಿದ ಅಮೆರಿಕನ್ ನಾಗರಿಕರಿಗೆ ಭಾರಿ ಪ್ರಮಾಣದ ದಂಡ ಮತ್ತು ಸೆರೆವಾಸ ವಿಧಿಸಲಾಗುತ್ತದೆ. ಅಮೆರಿಕ ದೇಶದ ಸುಮಾರು ೫೦ ಸಂಘ ಸಂಸ್ಥೆಗಳು, 'ನಮ್ಮ ಪ್ರಯಾಣದ ಹಕ್ಕು' ಎಂಬ ಚಳುವಳಿ ನಡೆಸಿ ಅಮೆರಿಕಾದ ನೀತಿಯನ್ನ ಪ್ರಶ್ನಿಸಿವೆ ; ಈ ಸಂಬಂಧದಲ್ಲಿ ಅಮೆರಿಕ ಸರ್ಕಾರವನ್ನ ನ್ಯಾಯಾಲಯದ ಕಟಕಟೆಗೂ ಎಳೆದುತಂದಿವೆ. ಅಮೆರಿಕ ಸರ್ಕಾರ ತಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಗೆಳೆತನದ ಸ್ವಾತಂತ್ರ್ಯ ಕಿತ್ತುಕೊಂಡಿದೆ ಮತ್ತು ಅರಿಯುವ ಹಕ್ಕನ್ನೇ ಮೊಟಕುಗೊಳಿಸಿದೆ ಎಂದು ಆಪಾದಿಸಿವೆ.

ಅಮೆರಿಕದ ಖಜಾನೆಯ ವಿದೇಶಿ ಆಸ್ತಿಪಾಸ್ತಿ ನಿಯಂತ್ರಣ ಇಲಾಖೆ ತಮ್ಮ ಪ್ರಯಾಣದ ಮೇಲೆ ಅನ್ಯಾಯದ ನಿರ್ಬಂಧಗಳನ್ನ ಹೇರಿ, ತಾರತಮ್ಯ ನೀತಿ ಅನುಸರಿಸುತ್ತಿದೆ ಎಂದು ಆಪಾದಿಸಿದ್ದಾರೆ. ಅಮೆರಿಕ ದೇಶದ 'ಗ್ಲೋಬಲ್ ಎಕ್ಸ್‌ಚೇಂಜ್ ಡಾಟ್ ಕಾಮ್' ಮತ್ತು 'ಪ್ಯಾಸ್ಟರ್ ಫಾರ್ ಪೀಸ್' ಮುಂತಾದ ಅಂತಾರಾಷ್ಟ್ರೀಯ ಸಂಸ್ಥೆಗಳು ಕ್ಯೂಬಾ ದೇಶಕ್ಕೆ ಶೈಕ್ಷಣಿಕ ಮತ್ತು ಮಾನವೀಯ ಉದ್ದೇಶಗಳಿಗಾಗಿ ಕೈಗೊಂಡ ಪ್ರಯಾಣ ಮುಂದು ಮಾಡಿ ವಿದೇಶಿ ಆಸ್ತಿ ನಿಯಂತ್ರಣ ಇಲಾಖೆ ಕಾನೂನು ಕ್ರಮ ಜರುಗಿಸಲು ಪ್ರಯತ್ನ ನಡೆಸಿತ್ತು.

ಕೃಷಿ ಸಲಕರಣೆ, ಔಷಧಿ, ವಿದ್ಯುತ್ ಮತ್ತು ಕೈಗಾರಿಕಾ ಉತ್ಪನ್ನಗಳಿಗಾಗಿ ಆಧುನಿಕ ತಂತ್ರಜ್ಞಾನವನ್ನ ಕೊಳ್ಳಲು ಆರ್ಥಿಕ ದಿಗ್ಬಂಧನ ಅಡಚಣೆ ಉಂಟು ಮಾಡುತ್ತಿರುವುದರಿಂದ, ಕ್ಯೂಬಾದಲ್ಲಿ ೩೫೦೦೦ ವಿಜ್ಞಾನಿಗಳು ೨೦೦ ವೈಜ್ಞಾನಿಕ ಸಂಸ್ಥೆಗಳಲ್ಲಿ ಬದಲಿ ತಂತ್ರಜ್ಞಾನಗಳನ್ನ ರೂಪಿಸುತ್ತಿದ್ದಾರೆ. ಬದಲಿ ತಂತ್ರಜ್ಞಾನಗಳ ಮೂಲಕ ಕ್ಯೂಬಾ ಈ ದಶಕದಲ್ಲಿ ತಾಳಿ ಬಾಳುವ ಅಭಿವೃದ್ಧಿ ಮಾದರಿಗಳನ್ನ ರೂಪಿಸಿ ಗಣನೀಯ ಸಾಧನೆಗಳನ್ನ ಮಾಡಿದೆ. ಕ್ಯೂಬಾದ ಈ ದೇಸೀ ತಂತ್ರಜ್ಞಾನಗಳ ಆವಿಷ್ಕಾರಕ್ಕೆ ಕಾರಣವಾಗಿರುವಂತಹುದು ನಿಜವಾದ ಬದುಕಿನ ಅದರ ಅವಶ್ಯಕತೆಗಳು. ಅಲ್ಲಿ ಅಮೆರಿಕದ ಅಥವ ಯುರೋಪಿನ ಅಸಹ್ಯ ಗ್ರಾಹಕ ಸಂಸ್ಕೃತಿಯ ವಿಕೃತಗಳೇ ಇಲ್ಲವಲ್ಲ !

ಕ್ಯೂಬಾದ ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ ಸಚಿವಾಲಯದ ಹೇಳಿಕೆ ಹೀಗಿದೆ : ದಿಗ್ಬಂಧನದ ಈ ವಿಶೇಷ ಅವಧಿಗೆ ಮುಂದೊಂದು ದಿನ ನಾವು ಸ್ಮಾರಕ ಕಟ್ಟಬೇಕಾಗಬಹುದು ; ಯಾಕೆಂದರೆ ನಮ್ಮ ಆಹಾರ, ಔಷಧಿ ಮತ್ತು ವಿದ್ಯುತ್ ಅವಶ್ಯಕತೆಗಳನ್ನ ಭರಿಸಿಕೊಳ್ಳಲು ನಾವು ಸುಸ್ಥಿರ ದೇಸಿ ವಿಧಾನ ಮತ್ತು ತಂತ್ರಜ್ಞಾನಗಳನ್ನ ಕಂಡುಕೊಳ್ಳುವಂತೆ ಇದು ಒತ್ತಾಸೆ ಕೊಟ್ಟಿದೆ.

ಕ್ಯೂಬಾ ತನ್ನ ಹೊಲ, ಗದ್ದೆ, ತೋಟಗಳನ್ನ ಸಾವಯವ ಕೃಷಿಗೆ ಪರಿವರ್ತಿಸಿಕೊಂಡಿದೆ ; ಸಾವಯವ ಕೃಷಿಯಲ್ಲಿ ಯಾವ ದೇಶವೂ ಈ ಪ್ರಮಾಣದ ಪ್ರಯತ್ನ ನಡೆಸಿಲ್ಲ. ಕ್ಯೂಬಾಗೆ ಇನ್ನಷ್ಟು ವಿಶೇಷ ತಂತ್ರಜ್ಞಾನ ಸೌಲಭ್ಯ ಇದ್ದಿದ್ದರೆ ಕಬ್ಬಿನ ಸಿಪ್ಪೆಯಿಂದ ತನಗಾಗಿ ಮಿಗುವಷ್ಟು ವಿದ್ಯುತ್ ತಯಾರಿಸುವ ಸಾಮರ್ಥ್ಯ ಸಿಕ್ಕಂತಾಗುತ್ತಿತ್ತು ! ೧೬೦ ಸಕ್ಕರೆ ಕಾರ್ಖಾನೆಗಳು ಈ ವಿಧಾನದಿಂದ ವಿದ್ಯುತ್ ತಯಾರಿಸಿ ಸ್ವಾವಲಂಬನೆ ಸಾಧಿಸಿವೆ. ಕ್ಯೂಬಾ ತನ್ನ ವಿದ್ಯುತ್ ಉತ್ಪಾದನೆ ವಿಸ್ತರಿಸಿಕೊಳ್ಳುವ ಅಧ್ಯಯನ ನಡೆಸಲು ವಿಶ್ವಸಂಸ್ಥೆಯ ಸಹಾಯಧನ ಪಡೆದುಕೊಂಡಿದೆ.

'ಕ್ಯೂಬಾ ಸೋಲಾರ್' ಎಂಬ ಸ್ವಯಂ ಸೇವಾ ಸಂಸ್ಥೆಯಲ್ಲಿ ೪೦೦ ವಿಜ್ಞಾನಿ-ತಂತ್ರಜ್ಞರು ಕೆಲಸ ಮಾಡುತ್ತಿದ್ದು, ಬೆಟ್ಟದ ತಪ್ಪಲುಗಳಲ್ಲಿರುವ ೩೦೦ ವೈದ್ಯಕೀಯ ಕೇಂದ್ರಗಳ ಮೇಲೆ ಸೌರವಿದ್ಯುತ್ ಉಪಕರಣಗಳನ್ನ ಅಳವಡಿಸಿದ್ದಾರೆ ; ಇಡೀ ಮ್ಯಾಗ್ಡಲೀನ ಗ್ರಾಮ ಸೌರವಿದ್ಯುತ್ ಶಕ್ತಿಯಿಂದ ಸ್ವಾವಲಂಬನೆಯ ಬದುಕು ರೂಪಿಸಿಕೊಂಡಿದೆ.

ಕ್ಯೂಬಾದ ವೈದ್ಯರುಗಳು ನೈಸರ್ಗಿಕ ಮತ್ತು ಬದಲಿ ವೈದ್ಯಕೀಯ ವಿಧಾನಗಳನ್ನ ಆವಿಷ್ಕರಿಸುವುದನ್ನ ಸರ್ಕಾರ ಉತ್ತೇಜಿಸುತ್ತಿದೆ ; ಸುಮಾರು ೬೦ ದೇಸಿ ಸಸ್ಯಗಳ ಔಷಧಿ ಗುಣಗಳನ್ನ ಈಗಾಗಲೇ ಅವರು ಖಚಿತಪಡಿಸಿದ್ದಾರೆ. ಕಳೆದ ದಶಕದಲ್ಲಿ ಕ್ಯೂಬಾದ ಪ್ರಮುಖ ನಗರ ಪ್ರದೇಶಗಳಲ್ಲಿ ಗಿಡಮೂಲಿಕೆಯ ಔಷಧಿ ಉಪಚಾರ, ಆಕ್ಯುಪಂಕ್ಚರ್, ಹೋಮಿಯೋಪಥಿ ಮತ್ತು ಮನಸು-ಶರೀರ ಉಪಚಾರ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಬದುಕಿನ ಶುದ್ಧ ನೈತಿಕತೆ ಮತ್ತು ಮಣಿಯದ ಆತ್ಮಗೌರವವೊಂದೇ ಕ್ಯೂಬಾದ ಶಕ್ತಿ ಮತ್ತು ಜೀವಸೆಲೆ. ಅಮೆರಿಕಾಗೆ ಯಾ ಅಮೆರಿಕನ್ನರಿಗೆ ಇಂದು ಈ ಕಷ್ಟಾರ್ಜಿತದ ಮನುಷ್ಯ ಹೆಮ್ಮೆ ಉಳಿದಿದೆಯೇ ? ನಮಗೆ ಆ ಹೆಮ್ಮೆ ಇದೆ.

ಅಮೆರಿಕದ 'ದಾಳಿಕೋರರಲ್ಲದ ಗುರಿ' : ಕ್ಯೂಬಾ

ಟಿಪ್ಪಣಿ

ಅಮೆರಿಕದ ಆರ್ಥಿಕ ದಿಗ್ಬಂಧನ ಜನತೆ ಮೇಲೆ ಬೀರಿರುವ ಪರಿಣಾಮಗಳ ಬಗ್ಗೆ ಕ್ಯೂಬನ್ ಮಹಿಳೆಯರು ಇಲ್ಲಿ ಪ್ರತಿಕ್ರಿಯಿಸಿದ್ದಾರೆ. ದಿಗ್ಬಂಧನದ ನರಮೇಧಿ ಸ್ವಭಾವ ; ಕ್ಯೂಬಾ ವಿರುದ್ಧ ಜೈವಿಕ, ಅಣುಜೈವಿಕ ಯುದ್ಧ; ದಿಗ್ಬಂಧನ ಕಠಿಣಗೊಳಿಸುವ ಅಮೆರಿಕಾ ಕಾಯಿದೆಗಳು ; ಕ್ಯೂಬನ್ ಅಡ್ಜಸ್ಟ್‌ಮೆಂಟ್ ಆಕ್ಟ್‌ನ ಪರಿಣಾಮಗಳು; ಕ್ಯೂಬಾದ ಮಹಿಳೆಯರ ಚೈತನ್ಯಶೀಲ ಪ್ರತಿರೋಧ ಇತ್ಯಾದಿಗಳ ಕುರಿತು. ಕ್ಯೂಬಾ ದೇಶದ ಮೇಲೆ ಏಕಪಕ್ಷೀಯ ಆರ್ಥಿಕ ದಿಗ್ಬಂಧನ ವಿಧಿಸಿರುವ ಅಮೆರಿಕದ ನೀತಿ ಮಾನವ ವಿರೋಧಿ, ಅಂತಾರಾಷ್ಟ್ರೀಯ ಕಾನೂನು ಉಲ್ಲಂಘನೆ ಮತ್ತು ನರಮೇಧ ಪ್ರವೃತ್ತಿಯದು.

ಕ್ಯೂಬಾ ವಿರುದ್ಧ ಅಮೆರಿಕ ಸರ್ಕಾರಿ ಭಯೋತ್ಪಾದನೆ ಮತ್ತು ಆರ್ಥಿಕ ದಿಗ್ಬಂಧನ :

ಅಮೆರಿಕದ ನಿಲುವು ಸರ್ಕಾರಿ ಭಯೋತ್ಪಾದನೆ ; ಈ ರೀತಿಯ ಸರ್ಕಾರಿ ಭಯೋತ್ಪಾದನೆ ಕ್ಯೂಬಾದ ಮೇಲೆ ೪೦ ವರ್ಷಗಳಿಂದ ನಡೆಯುತ್ತಾ ಬಂದಿದೆ. ಈ ಕುರಿತ ತಜ್ಞ ಸಾಕ್ಷಿಗಳು ಮತ್ತು ಕ್ಯೂಬಾದ ಮಹಿಳೆಯರ ವೈಯಕ್ತಿಕ ಸಾಕ್ಷಿಗಳು, ಕ್ಯೂಬಾ ದೇಶ ಮತ್ತು ಅಲ್ಲಿನ ಜನತೆ ಮೇಲಿನ ಅಮೆರಿಕದ ಸರ್ಕಾರಿ ಭಯೋತ್ಪಾದನೆಯನ್ನು ಖಚಿತಪಡಿಸಿವೆ. ೧೯೫೯ರಿಂದ ಅಮೆರಿಕ ಕ್ಯೂಬಾದ ಮೇಲೆ ಆರ್ಥಿಕ ದಿಗ್ಬಂಧನ, ಸಾಂಸ್ಕೃತಿಕ, ಸಾಮಾಜಿಕ ಮತ್ತು ರಾಜಕೀಯ ನಿಸ್ಸಂಗಿತನ, ಮಿಲಿಟರಿ ಮತ್ತು ಅರೆಮಿಲಿಟರಿ ಆಕ್ರಮಣ, ಛಿದ್ರಕಾರಿ ಪ್ರವೃತ್ತಿ, ಕ್ಯೂಬನ್ ನಾಯಕರ ಹತ್ಯೆ ಪ್ರಯತ್ನ ಮುಂತಾದ ಪಾತಕ ಕೃತ್ಯಗಳ ಮೂಲಕ ಕ್ಯೂಬಾದ ಸಾರ್ವಭೌಮತೆಯನ್ನ ನಿರಂತರ ಉಲ್ಲಂಘಿಸುತ್ತ ಬಂದಿದೆ. ೧೯೬೬ರಲ್ಲಿ ಅಮೆರಿಕ, ಕ್ಯೂಬಾ ವಾಯುಯಾನದ ಮೇಲೆ ನಡೆಸಿದ ಬಾಂಬ್ ದಾಳಿ ಚರಿತ್ರೆಯಲ್ಲೇ ಮೊದಲಿನದು ; ಇವರ ಜೊತೆಗೆ ಭಯೋತ್ಪಾದಕರಿಗೆ ಆಸರೆ, ಅಮಾಯಕ ಕ್ಯೂಬನ್ ಜನತೆ ವಿರೋಧಿ ಆಕ್ರಮಣ ಅಮೆರಿಕದ ನಿತ್ಯದ ಚಾಳಿಯಾಗಿಬಿಟ್ಟಿದೆ.

ಕ್ಯೂಬಾದ ಮಹಿಳೆಯರು ಮತ್ತು ಕುಟುಂಬಗಳ ಮೇಲೆ ಬಿದ್ದಿರುವ ಒತ್ತಡ :

ಜೈವಿಕ ಮತ್ತು ಅಣುಜೈವಿಕ ಆಕ್ರಮಣಗಳ ಮೂಲಕ ಜನತೆಯ ಜೀವಪಾಲಕ ವ್ಯವಸ್ಥೆಗಳನ್ನ ಉದ್ದೇಶಪೂರ್ವಕವಾಗಿ ಹಾನಿ ಮಾಡಿರುವುದು ಕ್ಯೂಬಾದಲ್ಲಿ ಹಿಂದೆಂದೂ ಇರಲಿಲ್ಲ ; ಜನರ ಆರೋಗ್ಯ ತೀವ್ರವಾಗಿ ಹದಗೆಟ್ಟಿದೆ. ಸಾಕ್ಷಿದಾರರು ಮತ್ತು ಕೃಷಿತಜ್ಞರು ಅಮೆರಿಕದ ವಿಮಾನಗಳು 'ಗೊತ್ತಿಲ್ಲದ ವಸ್ತು' ಸಿಂಪಡಿಸುವುದನ್ನ ನೋಡಿದ್ದಾರೆ ; ಇದಾದ ನಂತರ ಫಸಲುಗಳು ಕುಸಿದಿವೆ.

ಈ ಆಕ್ರಮಣದಿಂದ ಕ್ಯೂಬಾ ಜನತೆಯನ್ನ ವಿದ್ಯುತ್, ನೈರ್ಮಲ್ಯ, ನಾಗರೀಕ ಸರಬರಾಜುಗಳಿಂದ ವಂಚಿಸಿದಂತಾಗಿದೆ. ದಿಗ್ಬಂಧನದ ದೆಸೆಯಿಂದಾಗಿ ಆಹಾರ ಪದಾರ್ಥಗಳ ತಯಾರಿಕೆ, ದಾಸ್ತಾನು ಮತ್ತು ಜನತೆಯ ದೈನಂದಿನ ಜೀವನ ಮತ್ತಷ್ಟು ಜಟಿಲವಾಗಿದೆ. ಈ ವಂಚನೆಯಿಂದಾದ ಶಾರೀರಕ ತೊಂದರೆಗಿಂತ ಮಾನಸಿಕ ಆಘಾತ ಹೆಚ್ಚಿನದು.

ಕ್ಯೂಬಾ ಜನತೆಯ ಆಹಾರ ಮತ್ತು ಔಷಧಿಯ ಮೂಲಭೂತ ಹಕ್ಕನ್ನೆ ಮತ್ತಷ್ಟು ದಮನಗೊಳಿಸಿದ ಅಮೆರಿಕದ ಕಾನೂನುಗಳು ನಿರ್ದಿಷ್ಟ ಕ್ರೌರ್ಯದ ಉದ್ದೇಶ ಹೊಂದಿವೆ. ಕ್ಯೂಬಾದ ಮುಖ್ಯ ವ್ಯಾಪಾರ ಭಾಗೀದಾರ ದೇಶ ಸೋವಿಯತ್ ಒಕ್ಕೂಟದ ಬೆಂಬಲ ಕಡಿಮೆಯಾದ ನಂತರ ಅಮೆರಿಕ ೧೯೯೨ರಲ್ಲಿ ಕ್ಯೂಬನ್ ಡೆಮಾಕ್ರಸಿ ಆಕ್ಟನ್ನ ಜಾರಿಗೆ ತಂದು ಇತರೆ ದೇಶಗಳು ಕೆಲವು ನಿರ್ದಿಷ್ಟ ಉತ್ಪನ್ನಗಳನ್ನ ಕ್ಯೂಬಾಗೆ ಮಾರಾಟ ಮಾಡದಂತೆ ತಾಕೀತುಮಾಡಿತು. ಈ ದೇಶಗಳೊಂದಿಗೆ ಕ್ಯೂಬಾ ಹೊಂದಿದ್ದ ವ್ಯಾಪಾರ ವಹಿವಾಟು ಒಂದೇ ವರ್ಷದಲ್ಲಿ ೬೦೦ ಮಿಲಿಯನ್ ಡಾಲರ್‌ಗಳಿಂದ ೧.೬ ಮಿಲಿಯನ್ ಡಾಲರ್‌ಗಳಿಗೆ ಕುಸಿಯಿತು. ಕ್ಯೂಬಾದ ಖರೀದಿ ಆಯ್ಕೆಗಳು ಇದರೊಂದಿಗೆ ಇಲ್ಲವಾದವು. ೧೯೯೬ರಲ್ಲಿ ಅಮೆರಿಕ ಜಾರಿಗೆ ತಂದ 'ಹೆಮ್ಸ್ ಬರ್ಟನ್ ಆಕ್ಟ್', ಕ್ಯೂಬಾದೊಂದಿಗೆ ವಹಿವಾಟು ಸಂಬಂಧ ಹೊಂದಿರುವ ಇತರೆ ದೇಶಗಳಿಗೆ ಬೆದರಿಕೆ ಒಡ್ಡುವ ಮೂಲಕ ಆರ್ಥಿಕ ದಿಗ್ಬಂಧನವನ್ನು ಕಾನೂನು ಬಾಹಿರವಾಗಿ ಅಂತಾರಾಷ್ಟ್ರೀಕರಣಗೊಳಿಸಲು ಪ್ರಯತ್ನಿಸಿತು. ಇದರ ಫಲಿತಾಂಶವಾಗಿ ದಿಗ್ಬಂಧನ ಪ್ರತಿನಿಧಿಸುವ ಅಪರಾಧಗಳಲ್ಲಿ ಇತರೆ ದೇಶಗಳು ಕೂಡ ಸಹಮತ ತಾಳಿದಂತಾಯಿತು.

ಕ್ಯೂಬನ್ ಅಡ್ಜಸ್ಟ್‌ಮೆಂಟ್ ಆಕ್ಟ್ :

ಕಾನೂನು ಬಾಹಿರ ವಲಸೆ ಮೂಲಕ ತಮ್ಮ ಬದುಕುಗಳನ್ನ ಅಪಾಯಕ್ಕೊಡ್ಡುವಂತೆ ಕ್ಯೂಬಾದ ವ್ಯಕ್ತಿಗಳನ್ನ ಪ್ರೇರೇಪಿಸುತ್ತಿರುವ ಅಮೆರಿಕದ ೧೯೬೬ರ ಈ ಕುತಂತ್ರಿ ಕಾನೂನಿನ ಬಗ್ಗೆ ಜನತಾ ನ್ಯಾಯದರ್ಶನ ಮಂಡಳಿ ಆತಂಕ ಮತ್ತು ತೀವ್ರ ಕಾಳಜಿ ವ್ಯಕ್ತಪಡಿಸಿತು. ವಲಸೆಗೆ ಸಂಬಂಧಿಸಿದಂತೆ ಅಮೆರಿಕ ಪ್ರತಿವಾರ ಬಿತ್ತರಿಸುವ ಮಿಯಾಮಿ ಆಕಾಶವಾಣಿ ನಿಲಯದ ೨೨೫೦ ಗಂಟೆಗಳಿಗೆ ಕಡಿಮೆ ಇಲ್ಲದ ಪ್ರಸಾರದಿಂದ ಮರುಳಾಗಿ ಕ್ಯೂಬಾದಿಂದ ವಲಸೆ ಬಂದ ಶೇ. ೭೦ರಷ್ಟು ಜನ ಫ್ಲೋರಿಡಾ ಜಲಸಂಧಿಯಲ್ಲಿ ತಮ್ಮ ಪ್ರಾಣ ಕಳೆದುಕೊಂಡಿದ್ದಾರೆಂದು ಅಂದಾಜು ಮಾಡಲಾಗಿದೆ.

೨೦೦೧ರಲ್ಲಿ ಕ್ಯೂಬಾದ ೫ ಜನರನ್ನ ಅಮೆರಿಕ ನ್ಯಾಯಾಲಯದಲ್ಲಿ ರಾಜಕೀಯವಾಗಿ ದಂಡಿಸಿ ಜೀವಾವಧಿ ಶಿಕ್ಷೆ ವಿಧಿಸುವ ಮೂಲಕ ಕ್ಯೂಬಾ ತನ್ನ ಸಾರ್ವಭೌಮತೆಯನ್ನ ಸಮರ್ಥಿಸಿಕೊಳ್ಳುವ ಹಕ್ಕುಗಳನ್ನ ನಿಂದಿಸಲಾಗಿದೆ. ತಮ್ಮ ಜನತೆ ಅಮೆರಿಕದ ಕುತಂತ್ರದ ಶಿಕ್ಷೆಗೆ

ಗುರಿಯಾಗದಂತೆ, ಅಮೆರಿಕದ ಅನುದಾನ ಪಡೆದ ಭಯೋತ್ಪಾದಕ ಗುಂಪುಗಳ ಮೇಲೆ ಈ ಐದು ಜನ ತೀವ್ರ ನಿಗಾವಹಿಸುತ್ತಿದ್ದರು. ಅವರನ್ನ ತಕ್ಷಣ ಬಿಡುಗಡೆ ಮಾಡಬೇಕೆಂದು ಜನತಾ ನ್ಯಾಯದರ್ಶನ ಮಂಡಳಿ ಒತ್ತಾಯಿಸುತ್ತದೆ.

ಗ್ವಾಂಟಾನಾಮ ಕೊಲ್ಲಿಯನ್ನ ಅಮೆರಿಕ ಅತಿಕ್ರಮಿಸಿರುವುದನ್ನ ಪ್ರಸ್ತಾಪಿಸಿದ ಜನತಾ ನ್ಯಾಯದರ್ಶನ ಮಂಡಳಿ, ಅಮೆರಿಕದ ಪ್ರಚೋದನೆಗೆ ಪ್ರತಿಕ್ರಿಯಿಸದೆ ತನ್ನ ತಾನೇ ನಿಗ್ರಹಿಸಿಕೊಂಡಿರುವ ಕ್ಯೂಬಾದ ನಿಲುವನ್ನ ಮೆಚ್ಚಿಕೊಂಡಿದೆ. ಈ ಅತಿಕ್ರಮಣಕ್ಕೆ ಕ್ಯೂಬಾ ಯಾವುದೇ ರೀತಿ ಪ್ರತಿಕ್ರಿಯಿಸಿದ್ದರೂ ಅಮೆರಿಕ ದೊಡ್ಡ ಪ್ರಮಾಣದ ದಾಳಿ ನಡೆಸುವ ಸಾಧ್ಯತೆಗಳಿದ್ದವು. ಅಮೆರಿಕವ ದುಷ್ಟ ತಂತ್ರವೂ ಅದೇ ಆಗಿತ್ತು. ಕ್ಯೂಬಾಗೆ ಅದರ ಅರಿವಿತ್ತು. ಸದ್ಯ ಕ್ಯೂಬಾ ಇನ್ನೊಂದು ಪ್ಯಾಲೆಸ್ಟೈನ್ ಆಗುವುದು ತಪ್ಪಿದಂತಾಯಿತು.

ಕ್ಯೂಬಾ ಜನತೆಯ ಪ್ರತಿರೋಧ :

ಅಮೆರಿಕಾಗೆ ಕ್ಯೂಬಾ ಜನತೆಯ ನರಮೇಧದ ಉದ್ದೇಶವಿದ್ದರೂ ಅದು ಕ್ಯೂಬಾ ಜನತೆಯ ಆತ್ಮಗೌರವವನ್ನು ಕುಂದಿಸಲು ಸಾಧ್ಯವಾಗಿಲ್ಲ. ಅವರ ದೇಶದ ಸಾರ್ವಭೌಮತೆಗೆ ಪದೇ ಪದೇ ಪೆಟ್ಟು ಬಿದ್ದು ನಿರಂತರ ದಾಳಿ ಎದುರಿಸುತ್ತಿರುವಾಗಲೂ ಅವರ ಅರಿವು, ಭಿನ್ನವಾಗಿರುವ ತಮ್ಮ ಹಕ್ಕನ್ನ ಉಳಿಸಿಕೊಳ್ಳುವ ದೃಢ ನಿಲುವು ಅದ್ಭುತ. ಯಾಕೆಂದರೆ ಇಲ್ಲಿನ ಜನ ದಿಗ್ಬಂಧನವನ್ನು ಕೇವಲ ಎದುರಿಸುತ್ತ ಬದುಕಿಲ್ಲ. ಪೌರಸೌಲಭ್ಯ, ಔಷಧಿ ಮತ್ತು ಆಸ್ಪತ್ರೆಗಳು, ಸಮುದಾಯ ಸುರಕ್ಷೆ ಮತ್ತು ಶಿಕ್ಷಣದ ಬದಲೀ ಮಾರ್ಗಗಳನ್ನೆ ಕಂಡುಕೊಂಡಿದ್ದಾರೆ ! ಸಾಕ್ಷಿ ಮಂಡಿಸಿದವರು ತಮ್ಮನ್ನ ಬಲಿಪಶುಗಳೆಂದು ಹೇಳಿಕೊಳ್ಳುವ ಯಾವ ಶಬ್ದವನ್ನೂ ಬಳಸಲಿಲ್ಲ. ಬದಲಾಗಿ ತಮ್ಮನ್ನ 'ಅಮೆರಿಕ ದಿಗ್ಬಂಧನದ ವಿರುದ್ಧ ಹೋರಾಡು'ತ್ತಿರುವ ಹೋರಾಟಗಾರರು ಎಂದು ಹೇಳಿಕೊಂಡಿದ್ದಾರೆ ; ಈ ಅದ್ಭುತ ಗುಣವುಳ್ಳ ಜನರ ಬಗ್ಗೆ ಜನತಾ ನ್ಯಾಯದರ್ಶನ ಮಂಡಳಿ ತನ್ನ ಮೆಚ್ಚುಗೆ ವ್ಯಕ್ತಪಡಿಸಿದೆ.

ನ್ಯಾಯದರ್ಶನ ಮಂಡಳಿಯ ಶಿಫಾರಸುಗಳ ಸಾರರೂಪ :

ಅಮೆರಿಕದ ದಿಗ್ಬಂಧನ, ಅಮಾಯಕ ನಾಗರಿಕರ ಪೀಡನೆ, ಸಾವು-ನೋವಿನ ಮೂಲಕ ಅಲ್ಲಿನ ಸರ್ಕಾರವನ್ನ ಅಸ್ಥಿರಗೊಳಿಸುವ ಅಂತಾರಾಷ್ಟ್ರೀಯ ಸಾಧನವನ್ನಾಗಿ ಬಳಸಿಕೊಳ್ಳುತ್ತಿರುವುದು ಖಚಿತವಾಗಿದೆ. ಅಮೆರಿಕದ ೪೦ ವರ್ಷಗಳ ದಿಗ್ಬಂಧನ ಮತ್ತು ಅದರ ಅಂತಾರಾಷ್ಟ್ರೀಯ ನಿರ್ವಹಣೆ ಮೂಲಕ ಕ್ಯೂಬಾದ ಜನಜೀವನದಲ್ಲಿ ಉಂಟಾಗಿರುವ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಪರಿಣಾಮಗಳು, ನರಮೇಧ ಕುರಿತ ವಿಶ್ವಸಂಸ್ಥೆ ಅಧಿವೇಶನದ ನಿರೂಪವನ್ನ ಖಚಿತಪಡಿಸಿವೆ.

ಅಮೆರಿಕದ ಸದ್ಯದ ಭಯೋತ್ಪಾದನೆ ವಿರೋಧಿ ಯುದ್ಧದ ವೈಖರಿಯೊಂದಿಗೆ ಅದರ ಕ್ಯೂಬಾ ವಿರೋಧಿ ಆರ್ಥಿಕ, ಮಿಲಿಟರಿ ಮತ್ತು ಅರೆಮಿಲಿಟರಿ ಆಕ್ರಮಣಗಳನ್ನು ತಾಳೆ ಮಾಡಿ ನೋಡಿದರೆ, ಇದು ಈ ಶತಮಾನ ಕಂಡ ಅಮೆರಿಕದ ಮಹಾನ್ ಡಾಂಭಿಕತೆ ಎಂಬುದು ಖಚಿತವಾಗುತ್ತದೆ. ಕ್ಯೂಬಾ ಮೇಲಿನ ದಿಗ್ಬಂಧನ ಅಂತಾರಾಷ್ಟ್ರೀಯ ಹಾಗೂ ಅಮೆರಿಕ ದೇಶೀ ಕಾನೂನುಗಳನ್ನ ಕೂಡ ಉಲ್ಲಂಘಿಸುತ್ತದೆ ; ವಿಶ್ವಸಂಸ್ಥೆ ಘೋಷಣೆಗಳಲ್ಲಿ ಸ್ಥಾಪನೆಯಾಗಿರುವ, ದಾಳಿಕೋರರಲ್ಲದವರ ಮೇಲಿನ ಗುರಿ, ಮಹಿಳೆ, ಮಕ್ಕಳ ಹಕ್ಕುಗಳು ಮತ್ತು ಬದುಕಿನ ಪ್ರಾಥಮಿಕ ಹಕ್ಕುಗಳನ್ನೇ

ಉಲ್ಲಂಘಿಸುತ್ತದೆ. ಅಮೆರಿಕದ ದಿಗ್ಬಂಧನ ಕುರಿತಂತೆ ವಿಶ್ವಸಂಸ್ಥೆ ಸಾಮಾನ್ಯ ಸಭೆಯ ವಾರ್ಷಿಕ ಖಂಡನೆ ಮತ್ತು ಇದಕ್ಕೆ ಅಮೆರಿಕ ತೋರಿರುವ ಉದ್ಧಟ ತಿರಸ್ಕಾರದಿಂದ, ವಿಶ್ವಸಂಸ್ಥೆಯ ಪುನರ್ರಚನೆ ಮತ್ತು ಸಾಮಾನ್ಯ ಸಭೆ ಸದಸ್ಯರ ಸರ್ವೋಚ್ಛ ಸ್ಥಾನವನ್ನು ಮರುಸ್ಥಾಪಿಸುವ ಅವಶ್ಯಕತೆ ಉಂಟಾಗಿದೆ.

ಅಮಾನತ್ತಿನಲ್ಲಿರುವ ಕ್ಯೂಬಾದ ಆಸ್ತಿಪಾಸ್ತಿ ಮರಳಿಸುವಿಕೆ ಮತ್ತು ಕ್ಯೂಬಾಗೆ ಇದರಿಂದ ಉಂಟಾಗಿರುವ ನಷ್ಟಕ್ಕೆ ಅಮೆರಿಕ ಪರಿಹಾರ ಕೊಡುವುದನ್ನ ತುರ್ತಾಗಿ ಪರಿಗಣಿಸುವುದು ಅಗತ್ಯ. ದಿಗ್ಬಂಧನದಿಂದ ಕ್ಯೂಬಾ ಜನತೆ ಮೇಲೆ ಉಂಟಾಗಿರುವ ಭಯಾನಕ ಪರಿಣಾಮಗಳು, ವಿಶ್ವಸಂಸ್ಥೆ ಸಾಮಾನ್ಯ ಸಭೆ ಅಮೆರಿಕಾಗೆ ಹಾಕಿರುವ ಛೀಮಾರಿ, ಇದಕ್ಕೆ ಅಮೆರಿಕದ ತಿರಸ್ಕಾರ, ವಿಶ್ವಸಂಸ್ಥೆಯ ಮರ್ಯಾದಸ್ತ ಸದಸ್ಯರು ದಿಗ್ಬಂಧನದ ಪರಿಣಾಮವನ್ನ ಅಂತಾರಾಷ್ಟ್ರೀಯ ನ್ಯಾಯಾಲಯಕ್ಕೆ ತೆಗೆದುಕೊಂಡು ಹೋಗಬೇಕೆಂದು ಪರೋಕ್ಷವಾಗಿ ಸೂಚಿಸುತ್ತವೆ ಎಂದು ನ್ಯಾಯದರ್ಶನ ಮಂಡಳಿ ಅಭಿಪ್ರಾಯಪಟ್ಟಿದೆ.

ಅಮೆರಿಕದ ದಿಗ್ಬಂಧನವನ್ನ ಮೆಟ್ಟಿ ಅಚಲವಾಗಿ ನಿಲ್ಲುವ ಧೀಮಂತಿಕೆ ತೋರಿರುವ ಕ್ಯೂಬಾದ ಮಹಿಳೆಯರ ಮಾತುಗಳನ್ನ ಕೇಳಿದ ನಂತರ, ಈ ಅಂತಾರಾಷ್ಟ್ರೀಯ ಮಹಿಳಾ ನ್ಯಾಯಾಲಯದ ಜನತಾ ನ್ಯಾಯದರ್ಶನ ಮಂಡಳಿ, ಉತ್ತಮ ಜಗತ್ತಿನ ಸ್ಥಾಪನೆಗಾಗಿ ಬದಲಿ ಸಾಧನಗಳನ್ನ ರೂಪಿಸುವ, ಸುಸ್ಥಿರ ಮಾರ್ಗಗಳ ಸಾಧ್ಯತೆಗಳಿವೆ ಎಂದು ಅಭಿಪ್ರಾಯಪಟ್ಟಿತು.

ಹವಾನ, ೨೫ ಮಾರ್ಚ್, ೨೦೦೨.

ಯುದ್ಧ ಕೊನೆಗೊಂಡಿತು ಅಂತ ಅಂದುಕೊಂಡಿದ್ದೆವು, ಆದರೆ...

-ಪಾಮ್ ಥಿ ಗ್ಯುವಾನ್, ವಿಯೆಟ್ನಾಂ

ಕಳೆದ ಶತಮಾನದಲ್ಲಿ ವಿಯೆಟ್ನಾಂ ಜನತೆ ವಿದೇಶಿ ಆಕ್ರಮಣಕಾರರ ವೆಸೆಯಿಂದಾಗಿ ಅನೇಕ ಕಷ್ಟನಷ್ಟಗಳಿಗೆ ಒಳಗಾಗಿದ್ದಾರೆ. ಅಮೆರಿಕ ನಮ್ಮ ಮೇಲೆ ನಡೆಸಿದ ದೀರ್ಘ ಯುದ್ಧ ದುರಸ್ತಿಪಡಿಸಲಾಗದಂತೆ ನಮ್ಮ ದೇಶವನ್ನ ಹಾಳುಗೆಡವಿದೆ. ಕಾರ್ಮಿಕ ಇಲಾಖೆ ಪತ್ರಿಕೆ ಪ್ರಕಾರ (೧೯೯೫ರ ಯುದ್ಧದ ಅಪಮೌಲ್ಯ ಮತ್ತು ಸಾಮಾಜಿಕ ಆಗುಹೋಗುಗಳು) ೧೦ ವರ್ಷಗಳ ಪೈಕಿ ಕೇವಲ ೮ ವರ್ಷಗಳ ಒಳಗೆ ಒಟ್ಟು ೭,೮೦೦೦,೦೦೦ ಟನ್‌ಗಳಷ್ಟು ಬಾಂಬ್‌ಗಳನ್ನ ವಿಯೆಟ್ನಾಂ ದೇಶದ ಮೇಲೆ ಸಿಡಿಸಲಾಗಿದೆ. ಇದಕ್ಕೂ ಮಿಗಿಲಾಗಿ ೭೫ ಮಿಲಿಯನ್ ಲೀಟರ್‌ಗಳಷ್ಟು ವಿಷಕಾರಿ ರಾಸಾಯನಿಕ, ೪೫ ಮಿಲಿಯನ್ ಲೀಟರು 'ಏಜೆಂಟ್ ಆರೆಂಜ್' ಮತ್ತು ೩೩೮೦೦ ಟನ್ ನಫಾಮ್ ಬಾಂಬ್‌ಗಳನ್ನ ವಿಯೆಟ್ನಾಂ ದೇಶದ ಮೇಲೆ ಪ್ರಯೋಗಿಸಲಾಗಿದೆ ; ಇದು ಮುಂದಿನ ಜನಾಂಗ, ತಲೆಮಾರುಗಳ ಮೇಲೆ ಹಾನಿಕಾರಕ ಪರಿಣಾಮಗಳನ್ನ ಉಂಟು ಮಾಡಲಿದೆ.

೧೯೭೫ರ ಎ.ಪಿ. ಅಂಕಿ-ಅಂಶಗಳ ಪ್ರಕಾರ ಈ ಯುದ್ಧದಲ್ಲಿ ಸುಮಾರು ೪,೭೮೦,೮೯೭ ಜನ ಸತ್ತಿದ್ದಾರೆ; ೩ ಮಿಲಿಯನ್ ಜನ ಗಾಯಗೊಂಡಿದ್ದಾರೆ. ಇದಕ್ಕೆ ಬಲಿಯಾದ ಅನೇಕ ಮುಗ್ಧರು ಈ ಯುದ್ಧದ ಭೀಕರ ಪರಿಣಾಮ ಮತ್ತು ವಿಷಕಾರಿ ರಾಸಾಯನಿಕ ಪರಿಣಾಮಗಳನ್ನ ಎದುರಿಸಬೇಕಾಗಿದೆ. ವಿಷ ರಾಸಾಯನಿಕಗಳನ್ನ ಹೊಂದಿರುವ ಮಕ್ಕಳು ಹೆಚ್ಚು ಪ್ರಮಾಣದಲ್ಲಿ ವಿರೂಪಗೊಳ್ಳುವ ಸಾಧ್ಯತೆಗಳಿವೆ.

ಯುದ್ಧಕಾಲದಲ್ಲಿ ಹೆಚ್ಚು ನಷ್ಟ ಅನುಭವಿಸಿದವರೆಂದರೆ ಮಹಿಳೆಯರು ಮತ್ತು ತಾಯಂದಿರು. ಅವರು ಹತಾಶರಾಗಿ ತಮ್ಮ ಗಂಡಂದಿರು ಮತ್ತು ಮಕ್ಕಳಿಗಾಗಿ ಎದುರುನೋಡುತ್ತ ಮರಳಿ ಬಂದ ಸೆಂಟರನ್ನ ಉಪಚರಿಸಿದ ಪ್ರಕರಣಗಳಿವೆ ; ೫ ರಿಂದ ೨೦ ವರ್ಷಗಳ ನಂತರವೂ ಅವರು ತಮ್ಮ ಮಕ್ಕಳು ಮತ್ತು ಗಂಡಂದಿರ ನಿರೀಕ್ಷೆಯಲ್ಲಿ ಕಾಲದೂಡಿದ್ದಾರೆ.

ಯುದ್ಧದ ನಂತರ ವಿಯೆಟ್ನಾಮಿನ ಮಹಿಳೆಯರು ಯುದ್ಧಪರಿಣಾಮಗಳಿಂದ ನರಳುತ್ತಿದ್ದಾರೆ.

ಯುದ್ಧದಲ್ಲಿ ಕಾದಾಡುತ್ತ ಅನೇಕರ ಗಂಡಂದಿರು ತೀರಿಕೊಂಡರು. ಅವರ ಹೆಂಡತಿಯರು ವಿಧವೆಯರಾದರು, ಉಳಿದವರು ರೋಗರುಜಿನಗಳನ್ನು ಹೊತ್ತು, ದೀರ್ಘಕಾಲಿಕ ಮಲೇರಿಯಾ, ಮಾನಸಿಕ ಅಸ್ವಸ್ಥತೆ, ಕಿವುಡುತನ, ಕುರುಡುತನ ಇತ್ಯಾದಿಗಳನ್ನ ಹೊತ್ತು ಮರಳಿ ಬಂದರು. ಹೆಂಡತಿಯರು ಅವರನ್ನ ೧೦-೨೦ ವರ್ಷಗಳ ತನಕ, ಜೀವಮಾನವಿಡೀ ಉಪಚರಿಸಬೇಕಾಯಿತು.

ತುಂಬಾ ನೋವಿನ ವಿಷಯವೆಂದರೆ ತಲೆಮಾರಿನಿಂದ ತಲೆಮಾರಿಗೆ ಹರಡುವ ವಂಶಪಾರಂಪರ್ಯ ರೋಗಗಳು. ಅನೇಕ ತಂದೆಯರು ವಿಷಕಾರಿ ರಾಸಾಯನಿಕಗಳು ಪಸರಿಸಿದ್ದ ಪ್ರದೇಶಗಳಲ್ಲಿ ಕೆಲಸ ಮಾಡಿ ಬಂದಿದ್ದರಿಂದ ಅವರ ಮಕ್ಕಳು ವಿವಿಧ ದೋಷಗಳನ್ನ ಹೊತ್ತು ಹುಟ್ಟಿದ್ದಾರೆ. ವಿಯೆಟ್ನಾಮಿನ ಜನತೆ ಹಾಗೂ ಬಹಳಷ್ಟು ಮಹಿಳೆಯರು ಅನುಭವಿಸುತ್ತಿರುವ ಯಾತನೆಗಳಿವು. ನಾನು ಕೂಡ ಯುದ್ಧದ ಪರಿಣಾಮಗಳಿಗೆ ಬಲಿಯಾದ ಮಹಿಳೆ. ಮುವ್ವತ್ತು ವರ್ಷಗಳಿಂದಲೂ ನಮ್ಮದು ಇದೇ ಬಗೆಯ ಯಾತನೆ.

೧೧ ವರ್ಷಗಳ ಹಿಂದೆ ನನ್ನ ಗಂಡ ದಕ್ಷಿಣ ವಿಯೆಟ್ನಾಮ್‌ನಲ್ಲಿ ಯುದ್ಧಕ್ಕೆ ಸೇರಿಕೊಂಡರು. ೧೯೭೫ರಲ್ಲಿ ದಕ್ಷಿಣ ಭಾಗ ವಿಮೋಚನೆಗೊಂಡ ನಂತರ ನಾವು ಮದುವೆ ಮಾಡಿಕೊಂಡೆವು. ೧೯೮೦ರಲ್ಲಿ ನನ್ನ ಮೊದಲ ಮಗು ಹುಟ್ಟಿತು. ಅವನ ಹೆಸರು ಡೋಗ್ವುವಾನ್-ಘುಂಗ್. ಯುದ್ಧ ಮುಗಿಯಿತು, ಸಂತಸದ ಕಾಲ ಬಂತು ಅಂತಾ ಅಂದುಕೊಂಡೆವು. ಮನೆಯಲ್ಲಿ ಮೊಮ್ಮಗ ಹುಟ್ಟಿ, ೧೯೬೮ರ ಯುದ್ಧದಲ್ಲಿ ಹಿರಿಮಗನನ್ನ ಕಳೆದುಕೊಂಡ ದುಃಖ ಮರೆಸುತ್ತದೆ ಅಂತಾ ನನ್ನ ಅತ್ತೆ ಮಾವ ಭಾವಿಸಿದ್ದರು. ಆದರೆ ಮಗು ಹುಟ್ಟಿದ ಸಂತೋಷ ಮನೆಯಲ್ಲಿ ತುಂಬಾ ಕಾಲ ಉಳಿಯಲಿಲ್ಲ; ಮಗು ಮಿದುಳಿನ ಎಪಿಲೆಪ್ಟಿಕ್ ಕಾಯಿಲೆ ಹೊತ್ತುಹುಟ್ಟಿತು. ಪ್ರತಿಸಲ ಎಪಿಲೆಪ್ಟಿಕ್ ರೋಗ ಉಲ್ಬಣಿಸಿದಾಗಲೂ ಅವನ ದೇಹ ಸೆಟೆದುಕೊಂಡು, ಮೈಮೇಲೆ ನೇರಳೆ ಬಣ್ಣದ ಕಲೆಗಳು ಕಾಣಿಸಿಕೊಳ್ಳುತ್ತಿದ್ದವು. ಈ ಎಪಿಲೆಪ್ಟಿಕ್ ರೋಗ ಪ್ರತಿದಿನ ೫ ರಿಂದ ೭ ಸಲ ಉಲ್ಬಣಗೊಂಡು, ೫-೧೦ ನಿಮಿಷಗಳ ಕಾಲ ಇರುತ್ತಿತ್ತು.

ಮಗುವಿಗೆ ಆಕ್ಯುಪಂಕ್ಚರ್ ಮತ್ತು ಫಿಸಿಯೋಥೆರಪಿ ಒದಗಿಸಲು ನಾನು ಪ್ರತಿನಿತ್ಯ ದುಡಿದು ಗಳಿಸಬೇಕಾಗಿತ್ತು. ಅವನ ಕಾಯಿಲೆ ಗುಣಮುಖಗೊಳ್ಳಲೆಂದು ಯಾರು ಏನೇ ಚಿಕಿತ್ಸೆ ಸೂಚಿಸಿದರೂ ನಾನು ಕೇಳಿಸಿಕೊಳ್ಳುತ್ತಿದೆ. ಮನೆಯ ಹಲ್ಲಿ ನುಂಗಿಸಿದರೆ ವಾಸಿಯಾಗುವುದೆಂದು ಯಾರೋ ಹೇಳಿದರು, ನಾನು ಹಾಗೇ ಮಾಡಿದೆ. ಅದನ್ನ ನುಂಗಲು ಅವನು ತುಂಬಾ ಚಿಕ್ಕವನು, ಹೀಗಾಗಿ ನಾನೇ ಅಗಿದು ಅವನಿಗೆ ನುಂಗಿಸುತ್ತಿದ್ದೆ.

ಕಳೆದ ೨೧ ವರ್ಷಗಳಿಂದ ಅವನನ್ನ ಉಪಚರಿಸುತ್ತಿದ್ದೇನೆ. ಈಗ ಅವನು ನಡೆಯಬಲ್ಲ. ಆದರೆ ಹತೋಟಿಯಿಲ್ಲದಂತೆ ಕಿರುಚುತ್ತಾನೆ, ನಗುತ್ತಾನೆ, ತಲೆಯನ್ನ ಗೋಡೆಗೆ ಚಚ್ಚಿಕೊಳ್ಳುತ್ತಾನೆ. ಬಟ್ಟೆ, ಕಂಬಳಿ ಹರಿದು ಚಿಂದಿಮಾಡುತ್ತಾನೆ. ಮಾತನಾಡಲು ಸಾಧ್ಯವಾಗುತ್ತಿಲ್ಲ. ಅವನ ಎಪಿಲೆಪ್ಟಿಕ್ ರೋಗ ಇನ್ನೂ ತೀವ್ರವಾಗಿದೆ. ಅನೇಕ ಸಲ ಅವನು ತನ್ನ ತಲೆಯನ್ನ ಪೀಠೋಪಕರಣಗಳಿಗೆ ಡಿಕ್ಕಿ ಹೊಡೆಯುತ್ತಾನೆ. ಮುಖ ರಕ್ತ ಸೋರಿ ಊದಿಕೊಳ್ಳುತ್ತದೆ. ತಿನ್ನುವುದು, ಕುಡಿಯುವುದು ಏನನ್ನೂ ಸ್ವಂತವಾಗಿ ಮಾಡಲಾಗುವುದಿಲ್ಲ, ಎಲ್ಲದಕ್ಕೂ ನಾನು ನೆರವಾಗಬೇಕು.

೧೯೮೫ರಲ್ಲಿ ನಾನು ಹೆಣ್ಣು ಮಗುವಿಗೆ ಜನ್ಮ ಕೊಟ್ಟೆ, ಅವಳ ಹೆಸರು ಡೊಂತಿ ಚಿನ್ಹ್. ಅವಳು ಆರೋಗ್ಯವಾಗಿದ್ದಳು. ತನ್ನ ೫ನೇ ವಯಸ್ಸಿನಲ್ಲಿ ಅಣ್ಣನಿಗೆ ಊಟ ತಿನಿಸಿ ಬಟ್ಟೆ ತೊಡಿಸುತ್ತಿದ್ದಳು. ಅವಳು ಜಾಣೆ, ತುಂಬಾ ಚೆನ್ನಾಗಿ ಓದುತ್ತಾಳೆ, ಒಳ್ಳೆ ಕವಿತೆ ಬರೆಯುತ್ತಾಳೆ. ಕುಟುಂಬದಲ್ಲಿ ಎಲ್ಲರಿಗೂ ಜೀವಸೆಲೆಯಾಗಿದ್ದಳು. ಆದರೆ ದುರಾದೃಷ್ಟ ಮತ್ತೆ ನನ್ನ ಕುಟುಂಬದ ಬೆನ್ನು ಹತ್ತಿತು. ೧೯೯೪ರಲ್ಲಿ ೯ ವರ್ಷದವಳಾಗಿ ೪ನೇ ತರಗತಿಯಲ್ಲಿ ಕಲಿಯುತ್ತಿದ್ದಾಗ ಅವಳ ಕಣ್ಣುಗಳು ಮಂಕಾದವು. ಅವಳು ಹೇಳಿದಳು : 'ಅಮ್ಮ ನನ್ನ ತಲೆ ನೋಯುತ್ತಿದೆ, ಕಣ್ಣುಗಳು ಮಂಕಾಗುತ್ತಿವೆ'. ಹಸಿವಿನಿಂದ ಹೀಗಾಗುತ್ತಿದೆ ಅಂದುಕೊಂಡಿದ್ದೆ. 'ಹೊಟ್ಟೆ ತುಂಬಿರುವಾಗಲೂ ಹಾಗಾಗುತ್ತಿದೆ. ದಯವಿಟ್ಟು ನನ್ನ ಡಾಕ್ಟರ್ ಹತ್ತಿರ ಕರಕೊಂಡು ಹೋಗು', ಎಂದಳು. ಗಾಬರಿಯಾದ ನಾನು ಮಗಳನ್ನ ವೈದ್ಯಕೀಯ ಪರೀಕ್ಷೆಗೆ ಕರೆದುಕೊಂಡು ಹೋದೆ. ಆಗ ಅವಳ ಕಣ್ಣಿನ ದೃಷ್ಟಿ ೭/೧೦ರಷ್ಟಿತ್ತು. ನಂತರ ೫/೧೦ಕ್ಕೆ ಇಳಿಯಿತು, ಈಗ ೩/೧೦ ರಷ್ಟಿದೆ ಮತ್ತು ಇನ್ನೂ ಹಾಳಾಗುವ ಸಂಭವವಿದೆ.

ನನ್ನ ಗಂಡ, ಮಗ ಮತ್ತು ಮಗಳನ್ನ ಕಂಡಾಗ ಸಂಕಟದಿಂದ ನನ್ನ ಕಣ್ಣುಗಳಲ್ಲಿ ನೀರು ತುಂಬಿಕೊಳ್ಳುತ್ತವೆ. ಮಲೇರಿಯಾ, ಎಪಿಲೆಪ್ಸಿ, ಮಂದವಾಗುತ್ತಿರುವ ಕಣ್ಣುಗಳ ದೃಷ್ಟಿ, ಗಾಯಗಳಿಂದ ಆಯಾಸಗೊಂಡಿರುವುದನ್ನ ಕಾಣುತ್ತ ತುಂಬಾ ನೊಂದಿದ್ದೇನೆ.

ನಮ್ಮ ವೃದ್ಧಾಪ್ಯ ಕುರಿತು ಚಿಂತಿಸುತ್ತ, ರಾತ್ರಿ ಕಣ್ಣುಗಳ ಮೇಲೆ ನಿದ್ರೆ ಕೂರುವುದಿಲ್ಲ. ಮುದುಕರಾದ ಮೇಲೆ ನಮ್ಮನ್ನ ಯಾರು ನೋಡಿಕೊಳ್ಳುತ್ತಾರೆ ! 'ನಿನ್ನ ಕನಸೇನು' ಎಂದು ಕೇಳಿದರೆ, 'ನನ್ನ ಗಂಡ ಮಕ್ಕಳು ಆರೋಗ್ಯವಾಗಿರಲಿ, ನನ್ನ ಮಕ್ಕಳಿಗೆ ಬಂದ ವೇದನೆ ಬೇರೆ ಯಾವ ಮಕ್ಕಳಿಗೂ ಬಾರದಿರಲಿ' ಅಂತಾ ಹೇಳುತ್ತೇನೆ. ನನ್ನ ಶಕ್ತಿ, ಭಾವನೆ ಮತ್ತು ವೇಳೆಯ ಬಹುಪಾಲನ್ನ ನನ್ನ ಮಗನಿಗೆ ಅರ್ಪಿಸಿದ್ದೇನೆ. ಕಳೆದ ೨೧ ವರ್ಷಗಳಿಂದ ನಾನು ಒಳ್ಳೆ ಊಟ ಮಾಡಿಲ್ಲ, ಕಣ್ತುಂಬ ನಿದ್ರೆ ಮಾಡಿಲ್ಲ.

ಈ ಸಂಕಷ್ಟ ಅನುಭವಿಸಿದ್ದು ನಮ್ಮ ಕುಟುಂಬ ಮಾತ್ರವಲ್ಲ, ವಿಯೆಟ್ನಾಮ್ ದೇಶದ ಅಸಂಖ್ಯಾತ ಕುಟುಂಬಗಳು ಇದೇ ಪರಿಸ್ಥಿತಿ ಎದುರಿಸುತ್ತಿವೆ. ಕೈ ಆನ್ಹ್ ಜಿಲ್ಲೆ, ಕೈಸೇನ್ ಕಮ್ಯೂನಿನ, ಡೇಂಗ್‌ಷಾವ್ ಗ್ರಾಮದ ನ್‌ಗುಯೇನ್ ತಾನ್ಹ್‌ತೋನ್ ಮತ್ತು ನ್‌ಗುಯೇನ್ ತಿಮ್ಯು ಕುಟುಂಬದ ಉದಾಹರಣೆ ಪ್ರಸ್ತಾಪಿಸಬಯಸುತ್ತೇನೆ. ಮಿಸ್ಟರ್ ತೋನ್ ೧೯೬೬ರಲ್ಲಿ ಸೈನ್ಯ ಸೇರಿದರು. ಯುದ್ಧ ಮುಗಿದ ನಂತರ ಅವರಿಗೆ ೪ ಮಕ್ಕಳು ಹುಟ್ಟಿದರು. ನ್‌ಗುಯೇನ್ ತಾನ್ಹ್ ಹುವ್ರೋಂಗ್ ೧೯೭೧ರಲ್ಲಿ ಜನ್ಮತಾಳಿದ. ಚಿಕ್ಕ ವಯಸ್ಸಲ್ಲಿ ಆತ ಸಹಜವಾಗೇ ಬೆಳೆದ. ತನ್ನ ೮ನೇ ವಯಸ್ಸಿನಲ್ಲಿ ಮ್ಯಾಸ್ಥೇನಿಯಾ ರೋಗಕ್ಕೆ ಬಲಿಯಾಗಿ, ೧೯೯೨ರಲ್ಲಿ ತೀರಿಕೊಂಡ. ಉಳಿದ ಮೂವರು ಮಕ್ಕಳಾದ ನ್‌ಗುಯೇನ್ ತಾನ್ಹ್‌ಕ್ಯಾನ್ ೧೯೭೪ರಲ್ಲಿ, ನ್‌ಗುಯೇನ್ ತಾನ್ಹ್‌ಹೊಂಗ್ ೧೯೭೫ರಲ್ಲಿ, ನ್‌ಗುಯೇನ್ ತಾನ್ಹ್ ಹ್ಯಾ ೧೯೭೯ರಲ್ಲಿ ಜನ್ಮ ತಾಳಿದ ಮಕ್ಕಳು. ೭ ಮತ್ತು ೮ ವರ್ಷ ವಯಸಾಗುತ್ತಿದ್ದಂತೆ ಅವರಿಗೂ ತಮ್ಮ ಅಣ್ಣನಂತೆ ಮ್ಯಾಸ್ಥೇನಿಯಾ ಸೂಚನೆಗಳು ಕಾಣಿಸಿಕೊಂಡವು. ದಿನೇ ದಿನೇ ಅವರ ಆರೋಗ್ಯ ಹದಗೆಟ್ಟಿತು. ನಡೆಯಲಾಗುತ್ತಿರಲಿಲ್ಲ. ತಮ್ಮ ಕೆಲಸಗಳನ್ನ ತಾವೇ ಮಾಡಿಕೊಳ್ಳಲಾಗುತ್ತಿರಲಿಲ್ಲ. ಊಟ ಮಾಡಲು ಕೂಡ ಸಾಧ್ಯವಾಗುತ್ತಿರಲಿಲ್ಲ. ಬೇರೆಯವರ ನೆರವು ಬೇಕಾಗುತ್ತಿತ್ತು. ಈಗ ಈ ಭಯಾನಕ ರೋಗದಿಂದ ಅವರನ್ನ ರಕ್ಷಿಸಲು ಕುಟುಂಬದಿಂದಾಗಲೀ,

ಡಾಕ್ಟರುಗಳಿಂದಾಗಲೀ ಸಾಧ್ಯವಾಗುತ್ತಿಲ್ಲ. ಅವರ ತಂದೆ ತಾಯಿ ಸಂಕಷ್ಟದಲ್ಲಿ ಸಿಲುಕಿದ್ದಾರೆ ; ಅವರಿಗೆ ಅನ್ನ ಆಹಾರ ಒದಗಿಸಿ ನೋಡಿಕೊಳ್ಳುವುದು ದುಸ್ತರವಾಗುತ್ತಿದೆ.

ಇನ್ನೊಂದು ದುಃಖದ ಕತೆ, ತ್ಯಾಬಿನ್ಸ್ನ ನ್‌ಗುಯೇನ್ ಆನ್ಹ್ಹೋನ್ ಮತ್ತು ತಾನ್ಹ್ ಕ್ಯಾಂಗ್ ದಂಪತಿಗಳದು. ಅವರಿಗೆ ಏಳು ಮಕ್ಕಳು, ಅವರಲ್ಲಿ ೬ ಮಂದಿ ವಿರೂಪ ಹೊತ್ತು ಹುಟ್ಟಿ, ತಮ್ಮ ಚಿಕ್ಕ ವಯಸ್ಸಿಗೇ ಅಸುನೀಗಿದವು. ಥಿಯೆನ್ ಯೆನ್ ಜಿಲ್ಲೆಯ, ತಾನ್ಹ್ ಹೋ ಪ್ರಾಂತ್ಯದ, ವಾನ್ ಕ್ಸುವಾಂಗ್ ಕಮ್ಯೂನ್‌ನಲ್ಲಿ ವಾಸವಾಗಿರುವ ಲೋನ್ ಕುಟುಂಬದ್ದು ಇನ್ನೊಂದು ಕರುಣಾಜನಕ ಪ್ರಕರಣ. ಅವರಿಗೆ ಗ್ಲೋನ್ ಮತ್ತು ದಾನ್ ಎಂಬ ಇಬ್ಬರು ಮಕ್ಕಳು. ಈ ಮಕ್ಕಳಿಗೆ ನಡೆದಾಡುವುದಾಗಲೀ, ಮಾತನಾಡುವುದಾಗಲೀ ಸಾಧ್ಯವಾಗುತ್ತಿಲ್ಲ.

ಇಲ್ಲಿ ಉದಾಹರಿಸಲಾಗಿರುವ ಎಲ್ಲರೂ ದುಃಖ, ಮೌನದಲ್ಲಿ ಬದುಕುತ್ತಿರುವ ಬಲಿಪಶುಗಳು. ವಿಯೆಟ್ನಾಮ್ ದೇಶದಲ್ಲಿರುವ ಮಿಲಿಯಗಟ್ಟಲೆ ಯುದ್ಧ ಬಲಿಗಳ ಪೈಕಿ ಕೆಲವರು ಮಾತ್ರ.

ಯಾಕೆ ಈ ಮಕ್ಕಳು ಮತ್ತು ಅವರ ಕುಟುಂಬಗಳು ಈ ಅನ್ಯಾಯಕ್ಕೆ ಒಳಗಾಗಬೇಕು ? ಈ ಮಕ್ಕಳು ಮತ್ತು ಅವರ ಕುಟುಂಬಗಳ ಭವಿಷ್ಯವೇನು ? ಅಮೆರಿಕಾಗೆ ಈ ಕುಟುಂಬಗಳವರು ಮತ್ತು ಯುದ್ಧಕಾಲಕ್ಕಿನ್ನೂ ಹುಟ್ಟದಿದ್ದ ಈ ಮಕ್ಕಳು ಯಾವ ಅನ್ಯಾಯ ಮಾಡಿದ್ದರೆಂದು ಅವರ ಮೇಲೆ ಈ ದುಷ್ಟ ದೇಶ ಈ ಬಗೆಯ ಬರ್ಬರ ಸೇಡು ತೀರಿಸಿಕೊಳ್ಳುತ್ತಿದೆ ?

‘ಏಜೆಂಟ್ ಆರೆಂಜ್ :’ ಮರೆತು ಹೋದ ಯುದ್ಧ ಅಪರಾಧ

ಟಿಪ್ಪಣಿ

ವಿಯೆಟ್ನಾಮ್ ದೇಶದ ಹನಾಯ್ ನಗರದ ಮನೆಯಲ್ಲಿ ೫೨ ವರ್ಷದ ಎನ್‌ಗುಯೆನ್ ಕ್ವಾಂಗ್‌ಕೂ ಕುಟುಂಬದೊಂದಿಗೆ ಮೌನವಾಗಿ ಕುಳಿತಿದ್ದಾನೆ. ಹೊರಗಡೆ ಬಾತುಕೋಳಿ, ನೀರೆಮ್ಮೆಗಳು ನಿರುಮ್ಮಳವಾಗಿವೆ. ಕೊಠಡಿಯಲ್ಲಿ ಬಿದಿರು ಮಂಚದ ಮೇಲೆ ಮಲಗಿರುವ ಕ್ವಾಂಗ್ ಕೂನ ೨೦ ವರ್ಷದ ಮಗಳು ಮಿದುಳಿನ ಲಕ್ವಾಗೆ ಬಲಿಯಾಗಿದ್ದಾಳೆ. ನೋವಿನಿಂದ ನರಳುತ್ತ ಏನೋ ಹೇಳಲು ಪ್ರಯತ್ನಿಸುತ್ತಿದ್ದಾಳೆ. ಧ್ವನಿ ಅಸ್ಪಷ್ಟ ; ತುಟಿ, ಬೆರಳುಗಳು ತಿರುಚಿಕೊಂಡಿವೆ. ಶರೀರ ಪ್ರಾಥಮಿಕ ಕ್ರಿಯೆಗಳನ್ನ ನಿರ್ವಹಿಸಲಾಗದಂತೆ ನಿತ್ರಾಣಗೊಂಡಿದೆ. ಯುದ್ಧಕಾಲದಲ್ಲಿ ಕೂಗೆ ೯ ವರ್ಷ, ಅಮೆರಿಕ ವಿರುದ್ಧ ಯುದ್ಧದಲ್ಲಿ ಕಾದಾಡಿದ ಯೋಧ. ಅಮೆರಿಕನ್ನರು ‘ಏಜೆಂಟ್ ಆರೆಂಜ್’ ಸಿಂಪಡಿಸಿದ ಸ್ಥಳಗಳಲ್ಲಿ ಅದು ಅನೇಕ ಸಲ ಆತನ ಶರೀರ ಸೇರಿದೆ. ೧೯೭೪ರ ನಂತರ ಕೂನ ೩ ಮಕ್ಕಳು ಹುಟ್ಟುವುದಕ್ಕೆ ಮೊದಲೇ ತೀರಿಕೊಂಡವು ; ೪ನೇ ಮಗಳು ಇಂತಹ ಆಘಾತಕಾರಿ ಅಂಗವಿಕಲತೆಗೆ ತುತ್ತಾದಳು. ದ್ವಾ ಹೇಳುತ್ತಾಳೆ : ಈಗ ಅವಳಿಗಿರುವುದು ಇದ್ದ ಕಡೆ ಇರುವಂತಹ ಜೀವನ. ‘ಶರೀರದಲ್ಲಿ ಇರುವ ಡಯಾಕ್ಸಿನ್ ವಿಷ ಪರೀಕ್ಷೆ ಮಾಡಿಸಿಕೊಂಡಿದ್ದೀರಾ ?’ ಅಂತಾ ಕೂ ಮತ್ತು ಆತನ ಹೆಂಡತಿಯನ್ನ ಕೇಳಿದೆ. ಅಸಹಾಯಕ ನೋಟ ಬೀರಿದ ದ್ವಾ, ‘ಅಂತಹ ಪರೀಕ್ಷೆಗೆ ಪ್ರತಿಯೊಬ್ಬರಿಗೆ ಸಾವಿರ ಡಾಲರು ಹಣ ಬೇಕು, ಅಷ್ಟು ಹಣ ನಮ್ಮಲ್ಲಿ ಎಲ್ಲಿದೆ ?’ ‘ಇದ್ದರೆ ಪರೀಕ್ಷೆ ಮಾಡಿಸಿಕೊಳ್ಳುತ್ತಿರಲಿಲ್ಲವಾ ?’ ಕೂ ಮೆಲ್ಲಗೆ ಹೇಳುತ್ತಾನೆ.

ಎಲೆಗಳನ್ನ ಉದುರಿಸಿ ಕಾಡಿನಲ್ಲಿ ಅವಿತ ದೇಶಭಕ್ತ ಕ್ರಾಂತಿಕಾರಿಗಳನ್ನ ಬೇಟೆಯಾಡಲು ‘ರ್‍ಯಾಂಚ್ ಹ್ಯಾಂಡ್’ ಕಾರ್ಯಾಚರಣೆ ನಡೆಸಲು ೧೯೬೨-೭೧ರ ಅವಧಿಯಲ್ಲಿ ಅಮೆರಿಕದ ವಿಮಾನಗಳು ಸುಮಾರು ೭೦ ಮಿಲಿಯನ್ ಲೀಟರು ‘ಏಜೆಂಟ್ ಆರೆಂಜ್’ ಹೆಸರಿನ ಸಸ್ಯನಾಶಕ ದ್ರಾವಕವನ್ನ ೧.೭ ಮಿಲಿಯನ್ ಹೆಕ್ಟೇರ್ ಪ್ರದೇಶದ ಮೇಲೆ ಅನೇಕ ಸಲ ಸಿಂಪಡಿಸಿದ್ದಾರೆ. ಯುದ್ಧ ಮುಗಿಯುವ ವೇಳೆಗೆ ದ. ವಿಯೆಟ್ನಾಮಿನ ಕಾಡು ರಾಸಾಯನಿಕ ದಾಳಿಯಿಂದ ನಾಶವಾಯಿತು. ಮ್ಯಾಂಗ್ರೊವ್ ಕಾಡುಗಳು ಸುಟ್ಟುಹೋದವು. ವರ್ಷಗಳ ನಂತರ ಕಾಡು ಚೇತರಿಸಿಕೊಂಡಿತು. ಆದರೆ ಬಹಳಷ್ಟು ಭೂಪ್ರದೇಶ ಶಾಶ್ವತ ಬಂಜರು ಭೂಮಿಯಾಗಿ ಪರಿವರ್ತನೆಗೊಂಡಿದೆ.

ಮುನ್ಸೂಚನೆಯಿಲ್ಲದ ರಾಸಾಯನಿಕ ಯುದ್ಧ :

'ಏಜೆಂಟ್ ಆರೆಂಜ್', ಮನುಷ್ಯ ಮತ್ತು ಪರಿಸರ ಎರಡಕ್ಕೂ ಅಪಾಯಕಾರಿ. ಇದನ್ನು ಅರಿತ ಅಮೆರಿಕ ವಿಜ್ಞಾನಿಗಳ ಒಕ್ಕೂಟ ೧೯೬೪ರಲ್ಲೇ ರ್‍ಯಾಂಚ್ ಹ್ಯಾಂಡ್ ಕಾರ್ಯಾಚರಣೆಯನ್ನ ಅನಗತ್ಯ ರಾಸಾಯನಿಕ ಯುದ್ಧ ಎಂದು ಪರಿಗಣಿಸಿ ಖಂಡಿಸಿತು. ಇದರಿಂದ ಜನನ ಸಂಬಂಧೀ ಖಾಯಂ ಅಂಗವಿಕಲತೆಗಳು ಕಾಣಿಸಿಕೊಳ್ಳಲಿವೆ ಎಂದು ಎಚ್ಚರಿಸಿತು. ಆದಾಗ್ಯೂ ಅಮೆರಿಕ ತನ್ನ ಪೂರ್ವ ಯೋಜನೆಯಂತೆ ೧೯೭೦-೭೧ರವರೆಗೆ 'ಏಜೆಂಟ್ ಆರೆಂಜ್'ನ ಪ್ರಯೋಗಿಸಿತು. ನಂತರದ ವೈಜ್ಞಾನಿಕ ಸಂಶೋಧನೆಯ ಪ್ರಕಾರ ಏಜೆಂಟ್ ಆರೆಂಜ್‌ನಲ್ಲಿ ೨, ೪, ೫-ಟಿ ಎಂಬ ರಾಸಾಯನಿಕಗಳು ಇದ್ದವು. ಅವು ನವಜಾತ ಶಿಶುಗಳಲ್ಲಿ ಖಾಯಂ ಅಂಗ ಊನತೆಗಳನ್ನು ಸೃಷ್ಟಿಸುತ್ತವೆ, ಗರ್ಭಪಾತಗಳಿಗೆ ಕಾರಣವಾಗುತ್ತವೆ ಎಂದು ಸಾಬೀತಾಯಿತು. ಇದರಲ್ಲಿರುವ ಡಯಾಕ್ಸಿನ್ ರಾಸಾಯನಿಕ, ವೈಜ್ಞಾನಿಕ ಯುಗ ಕಂಡ ವಿಷಕಾರಕ ವಸ್ತು ಎಂದು ಸಾಬೀತಾಯಿತು. ಈ ಡಯಾಕ್ಸಿನ್ ವಿಷವಸ್ತು ದೇಹದ ಹಾರ್ಮೋನ್‌ಗಳ ರಚನೆ, ರೋಗ ನಿರೋಧಕ ಶಕ್ತಿ ಹಾಗೂ ವಂಶಾಭಿವೃದ್ಧಿ ವ್ಯವಸ್ಥೆಯನ್ನು ನಿಶ್ಯಕ್ತಗೊಳಿಸುತ್ತದೆ. ಪುರುಷರಲ್ಲಿ ಕಲುಷಿತ ವೀರ್ಯ ಉತ್ಪಾದನೆಗೆ ಕಾರಣವಾಗುತ್ತದೆ.

ಡಯಾಕ್ಸಿನ್‌ನಿಂದ ಘಾಸಿಗೊಳಗಾದ ವಿಯೆಟ್ನಾಂ ನೆಲವನ್ನ ಕಳೆದ ೩೦ ವರ್ಷಗಳಲ್ಲಿ ಪ್ರಕೃತಿ ಕೊಂಚ ಸ್ವಚ್ಛಗೊಳಿಸಿದೆ. ಆದರೆ ಅಲ್ಲಿನ ಜನರ ರಕ್ತ, ನರ, ಎದೆಹಾಲಿನಲ್ಲಿ ಸೇರಿರುವ ರಾಯಾನಿಕವನ್ನ ಸ್ವಚ್ಛಗೊಳಿಸಲಾಗಿಲ್ಲ. ಅಮೆರಿಕ ದಾಳಿಯ ನಂತರ ವಿಯೆಟ್ನಾಂನ ರೆಡ್‌ಕ್ರಾಸ್ ಸಂಸ್ಥೆ ಪ್ರಾರಂಭಿಸಿರುವ ಏಜೆಂಟ್ ಆರೆಂಜ್ ವಿಕ್ಟಿಮ್ ಫಂಡ್‌ನ ನಿರ್ದೇಶಕ ಲೆ ಕೊವಾ ಡ್ಯಾ ಪ್ರಕಾರ 'ಏಜೆಂಟ್ ಆರೆಂಜ್'ನ ದಾಳಿಗೆ ತುತ್ತಾದ ದ. ವಿಯೆಟ್ನಾಂನ ಮಹಿಳೆಯರ ಎದೆಹಾಲಿನಲ್ಲಿ, ಉ. ವಿಯೆಟ್ನಾಂ ಮಹಿಳೆಯರ ಎದೆಹಾಲಿಗಿಂತ ೨೦ ಪಟ್ಟು ಹೆಚ್ಚು ಡಯಾಕ್ಸಿನ್ ಇರುವುದು ಸಾಬೀತಾಗಿದೆ.

ಯುದ್ಧ ಕಾಲದಲ್ಲಿ 'ಏಜೆಂಟ್ ಆರೆಂಜ್' ಹಾಗೂ ಇತರೆ ರಾಸಾಯನಿಕಗಳಿಂದ ತೊಂದರೆಗೀಡಾದ ಎಲ್ಲಾ ಮಕ್ಕಳೂ ಹುಟ್ಟುವಾಗಲೇ ಅಂಗವಿಕಲರಾಗಿದ್ದಾರೆ. ಅವರೆಲ್ಲರ ಭಯಾನಕ ಇತಿಹಾಸಗಳನ್ನ ದಾಖಲಿಸಲಾಗಿದೆ. ವಿಯೆಟ್ನಾಂನ ಈ ಕುರಿತ ಅಧ್ಯಯನ ಸಮಿತಿ ಅಧ್ಯಕ್ಷ ಪ್ರೊ. ಹೊಂಗ್ ದಿನ್ ಕಾ ಪ್ರಕಾರ ಯುದ್ಧದಲ್ಲಿ ರಾಸಾಯನಿಕ ವಸ್ತುಗಳ ದುರ್ಬಳಕೆಯಿಂದ ಸಾವಿರಾರು ಮಕ್ಕಳ ಆರೋಗ್ಯ ಹಾಳಾಗಿದೆ. ಈ ಸಮಿತಿಯ ಮುಖ್ಯ ಕೆಲಸ ರಾಸಾಯನಿಕ ಯುದ್ಧದ ದುಷ್ಪರಿಣಾಮಗಳ ಅಧ್ಯಯನ. ಈ ಅಧ್ಯಯನದ ಪ್ರಕಾರ ರಾಸಾಯನಿಕ ಯುದ್ಧಗಳಿಗೆ ಬಲಿಯಾದ ಮಕ್ಕಳಲ್ಲಿ ಮುಖ್ಯವಾಗಿ ಕಂಡುಬರುವ ರೋಗ ಲಕ್ಷಣಗಳು : ಕಾಲುಗಳು ಒಂದಕ್ಕೊಂದು ನುಲಿದುಕೊಂಡಿರುವುದು; ಕಾಲುಗಳೇ ಇಲ್ಲದಿರುವುದು; ದೃಷ್ಟಿ ಕಳೆದುಕೊಂಡ ಕಣ್ಣುಗಳು ಇತ್ಯಾದಿ. ಈಗ ಜನರಲ್ಲಿ ಹಾಗೂ ವೈದ್ಯ ವಿಜ್ಞಾನ ಕ್ಷೇತ್ರದವರಲ್ಲಿ ಈ ರಾಸಾಯನಿಕಗಳ ದುಷ್ಪರಿಣಾಮಗಳು ಮೂರನೇ ತಲೆಮಾರಿಗೂ ಹೆಚ್ಚಬಹುದು ಎಂಬ ಆತಂಕ ಕಾಡುತ್ತಿದೆ. 'ಏಜೆಂಟ್ ಆರೆಂಜ್' ಸಮಸ್ಯೆಯನ್ನು ಸಮರ್ಪಕವಾಗಿ ನಿಭಾಯಿಸಲು ಯಾವ ಮಾರ್ಗ ಅನುಸರಿಸಬೇಕು ಎಂಬುದೇ ವಿಯೆಟ್ನಾಂ ಸರ್ಕಾರದ ಮುಂದಿರುವ ಸವಾಲು.

ಹನೋಯ್‌ನಲ್ಲಿ 'ವಿಯೆಟ್ನಾಂ ವೆಟರನ್ಸ್ ಆಫ್ ಅಮೆರಿಕ ಫೌಂಡೇಷನ್' ಪ್ರತಿನಿಧಿಸಿರುವ ಚಕ್ ಸೀರ್‌ಸಿ, 'ಏಜೆಂಟ್ ಆರೆಂಜ್' ವಿವಾದವನ್ನ ಬಹಳ ವರ್ಷಗಳಿಂದ ಗಮನಿಸುತ್ತಾ ಬಂದಿದ್ದಾರೆ. ಹಳೆಯ ಅಮೆರಿಕಾ ನೆಲೆಗಳಿಂದ ಸುಮಾರು ೭,೫೦೦ ಗ್ಯಾಲನ್‌ಗಳಷ್ಟು 'ಏಜೆಂಟ್ ಆರೆಂಜ್' ವ್ಯರ್ಥವಾಗಿ ಹರಿದು ನೆಲದೊಳಗೆ ಮಾಯವಾದ ಸಂಗತಿಯನ್ನು ಸೀರ್‌ಸಿ ಅರಿತಿದ್ದಾರೆ. "ಇಷ್ಟಾದರೂ ಅಮೆರಿಕ 'ಏಜೆಂಟ್ ಆರೆಂಜ್' ಅನಾಹುತಗಳ ಹೊಣೆಯನ್ನು ಹೊರಲು ಇನ್ನೂ ನೂರು ವರ್ಷವಾಗಬಹುದು" ಎನ್ನುತ್ತಾರೆ ಸೀರ್‌ಸಿ.

ಹನೋಯ್ ಪಟ್ಟಣದ ಹೊರಗೆ ಅಮೆರಿಕಾ ಸರ್ಕಾರದ 'ಏಜೆಂಟ್ ಆರೆಂಜ್' ತೊಂದರೆಗೊಳಗಾದವರ ಉಪಚಾರಕ್ಕಾಗಿ ವ್ಯವಸ್ಥೆ ಮಾಡಿದೆ. ಆ ಪ್ರದೇಶಕ್ಕೆ 'ವಿಯೆಟ್ನಾಂ ವೆಟರನ್ಸ್ ಅಸೋಸಿಯೇಷನ್ ಫ್ರೆಂಡ್‌ಷಿಪ್ ವಿಲೇಜ್' ಎಂದೇ ಹೆಸರಿಡಲಾಗಿದೆ. ಈ 'ಏಜೆಂಟ್ ಆರೆಂಜ್' ಕೃತ್ಯಕ್ಕೆ ಅಮೆರಿಕ ಸಂಪೂರ್ಣ ಹೊಣೆ. ಇದರ ಆಧಾರದ ಮೇಲೆ ನಾವು ಅಮೆರಿಕ ಸರ್ಕಾರದ ವಿರುದ್ಧ ಕಾನೂನು ಕ್ರಮ ಜರುಗಿಸಲು ಸಾಧ್ಯ ಎನ್ನುತ್ತಾರೆ VVAFನ ನಿರ್ದೇಶಕ ನ್‌ಗುಯೆನ್ ಕ್ಯಾ ಹುಂಗ್. ಅವರು ಹೇಳುತ್ತಾರೆ: "ನಾವು ಏಜೆಂಟ್ ಆರೆಂಜ್ ತಯಾರಿಸಿದ ಕಂಪನಿ ಅಥವಾ ವಿಜ್ಞಾನಿಗಳನ್ನು ದೂಷಿಸುವುದಿಲ್ಲ ; ಆ ಕೆಲಸ ಮಾಡುವಂತೆ ಅಮೆರಿಕ ಸರ್ಕಾರ ನಿರ್ದೇಶಿಸಿದ್ದರಿಂದ ಅವರು ಅದನ್ನ ತಯಾರಿಸಿದ್ದಾರೆ. 'ಏಜೆಂಟ್ ಆರೆಂಜ್'ನ ವಿಷಕಾರಕ ಅಪಾಯಕಾರಿ ರಾಸಾಯನಿಕವನ್ನ ಜನರ ಮೇಲೆ ಸಿಂಪಡಿಸಲು ಅಮೆರಿಕಾ ಸರ್ಕಾರವೇ ಆಜ್ಞೆ ಮಾಡಿದ್ದು. ಆದ್ದರಿಂದ ಇಷ್ಟೆಲ್ಲಾ ಅನಾಹುತಕ್ಕೆ ಅಮೆರಿಕ ಕಾರಣ, ಅದೇ ನಮ್ಮ ವೈರಿ ; ನಮ್ಮ ಕೋಪಕ್ಕೆ ಗುರಿ".

"ಒಂದು ಕಾಲದಲ್ಲಿ ಸಾಮ್ರಾಜ್ಯಶಾಹಿ ರಾಜಧಾನಿ ಎನಿಸಿದ್ದ 'ಹೂ' ನಗರ ಇಂದು ಅವಸಾನದ ಹಾದಿ ಹಿಡಿದಿದೆ. ಆಗಸದಿಂದ ಈ ನಗರವನ್ನು ನೋಡಿದರೆ, ಜಿಲ್ಲಾದಿರುವ ಬಾಂಬ್ ಕ್ರೇಟರ್‌ಗಳು ಕಣ್ಣಿಗೆ ರಾಚುತ್ತವೆ. ವಿಯೆಟ್ನಾಂನ ಭಯಾನಕ ಇತಿಹಾಸವನ್ನು ಅರಿಯಲು ಈ ದೃಶ್ಯ ಸಾಕು. ೨ ಸಾವಿರ ವಿಯೆಟ್ನಾಂ ಹೊಳೆಗಳು ಪ್ರತಿವರ್ಷ ಸುಮಾರು ಒಂದು ಟ್ರಿಲಿಯನ್ ಕ್ಯೂಬಿಕ್ ಮೀಟರ್ ನೀರನ್ನ ಸಮುದ್ರಕ್ಕೆ ಸೇರಿಸುತ್ತವೆ. ಅಂದರೆ ಕಳೆದ ೩೦ ವರ್ಷಗಳಿಂದ ವಿಯೆಟ್ನಾಂ ಯುದ್ಧ ವಿಷವನ್ನು ದ. ಚೀನಾ ಸಮುದ್ರಕ್ಕೆ ತಳ್ಳಿ ವಿಯೆಟ್ನಾಮನ್ನ ಸ್ವಚ್ಛಗೊಳಿಸುತ್ತಿವೆ. ಆ ವಿಷದ ನೀರು ಪೆಸಿಫಿಕ್ ಸಾಗರ ಸೇರುತ್ತಿವೆ. ವಿಯೆಟ್ನಾಂನಲ್ಲಿ ಸಮುದ್ರದ ಏರಿಳಿತಗಳ ಸೆಳೆತ ಬಹಳ ಶಕ್ತಿಯುತ. ಕೆಲವೊಮ್ಮೆ ಅವು ೪೦ ರಿಂದ ೬೦ ಕಿಲೋಮೀಟರ್ ಇರುವ ದ್ವೀಪಗಳನ್ನ ಆವರಿಸಿ ತ್ಯಾಜ್ಯ ವಸ್ತುಗಳನ್ನ ಸಮುದ್ರಕ್ಕೆ ಸೆಳೆದುಕೊಳ್ಳುತ್ತವೆ. 'ಏಜೆಂಟ್ ಆರೆಂಜ್'ನ ಕಲ್ಮಷಗಳನ್ನು ವಿಯೆಟ್ನಾಂನಿಂದ ತೊಡೆದು ಹಾಕಲು ಸಾಧ್ಯವಾಗಿದೆ" ಎನ್ನುತ್ತಾರೆ ರೆಡ್‌ಕ್ರಾಸ್‌ನ ಡ್ಯೆ. ಇಷ್ಟಾದರೂ ದ. ವಿಯೆಟ್ನಾಂ ಮನುಷ್ಯ ವಾಸಕ್ಕೆ ಅಪಾಯಕಾರಿ. ಸಮುದ್ರದ ಅಲೆ ಎಷ್ಟೇ ಸ್ವಚ್ಛಗೊಳಿಸಿದರೂ 'ಏಜೆಂಟ್ ಆರೆಂಜ್'ನಿಂದ ನರಳುತ್ತಿರುವ ಜನರನ್ನು ಮಾತ್ರ ಸ್ವಚ್ಛಗೊಳಿಸಲು ಸಾಧ್ಯವಿಲ್ಲ. ಅಲ್ಲದೆ ೧೦೦ ಬಿಲಿಯನ್ ಟನ್‌ಗಳಷ್ಟು 'ಏಜೆಂಟ್ ಆರೆಂಜ್' ಕಸವನ್ನು ಸ್ವಚ್ಛಗೊಳಿಸಲು ಯಾರಿಂದಲೂ ಸಾಧ್ಯವಿಲ್ಲ ಎನ್ನುತ್ತಾರೆ VVAFನ ಸೀರ್‌ಸಿ.

ಅಮೆರಿಕ ಸರ್ಕಾರ ಖಂಡಿತ ವಿಯೆಟ್ನಾಂ ಜನರಿಗೆ ನೆರವಾಗಲೇ ಬೇಕಾಗಿದೆ ಎಂದು ಆಗ್ರಹಿಸುತ್ತಾರೆ ಡ್ಯೆ. ಅಂಗವಿಕಲರಾಗಿ ಹುಟ್ಟುತ್ತಿರುವ ಮಕ್ಕಳು ಅಮೆರಿಕದ ಕೃತ್ಯಕ್ಕೆ ಕೋಪಗೊಂಡು ಹೋರಾಡುತ್ತಿಲ್ಲ ; ಮಲಗಿದ್ದಲ್ಲೇ ನರಳುತ್ತಾ ಹೆತ್ತವರನ್ನು ಅಳಿಸುತ್ತಿವೆ.

ಮೂಲ : **The Web.**

ಪರಮಾಣು ಯುಗದ ಆರಂಭ

ಮೂಲ : ರೋಸಾಲಿ ಬರ್ಟೆಲ್

ಜಪಾನಿನ ಹಿರೋಷಿಮಾ, ನಾಗಾಸಾಕಿ ನಗರಗಳ ಮೇಲೆ ೧೯೪೫ ಆಗಸ್ಟ್‌ನಲ್ಲಿ ಅಮೆರಿಕ ಅಣು ಬಾಂಬ್‌ಗಳನ್ನು ಹಾಕಿದ ಕ್ಷಣ ಪರಮಾಣು ಯುಗ ಆರಂಭ. ಇದರಿಂದ ದೇಶಗಳ ರಾಷ್ಟ್ರೀಯ ರಕ್ಷಣಾ ನೀತಿ ಹಾಗೂ ಪರಿಕಲ್ಪನೆಗಳಲ್ಲಿ ಹೇಗೆ ಬದಲಾವಣೆಗಳು ಕಂಡುಬಂದವು ಎಂದು ಅರಿಯುವ ಮೊದಲು ಈ ಎರಡು ದೇಶಗಳ ರಕ್ಷಣಾ ವ್ಯವಸ್ಥೆಯನ್ನು ಅರಿಯುವುದು ಅಗತ್ಯ. ನಂತರ 'ಶಾಂತಿಗಾಗಿ ಅಣು' ಎಂಬ ಪರಿಕಲ್ಪನೆ, ವಿಕಿರಣ ಸಂಬಂಧಿ ಕಾಯಿಲೆಗಳಿಗೆ ಬಲಿಯಾದ ಮನುಷ್ಯನ ಅನುಭವ ಮತ್ತು ಪರಮಾಣು ಯುದ್ಧಗಳ ಆವಿಷ್ಕಾರದೊಂದಿಗೆ ಇರುವ ಸಂಬಂಧಗಳನ್ನು ಅರಿಯುವುದು ಸಾಧ್ಯವಾಗುತ್ತದೆ.

೧೯೪೫ರ ಮಾರ್ಚ್, ಟ್ರೂಮನ್ ಅಧಿಕಾರಕ್ಕೆ ಮೊದಲೇ ಅಮೆರಿಕ ಟೋಕಿಯೊ ಮೇಲೆ ಬಾಂಬೊಂದನ್ನು ಎಸೆದ ಪರಿಣಾಮವಾಗಿ ೧,೨೦,೦೦೦ ಜನ ಕೊಲೆಯಾದರು. ಅದೇ ಕಾಲದಲ್ಲಿ ಜಪಾನಿನ ಹಲವಾರು ನಗರಗಳ ಮೇಲೆ ಬಾಂಬ್ ಸಿಡಿಸಲಾಯಿತು. ಅಮೆರಿಕದ ಭೂಸೇನೆ ಒಕಿನಾವಾ ನಗರದ ಮೇಲೆ ಆಕ್ರಮಣ ಮಾಡಿತು. ಅದೇ ವರ್ಷ ಏಪ್ರಿಲ್‌ನಲ್ಲಿ ನಡೆದ ಭೂ ಯುದ್ಧದಲ್ಲಿ ೬೦ ಸಾವಿರ ಜಪಾನಿ ಸೈನಿಕರು ಮತ್ತು ಲಕ್ಷ ಜನ ಸತ್ತರು. ಜಪಾನ್ ಸೋಲುವ ಸ್ಥಿತಿ ತಲುಪಿತು. ಇನ್ನೊಂದೆಡೆ ಅದರ ಮಿಲಿಟರಿ ಅಧಿಕಾರಿಗಳು ಹೊರಗಿನ ಸಹಾಯಕ್ಕಾಗಿ ಪ್ರಯತ್ನಿಸಿದರು. ಆದರೆ ಮಿತ್ರ ಕೂಟಗಳು, ಯುದ್ಧದಲ್ಲಿ ಈ ಪ್ರಮಾಣದ ಸಾವು ನೋವುಗಳು ಸಾಮಾನ್ಯ ಎಂಬ ತೀರ್ಮಾನಕ್ಕೆ ಬಂದಿದ್ದವು.

ಅಮೆರಿಕ ಅಧ್ಯಕ್ಷ ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್ ಸತ್ತ ನಂತರ, ೧೨ ಏಪ್ರಿಲ್ ೧೯೪೫ರಂದು ಅಧಿಕಾರಕ್ಕೆ ಬಂದ ಹ್ಯಾರಿ ಟ್ರೂಮನ್ ಕೆಲ ದಿನಗಳಲ್ಲೇ ಅಣುಬಾಂಬ್ ಹಾಕುವ ನಿರ್ಧಾರಕ್ಕೆ ಬಂದ. ೪ನೇ ಜುಲೈ ೧೯೪೫ರಂದು ಬ್ರಿಟಿಷ್ ಹಾಗೂ ಕೆನಡಾ ಜೊತೆಗಿನ ಜಂಟಿ ಒಪ್ಪಂದದ ಮೇರೆಗೆ, ಅದಾಗಲೇ ತಯಾರಿಕೆ ಹಂತದಲ್ಲಿದ್ದ ಅಣುಬಾಂಬನ್ನು ಜಪಾನ್ ಮೇಲೆ ಹಾಕುವ ಸಲುವಾಗಿ ಪರೀಕ್ಷೆಗೊಳಪಡಿಸುವ ಅಧಿಕೃತ ಅಧಿಕಾರ ಪಡೆದುಕೊಂಡ. ಆ ಬಾಂಬನ್ನು ತಯಾರಿಸಿದ್ದ

'ಮ್ಯಾನ್ ಹಾಟನ್ ಯೋಜನೆ' ಗೌಪ್ಯವಾಗಿತ್ತು. ಅಮೆರಿಕ ಕಾಂಗ್ರೆಸ್‌ಗೆ ಏನೂ ತಿಳಿದಿರಲಿಲ್ಲ. ರೂಸ್‌ವೆಲ್ಟ್ ಸರ್ಕಾರದಲ್ಲಿ ಉಪಾಧ್ಯಕ್ಷನಾಗಿದ್ದರೂ, ಬಾಂಬ್ ಬಗ್ಗೆ ಟ್ರೂಮನ್‌ಗೆ ತಿಳಿದದ್ದು ಅಧ್ಯಕ್ಷನಾದ ನಂತರ ಮಾತ್ರ. ೭ನೇ ಜುಲೈ ೧೯೪೫ರಲ್ಲಿ ಜಪಾನಿನ ರಾಜ ಸೋವಿಯತ್ ಸರ್ಕಾರದ ಬಳಿ ಹೋಗಿ ಜಪಾನ್, ಅಮೆರಿಕ ನಡುವೆ ಸಂಧಾನ ಮಾಡಿಸಲು ಕೇಳಿಕೊಂಡ. ಆದರೆ ಆಗಿನ ಸೋವಿಯತ್ ನಾಯಕ ಮೋಲೊಟೊವ್ 'ಸಮಸ್ಯೆಯನ್ನ ಅಧ್ಯಯನ ಮಾಡುತ್ತೇವೆ' ಎಂದಷ್ಟೇ ಹೇಳಿದ.

೧೬ನೇ ಜುಲೈ ೧೯೪೫, ನಸುಕು ೫.೩೦ರಲ್ಲಿ ನ್ಯೂ ಮೆಕ್ಸಿಕೊದ ಅಲ್ಮಗೊರ್ಡೋ ಮರುಭೂಮಿಯಲ್ಲಿ ಪ್ಲುಟೋನಿಯಂ ಬಾಂಬ್ ಪರೀಕ್ಷಿಸಲಾಯಿತು. ನಂತರ ಆ ಬಾಂಬ್ ತಯಾರಿಸಲು ಶ್ರಮಿಸಿದ ಅಣು ವಿಜ್ಞಾನಿಗಳು ಹಾಗೂ ಜನರಲ್ ವೈಟ್ ಐಸೆನ್ ಹೋವರ್‌ನಂತಹ ಪ್ರಮುಖ ವ್ಯಕ್ತಿಗಳ ಎಚ್ಚರಿಕೆ, ಭಿನ್ನಾಭಿಪ್ರಾಯಗಳ ನಡುವೆಯೂ ಆ ಬಾಂಬ್ ಸಿಡಿಸುವ ಯೋಜನೆ ಮುಂದುವರೆಯಿತು. 'ಟ್ರಿನಿಟಿ' ಎಂಬ ಸಂಕೇತ ನಾಮದಿಂದ ಕರೆಯಲಾದ ಈ ಯೋಜನೆಯನ್ನ ಧಾರ್ಮಿಕವಾಗಿ ಕಂಡ ಕೆಲವರು, ಇದು ಕ್ರಿಸ್ತನ ಎರಡನೇ ಬರುವಿಕೆಯ ಸಂಕೇತ ಎಂದು ಕರೆದು ಮತಾಂಧತೆ ಪ್ರದರ್ಶಿಸಿದರು.

೨೧ ಜುಲೈ ೧೯೪೫ರಂದು ಪಾಟ್ಸ್‌ಡ್ಯಾಂ ಸಮ್ಮೇಳನದಲ್ಲಿ ಹಾಜರಿದ್ದ ಟ್ರೂಮನ್‌ಗೆ, ಬಾಂಬ್ ಪರೀಕ್ಷೆ ನಡೆಸಿದ ಬಗ್ಗೆ ಸಂಪೂರ್ಣ ವರದಿ ತಲುಪಿಸಲಾಯಿತು. ಅದನ್ನು ಓದಿ ಹಿಗ್ಗಿದ ಟ್ರೂಮನ್, ಬ್ರಿಟನ್ ಪ್ರಧಾನಿ ಚರ್ಚಿಲ್‌ಗೆ "Babies Satisfactorily Born" ಎಂಬ ಸಂದೇಶ ಕಳಿಸಿದ. ಆದರೆ ಅದೇ ದಿನ ೬೦ ಅಣು ವಿಜ್ಞಾನಿಗಳು ಸಹಿ ಮಾಡಿದ ಆಕ್ಷೇಪಣಾ ಪತ್ರವೊಂದನ್ನು ಅಧ್ಯಕ್ಷ ಟ್ರೂಮನ್‌ಗೆ ಕಳಿಸಿದರು. ಒಕ್ಕಣೆ ಹೀಗಿತ್ತು : "ಜಪಾನ್ ಮೇಲೆ ಈ ಬಾಂಬನ್ನ ಎಸೆಯಬಾರದು. ಹಾಗೆ ಮಾಡುವ ಸಂದರ್ಭ ಬಂದರೆ ಮೊದಲು ಅವರಿಗೆ ಈ ಬಾಂಬ್ ಬಗ್ಗೆ ತಿಳುವಳಿಕೆ ಮತ್ತು ಎಚ್ಚರಿಕೆ ಕೊಡಬೇಕು, ಇದರಿಂದ ಜಪಾನ್‌ಗೆ ಶರಣಾಗಲು ಒಂದು ಅವಕಾಶ ನೀಡಿದಂತಾಗುತ್ತದೆ" ಆ ಪತ್ರವನ್ನು ಗಣನೆಗೆ ತೆಗೆದುಕೊಂಡ ಟ್ರೂಮನ್ ಪಾಟ್ಸ್‌ಡ್ಯಾಂನಿಂದ ತನ್ನ ಅಂತಿಮ ನಿರ್ಣಾಯಕ ಸಂದೇಶವನ್ನ ಜಪಾನಿಗೆ ರವಾನಿಸಿದ. ಜಪಾನಿನ ಉದ್ದಗಲಕ್ಕೂ ಆಗಸದಿಂದ ಕರಪತ್ರಗಳನ್ನ ಹಾಕಿ ಘೋರ ವಾಯುದಾಳಿ ಬಗ್ಗೆ ಹೆದರಿಸಲಾಯಿತು. ಆದರೆ ಬಾಂಬಿನ ದುಷ್ಪರಿಣಾಮದ ಗುಟ್ಟನ್ನ ಮಾತ್ರ ಬಹಿರಂಗಪಡಿಸಲಿಲ್ಲ !

ಆಗಸ್ಟ್ ೧, ೧೯೪೫ರಂದು 'Little Boy' ಎಂಬ ಹೆಸರಿನ ಬಾಂಬನ್ನು ಜೋಡಣೆ ಮಾಡಲಾಯಿತು. ಆಗಸ್ಟ್ ೨ರಂದು ಜಪಾನಿನ ವಿದೇಶಾಂಗ ಸಚಿವರನ್ನು ಮಾಸ್ಕೊದಲ್ಲಿನ ಜಪಾನಿನ ರಾಯಭಾರಿ ಸಾಟೋ ಅವರನ್ನು ಭೇಟಿ ಮಾಡಲು ಕಳಿಸಿ 'ಇನ್ನು ಒಂದು ದಿನ ತಡವಾದರೂ ಸಾವಿರ ವರ್ಷಗಳವರೆಗೆ ವಿಷಾದಿಸಬೇಕಾಗಬಹುದು. ಆದ್ದರಿಂದ ಈ ಕೂಡಲೇ ರಷ್ಯಾದ ಅಧ್ಯಕ್ಷ ಮೊಲೊಟೊವ್‌ರನ್ನು ಭೇಟಿ ಮಾಡಿ ಬದಲಿ ಮಾರ್ಗೋಪಾಯ ಕುರಿತು ಚರ್ಚಿಸಿ' ಎಂದು ತಿಳಿಸಲಾಯಿತು.

ಆಗಸ್ಟ್ ೬, ೧೯೪೫ರ ಬೆಳಗ್ಗೆ ನಿಗದಿಯಾದಂತೆ ಕರ್ನಲ್ ಪಾಲ್ ಡಬ್ಲ್ಯೂ ಬೆಟ್ಸ್ (ಮಿಯಾಲ ಫ್ಲೋರಿಡಾದ ಸಹಾಯಕ)ನಿಗೆ ಎಂದಾಗೇ ವಿಮಾನದಲ್ಲಿ ತೆರಳಿ 'ಲಿಟ್ಲ್‌ಬಾಯ್'

ಬಾಂಬನ್ನು ಹಿರೋಷಿಮಾ ಮೇಲೆ ಹಾಕುವಂತೆ ಆದೇಶಿಸಲಾಯಿತು. ನಾರ್ತ್ ಕ್ಯಾರೋಲಿನದ ಮೊಕ್‌ವಿಲ್ಲೆಯ ಮೇಜರ್ ತಾಮಸ್ ಡಬ್ಲ್ಯೂ ಫೆರ್‌ಬೀ ಬಾಂಬನ್ನು ಬಿಡುಗಡೆ ಮಾಡಿದ. ಬಿಸಿಲಿನ ದಿನ, ಯಾವುದೇ ಯುದ್ಧ ವಿಮಾನಗಳೂ ಅವರನ್ನ ವಿರೋಧಿಸಲಿಲ್ಲ. ಆಗಸದಲ್ಲಿ ಎರಡು ವಿಮಾನಗಳು ಮಾತ್ರ ಕಂಡಾಗ ಆಲ್ ಕ್ಲಿಯರ್ ಸಿಗ್ನಲ್ ಮೊಳಗಿತು. ಆ ಕ್ಷಣ ಹಿರೋಷಿಮಾ ಹೃದಯ ಭಾಗದ ಶಿಮಾ ಆಸ್ಪತ್ರೆ ಮೇಲೆ ಸುಮಾರು ೬೩೦ ಗಜ ಎತ್ತರದಲ್ಲಿ ಬಾಂಬ್ ಸಿಡಿಯಿತು. ಜನ ತಮ್ಮ ಬೆಳಗಿನ ಪ್ರಾರ್ಥನೆ ಮುಗಿಸಿ ದುಡಿಮೆಯ ಹಾದಿಯಲ್ಲಿ ಸಾಗಿದ್ದರು.

ಬಾಂಬ್ ಸಿಡಿತದಿಂದ ಉದ್ಭವಿಸಿದ ಬೃಹತ್ ಬೆಂಕಿ ಚೆಂಡು ೧೨೮,೦೦೦ ಅಡಿಗಳಷ್ಟು ಅಗಲವಾಗಿತ್ತು. ಅದರ ಕೇಂದ್ರದ ತಾಪಮಾನ ನೂರು ಮಿಲಿಯನ್ ಡಿಗ್ರಿ ಫ್ಯಾರನ್ ಹೀಟ್ ಇತ್ತು. ಅದರತ್ತ ನೋಡಿದ ಎಲ್ಲರೂ ತಮ್ಮ ದೃಷ್ಟಿ ಕಳೆದುಕೊಂಡರು. ೧೩೦,೦೦೦ ಜನಸಂಖ್ಯೆ ಹೊಂದಿದ್ದ ಹಿರೋಷಿಮಾ ನಗರದಲ್ಲಿ ಬಾಂಬ್ ಬಿದ್ದ ಸ್ಥಳದಿಂದ ಸುತ್ತಲ ಸುಮಾರು ನಾಲ್ಕು ಚದರ ಮೈಲಿವರೆಗೆ ಎಲ್ಲ ನಾಶವಾಯಿತು. ಬಾಂಬ್ ಸ್ಫೋಟದ ಒತ್ತಡ ಹಾಗೂ ಬೆಂಕಿಯಿಂದ ಧ್ವಂಸಗೊಂಡ ಮನೆಗಳು ಎರಡು ದಿನಗಳ ಕಾಲ ಉರಿದವು. ಅಂಗಡಿ, ಮನೆ, ಚರ್ಚು, ಆಸ್ಪತ್ರೆ, ಶಾಲಾ ಕಾಲೇಜು, ಕಛೇರಿ-ಹೀಗೆ ಎಲ್ಲಾ ವಿಧದ ಸುಮಾರು ೮೮,೨೫೫ ಕಟ್ಟಡಗಳು ನಿರ್ನಾಮವಾದವು. ಆ ಸ್ಫೋಟದ ಕೇಂದ್ರ ಭಾಗದಲ್ಲಿ ಸಿಲುಕಿದ ಅನೇಕರು ಆವಿಯಾದರು. ಮಿಕ್ಕವರು ಕರಕಲು ಹೆಣವಾದರು. ಸಾಯದೇ ಬದುಕಿದವರ ಮೈ ಚರ್ಮ ಸುಲಿದು ಜೋತು, ರಕ್ತ ಒಸರುತ್ತಿತ್ತು. ವಿಕಾರ ರೂಪದ ಕಾಲ್ಪನಿಕ ದೆವ್ವಗಳಂತೆ ನೋಡಲು ಭಯಾನಕವಾಗಿದ್ದರು ಎಂದು, ಮಾತನಾಡಲು ತ್ರಾಣ ಉಳಿಸಿಕೊಳ್ಳುವ ಮಟ್ಟಿಗೆ ಅದೃಷ್ಟವಂತರೆನಿಸಿಕೊಂಡ ಅಲ್ಲಿನ ಜನ ತಮ್ಮ ಕರಾಳ ಅನುಭವ ಹೇಳಿಕೊಂಡರು.

ಜಪಾನಿನ ಸುದ್ದಿ ಮಾಧ್ಯಮಗಳು ಈ ಘೋರತೆಯನ್ನ ವಿವರವಾಗಿ ವರದಿ ಮಾಡಲಿಲ್ಲ. ಬದಲಿಗೆ, ಹಿರೋಷಿಮ ಹಂತಕರ ಬಾಂಬ್ ದಾಳಿಗೆ ಸಿಲುಕಿದ್ದರಿಂದ ನಗರ ಹಾಗೂ ನಾಗರೀಕರಿಗೆ ಸ್ವಲ್ಪ ನಷ್ಟವಾಗಿದೆ ಎಂದಷ್ಟೇ ವರದಿ ಮಾಡಿದ್ದವು.

ಹಿರೋಷಿಮಾ ಮೇಲೆ ಬಾಂಬ್ ದಾಳಿ ನಡೆದ ನಂತರ, ಪಾಟ್ಸ್ ಡ್ಯಾಂ ಸಮ್ಮೇಳನ ಮುಗಿಸಿಕೊಂಡು ಸೋವಿಯತ್ ಪ್ರಧಾನಿ ಮೆಲೊಟೊವ್ ಮಾಸ್ಕೋಗೆ ಹಿಂದಿರುಗಿದರು. ಆಗಸ್ಟ್ ೮, ೧೯೪೫ರಂದು ರಷ್ಯಾದಲ್ಲಿನ ಜಪಾನಿನ ರಾಯಭಾರಿ ಸಾಟೋ ಅವರನ್ನು ಸಂಪರ್ಕಿಸಿದಾಗ ಮೆಲೊಟೋವ್ 'ಯಲ್ಟಾ ಸಮ್ಮೇಳನದಲ್ಲಿ ಕೊಟ್ಟ ಆಶ್ವಾಸನೆ ಈಡೇರಿಸಲು, ನಾವೀಗ ಜಪಾನಿನ ಮೇಲೆ ಯುದ್ಧ ಸಾರುತ್ತಿದ್ದೇವೆ', ಎಂದು ಘೋಷಿಸಿದರು. ಜಪಾನ್, ಅಮೆರಿಕ ನಡುವಿನ ಸಂಧಾನ ಮುರಿದು ಬಿತ್ತು.

ಆಗಸ್ಟ್ ೯, ೧೯೪೫ರಂದು ನಾಗಾಸಾಕಿ ಮೇಲೆ ಮತ್ತೊಂದು ಅಣುಬಾಂಬ್ ಹಾಕಲಾಯಿತು. ಅದರ ಹೆಸರು "ಫ್ಯಾಟ್ ಮ್ಯಾನ್". ಇದರಿಂದಾಗಿ ಆಗಸ್ಟ್ ೧೧, ೧೯೪೫ರಂದು ಜಪಾನಿನ ರಾಜ, ಪಾಟ್ಸ್ ಡ್ಯಾಂನ ಶಾಂತಿ ನಿರ್ಬಂಧಗಳನ್ನ ಅನ್ಯಮಾರ್ಗವಿಲ್ಲದೆ ಒಪ್ಪಿಕೊಳ್ಳಬೇಕಾಯಿತು. ನಾಗಸಾಕಿ ಮೇಲೆ ಸಿಡಿಸಿದ ಬಾಂಬನ್ನ ಪ್ಲುಟೋನಿಯಂ ಮತ್ತು ಹಿರೋಷಿಮಾ

ಮೇಲೆ ಸಿಡಿಸಿದ ಬಾಂಬನ್ನ ಯುರೇನಿಯಂನಿಂದ ಮಾಡಲಾಗಿತ್ತು. ಉದ್ದೇಶ ಈ ಎರಡೂ ರೀತಿಯ ಬಾಂಬ್‌ಗಳಿಂದ ಆಗಬಹುದಾದ ನಿಖರ ದುಷ್ಪರಿಣಾಮಗಳ ಅಧ್ಯಯನ. ನಾಗಾಸಾಕಿಯಲ್ಲಿ ಹಾಕಿದ ಬಾಂಬ್ ನೆಲದಿಂದ ಸುಮಾರು ೫೫೫ ಗಜ ಎತ್ತರದಲ್ಲಿ ಮೆಡಿಕಲ್ ಯೂನಿವರ್ಸಿಟಿ ಹತ್ತಿರ ಸ್ಫೋಟಗೊಂಡಿತ್ತು.

ತತ್ತರಿಸಿದ ಜಪಾನ್ ಆಗಸ್ಟ್ ೧೪, ೧೯೪೫ರಂದು ತನ್ನ ಶರಣಾಗತಿಯನ್ನು ಜಗತ್ತಿಗೆ ಸಾರಿತು. ೧೯೫೦ರಲ್ಲಿ ಜಪಾನ್ ಪ್ರಕಟಿಸಿದ ಪುಟ್ಟ ಪುಸ್ತಕದಲ್ಲಿ, ಅಣುಬಾಂಬ್ ಸ್ಫೋಟದಲ್ಲಿ ಬದುಕುಳಿದ ೧೬೪ ನತದೃಷ್ಟರು ತಮ್ಮ ಅನುಭವ ಕಥನಗಳನ್ನು ಹೇಳಿಕೊಂಡು, ಜಗತ್ತಿಗೆ ಒಂದು ವಿನಮ್ರ ಮನವಿ ಮಾಡಿಕೊಂಡಿದ್ದರು. "ದಯಪಿಟ್ಟು ಈ ಜಗತ್ತಿನಲ್ಲಿ ಮುಂದೆಂದೂ ಯುದ್ಧಗಳು ನಡೆಯದಿರಲಿ". ಆದರೆ ಈ ಪುಸ್ತಕವನ್ನ ಪಟ್ಟಭದ್ರ ಹಿತಾಸಕ್ತಿಗಳು ನಿಷೇಧಿಸಿದವು. ೧೯೮೧ ಏಪ್ರಿಲ್ ಮತ್ತೆ ಪತ್ತೆ ಹಚ್ಚಿ ಹೊರತರುವವರೆಗೂ ನಿಷೇಧದಲ್ಲೇ ಇತ್ತು. ಬದುಕುಳಿದ ತಾವು ಕಂಡ ದಾರುಣ ದೃಶ್ಯಗಳನ್ನು ವರ್ಣಿಸಿದ್ದರು.

ದೇಹಗಳಿಂದ ಚರ್ಮ ಸುಲಿದುಕೊಂಡು, ಮಾಂಸದ ಮುದ್ದೆಯಂತೆ ಕುಳಿತಿದ್ದವರು ಉರಿ, ಸಂಕಟ ತಾಳಲಾರದೆ ನದಿಗೆ ಹಾರಿ ದೇಹಗಳನ್ನು ತಂಪಾಗಿಸಿಕೊಳ್ಳಲು ವ್ಯರ್ಥ ಪ್ರಯತ್ನ ಮಾಡುತ್ತಿದ್ದರು. ಕುಸಿದು ಬಿದ್ದ ಕಟ್ಟಡಗಳ ಅಡಿಯಲ್ಲಿ ಸಿಕ್ಕಿಕೊಂಡಿದ್ದ ಮಕ್ಕಳ ಆರ್ತನಾದ ದೂರದವರೆಗೆ ತೇಲಿ ಬರುತ್ತಿತ್ತು. ಅವರ ಕುಟುಂಬದ ಸದಸ್ಯರು ಬಾಂಬ್ ದಾಳಿಯಿಂದ ಆವಿಯಾಗಿದ್ದರು ಇಲ್ಲವೇ ವಿರೂಪಿಗಳಾಗಿದ್ದರು ; ಮೈ ಚರ್ಮ ಕರಗಿ ಉಂಡೆಗಟ್ಟಿತ್ತು.

ಅವರೂ ಅವರ್‍ಯಾರೂ ತಮ್ಮ ಮೇಲೆ ಬಾಂಬ್ ಹಾಕಿದ ಅಮೆರಿಕ ಮೇಲೆ ದ್ವೇಷವುಳ್ಳವರಂತೆ ಕಾಣುತ್ತಿರಲಿಲ್ಲ. ಬದಲಾಗಿ ಬಹಳಷ್ಟು ಜನ ಈ ಸ್ಥಿತಿಗೆ ಕಾರಣರಾದ ತಮ್ಮ ಸಾಮ್ರಾಟರನ್ನು ದೂಷಿಸಿದರು. ಜಗತ್ತಿನಲ್ಲಿ ಪರಮಾಣು ಬಾಂಬ್ ಅಸ್ತಿತ್ವ ಊಹಿಸಿಕೊಳ್ಳಲು ಆ ನತದೃಷ್ಟರಿಗೆ ಸಾಧ್ಯವಿರಲಿಲ್ಲ. ಎದೆ ನಡುಗಿಸುವಂತಹ ಅನುಭವಗಳನ್ನ ಜಗತ್ತಿನ ಜನ ಪ್ರತ್ಯಕ್ಷ ಆಲಿಸಲು ಅವಕಾಶಗಳನ್ನು ನಿರಾಕರಿಸಲಾಗಿತ್ತು. ಅವರಿಗಾದ ಗಾಯ ಹಾಗೂ ಘಾಸಿಗಳನ್ನು ಅಮೆರಿಕ, ಜಪಾನ್ ಮರೆಮಾಚಿದ್ದರಿಂದ ಅವು ವಾಸಿಯಾಗಲು ಸಾಧ್ಯವೇ ಆಗಲಿಲ್ಲ.

ಈ ಕರಾಳ ಐತಿಹಾಸಿಕ ಘಟನೆ ದಾಖಲಿಸಲು ಅಮೆರಿಕ ಸುಮಾರು ೮೫ ಸಾವಿರ ಅಡಿ ಫಿಲಂ ರೀಲು ಬಳಸಿತ್ತು. ಆದರೆ ಇದು ೧೯೮೦ರವರೆಗೂ ಯಾರಿಗೂ ನೋಡಲು ಸಿಗದೆ ಅಮೆರಿಕದ ಸಂಗ್ರಹಾಲಯದಲ್ಲೇ ಬಿದ್ದಿತ್ತು. ಆದರೂ ಜಪಾನಿ YMCA, ೧೯೮೦ ರಿಂದ ವಂತಿಗೆ ಸಂಗ್ರಹಿಸಿ ಇದನ್ನು ಖರೀದಿಸುವ ಉತ್ಸುಕತೆ ತೋರಿದೆ. ಸಾಕ್ಷ್ಯ ಚಿತ್ರ ತಯಾರಿಸಿ, ಅಣುಬಾಂಬ್ ಬಳಕೆ ತಡೆಗಟ್ಟುವ ಉದ್ದೇಶ ಜಪಾನಿಗಿದೆ.

ಜಗತ್ತಿನಲ್ಲಿ ಪರಮಾಣುವಿನಿಂದ ಸಂಭವಿಸಿರುವ ಸಾವು-ನೋವುಗಳ ಅಂಕಿ ಅಂಶಗಳನ್ನು ಯಾವ ರಾಷ್ಟ್ರವೂ ಪ್ರಕಟಿಸಿಲ್ಲ. ೧೯೭೫ರಲ್ಲಿ ವಿಶ್ವ ಸಂಸ್ಥೆಗೆ ಸಲ್ಲಿಸಿದ ವರದಿ, ಕಳೆದ ೩೦ ವರ್ಷಗಳಲ್ಲಿ ಹಿರೋಷಿಮಾ ನಾಗಾಸಾಕಿಗಳಲ್ಲಿ ಅಣುಬಾಂಬ್‌ನಿಂದ ಘಟಿಸಿದ ಸಾವು-ನೋವುಗಳ ಸಂಖ್ಯೆ ೨೪೦,೦೦೦ ಎಂದು ಹೇಳುತ್ತದೆ. ೧೯೭೮ರಲ್ಲಿ ವರದಿಯಾದ ೨೦೦೦ ಕ್ಯಾನ್ಸರ್

ಸಂಬಂಧಿ ಸಾವುಗಳು ೧೯೪೫ರ ಅಣುಬಾಂಬಿನ ಪರಿಣಾಮ ಹೊಂದಿದ್ದವು ಎಂದು ಶಂಕಿಸಲಾಗಿದೆ. ಹಿರೋಷಿಮಾ, ನಾಗಾಸಾಕಿಗಳಲ್ಲಿ ವರದಿಯಾಗಿರುವ ಬಾಂಬ್ ಸಂಬಂಧಿ ಗಾಯಾಳುಗಳ ಸಂಖ್ಯೆ ೨ನೇ ಮಹಾ ಯುದ್ಧದಲ್ಲಿ ಯೂರೋಪ್ ಹಾಗೂ ಪೆಸಿಫಿಕ್ ಪ್ರಾಂತಗಳಲ್ಲಿ ಕೊಲ್ಲಲ್ಪಟ್ಟ ಅಮೆರಿಕದ ಸೈನಿಕರಿಗಿಂತ ಅಧಿಕ.

ಜಗತ್ತೆ ಒಕ್ಕೊರಲಿನಿಂದ ಖಂಡಿಸಿದ ಈ ದುಷ್ಕೃತ್ಯದ ರೂವಾರಿ ಅಮೆರಿಕ ಅಧ್ಯಕ್ಷ ಟ್ರೂಮನ್‌ಗೆ ಇದರ ಬಗ್ಗೆ ವಿಷಾದವಿರಲಿಲ್ಲ. ಆತ ತನ್ನ ನಿಲುವನ್ನು ಸಮರ್ಥಿಸಿಕೊಳ್ಳಲು ಮಿಲಿಟರಿ ತತ್ವವನ್ನು ಹೀಗೆ ವ್ಯಾಖ್ಯಾನಿಸಿದ : "ಬಾಂಬ್ ಕಂಡುಹಿಡಿದ್ವಿ, ಬಳಸಿದ್ವಿ". ತಾನು ಬಲಿಷ್ಠ ರಾಷ್ಟ್ರ ಎಂದು ತೋರಿಸಿರುವುದರಿಂದ ಇನ್ನು ಮುಂದೆ ಯಾವ ದೇಶವೂ ಯುದ್ಧಕ್ಕೆ ಮುಂದಾಗಲಾರದು ಎಂದು ಬೀಗಿದ ಅಮೆರಿಕದ ನಂಬಿಕೆ ಬಹು ಬೇಗ ಸುಳ್ಳಾಯಿತು. ಅಣು ಬಾಂಬಿನಿಂದ ಬೆಚ್ಚಿದ ಬಹುತೇಕ ರಾಷ್ಟ್ರಗಳು ತಮ್ಮ ರಕ್ಷಣಾ ವ್ಯವಸ್ಥೆ ವೃದ್ಧಿಸಿಕೊಳ್ಳಲು ದುಪ್ಪಟ್ಟು ಹಣ ಮೀಸಲಾಗಿರಿಸತೊಡಗಿದವು. ಶಸ್ತ್ರಾಸ್ತ್ರ ಪೈಪೋಟಿ ಜಗತ್ತನ್ನೇ ಆವರಿಸಿಕೊಂಡಿತು. ನಾಶದ ಭಯ ರಾಷ್ಟ್ರಗಳನ್ನ ಭೂತದಂತೆ ಕಾಡುತ್ತಿದೆ. ರಾಷ್ಟ್ರವೊಂದು, ತನ್ನ ಶತ್ರು ರಾಷ್ಟ್ರವು ಎಚ್ಚೆತ್ತುಕೊಳ್ಳುವ ಮೊದಲೇ ದಾಳಿ ನಡೆಸಿ ಅದನ್ನು ಸರ್ವನಾಶ ಮಾಡಬಲ್ಲ ಶಕ್ತಿ ಈ ಅಣ್ವಸ್ತ್ರಗಳಿಗಿದೆ. ಆತಂಕದ ಸ್ಥಿತಿ ನಿರ್ಮಾಣವಾಗಿರುವುದರಿಂದ ಸದಾ ತಮ್ಮ ಶಸ್ತ್ರಾಸ್ತ್ರ ಸುಧಾರಿಸುವ ಸನ್ನಿವೇಶ ಎದುರಾಗಿ ೧೯೩೯ರವರೆಗೂ ಇದ್ದ ಜಗತ್ತಿನ ಶಾಂತಿಕಾಲದ ಅರ್ಥವ್ಯವಸ್ಥೆ ಅರ್ಥ ಕಳೆದುಕೊಂಡು ಇಲ್ಲವಾಯಿತು. ೧೯೪೫ರಿಂದ ಜಗತ್ತು ಅಣು ಯುದ್ಧದ ಒತ್ತೆಯಾಳಾಗಿ ನಡುಗುತ್ತಿದೆ.

ಮೂಲ : **No Immediate Danger - Prognosis for A Radio Active Earth.**

●

ಮರುವಸಾಹತೀಕರಣ ಹಿಂಸೆ ವಿರುದ್ಧ ಫಿಲಿಫೈನ್ಸ್

ಮೂಲ : ವಿಕ್ಟೋರಿಯ ತಾಲಿ-ಕರ್ಪೂಜ್

ಅಭಿವೃದ್ಧಿಯ ಏಕಸಂಸ್ಕೃತೀಕರಣಕ್ಕೆ ನಾವು ದೇಸಿ ಜನತೆ ಒಡ್ಡಿದ ಪ್ರತಿರೋಧವೇ ಇಂದು ಜಗತ್ತಿನ ಜೈವಿಕ ವೈವಿಧ್ಯತೆ ಮತ್ತು ಸಂಸ್ಕೃತಿಯ ಉಳಿವಿಗೆ ದೊಡ್ಡ ಕಾರಣ. ಇಂದು ಜಾಗತಿಕ ಮಾರುಕಟ್ಟೆಯ ಆರ್ಥಿಕ ಶಕ್ತಿಗಳ ಕ್ರೋಢೀಕರಣ ಮತ್ತು ವಿಸ್ತರಣೆಯಿಂದ ಜೈವಿಕ ವೈವಿಧ್ಯತೆ, ಹಿಂದೆಂದೂ ಇಲ್ಲದಷ್ಟು ಆತಂಕ ಎದುರಿಸುತ್ತಿದೆ. ಆರ್ಥಿಕ ಅಭಿವೃದ್ಧಿ, ಜಾಗತೀಕರಣ ಮತ್ತು ವ್ಯಾಪಾರ ಉದಾರೀಕರಣಗಳು ಅಭಿವೃದ್ಧಿ ಮತ್ತು ಪ್ರಗತಿಯ ಸಾಂಕೇತಿಕ ಸ್ವರೂಪ ಪಡೆದುಕೊಂಡಿವೆ. ನಾವು ಯಾಕೆ ಇದನ್ನ ಪ್ರತಿರೋಧಿಸಬೇಕು ? ಹ್ಯಾಗೆ ಪ್ರತಿರೋಧಿಸುತ್ತಿದ್ದೇವೆ ? ಈ ಪ್ರತಿರೋಧಕ್ಕಾಗಿ ನಾವು ತೆತ್ತ, ಮುಂದೆ ಕೂಡ ತೆರುತ್ತಾ ಹೋಗಬೇಕಾದ ಬೆಲೆಯೇನು ? ಈ ಪ್ರತಿರೋಧ ಮುಂದುವರೆಸುವ ಮೌಲ್ಯವುಳ್ಳದ್ದೇ ?

ನಾವು ಹುಟ್ಟಿದಾಗಿನಿಂದ ಈ ಶಾಲೆ, ಈ ಚರ್ಚು ಮತ್ತು ಈ ಪೀಡೆ ಸರ್ಕಾರಗಳು, 'ನಿಮ್ಮ ವಿಧಾನಗಳು ಅನಾಗರೀಕ, ರಾಕ್ಷಸೀಯ' ಅಂತಾ ನಮ್ಮ ತಲೆಗೆ ಹಾಕುತ್ತಾ ಬಂದವು. ಫಿಲಿಫೈನ್ಸ್‌ನ ಕಾರ್ಡಿಲೆರಾ ಪ್ರಾಂತದಲ್ಲಿದ್ದ ನನ್ನ ತಾತ-ಅಜ್ಜಿ, ತಂದೆ-ತಾಯಿ ಎಲ್ಲರೂ ಇದನ್ನ ಅನುಭವಿಸಿದ್ದಾರೆ. ನಾವು ಕೀಳುಜನ ಅಂತಾ ನಂಬಿಸಲು ವಸಾಹತುಶಾಹಿಗಳು ಬಳಸಿದ ಸಾಧನಗಳೆಂದರೆ ಶಿಲುಬೆ, ಬಂದೂಕು ಮತ್ತು ಶಾಲೆಗಳು. ಈ ದ್ರಾಬೆಗಳು ನಮಗೆ ಕಲಿಸಿಕೊಟ್ಟ ಹಾಡುಗಳನ್ನ ನೋಡಿ : "ಏನ್ ಮಜಾ ಐತೆ ಬಿದ್ರೀ ಭತ್ತ ನೆಡೋದ್ರಾಗೆ ? ಏನ್ರೀ ಐತೆ ಚಂದ ಭತ್ತ ನೆಡೋದ್ರಾಗೆ ?" ಅಥವಾ "ಅಮೆರಿಕ...ಅಮೆರಿಕ. ಸೋದರ ಸಂಬಂಧದ ಒಳಿತಿಗೆ ಕಿರೀಟ, ಅಮೆರಿಕಾ-ಅಮೆರಿಕಾ, ಹೊಳೆಯೋ ಕಡಲಿಂದ ಕಡಲಿನ ತನಕ ಅಮೆರಿಕಾ...ಅಮೆರಿಕಾ"-ಆದರೆ ಶಾಲೆಯಲ್ಲಿ ನಾವು ಮಾತೃಭಾಷೆಯಲ್ಲಿ ಮಾತಾಡಿದರೆ ದಂಡ ಹಾಕುತ್ತಿದ್ದರು. ನಮ್ಮಲ್ಲಿ ಕೆಲವರು ವಸಾಹತೀಕರಣದ ವಾಂಛೆಗಳಿಗೆ ಒಳಗಾದರು. ಬಿಳಿ ಕಾಲರಿನ ಸಾಹೇಬನಾಗುವುದು, ಅಂತಾ ಕೆಲಸ ಗಿಟ್ಟಿಸಿಕೊಳ್ಳುವುದು ಅವರ ಅತಿ ದೊಡ್ಡ ಕನಸಾಗಿತ್ತು ; ಮಣ್ಣನ್ನ ಮತ್ತೆ ಮುಟ್ಟುವ ಗೊಡವೆಗೆ

ಹೋಗದಿರುವುದು, ಉಗುರಿನ ಕಣ್ಣಿಗೆ ಮಣ್ಣು ತಾಕದಂತೆ ಬಾಳುವುದು, ಅಮೆರಿಕಾಗೆ ಹೋಗುವುದು ಅವರ ಕನಸಾಗಿತ್ತು ; ಆದರೆ ಬಹಳಷ್ಟು ಜನ ಇದನ್ನ ಪ್ರತಿಭಟಿಸಿದರು.

ನಮ್ಮ ಹಿರೀಕರ ಹೃದಯಗಳಲ್ಲಿ ಈ ಪ್ರತಿರೋಧದ ಕೆಂಡ ಜೀವಂತವಾಗಿತ್ತು. ೫೦ರ ದಶಕದಲ್ಲಿ ಹುಟ್ಟಿದ ನಮ್ಮ ಕೆಲವರಲ್ಲಿ ಈ ಕೆಂಡ ಬೆಂಕಿಯಾಗಿ ಭುಗಿಲೆದ್ದಿತು. ನನಗೆ ನೆನಪಾಗುತ್ತಿದೆ, ಘಟ್ಟದ ಕೆಳಗಿನ ನನ್ನ ಸಹಪಾಠಿಗಳು ನನ್ನ igorot ಅಂತಾ ತಿಳಿದು, 'ಬಾಲ ಎಲ್ಲಿ' ಅಂತಾ ಕೇಳುತ್ತಿದ್ದರು ; ಅವರೊಂದಿಗಿನ ಜಗಳ ನೆನಪಾಗ್ತಿದೆ.

igorot ಅಂತಾ ಹೇಳಿಕೊಳ್ಳೋಕೆ ಸಂಕೋಚ ಮಾಡಿಕೋಬೇಡ ಅಂತಾ ನನ್ನ ತಂದೆ ಹೇಳುತ್ತಿದ್ದುದು ನನಗೆ ನೆನಪಾಗ್ತಿದೆ ; ಆದರೆ ಎಷ್ಟೊಂದು igorot ವಿದ್ಯಾರ್ಥಿಗಳು ನಾವು, igorot ಅಲ್ಲಾ ಅಂತಾ ನಿರಾಕರಿಸುತ್ತಿದ್ದೆವಲ್ಲ ಅದು ಮಾತ್ರ ದುಃಖದ ನೆನಪು.

ಯುದ್ಧ ಹೊತ್ತಿ ಉರಿಯುತ್ತಿತ್ತು. ವಿದ್ಯಾರ್ಥಿಗಳು ಅಮೆರಿಕ ಸಾಮ್ರಾಜ್ಯಶಾಹಿ ವಿರುದ್ಧ ಪ್ರತಿಭಟಿಸಿದರು. ನಾವು ಚರಿತ್ರೆಯ ಮರುಓದು ಶುರು ಮಾಡಿಕೊಂಡಾಗ ನಮಗೆ ಹೇಳಿರುವ ಸುಳ್ಳುಗಳ ಅರಿವಾಯಿತು. ನಮ್ಮ ಚರಿತ್ರೆ ಪುಸ್ತಕಗಳನ್ನ ಬರೆದ ಅಮೆರಿಕನ್ ಲೇಖಕರು ಅಥವಾ ಅಮೆರಿಕದ ತರಬೇತಿ ಪಡೆದ ಫಿಲಿಫಿನೋ ಲೇಖಕರು ನಮ್ಮ ಜನತೆಯ ಹೋರಾಟ ಮತ್ತು ನಾಯಕರನ್ನ ಗೌಣಗೊಳಿಸಿದ್ದರು.

ತಾರತಮ್ಯ ಮತ್ತು ದಮನದ ವಿರುದ್ಧ ನಮ್ಮ ದೇಸಿ ಜನತೆ ನಡೆಸುತ್ತಿದ್ದ ಹೋರಾಟವನ್ನ, ಸಾರ್ವಭೌಮತೆ ಮತ್ತು ಪ್ರಜಾಸತ್ತೆಗಾಗಿ ನಡೆಯುತ್ತಿದ್ದ ರಾಷ್ಟ್ರೀಯ ಹೋರಾಟದ ಜೊತೆಗೆ ಹೆಣೆದ igorot ವಿದ್ಯಾರ್ಥಿ ಒಕ್ಕೂಟದ ಭಾಗವಾದೆ ನಾನು. ಪ್ರತಿಭಟನಾ ಮೆರವಣಿಗೆಗಳಲ್ಲಿ ಲಾಟಿ ಮತ್ತು ಬಂದೂಕುಗಳನ್ನ ಧೈರ್ಯವಾಗಿ ಎದುರಿಸಿದ ನಾವು ವಿದ್ಯಾರ್ಥಿಗಳ ನಡುವೆ ಅಗಾಧ ಅರಿವಿನ ಕೆಲಸ ಮಾಡಿ ಸಂಘಟನೆ ಕಟ್ಟಿದೆವು. ೧೯೭೨ರಲ್ಲಿ ಅಧ್ಯಕ್ಷ ಮಾರ್ಕೋಸ್ ಮಾರ್ಷಲ್ ಕಾನೂನು ಘೋಷಣೆ ಮಾಡಿದಾಗ ನಮ್ಮ ಸಂಘಟನೆಗಳನ್ನ ಕಾನೂನು ಬಾಹಿರ ಅಂತಾ ಪರಿಗಣಿಸಲಾಯಿತು; ನಾವೆಲ್ಲಾ ಭೂಗತರಾದೆವು.

ಬಂಧನದ ಬೆದರಿಕೆ, ಅತ್ಯಾಚಾರ ಅಥವಾ ಮುಳುಗಿಹೋಗುವಿಕೆ (ಕಾಣೆಯಾದವರಿಗೆ ಫಿಲಿಫೈನ್ಸ್‌ನಲ್ಲಿ ಬಳಸುತ್ತಿದ್ದ ಭಾಷೆ) ಪ್ರತಿದಿನ ನಮ್ಮ ತಲೆಮೇಲೆ ತೂಗುತ್ತಿದ್ದ ಕತ್ತಿಗಳು. ಆದರೂ ನಾವು ಕ್ರಿಯಾಶೀಲತೆ ಬಿಟ್ಟುಕೊಡಲಿಲ್ಲ. ಶಾಲೆಯ ಓದಿನ ನಂತರ ನಾನು ಮನೆಗೆ ಮರಳಿ, ನನ್ನ ಸ್ವಂತ ಊರಿನಲ್ಲಿ ಸಂಘಟನೆ ಮತ್ತು ಹಳ್ಳಿಗಳಲ್ಲಿ ಶಿಕ್ಷಣದ ಕೆಲಸ ಕೈಗೊಳ್ಳಲು ನಿರ್ಧರಿಸಿದೆ. ಈ ಕಾಲಕ್ಕೆ ನಮ್ಮ ಬಹುತೇಕ ಹಳ್ಳಿಗಳಲ್ಲಿ ಚಿಕೊ ನದಿಗೆ ಕಟ್ಟುತ್ತಿದ್ದ ಅಣೆಕಟ್ಟು ಮತ್ತು ಮಾರ್ಕೋಸ್ ರಾಜ ಒಡೆತನದ ಮರಮುಟ್ಟು ವ್ಯಾಪಾರಿ ನಿಗಮದ ವಿರುದ್ಧ ಪ್ರತಿಭಟನೆ ರೂಪುಗೊಂಡು ಅದು ತಾರಕಕ್ಕೇರಿತು. ಇದು ತುಂಬಾ ಅಪಾಯಕಾರಿ ಆದರೆ ಅಷ್ಟೇ ಉತ್ತೇಜಕ ಕಾಲ. ಇದುವರೆಗೆ ತಮ್ಮ ತಮ್ಮ ನಡುವೆ ಕಲಹ ಕಾದಾಟ ಮಾಡಿಕೊಳ್ಳುತ್ತಿದ್ದ ಮೂಲನಿವಾಸಿಗಳು, ವಿಶ್ವಬ್ಯಾಂಕು, ಮರಮುಟ್ಟು ವಹಿವಾಟು ನಿಗಮ ಮತ್ತು ಅಭಿವೃದ್ಧಿ ಯೋಜನೆಗಳ ಪ್ರಧಾನ ಯೋಜಕರಾದ ಸರ್ಕಾರದ ವಿರುದ್ಧ ಹೋರಾಡಲು ತಮ್ಮ ತಮ್ಮ ನಡುವೆ ಶಾಂತಿ ಒಪ್ಪಂದ ಮಾಡಿಕೊಂಡರು.

ಸರ್ಕಾರ ನಮಗಾಗಿ ರೂಪಿಸಿದ ಅಭಿವೃದ್ಧಿ ಯೋಜನೆಗಳ ವಿರುದ್ಧ ಹೋರಾಟ ನಡೆಸಲು ತೀರ್ಮಾನಿಸಿದೆವು. ಜೀವನಾಧಾರವಾದ ಆಹಾರದ ಪ್ರಧಾನ ಉತ್ಪಾದಕರಾದ, ನಮ್ಮ ದೇಸಿ ಸಂಸ್ಕೃತಿ ಮತ್ತು ಪರಂಪರೆಯ ವಾಹಕರಾದ ಮಹಿಳೆಯರು ಈ ಚಳುವಳಿಗಳಲ್ಲಿ ಕ್ರಿಯಾಶೀಲರಾಗಿ ಪಾಲುಗೊಳ್ಳುತ್ತಿದ್ದಾರೆ. ಮಹಿಳೆಯರು, ಪುರುಷರು, ವಯಸ್ಸಾದವರು, ಯುವಕರು ಎಲ್ಲರಿಗೂ ವಹಿಸಬೇಕಾದ ಪಾತ್ರಗಳಿದ್ದವು ; ನಾವು ಜನಸಂಘಟನೆಗೆ ಮುಂದಾದೆವು. ವಿದ್ಯಾವಂತರಾದ, ವಸಾಹತೀಕರಣಕ್ಕೊಳಗಾದ igorot ಗಳು "ಪ್ರಗತಿ ವಿರುದ್ಧ ಹೋರಾಡುವ ಮಾರ್ಗಗಳೇ ಇಲ್ಲ" ಅಂತಾ ಹೇಳಿ ನಮ್ಮ ಕ್ರಿಯಾಶೀಲತೆಯನ್ನ ತಿರಸ್ಕರಿಸಿದರು. ಆದರೆ ನಮ್ಮ ಹಳ್ಳಿಗಳ ಜನ ಕ್ರಿಯಾಶೀಲತೆಯನ್ನ ಬಿಟ್ಟುಕೊಡಲಿಲ್ಲ ; ನಾವು ಜಯ ಪಡೆದೆವು. ವಿಶ್ವಬ್ಯಾಂಕಿನ ದೇಣಿಗೆ ಪಡೆದ ಚಿಕೊಸದಿ ಅಣೆಕಟ್ಟು ಯೋಜನೆಯನ್ನ ಸ್ಥಗಿತಗೊಳಿಸಲಾಯಿತು. ವಿಶ್ವಬ್ಯಾಂಕಿನ ಓಂ ಪ್ರಥಮ ಯೋಜನೆ ಮೂಲನಿವಾಸಿಗಳಿಂದ ಸೋಲಿಗೆ ಒಳಗಾದ ಕೀರ್ತಿ ನಮ್ಮ ಹೋರಾಟಕ್ಕೆ ಸಿಕ್ಕಿತು. ಸೆಲ್ಲೋಫಿಲ್ ಸಂಪನ್ಮೂಲ ನಿಗಮದ ಮರಮುಟ್ಟು ಮತ್ತು ಮಿಲ್ಲಿನ ಕೆಲಸ ಕಾರ್ಯಗಳು ನಿಂತುಹೋದವು.

ಪ್ರತಿಭಟನೆಗೆ ನಾವು ಬೆಲೆ ತೆರಬೇಕಾಯಿತು. ನಮ್ಮನ್ನ ಕಮ್ಯೂನಿಸ್ಟರು, ಭಯೋತ್ಪಾದಕರು ಅಂತಾ ಹಣೆಪಟ್ಟಿ ಹಚ್ಚಿದರು. ನಮ್ಮ ಅನೇಕ ಹಳ್ಳಿಗಳಿಗೆ ಭಾರಿ ಪ್ರಮಾಣದ ಮಿಲಿಟರಿ ಸೈನಿಕರು ನುಗ್ಗಿದರು, ಬಾಂಬ್ ಸಿಡಿಸಿದರು, ಗುಂಡಿನ ಮಳೆಗರೆದರು, ಸುಟ್ಟು ಹಾಕಿದರು. ನಮ್ಮ ಮುಖ್ಯ ನಾಯಕರಾದ ಮ್ಯಾಕ್ಲೆಂಡ್ ಡುಲಾಗ್, ಎಮಾ ಎನ್‌ಗುಯಾನ್ ಮುಂತಾದವರನ್ನ ಹತ್ಯೆ ಮಾಡಿದರು; ಅನೇಕರನ್ನ ಅನ್ಯಾಯವಾಗಿ ಬಂಧಿಸಿ ಸೆರೆಯಲ್ಲಿಟ್ಟು ಕಿರುಕುಳ ಕೊಟ್ಟರು. ಹಳ್ಳಿಗಳನ್ನ ಮಿಲಿಟರಿ ಯುಕ್ತಿ ವ್ಯೂಹಗಳಾಗಿ ಪರಿವರ್ತಿಸಿದರು ಮತ್ತು ಜನ ತಮ್ಮ ಹೊಲಗದ್ದೆಗಳಿಗೆ, ನೆಂಟರಿಷ್ಟರ ಮನೆಗೆ ಹೋಗದಂತೆ ತಡೆದರು ; ಆಂತರಿಕ ನಿರಾಶ್ರಿತರ ಸಮಸ್ಯೆ ತಲೆದೋರಿತು.

ಮಹಿಳೆಯರು ಅತ್ಯಾಚಾರಕ್ಕೊಳಗಾದರು. ಅಬ್ರಾದಲ್ಲಿ ಒಬ್ಬಳು ಗರ್ಭಿಣಿ ಮಹಿಳೆ ಮೇಲೆ ಮಿಲಿಟರಿಯವರು ಅತ್ಯಾಚಾರ ಎಸಗಿ, ಆಕೆಯನ್ನ ಎರಡು ಮಕ್ಕಳ ಜೊತೆ ಕೊಂದು ಹಾಕಿದರು. ಮಿಲಿಟರಿಯವರು ಮಹಿಳೆಯರನ್ನ ಸಲಕರಣೆಗಳಂತೆ ಬಳಸಿಕೊಂಡರು; ನಾಯಕರು ಮತ್ತು ಸಮುದಾಯ ಸಂಘಟಕರ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಕೆಲವು ಮಹಿಳೆಯರನ್ನ ಮದುವೆ ಮಾಡಿಕೊಂಡರು. ಇಲ್ಲವೇ 'ಬಾಳ ಸಂಗಾತಿ'ಗಳನ್ನಾಗಿ ಮಾಡಿಕೊಂಡರು. ಜನಾಂಗಗಳೊಳಗೆ ಬಿರುಕುಂಟು ಮಾಡಿ ಅವುಗಳನ್ನ ತೀವ್ರಗೊಳಿಸಿದರು. ಹಳಬರು ಮತ್ತು ಯುವಕ, ಯುವತಿಯರನ್ನ ಪ್ಯಾರಾ ಮಿಲಿಟರಿ ಪಡೆಗಳ ಬೇಹುಗಾರರನ್ನಾಗಿ ನೇಮಕ ಮಾಡಿಕೊಂಡರು. ಕೆಲವು ಮೂಲನಿವಾಸಿ ಪಂಗಡಗಳು ಇತರೆ ಮೂಲನಿವಾಸಿ ಪಂಗಡಗಳ ವಿರುದ್ಧ ಹೋರಾಡಲು ವಿಘಟನೆಗೊಳಗಾದವು; ಕುಟುಂಬಗಳು ಪ್ರತ್ಯೇಕಗೊಳ್ಳತೊಡಗಿದವು. ಜನಸಮುದಾಯ ವಿಘಟನೆಗೊಳ್ಳತೊಡಗಿತು ; ಪಾರಂಪರಿಕ ಆಚರಣೆಗಳನ್ನು ಕೂಡ ನಿಷೇಧಿಸಲಾಯಿತು. ಕಾರ್ಯಾಚರಣೆ ನೆಪದಲ್ಲಿ ನಮ್ಮ ಕಾಡುಗಳನ್ನ ಸುಟ್ಟುಹಾಕಿದರು. ಜನರನ್ನ ಅವರ ಹಳ್ಳಿಗಳಿಂದ ಸ್ಥಳಾಂತರಿಸಿದರು. ನಾವುಗಳು ರೂಪಿಸಿದ ಸಾಮಾಜಿಕ-ಆರ್ಥಿಕ ಯೋಜನೆಗಳನ್ನ ಹಾಳುಮಾಡಿದರು. ನಮ್ಮ ಮಹಿಳಾ ಸಂಘಟನೆಗಳು ನಡೆಸುತ್ತಿದ್ದ ಮಹಿಳಾ ನೇಕಾರ ಸಹಕಾರ ಸಂಘಗಳು ಮತ್ತು ಶಿಶುಪಾಲನ ಕೇಂದ್ರಗಳಿಗೆ ಕಮ್ಯೂನಿಸ್ಟ್

ಸಂಘಟನೆಗಳೆಂಬ ಹಣೆಪಟ್ಟಿ ಹಚ್ಚಿದರು ; ಈಗಲೂ ಇದು ಮುಂದುವರೆಯುತ್ತಿದೆ. ಸ್ಥಳೀಯ ಮಟ್ಟದಲ್ಲಿ ನಾವು ಹೋರಾಟ ಮುಂದುವರೆಸಿದೆವು. ರಾಷ್ಟ್ರೀಯ ಚಳುವಳಿಗಳಲ್ಲಿ ಭಾಗವಹಿಸಿ ನಮ್ಮ ಸಮಸ್ಯೆ ಮತ್ತು ಒತ್ತಾಯಗಳನ್ನ ಅಂತಾರಾಷ್ಟ್ರೀಯ ಮಟ್ಟಕ್ಕೆ ವಿಶ್ವಸಂಸ್ಥೆಗೆ ತೆಗೆದುಕೊಂಡು ಹೋದೆವು.

೧೯೮೬ರಲ್ಲಿ ಸರ್ವಾಧಿಕಾರಿ ತೊಲಗಿದ ಮೇಲೆ ಕಾಂಗ್ರೆಸಿನ ಮೇಲೆ ಒತ್ತಡ ತಂದೆವು. ನಮ್ಮ ಪ್ರಬಲ ಚಳುವಳಿ, ಒತ್ತಡದಿಂದ ಸಂವಿಧಾನದಲ್ಲಿ ಖಚಿತಪಡಿಸಿರುವ ನಮ್ಮ ಪುರಾತನ ಭೂಮಿಯ ಮೇಲಿನ ಹಕ್ಕುಗಳನ್ನ ಪಡೆದುಕೊಳ್ಳುವಲ್ಲಿ ಯಶಸ್ವಿಯಾದೆವು. ಆದರೂ ಕಾಂಗ್ರೆಸಿನಲ್ಲಿ ಪುರಾತನ ಭೂಮಿ ಕುರಿತ ಕಾಯಿದೆ ರೂಪಿಸುವಲ್ಲಿ ನಾವಿನ್ನೂ ಯಶಸ್ಸು ಕಂಡಿಲ್ಲ. ಬಹುಪಾಲು ನಾವು ಗೆಲ್ಲುವುದಿಲ್ಲ ಅನಿಸುತ್ತಿದೆ. ಯಾಕೆಂದರೆ ಈಗ ಸರ್ಕಾರ ನಮ್ಮ ಭೂಮಿ ಮತ್ತು ಸಂಪನ್ಮೂಲಗಳನ್ನ ಜಾಸ್ತಿ ಬೆಲೆ ಕೊಡುವವರಿಗೆ ಮಾರಾಟ ಮಾಡುತ್ತಿದೆ. ವಿದೇಶಿ ಬಂಡವಾಳ ಹೂಡಿಕೆದಾರರು ಸಂಪನ್ಮೂಲಗಳನ್ನ ಬಳಸಿಕೊಳ್ಳಲು ಆಕರ್ಷಕ ಕಾನೂನುಗಳನ್ನ ರೂಪಿಸುವುದಕ್ಕೆ ನಮ್ಮ ಘನ ಸರ್ಕಾರ ಆದ್ಯತೆ ಕೊಡುತ್ತಿದೆ. ವಿದೇಶಿ ನಿಗಮಗಳು ಕನಿಷ್ಠ ೮೧ ಸಾವಿರ ಹೆಕ್ಟೇರ್ ಭೂಮಿಯನ್ನ ೭೫ ವರ್ಷಗಳ ಕಾಲ ಗುತ್ತಿಗೆ ಪಡೆದು, ಶೇ. ೧೦೦ರಷ್ಟು ವಿದೇಶಿ ಬಂಡವಾಳ ಹೂಡಿ, ಶೇ. ೧೦೦ರಷ್ಟು ಮರುಗಳಿಕೆ ಮಾಡಿಕೊಳ್ಳಲು ಅನುವಾಗುವಂತೆ ೧೯೯೫ರ ಗಣಿಗಾರಿಕೆ ಕಾಯಿದೆ ಜಾರಿಗೆ ತಂದಿದೆ. ಜನರನ್ನ ಖನಿಜ ಪ್ರದೇಶಗಳಿಂದ ಹೊರದೂಡುವ ಮತ್ತು ಶೀಘ್ರವಾಗಿ ಲಾಭ ಗಳಿಕೆ ಸಾಧ್ಯವಾಗುವಂತೆ strip mining ಮಾಡುವ ಹಕ್ಕುಗಳನ್ನ ಅವರಿಗೆ ಒದಗಿಸಿಕೊಟ್ಟಿದೆ ; ಫಿಲಿಫೈನ್ಸ್‌ನ ಬಹಳಷ್ಟು ಖನಿಜ ಪ್ರದೇಶಗಳು ದೇಸಿ ಜನರ ಪುರಾತನ ಭೂಮಿಗಳಲ್ಲಿವೆ. ಬೆಂಕ್ವೆಟ್, ಇಟಾಗಾನ್‌ನ ಗಣಿಗಾರಿಕೆ ಸಮುದಾಯಗಳಲ್ಲಿನ ನಮ್ಮ ಮಹಿಳೆಯರು, ಗಣಿಗಾರಿಕೆಯನ್ನ ಮತ್ತಷ್ಟು ವಿಸ್ತರಿಸುವುದನ್ನ ಪ್ರತಿಭಟಿಸುತ್ತಿದ್ದಾರೆ ; ಇದು ಕಳೆದ ಸುಮಾರು ೪ ವರ್ಷಗಳಿಂದ ನಡೆಯುತ್ತಿದೆ. ಈಗ ಗಣಿಗಾರಿಕೆ ಕಾಯಿದೆಯ ಸುರಕ್ಷಿತ ಸುರಂಗ ನಿರ್ಮಾಣವಾಗಿರುವಾಗ ಸರ್ಕಾರದ ಉದಾರೀಕರಣ ಯೋಜನೆಗಳ ವಿರುದ್ಧ ಪ್ರತಿಭಟಿಸುತ್ತಿರುವ ಜನರ ಮೇಲೆ ಸರ್ಕಾರ ಮತ್ತೊಮ್ಮೆ ಮುಗಿಬೀಳಬಹುದೆಂದು ನಾವು ಆತಂಕಗೊಂಡಿದ್ದೇವೆ. ವಾಸ್ತವವಾಗಿ ಯಾವುದೇ ವಿಷಯದಲ್ಲಿ ತನಗೆ ತಾತ್ಕಾಲೀನ ಅಧಿಕಾರವಿರುವಂತೆ ಕಾಂಗ್ರೆಸಿನ ಕಾಯಿದೆಗಳನ್ನ ಅಂಗೀಕರಿಸುವಲ್ಲಿ ಅಧ್ಯಕ್ಷ ರಾಮೋಸ್ ಯಶಸ್ವಿಯಾಗಿದ್ದಾರೆ. ಆಧ್ಯತೆಯ ಯೋಜನೆಗಳಿಗೋಸ್ಕರ, ಪರಿಸರಾತ್ಮಕ ಪರಿಣಾಮಗಳ ಪರಿಶೀಲನ ವರದಿಗಳನ್ನ ಆತ ಎತ್ತಿ ಪಕ್ಕದಲ್ಲಿಡಬಹುದು ; ಅದರಲ್ಲೂ ನೀರು ಮತ್ತು ವಿದ್ಯುತ್‌ಶಕ್ತಿ ಯೋಜನೆಗಳಿಗೆ ಹಣ ಹೂಡಲು ತಾಕತ್ತಿರುವ ನಿಗಮಗಳಿಗೆ ಕೆಲಸ ವಹಿಸಿಕೊಡಬಹುದು. ಈ ಯೋಜನೆಗಳಿಗೆ ಅಡ್ಡಿಯಾಗುವ, ನಿಧಾನಗೊಳಿಸುವ ಪ್ರತಿಭಟನೆಗಳ ಮೇಲೆ ತತ್ಕಾಲೀನ ಕ್ರಮ ತೆಗೆದುಕೊಳ್ಳುವ ಅಧಿಕಾರ ಆತನಿಗಿರುತ್ತದೆ. ಸರ್ಕಾರ ತನ್ನ ನಿರಂಕುಶತ್ವಕ್ಕೆ ಉದಾರವಾದಿ ಸೌಮ್ಯ ಶಬ್ದಗಳ ನೆಲೆಗಟ್ಟನ್ನ ಒದಗಿಸಿಕೊಂಡಿದೆ.

ವಿಶ್ವ ವಣಿಕ ಸಂಸ್ಥೆ (WTO) ಯ ಸದಸ್ಯತ್ವ ಪಡೆದುಕೊಂಡಿರುವ ನಮ್ಮ ಸರ್ಕಾರ, ವಿದೇಶಿ ಬಂಡವಾಳಗಾರರಿಗೆ ದೇಶದ ಮತ್ತಷ್ಟು ದಿಡ್ಡೀ ಬಾಗಿಲುಗಳನ್ನ ಮುರಿಯುವ ಅನುಕೂಲ ಕಲ್ಪಿಸುವ ಕಾನೂನು ಮತ್ತು ನೀತಿಗಳನ್ನ ರೂಪಿಸುತ್ತಿದೆ. ನಮ್ಮ ಜೈವಿಕ ವೈವಿಧ್ಯತೆಗಳನ್ನ ಸರಿಗಟ್ಟಿಕೊಳ್ಳುವ

ಜೈವಿಕ ತಂತ್ರಜ್ಞಾನದ ಪ್ರವೇಶಕ್ಕೆ ಅನುಕೂಲ ಕಲ್ಪಿಸಲೆಂದು ಸರ್ಕಾರ ಜಾರಿ ಆಜ್ಞೆಯೊಂದನ್ನ ಹೊರಡಿಸಿದೆ. ಅಮೆರಿಕದ ಪೇಟೆಂಟ್ ಕಾನೂನುಗಳ ತದ್ರೂಪಿ ನಕಲನ್ನ ಸೃಷ್ಟಿಸಿಕೊಂಡಿರುವ ನಮ್ಮ ದೇಶ, ವಿದೇಶಿ ನಿಗಮಗಳು ತಮ್ಮ ಬೌದ್ಧಿಕ ಆಸ್ತಿ ಹಕ್ಕುಗಳನ್ನ ಖಚಿತಪಡಿಸಿಕೊಳ್ಳುವಂತೆ ಇವುಗಳನ್ನ ಮತ್ತಷ್ಟು ಚುರುಕುಗೊಳಿಸಿದ್ದಾರೆ. ಈ ಕಾನೂನುಗಳೊಂದಿಗೆ, ದೇಸಿ ಬೀಜಗಳು ಮತ್ತು ಔಷಧಿ ಸಸ್ಯಗಳ ಪಾರಂಪರಿಕ ಉಸ್ತುವಾರಿ ಪಡೆದಿದ್ದ ಮಹಿಳೆಯರ ಪಾತ್ರಗಳನ್ನ ಮತ್ತೆ ಸರಿಗಟ್ಟಿಕೊಳ್ಳುವ ಪ್ರಯತ್ನ ನಡೆದಿದೆ. ಸ್ಥಳೀಯ ಕಂಪನಿಗಳು ವಿದೇಶಿ ಪುಸ್ತಕಗಳನ್ನ ಮರುಮುದ್ರಿಸುವ, ಔಷಧಿಗಳನ್ನ ಉತ್ಪಾದಿಸುವ, ಸಾರ್ವಜನಿಕ ಹಿತಾಸಕ್ತಿ ಮತ್ತು ಸುರಕ್ಷಿತತೆ ಆಧಾರದ ಮೇಲೆ ರಾಯಲ್ಟಿ ಕಟ್ಟಿದೆ. ಹಕ್ಕುಗಳು ಮತ್ತು ಕಡ್ಡಾಯ ಪೇಟೆಂಟಿಂಗ್ ಕಾನೂನುಗಳನ್ನು ಈಗ ವಜಾ ಮಾಡಿದ್ದಾರೆ. ಇದೇ ಸಮಯಕ್ಕೆ ಕೇಬಲ್ ಟೆಲಿವಿಷನ್ ಮತ್ತು ಉಪಗ್ರಹ ದೂರದರ್ಶನ ಮಾಧ್ಯಮಗಳನ್ನ ಉದಾರೀಕರಣಗೊಳಿಸಲಾಗಿದೆ.

ನಮ್ಮ ನಾಡುಗಳಲ್ಲಿ ವಸಾಹತುಶಾಹಿ ಹೀಗೆ ಸಂಭವಿಸಿತು ಎಂಬುದನ್ನ ನೆನಪಿಸುವ ಯುಗ ಮತ್ತೆ ನಮಗೀಗ ಎದುರಾಗಿದೆ. ಈಗ ನಾವು ಹೊಸ ವಸಾಹತೀಕರಣಕ್ಕೆ ಒಳಗಾಗಿದ್ದೇವೆ. ನಮ್ಮ ಭೂಮಿ, ಖನಿಜ ಸಂಪನ್ಮೂಲಗಳಷ್ಟೇ ಅಲ್ಲ, ನಮ್ಮ ಜೈವಿಕ ವೈವಿಧ್ಯತೆ, ನಮ್ಮ ಸಾಮುದಾಯಿಕ ಬೌದ್ಧಿಕ ಸಂಪತ್ತು, ಇನ್ನೂ ಕೆಟ್ಟದ್ದೆಂದರೆ ಮಾನವ ವಂಶವಾಹಿ ಜೀವಕಣಗಳನ್ನ ಕೂಡ ಸರಿಗಟ್ಟಿಕೊಂಡು ಅಂತಾರಾಷ್ಟ್ರೀಯ ವಹಿವಾಟಿನಲ್ಲಿ ಬಳಸಲು ಅನುವಾಗುವಂತೆ ಪೇಟೆಂಟ್ ಮಾಡಲಾಗುತ್ತಿದೆ ಮತ್ತು ಸರಕೀಕರಣಗೊಳಿಸಲಾಗುತ್ತಿದೆ.

ಇಂದು ನಮ್ಮ ಜನರಿಗೆ ವೃತ್ತಿ ಆಧಾರಿತ ತಾಂತ್ರಿಕ ತರಬೇತಿ ಕೊಟ್ಟು ಎಲೆಕ್ಟ್ರಾನಿಕ್ಸ್ ಮತ್ತು ಕಾರ್ಖಾನೆಗಳ ಅಸೆಂಬ್ಲಿ ಲೈನ್ ಕೆಲಸಗಾರರಾಗುವಂತೆ ಅನುವು ಮಾಡಿಕೊಡುತ್ತಿದ್ದಾರೆ. ವಿದೇಶಿ ವಿನಿಮಯ ಗಳಿಕೆಗಾಗಿ 'ಇಕೊ ಟೂರಿಸಂ' ಉದ್ಯಮ ಪ್ರಾರಂಭಿಸಬೇಕೆಂದು ಈಗ ಹೇಳುತ್ತಿದ್ದಾರೆ. ನಮ್ಮ ಕೃಷಿ ಭೂಮಿಯನ್ನ ಅಪವಿತ್ರ ಹೈಬ್ರಿಡ್ ತರಕಾರಿ ತಳಿಗಳನ್ನ ಬೆಳೆಸುವ ತೋಟಗಳನ್ನಾಗಿ ಪರಿವರ್ತಿಸಿದ್ದಾರೆ ಅಥವಾ ಗಾಲ್ಫ್ ಆಟದ ಮೈದಾನಗಳಾಗಿ ಅಥವಾ ರಿಯಲ್ ಎಸ್ಟೇಟ್ ಉಪವಿಭಾಗಗಳಾಗಿ ಪರಿವರ್ತಿಸುತ್ತಿದ್ದಾರೆ. ದೇಸಿ ಮೌಲ್ಯಗಳು, ವಿಶ್ವದೃಷ್ಟಿ ಮತ್ತು ವಿಶ್ವ ಸೃಷ್ಟಿ ದರ್ಶನಗಳು ವೇಗವಾಗಿ ನಶಿಸುತ್ತಿವೆ. ಸ್ಥಳಾಂತರ, ಮಿಲಿಟರೀಕರಣ, ಬಡತನ ಮತ್ತು ಗ್ರಾಹಕ ಸರಕುಗಳ ದಾಹ ಪ್ರಗತಿಯ ಸಂಕೇತಗಳಾಗುತ್ತಿವೆ. ನಮ್ಮ ಬಹುತೇಕ ಯುವತಿಯರು ವಿದೇಶಗಳಿಗೆ ಹೋಗಿ ಮನೆಗೆಲಸಗಾರರಾಗುತ್ತಿದ್ದಾರೆ ; ತುಂಬಾ ಕೆಟ್ಟದಾಗಿ ಅವರ ಮೇಲೆ ಲೈಂಗಿಕ ಹಿಂಸಾಚಾರ, ಕಿರುಕುಳ ನಡೆಯುತ್ತಿದ್ದರೂ 'ಪರವಾ ಇಲ್ಲ' ಅನ್ನುವ ಗತಿ ಬಂದಿದೆ.

ನಾವು ಹಿಂದೆಂದೂ ಕಂಡರಿಯದಷ್ಟು ವೇಗವಾಗಿ, ನಮ್ಮ ಜೈವಿಕ ಮತ್ತು ಸಾಂಸ್ಕೃತಿಕ ವೈವಿಧ್ಯತೆ ನಾಶವಾಗುತ್ತಿರುವುದನ್ನ ಇದು ಸೂಚಿಸುತ್ತಿದೆ. ನಮ್ಮ ಹಕ್ಕುಗಳನ್ನ ಮಣಿಸಿ, ನಮ್ಮನ್ನ ಅಡಿಯಾಳುಗಳನ್ನಾಗಿ ಮಾಡಿಕೊಳ್ಳುವ ಶಕ್ತಿಗಳ ವಿರುದ್ಧ ನಾವು ನಮ್ಮ ಪ್ರತಿರೋಧವನ್ನ ತೀವ್ರಗೊಳಿಸಬೇಕು. ಸ್ವಯಂ ನಿರ್ಧಾರ, ನಮ್ಮ ಪ್ರದೇಶ ಮತ್ತು ಸಂಪನ್ಮೂಲಗಳ ಮೇಲಿನ ಹಕ್ಕುಗಳನ್ನ ದೃಢಗೊಳಿಸಬೇಕು ಎಂಬುದನ್ನ ಕೂಡ ಇದು ಸೂಚಿಸುತ್ತದೆ.

ಇಂದು ಚಾಲ್ತಿಯಲ್ಲಿರುವ ಅಂತಾರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಜಾಗತೀಕರಣ ಮತ್ತು ಉದಾರೀಕರಣ ನೀತಿ, ಶ್ರೀಮಂತ ಕೈಗಾರಿಕಾ ದೇಶಗಳು ಮತ್ತು ಸಂಸ್ಥೆಗಳ ಪ್ರಾಬಲ್ಯವನ್ನ ಪ್ರತಿರೋಧಿಸಬೇಕು. ಬೌದ್ಧಿಕ ಆಸ್ತಿ ಹಕ್ಕುಗಳನ್ನ ಕುರಿತ ಪಶ್ಚಿಮ ಬುದ್ಧಿಯ ನಿರಂಕುಶತ್ವವನ್ನ ನಾವು ವಿರೋಧಿಸಬೇಕು.

ಜ್ಞಾನ ಪದ್ಧತಿಗಳನ್ನ ಖಾಸಗೀಕರಣಗೊಳಿಸುವ, ಜೀವರೂಪಗಳನ್ನ ಪೇಟೆಂಟಿಂಗ್‌ಗೆ ಒಳಪಡಿಸುವ, ಮಾನವ ಮತ್ತು ಪ್ರಾಣಿ ಜೈವಿಕ ಸಂಪನ್ಮೂಲಗಳನ್ನ ಸರಕೀರಣ, ವಾಣಿಜ್ಯೀಕರಣಗೊಳಿಸುವ ಬೌದ್ಧಿಕ ಆಸ್ತಿ ಹಕ್ಕಿನ ಆಡಳಿತ ಬಹುದೊಡ್ಡ ವಂಚನೆ ಮತ್ತು ಅನೀತಿ; ಇದು ದೇಸಿ ಸಾಮುದಾಯಿಕ ಮೌಲ್ಯಗಳು, ಹಂಚಿಕೊಳ್ಳುವ, ಪಾಲಿಸುವ ಸಂವೇದನೆಗೆ ಹೊಂದಾಣಿಕೆಯಾಗುವುದಿಲ್ಲ.

ಜನಾಂಗ, ವರ್ಗ, ಲಿಂಗ, ರಾಷ್ಟ್ರೀಯತೆ, ಜನಾಂಗೀಯತೆ ಆಧಾರಿತ ಧರ್ಮದ ಸಮಸ್ಯೆಗಳನ್ನ ಎದುರಿಸುತ್ತಿರುವ ಸಮಗ್ರ, ಸಮಷ್ಟಿ ಮೂಲನಿವಾಸಿ ಜನರ ಚಳುವಳಿಗೆ ಬೆಂಬಲ ಒದಗಿಸಬೇಕು. ಪ್ರಬಲ ರಾಷ್ಟ್ರಗಳು ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳ ಅಂಕೆತಪ್ಪಿದ ಪ್ರಾಬಲ್ಯದ ನಡುವೆ ಕೂಡ ಈ ಹೂಗಳು ಅರಳಬೇಕು.

ಜಗತ್ತಿನ ಸಾಂಸ್ಕೃತಿಕ ವೈವಿಧ್ಯತೆ, ಜನತೆ, ಆರ್ಥಿಕ, ಸಾಮಾಜಿಕ ಪದ್ಧತಿಗಳು ಮತ್ತು ಜೈವಿಕ ಸಂಪತ್ತನ್ನ ಖಚಿತಪಡಿಸುವ ದಾರಿ ಇದೊಂದೇ. ವಸಾಹತುಶಾಹಿ, ಜನಾಂಗ ದ್ವೇಷ, ವರ್ಗ ಮತ್ತು ಲಿಂಗ ತಾರತಮ್ಯ ದಮನದಿಂದ ನಾವು ಏನನ್ನ ಕಳೆದುಕೊಂಡು ಬಿಟ್ಟೆವೋ ಅದಕ್ಕೆ ದೇಸಿ ಜನಗಳು ಜೀವಂತ ಸಂಕೇತಗಳು.

ದೇಸಿ ಮಹಿಳೆಯರ ಹೃದಯದಲ್ಲಿ ಉರಿಯುತ್ತಿರುವ ಪ್ರತಿಭಟನೆಯ ಬೆಂಕಿ ಕೆಂಡಗಳಿಗೆ ನಾವು ಗಾಳಿ ಬೀಸಬೇಕು. ನಮ್ಮ ಪ್ರಾಂತ, ಜೈವಿಕ ಮತ್ತು ಬೌದ್ಧಿಕ ಸಂಪತ್ತಿನ ಬಗ್ಗೆ ನಮ್ಮ ಸ್ವಯಂ ನಿರ್ಧಾರದ ಹಕ್ಕುಗಳನ್ನ ದೃಢಪಡಿಸಿಕೊಳ್ಳಲು ಪ್ರಯತ್ನಿಸಿದ ಫಲವಾಗಿ ನಾವಿನ್ನೂ ಅದಕ್ಕೆ ಬೆಲೆತೆರುತ್ತಿದ್ದೇವೆ. ವಸಾಹತುಶಾಹಿ ಆಡಳಿತಗಾರರ ಕಾಯಿದೆಗಳಿಂದ ಒತ್ತುವರಿಯಾದ, ಏಕರೂಪೀಕರಣಗೊಂಡ ಜಗತ್ತನ್ನ ನಮ್ಮ ಮಕ್ಕಳಿಗೆ, ಮೊಮ್ಮಕ್ಕಳಿಗೆ ಬಿಟ್ಟು ಹೋಗಲಾಗುವುದಿಲ್ಲ. ನಾವು ಅವರಿಗೆ ಕೊಡಬಹುದಾದ ಒಂದೇ ಆಸ್ತಿ ಪ್ರತಿಭಟನೆಯ ನಮ್ಮ ಕತೆಗಳು. ಈ ಕತೆಗಳಿಂದ ಅವರು ಹಾಡು ಕಟ್ಟಬಹುದು, ಕವಿತೆ, ನೃತ್ಯಗಳನ್ನ ಕಟ್ಟಬಹುದು, ಮುಂದಿನ ತಲೆಮಾರುಗಳು ಮರೆಯದಂತೆ ; ನಾವು ನಮ್ಮ ಹುತಾತ್ಮರು ಮತ್ತು ಪುರಾತನರನ್ನ ಮರೆಯದಂತೆ.

●

ಫಿಲಿಪೈನ್ಸ್‌ನ ಕಾಡಿಲೆರಾ ಮಹಿಳಾ ಚಳುವಳಿಯ ಭಾಗೀದಾರರು. ಈ ಸಾಕ್ಷಿಯನ್ನ ಅವರು ಸೆಪ್ಟೆಂಬರ್ ೧೯೯೫ರಲ್ಲಿ ಬೀಜಿಂಗ್ ನಗರದಲ್ಲಿ ನಡೆದ ಏಷಿಯಾ ಮಾನವ ಹಕ್ಕುಗಳ ಪರಿಷತ್ತು (AWHRC) ಸಂಘಟಿಸಿದ ಮಹಿಳಾ ಅಪರಾಧಗಳ ಕುರಿತ ವಿಶ್ವ ನ್ಯಾಯಾಲಯದಲ್ಲಿ ಮಂಡಿಸಿದರು. ನಮ್ಮ ಕಾಲದ ಹಿಂಸೆಗಳ ವಿರುದ್ಧ ಭೂಮಿಯ ಮಗಳಾಗಿ, ಪ್ರತಿರೋಧದ ಧ್ವನಿಯಾಗಿ ಮಾತನಾಡಿದ್ದಾರೆ.

ಕುತರ್ಕ ಹಾಗೂ ಅತಿ ನಾಜೂಕಿನ ಅಮೆರಿಕನ್ ನ್ಯಾಯ!

ಮೂಲ : ಅರುಂಧತಿ ರಾಯ್
ಕನ್ನಡಕ್ಕೆ : ಜಿ. ಬಾಲಕೃಷ್ಣ

ಪೆಂಟಗನ್ ಮತ್ತು ವರ್ಲ್ಡ್ ಟ್ರೇಡ್ ಸೆಂಟರ್‌ಗಳ ಮೇಲಿನ ಸೆಪ್ಟೆಂಬರ್ ೧೧ರ ಹೇಯ ಆತ್ಮಾಹುತಿ ದಾಳಿಯ ನಂತರ ಅಮೆರಿಕದ ವಾರ್ತೆ ಓದುವ ಒಬ್ಬಾತ, 'ಕಳೆದ ಮಂಗಳವಾರದಂತೆ ಒಳ್ಳೆಯದು ಮತ್ತು ಕೆಟ್ಟದ್ದು ಒಟ್ಟಿಗೇ ವ್ಯಕ್ತಗೊಳ್ಳುವುದು ತೀರಾ ಅಪರೂಪ. ನಮಗೆ ಪರಿಚಯವಿಲ್ಲದ ಜನ ನಮಗೆ ಪರಿಚಯವಿರುವಂತಹವರನ್ನು ಕೊಂದುಹಾಕಿದ್ದಾರೆ. ಅದೂ ಒಂದು ರೀತಿಯ ತಾತ್ಸಾರದ ಕ್ರೂರ ನಗೆಯೊಂದಿಗೆ' ಎಂದು ಹೇಳಿದ ಹಾಗೂ ನಂತರ ಗಳಗಳನೆ ಅತ್ತುಬಿಟ್ಟ.

ಇಂದು ಅಮೆರಿಕ ತನಗೆ ಪರಿಚಿತರಲ್ಲದ ಜನರ ವಿರುದ್ಧದ ಯುದ್ಧದಲ್ಲಿದೆ; ಅವರಿಗೆ ಪರಿಚಿತರಲ್ಲ ಏಕೆಂದರೆ ಅವರು ಹೆಚ್ಚಾಗಿ ಟಿ.ವಿ.ಯಲ್ಲಿ ಕಾಣಿಸಿಕೊಳ್ಳುವುದಿಲ್ಲ. ತನ್ನ ಶತ್ರುವನ್ನು ಗುರುತಿಸುವುದಿರಲಿ, ಅವರ ರಚನೆ ಎಂತಹುದು ಎಂದು ಊಹಿಸುವ ಮೊದಲೇ ಅಮೆರಿಕದ ಸರ್ಕಾರ ಪ್ರಚಾರದ ಆತುರದಲ್ಲಿ ಹಾಗೂ ಮುಜುಗರದ ಬಡಾಯಿ ಮಾತಿನಲ್ಲಿ 'ಭಯೋತ್ಪಾದನೆಯ ವಿರುದ್ಧ ಅಂತರರಾಷ್ಟ್ರೀಯ ಸಂಘಟನೆ'ಯನ್ನು ರಚಿಸಿ, ತನ್ನ ಸೇನೆ, ವಾಯುದಳ, ನೌಕಾದಳ ಹಾಗೂ ತನ್ನ ಪ್ರಸಾರ ಮಾಧ್ಯಮಗಳನ್ನು ಒಂದುಗೂಡಿಸಿ ಯುದ್ಧ ನಡೆಸಿದೆ.

ಇಲ್ಲಿ ಆತಂಕದ ಸಂಗತಿಯೆಂದರೆ, ಅಮೆರಿಕ ಯುದ್ಧಕ್ಕೆ ಹೊರಟರೆ ಯುದ್ಧ ನಡೆಸದೆ ಅದು ಹಿಂತಿರುಗುವಂತಿಲ್ಲ. ಅದು ತನ್ನ ಶತ್ರುವನ್ನು ಕಾಣದಿದ್ದಲ್ಲಿ, ಸಿಟ್ಟಿಗೆದ್ದಿರುವ ತನ್ನ ದೇಶದ ಜನರನ್ನು ಸಂತೈಸಲು ಒಬ್ಬ ಶತ್ರುವನ್ನು ಸೃಷ್ಟಿಸಬೇಕಾಗುತ್ತದೆ. ಒಮ್ಮೆ ಯುದ್ಧ ಪ್ರಾರಂಭವಾಯಿತೆಂದರೆ, ಅದು ಆವೇಗ ಪಡೆದುಕೊಳ್ಳುತ್ತ ಸಾಗುತ್ತದೆ. ಅದರದೇ ತರ್ಕ ಹಾಗೂ ಸಮರ್ಥನೆ ಹುಟ್ಟಿಕೊಳ್ಳುತ್ತದೆ. ಕೊನೆಗೆ, ಯುದ್ಧ ಏಕೆ ಪ್ರಾರಂಭವಾಯಿತು ಎನ್ನುವುದೇ ಮರೆತುಹೋಗುತ್ತದೆ.

ಈಗ ನಾವು ನೋಡುತ್ತಿರುವುದು, ವಿಶ್ವದ ಅತ್ಯಂತ ಪ್ರಬಲ ರಾಷ್ಟ್ರ ಸಿಟ್ಟಿನಿಂದ, ತನಗರಿವಿಲ್ಲದ ರೀತಿಯಲ್ಲಿಯೇ ತನ್ನಲ್ಲಿನ ಅಂತರ್ಗತ ಆದಿಮ ಯುದ್ಧಾಕಾಂಕ್ಷೆಯಿಂದ ಹೊಸ ರೀತಿಯ ಯುದ್ಧಕ್ಕೆ

ಕಾಲು ಕೆರೆದು ನಿಂತಿರುವ ದೃಶ್ಯ. ಆದರೆ, ಅದು ತನ್ನನ್ನು ತಾನೇ ರಕ್ಷಿಸಿಕೊಳ್ಳಬೇಕಾಗುವ ಪರಿಸ್ಥಿತಿ ಬಂದಾಗ ಅಮೆರಿಕದ ಸಾಲುಸಾಲಾಗಿ ನಿಂತ ಯುದ್ಧನೌಕೆಗಳು, ಕ್ರುಯ್ಸ್ ಮಿಸ್ಸೈಲ್‌ಗಳು ಮತ್ತು ಎಫ್-೧೬ ವಿಮಾನಗಳು ಹಳೆಯ ಕಾಲದ ನಿರುಪಯೋಗಿ ವಸ್ತುಗಳಂತೆ ಕಂಡುಬರುತ್ತವೆ; ಪೇರಿಸಲು ಇರುವ ಅದರ ಅಣ್ವಸ್ತ್ರಗಳೂ ಸಹ ಅಷ್ಟೆ. ಹೊಸ ಶತಮಾನದ ಯುದ್ಧಾಸ್ತ್ರಗಳೆಂದರೆ ಬಾಕ್ಸ್ ಕಟರ್‌ಗಳು, ಕಿಸೆಚೂರಿಗಳು ಮತ್ತು ಉರಿವ ಕೋಪಾಗ್ನಿ. ಈ ಸಿಟ್ಟೇ ಎಂತಹ ಬೀಗ ಬೇಕಾದರೂ ತೆರೆಯಬಲ್ಲ ಅದ್ವಿತೀಯ ಕೀಲಿ. ಎಂತಹ ಕಸ್ಟಮ್ಸ್‌ನವರ ಕಣ್ಣೂ ತಪ್ಪಿಸಿ ನುಸುಳಿಹೋಗಬಲ್ಲುದು; ಎಂತಹ ಬ್ಯಾಗೇಜ್ ಪರೀಕ್ಷಕರ ಕಣ್ಣಿಗೂ ಬೀಳಲಾರದು.

ಅಮೆರಿಕದ ಹೊಡೆದಾಟ ಯಾರೊಂದಿಗೆ ? ಸೆಪ್ಟೆಂಬರ್ ೨೦ರಂದು, ಕೆಲವು ವಿಮಾನಗಳ್ಳರ ಗುರುತಿನ ಬಗೆಗೆ ಎಫ್.ಬಿ.ಐ.ನವರು ಗೊಂದಲವಿದೆಯೆಂದರು. ಆದರೆ ಅದೇ ದಿನ, 'ಈ ಜನ ಯಾರೆಂದು ಹಾಗೂ ಅವರಿಗೆ ಬೆಂಬಲ ಕೊಡುತ್ತಿರುವ ಸರ್ಕಾರಗಳು ಯಾವುವೆಂದು ನಮಗೆ ಗೊತ್ತು' ಎಂದರು ಅಧ್ಯಕ್ಷ ಜಾರ್ಜ್ ಬುಶ್. ಅಂದರೆ ಎಫ್.ಬಿ.ಐ. ಹಾಗೂ ಅಮೆರಿಕದ ನಾಗರಿಕರಿಗೆ ತಿಳಿದಿಲ್ಲದ ವಿಷಯಗಳು ಅಧ್ಯಕ್ಷರಿಗೆ ಗೊತ್ತು ಎಂದಾಗುತ್ತದೆ.

ಸೆಪ್ಟೆಂಬರ್ ೨೦ರ ಅಮೆರಿಕದ ಕಾಂಗ್ರೆಸ್ಸಿಗೆ ಮಾಡಿದ ಭಾಷಣದಲ್ಲಿ ಅಧ್ಯಕ್ಷ ಬುಶ್ ಅಮೆರಿಕದ ಶತ್ರುಗಳನ್ನು 'ಸ್ವಾತಂತ್ರ್ಯದ ಶತ್ರುಗಳು' ಎಂದರು. 'ಅಮೆರಿಕನ್ನರು ಕೇಳುತ್ತಿದ್ದಾರೆ, ಅವರ್‍ಯಾಕೆ ನಮ್ಮನ್ನು ದ್ವೇಷಿಸುತ್ತಾರೆ ? ಅವರು ನಮ್ಮ ಸ್ವಾತಂತ್ರ್ಯವನ್ನು-ನಮ್ಮ ಧಾರ್ಮಿಕ ಸ್ವಾತಂತ್ರ್ಯವನ್ನು, ನಮ್ಮ ವಾಕ್ ಸ್ವಾತಂತ್ರ್ಯವನ್ನು, ನಮ್ಮ ಮತ ಚಲಾಯಿಸುವ ಸ್ವಾತಂತ್ರ್ಯವನ್ನು, ಒಂದುಗೂಡಿ ಪರಸ್ಪರ ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನು ದ್ವೇಷಿಸುತ್ತಾರೆ' ಎಂದೂ ಹೇಳಿದರು. ಇಲ್ಲಿ ಜನ ತಮ್ಮ ನಂಬಿಕೆಯನ್ನು ದುಪ್ಪಟ್ಟು ಮಾಡಿಕೊಳ್ಳಬೇಕೆಂಬುದು ಅವರ ಭಾವನೆ. ಮೊದಲನೆಯದಾಗಿ ತಮ್ಮ ಹೇಳಿಕೆಗಳಿಗೆ ಯಾವುದೇ ಆಧಾರವಿಲ್ಲದಿದ್ದರೂ ಅಮೆರಿಕದ ಸರ್ಕಾರ ಯಾರನ್ನು ಶತ್ರುಗಳೆಂದು ಹೇಳುತ್ತದೋ ಅವರೇ ಶತ್ರುಗಳೆಂದು ಉಳಿದ ಅಮೆರಿಕನ್ನರು ಒಪ್ಪಬೇಕು. ಎರಡನೆಯದಾಗಿ, ಶತ್ರುಗಳ ಉದ್ದೇಶವೇನು ಎನ್ನುವುದನ್ನು ಅಮೆರಿಕ ಸರ್ಕಾರವೇ ಹೇಳುತ್ತದೆ, ಅದಕ್ಕೂ ಸಹ ಯಾವುದೇ ಸಾಕ್ಷ್ಯಾಧಾರವಿಲ್ಲದಿದ್ದರೂ !

ಅಮೆರಿಕ ಸರ್ಕಾರಕ್ಕೆ ತನ್ನ ಮಿಲಿಟರಿ, ಆರ್ಥಿಕ ಹಾಗೂ ಕಾರ್ಯತಂತ್ರದ ಹುನ್ನಾರಿನ ಕಾರಣಗಳಿಗಾಗಿ, ತನ್ನ ಜನರ ಸ್ವಾತಂತ್ರ್ಯದ ಬದ್ಧತೆ, ಪ್ರಜಾಸತ್ತೆ ಹಾಗೂ ಅಮೆರಿಕನ್ನರ ಬದುಕಿನ ರೀತಿ ಆಘಾತಕ್ಕೊಳಗಾಗಲಿದೆಯೆಂದು ಹೇಳಿ ಬಲವಂತದ ನಂಬಿಕೆಯನ್ನು ಅವರ ಮೇಲೆ ಹೇರಬೇಕಾಗಿದೆ. ದುರಂತದ ನಂತರದಲ್ಲಿನ ದುಃಖದ ಹಾಗೂ ಸಿಟ್ಟಿನ ವಾತಾವರಣ ಇಂತಹ ನಂಬಿಕೆಗೆ ಕಾವು ಕೊಡಲು ಸೂಕ್ತವಾಗಿದೆ. ಅದೇ ನಿಜವಾದಲ್ಲಿ ಅಮೆರಿಕದ ಆರ್ಥಿಕ ಹಾಗೂ ಮಿಲಿಟರಿ ಪ್ರಬಲತೆಯ ಸಂಕೇತಗಳಾದ ವರ್ಲ್ಡ್ ಟ್ರೇಡ್ ಸೆಂಟರ್ ಮತ್ತು ಪೆಂಟಗನ್‌ಅನ್ನೇ ಧ್ವಂಸಕ್ಕೆ ಏಕೆ ಆಯ್ದುಕೊಳ್ಳಲಾಯಿತೆಂದು ಊಹಿಸುವುದು ಸುಲಭ. ಅದೇ 'ಸ್ಟ್ಯಾಚ್ಯು ಆಫ್ ಲಿಬರ್ಟಿ'ಯನ್ನು ಅವರೇಕೆ ಆಯ್ದುಕೊಳ್ಳಲಿಲ್ಲ ? ಈ ಆಕ್ರೋಶದ ಮೂಲ ಅಮೆರಿಕದ ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಯಲ್ಲಲ್ಲದೆ ಅದರ ತದ್ವಿರುದ್ಧ ಕಾರ್ಯಗಳಾದ ಹಾಗೂ ತಾನು ಬೆಂಬಲಿಸುವ

ಮಿಲಿಟರಿ ಮತ್ತು ಆರ್ಥಿಕ ಭಯೋತ್ಪಾದಕತೆ, ದುಂಗೆಕೋರತನ, ಧಾರ್ಮಿಕ ದುರಭಿಮಾನ ಹಾಗೂ ಊಹಿಸಲಾಗದ ರೀತಿಯಲ್ಲಿ ಅಮೆರಿಕ ನಡೆಸುತ್ತಿರುವ ನರಹತ್ಯೆ (ಅಮೆರಿಕದ ಹೊರಗೆ)ಗಳಲ್ಲಿರಬಹುದೆ? ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಅಮೆರಿಕದ ನಾಗರಿಕರು ತಮ್ಮನ್ನು ನಿರುದ್ವಿಗ್ನತೆಯಿಂದ ನೋಡುತ್ತಿರುವ ಜಗತ್ತನ್ನು ತಮ್ಮ ಮಂಜುಗೂಡಿದ ಕಂಗಳಿಂದ ಗಮನಿಸುತ್ತಿರಬಹುದು. ಆದರೆ ಅದು ನಿರುದ್ವಿಗ್ನತೆಯಲ್ಲ. ಅದು ಒಂದು ರೀತಿಯ ಶಕುನ. ತಿರುಗುತ್ತಿರುವುದು ಪ್ರಾರಂಭಿಸಿದ ಸ್ಥಳಕ್ಕೆ ಬರಲೇಬೇಕಲ್ಲವೆ ? ದ್ವೇಷಿಸಲ್ಪಡುತ್ತಿರುವುದು ಅಮೆರಿಕದ ಜನತೆಯಲ್ಲ; ಆದರೆ ಅವರ ಸರ್ಕಾರದ ನೀತಿ ನಿಯಮಗಳು ಎಂಬುದನ್ನು ಅಮೆರಿಕದ ಜನತೆ ಅರಿಯಬೇಕಿದೆ. ಅವರ ಅದ್ವಿತೀಯ ಸಂಗೀತಗಾರರನ್ನು, ಲೇಖಕರನ್ನು, ನಟರನ್ನು, ಕ್ರೀಡಾಪಟುಗಳನ್ನು ಹಾಗೂ ಚಲನಚಿತ್ರಗಳನ್ನು ವಿಶ್ವದಾದ್ಯಂತ ಸ್ವಾಗತಿಸುತ್ತಾರೆನ್ನುವುದರಲ್ಲಿ ಅವರಿಗೆ ಸಂಶಯ ಬೇಡ. ಅವರ ಅಗ್ನಿಶಾಮಕ ದಳದವರ, ಸ್ವಯಂಸೇವಕರ ಹಾಗೂ ಸಾಮಾನ್ಯ ಕಚೇರಿ ಸಿಬ್ಬಂದಿ ವರ್ಲ್ಡ್ ಟ್ರೇಡ್ ಸೆಂಟರ್‌ನ ದಾಳಿಯ ನಂತರ ತೋರಿರುವ ಧೈರ್ಯ, ನಿಸ್ವಾರ್ಥ ಸೇವೆ ನಮ್ಮೆಲ್ಲರ ಮನಸೆಗೆದ್ದಿದೆ.

ಅಮೆರಿಕಕ್ಕಾದ ಆಘಾತ ಹಾಗೂ ತದನಂತರದ ಶೋಕ ಅತ್ಯಂತ ಸಾರ್ವಜನಿಕವಾಗಿದೆ. ಆ ನೋವನ್ನು, ಆತಂಕವನ್ನು ಮಾಪನ ಮಾಡಲೆತ್ನಿಸುವುದು ಕ್ರೌರ್ಯದ ಪರಮಾವಧಿಯಾಗುತ್ತದೆ. ಆದರೆ, ಸೆಪ್ಟೆಂಬರ್ ೧೧ರ ಘಟನೆ ಏಕಾಯಿತೆಂದು ಅರಿಯುವ ಬದಲು ಅಮೆರಿಕನ್ನರು ಅದನ್ನು ತಮ್ಮ ನೋವಿನ ಪ್ರತೀಕಾರವಾಗಿ ಸೇಡು ತೀರಿಸಿಕೊಳ್ಳಲು ಇಡೀ ಜಗತ್ತನ್ನು ಬಳಸಿಕೊಳ್ಳುತ್ತಿದ್ದಾರೆ.

ವಿಮಾನಗಳನ್ನು ಕದ್ದು ಅಮೆರಿಕದ ಆ ಕಟ್ಟಡಗಳ ಮೇಲೆ ದಾಳಿ ನಡೆಸಿದ ಆ ವಿಮಾನಕಳ್ಳರ ಉದ್ದೇಶಗಳ ಬಗೆಗೆ ಬಹುಶಃ ಜಗತ್ತು ಎಂದಿಗೂ ತಿಳಿಯುವ ಸಾಧ್ಯತೆ ಇಲ್ಲವೆಂದೆನ್ನಿಸುತ್ತದೆ. ಅವರು ಯಾವುದೇ ಪ್ರಚಾರ ಬಯಸಿದವರಲ್ಲ. ಯಾವುದೇ ಆತ್ಮಹತ್ಯೆಯ ಪತ್ರ/ಟಿಪ್ಪಣಿ ಬರೆದಿಟ್ಟವರಲ್ಲ. ಯಾವುದೇ ರಾಜಕೀಯ ಸಂದೇಶವನ್ನು ಸಾರಲಿಲ್ಲ ಹಾಗೂ ಯಾವುದೇ ಸಂಸ್ಥೆ ಆ ದಾಳಿಗಳಿಗೆ ಹೊಣೆಗಾರಿಕೆ ಹೊರಲಿಲ್ಲ. ಅವರ ಕೃತ್ಯ ಬದುಕುಳಿಯಬೇಕೆನ್ನುವ ಮಾನವನ ಅಂತರಾಳದ ಸಹಜ ಆಕಾಂಕ್ಷೆಯನ್ನೂ ಹಾಗೂ ಚರಿತ್ರೆಯಲ್ಲಿ ತಮ್ಮ ಹೆಸರು ಅಜರಾಮರ ವಾಗಬೇಕೆನ್ನುವ ಯಾವುದೇ ಇಚ್ಛೆಯನ್ನು ಮೀರಿದುದಾಗಿತ್ತು ಎನ್ನುವುದಷ್ಟೇ ನಮಗೆ ಗೊತ್ತು. ಅವರೆಸಗಿರುವ ಕೃತ್ಯದ ಅಗಾಧ ದುರುತ್ತಕ್ಕಿಂತ ಅವರ ಸಿಟ್ಟು ಹೆಚ್ಚಿನದಾಗಿದೆಯೆಂದು ಊಹಿಸಬಹುದು. ಅವರ ಕೃತ್ಯ ಇಡೀ ಜಗತ್ತಿನಲ್ಲೇ ಮುಚ್ಚಲಾಗದ ರಂಧ್ರವನ್ನಾಗಿಸಿದೆ. ಯಾವುದೇ ಮಾಹಿತಿಯಿಲ್ಲದೆ ರಾಜಕಾರಣಿಗಳು, ರಾಜಕೀಯ ವ್ಯಾಖ್ಯಾನಕಾರರು ಮತ್ತು ಲೇಖಕರು (ನನ್ನಂತಹವರು) ನಮ್ಮದೇ ರಾಜಕಾರಣದ ಕಾರಣಗಳಿಂದಾಗಿ ಮತ್ತು ನಮ್ಮದೇ ವಿಶ್ಲೇಷಣೆಗಳನ್ನು ಮುಂದಿಡುತ್ತಿದ್ದೇವೆ. ಈ ರೀತಿಯ ಊಹಾಪೋಹಗಳು ಹಾಗೂ ದಾಳಿ ನಡೆದಂತಹ ರಾಜಕೀಯ ವಾತಾವರಣದ ವಿಶ್ಲೇಷಣೆಗಳು ಒಂದು ರೀತಿಯಲ್ಲಿ ಒಳ್ಳೆಯದೇ ಆಗಿವೆ.

ಆದರೆ ಯುದ್ಧದ ಕಾರ್ಮೋಡಗಳು ಕವಿದಿವೆ. ಅಮೆರಿಕ 'ಭಯೋತ್ಪಾದಕತೆಯ ವಿರುದ್ಧದ ಅಂತರರಾಷ್ಟ್ರೀಯ ಒಕ್ಕೂಟ'ದ ಮುಂಚೂಣಿಯಲ್ಲಿದೆ ಹಾಗೂ ತನ್ನ 'ದೈವಕಾರ್ಯ'ದಂತಹ ಕೃತ್ಯದಲ್ಲಿ ಪಾಲ್ಗೊಳ್ಳಲು ಇತರ ದೇಶಗಳನ್ನು ಆಹ್ವಾನಿಸುತ್ತಿದೆ (ಮತ್ತು ಒತ್ತಾಯಿಸುತ್ತಿದೆ). ತನ್ನ ಕಾರ್ಯವನ್ನು

ಆಪರೇಶನ್ ಇನ್‌ಫೈನೈಟ್ ಜಸ್ಟೀಸ್' (ಅನಂತ ನ್ಯಾಯದ ಕಾರ್ಯ) ಎಂದು ಕರೆಯಿತು. ಅಲ್ಲಾಹ್ ಮಾತ್ರ ಅನಂತ ನ್ಯಾಯ ಒದಗಿಸಬಲ್ಲ ಶಕ್ತಿಯುಳ್ಳವನೆಂಬ ನಂಬಿಕೆ ಮುಸಲ್ಮಾನರಿಗೆ ಇರುವುದರಿಂದ ಈ 'ಆಪರೇಷನ್'ನ ಶೀರ್ಷಿಕೆ ಅವರನ್ನು ಅವಮಾನಿಸುವಂತಹುದು ಎಂದು ಸೂಚಿಸಿದ ನಂತರ ಅದನ್ನು 'ಆಪರೇಶನ್ ಎನ್‌ಡ್ಯೂರಿಂಗ್ ಫ್ರೀಡಂ' (ಸ್ವಾತಂತ್ರ್ಯ ಸಹಿಷ್ಣುತೆಯ ಕಾರ್ಯ) ಎಂದು ಬದಲಾಯಿಸಲಾಯಿತು. ಇಲ್ಲಿ ಕೆಲ ವಿಷಯಗಳನ್ನು ಸ್ಪಷ್ಟವಾಗಿ ತಿಳಿಸಲೇಬೇಕಿದೆ. ಉದಾಹರಣೆಗೆ, ಅನಂತ ನ್ಯಾಯ/ಸ್ವಾತಂತ್ರ್ಯ ಸಹಿಷ್ಣುತೆ ಯಾರಿಗೆ ? ಇದು ಅಮೆರಿಕದಲ್ಲಿನ ಭಯೋತ್ಪಾದಕತೆಯ ವಿರುದ್ಧ ಮಾತ್ರವೆ ಅಥವಾ ಇಡೀ ಜಗತ್ತಿನಲ್ಲಿನ ಭಯೋತ್ಪಾದಕತೆಯ ವಿರುದ್ಧವೆ ? ಇಲ್ಲಿ ನಿಖರವಾಗಿ ಯಾವುದರ ಸೇಡನ್ನು ತೀರಿಸಿಕೊಳ್ಳುತ್ತಿರುವುದು? ವರ್ಲ್ಡ್ ಟ್ರೇಡ್ ಸೆಂಟರ್‌ನಲ್ಲಿ ಪ್ರಾಣ ಕಳೆದುಕೊಂಡ ೭೦೦೦ ಜನರ ಸಾವಿಗೆ ಪ್ರತಿಯಾದ ಸೇಡನ್ನೇ ? ಸಾವಿರಾರು ಜನ ಉದ್ಯೋಗ ಕಳೆದುಕೊಂಡಿರುವುದನ್ನೆ ? ಕೆಲವು ವಿಮಾನ ಕಂಪೆನಿಗಳು ದಿವಾಳಿಯಾಗಿರುವುದನ್ನೆ ಅಥವಾ ನ್ಯೂಯಾರ್ಕ್ ಸ್ಟಾಕ್ ಎಕ್ಸ್‌ಛೇಂಜ್‌ನಲ್ಲಿ ಷೇರು ಬೆಲೆಗಳು ಕುಸಿದಿರುವುದನ್ನೆ ? ಅಥವಾ ಅದಕ್ಕಿಂತ ಹೆಚ್ಚಿನದು ಬೇರೇನಾದರೂ ಇದೆಯೆ ? ೧೯೯೬ರಲ್ಲಿ ಆಗಿನ ರಾಜ್ಯ ಕಾರ್ಯದರ್ಶಿಯಾಗಿದ್ದ ಮೆಡೆಲೀನ್ ಆಲ್‌ಬ್ರೈಟ್‌ರನ್ನು ರಾಷ್ಟ್ರೀಯ ಟೆಲಿವಿಶನ್‌ನ ಸಂದರ್ಶನವೊಂದರಲ್ಲಿ ಅಮೆರಿಕದ ಆರ್ಥಿಕ ದಿಗ್ಬಂಧನದಿಂದಾಗಿ ಇರಾಕಿನ ಐದು ಲಕ್ಷ ಮಕ್ಕಳು ಸತ್ತಿದ್ದಾರೆ, ಇದರ ಬಗೆಗೆ ಆಕೆಗೆ ಏನನ್ನಿಸುತ್ತದೆ ಎಂದು ಕೇಳಿದ್ದಕ್ಕೆ ಆಕೆ, 'ಆ ನಿರ್ಧಾರ ಕಠಿಣವಾದದ್ದೆ. ಆದರೆ ಆ ನಿರ್ಧಾರದಿಂದಾದ ಫಲಿತಾಂಶದ ಮೌಲ್ಯ ಆ ಮಕ್ಕಳ ಸಾವಿಗೆ ಸಮ ಅಥವ ಅದಕ್ಕೂ ಮೀರಿದುದು' (we think the price is worth it) ಎಂದಳು. ಈ ಮಾತಿಗಾಗಿ ಆಕೆ ತನ್ನ ಉದ್ಯೋಗವನ್ನೇನು ಕಳೆದುಕೊಳ್ಳಲಿಲ್ಲ. ಆದರೆ ಆಕೆ ಅಮೆರಿಕದ ಇದೇ ನಿರ್ದಯ ದೃಷ್ಟಿಕೋನವನ್ನು ಪ್ರಚುರ ಪಡಿಸುತ್ತಾ ಜಗತ್ತಿನ ಉದ್ದಗಲ ಪ್ರಯಾಣ ಮಾಡಿದಳು. ಆರ್ಥಿಕ ದಿಗ್ಬಂಧನ ಇದ್ದ ಹಾಗೇ ಇದೆ. ಮಕ್ಕಳ ಸಾವೂ ಮುಂದುವರೆದಿದೆ!

ಇಲ್ಲಿ ನಾಗರಿಕತೆ ಮತ್ತು ಅನಾಗರಿಕತೆ, 'ಮುಗ್ಧರ ಘೋರ ಹತ್ಯೆ'ಗಳ ನಡುವಿನ ದ್ವಂದ್ವಾರ್ಥದ ಅಂತರ ಸ್ಫುಟವಾಗಿದೆ. ಕುತರ್ಕದ ಹಾಗೂ ಅತಿ ನಾಜೂಕಿನ ಅನಂತ ನ್ಯಾಯದ ಬೀಜಗಣಿತ. ಈ ಪ್ರಪಂಚ, ಬದುಕಲು ಉತ್ತಮ ಸ್ಥಳವಾಗಬೇಕಾದಲ್ಲಿ ಇನ್ನೂ ಎಷ್ಟು ಜನ ಇರಾಕಿಗಳು ಸಾಯಬೇಕು? ಸತ್ತ ಪ್ರತಿಯೊಬ್ಬ ಅಮೆರಿಕನ್ನರಿಗೆ ಎಷ್ಟು ಜನ ಅಫ್ಘನ್ನರು ಸಾಯಬೇಕು ? ಸತ್ತ ಪ್ರತಿಯೊಬ್ಬ ಅಮೆರಿಕನ್ ಗಂಡಸಿಗೆ ಎಷ್ಟು ಜನ ಹೆಂಗಸರು ಮತ್ತು ಮಕ್ಕಳು ಸಾಯಬೇಕು ? ಸತ್ತ ಪ್ರತಿಯೊಬ್ಬ ಬ್ಯಾಂಕರ್‌ನಿಗೆ ಎಷ್ಟು ಜನ ಮುಜಾಹಿದ್ದೀನ್‌ಗಳು ಸಾಯಬೇಕು ?

ಅಫ್ಘಾನಿಸ್ತಾನದ ಆಸ್ತಿ ಎಂದರೆ ಅಲ್ಲಿನ ಜನತೆ ಮಾತ್ರ (ಅದರಲ್ಲಿ ಲಕ್ಷಾಂತರ ಜನ ಅಂಗವಿಕಲ ಅನಾಥರು). ಅಲ್ಲಿನ ಆರ್ಥಿಕತೆ ಛಿದ್ರವಾಗಿದೆ. ಅಲ್ಲಿ ಯಾವುದೇ ದೊಡ್ಡ ನಗರಗಳಿಲ್ಲ. ಕೈಗಾರಿಕಾ ಸಂಕೀರ್ಣಗಳಿಲ್ಲ. ನೀರು ಶುದ್ಧೀಕರಿಸುವ ಘಟಕಗಳಿಲ್ಲ. ಕೃಷಿ ಭೂಮಿ ಸಮುದಾಯ ಸ್ಮಶಾನಗಳಾಗಿವೆ. ಗ್ರಾಮೀಣ ಪ್ರದೇಶ ೧೦ ಮಿಲಿಯನ್ ಭೂಸ್ಫೋಟಕಗಳಿಂದ ಇಡುಗಿಹೋಗಿದೆಯೆಂಬುದು ಒಂದು ಅಂದಾಜು. ಅಮೆರಿಕ ದಾಳಿ ನಡೆಸುವ ಮೊದಲು ಹೆದರಿದ ೧೦ ಲಕ್ಷಕ್ಕೂ ಹೆಚ್ಚಿನ ಅಫ್ಘನ್ನರು ಪಾಕಿಸ್ತಾನದ ಗಡಿಯ ಬಳಿ ನಿರಾಶ್ರಿತರಾಗಿ ನಿಂತರು. ಒಂದೆಡೆ ಬಾಂಬಿನಿಂದ ಸಾಯುವ

ಹೆದರಿಕೆಯಾದರೆ ಮತ್ತೊಂದೆಡೆ ಹಸಿವು ಮತ್ತು ಚಳಿ ಅವರನ್ನು ಕೊಲ್ಲುತ್ತಿತ್ತು. ದಾಳಿಗೆ ಮೊದಲು ಅಫ್ಘಾನಿಸ್ತಾನವನ್ನು ಬಾಂಬ್‌ಗಳಿಂದ ಶಿಲಾಯುಗಕ್ಕೆ ಕೊಂಡೊಯ್ಯುವುದಾಗಿ ಅಮೆರಿಕದಲ್ಲಿ ಮಾತುಗಳು ಕೇಳಿಬರುತ್ತಿದ್ದವು. ಆದರೆ ದುರಂತವೆಂದರೆ ಅಫ್ಘಾನಿಸ್ತಾನ ಯಾವಾಗಲಿಂದಲೋ ಶಿಲಾಯುಗದಲ್ಲಿತ್ತು. ಈ ಸತ್ಯ ಅಮೆರಿಕನ್ನರಿಗೆ ತಿಳಿಯಬೇಕಿತ್ತು. ಅದಕ್ಕೆ ಅಮೆರಿಕವೂ ಕಾರಣ ಏಕೆಂದರೆ, ಅಮೆರಿಕದ ಸರ್ಕಾರ ಮತ್ತು ಅಫ್ಘಾನಿಸ್ತಾನ ಹಳೆಯ ಗೆಳೆಯರು. ಆ ಗೆಳೆತನದ ಕತೆ ಹೀಗಿದೆ :

೧೯೭೯ರಲ್ಲಿ ಸೋವಿಯತ್ ರಷ್ಯಾ ಅಫ್ಘಾನಿಸ್ತಾನವನ್ನು ಆಕ್ರಮಿಸಿದಾಗ ಅಮೆರಿಕದ ಸಿ.ಐ.ಎ. ಮತ್ತು ಪಾಕಿಸ್ತಾನದ ಐ.ಎಸ್.ಐ., ಸಿ.ಐ.ಎ.ನ ಚರಿತ್ರೆಯಲ್ಲೇ ದೊಡ್ಡದಾದ ರಹಸ್ಯ ಕಾರ್ಯಾಚರಣೆ ಪ್ರಾರಂಭಿಸಿದವು. ಅದರ ಉದ್ದೇಶ ಅಫ್ಘಾನಿಸ್ತಾನರ ಸೋವಿಯತ್ ವಿರೋಧವನ್ನು ಒಂದು ಪವಿತ್ರ ಯುದ್ಧವನ್ನಾಗಿಸಿ, ಇಸ್ಲಾಮಿಕ್ ಜೆಹಾದನ್ನಾಗಿ ಪರಿವರ್ತಿಸುವುದು. ಇದರಿಂದ ಸೋವಿಯತ್ ಒಕ್ಕೂಟದಲ್ಲಿನ ಮುಸಲ್ಮಾನ ರಾಷ್ಟ್ರಗಳು ರಷ್ಯಾದ ವಿರುದ್ಧ ತಿರುಗೇಳುವಂತೆ ಮಾಡುವುದು ಹಾಗೂ ಅಫ್ಘಾನಿಸ್ತಾನವನ್ನು ಸೋವಿಯತ್ ಒಕ್ಕೂಟದ ವಿಯೆಟ್ನಾಂ ಆಗಿ ಪರಿವರ್ತಿಸುವುದು ಅಮೆರಿಕದ ಉದ್ದೇಶವಾಗಿತ್ತು. ವರುಷಗಳು ಕಳೆದಂತೆ, ಸಿ.ಐ.ಎ.ನ ಆರ್ಥಿಕ ಬೆಂಬಲದಿಂದ ಐ.ಎಸ್.ಐ. ೪೦ ಇಸ್ಲಾಮಿಕ್ ರಾಷ್ಟ್ರಗಳಿಂದ ಸುಮಾರು ಒಂದು ಲಕ್ಷ ಮುಜಾಹಿದ್ದೀನರನ್ನು ಪರದೆಯ ಹಿಂದಿನ ಅಮೆರಿಕದ ಪರ ಹೋರಾಡಲು ನೇಮಕಾತಿ ಮಾಡಿಕೊಂಡಿತು. ಈ ಮುಜಾಹಿದ್ದೀನರಿಗೆ ತಾವು ಅಮೆರಿಕದ ಪರ ಹೋರಾಡುತ್ತಿದ್ದೇವೆಂಬುದು ತಿಳಿದೇ ಇರಲಿಲ್ಲ (ಇಲ್ಲಿ ಚೋದ್ಯವೆಂದರೆ, ಇದೇ ಮುಜಾಹಿದ್ದೀನರು ಮುಂದೊಂದು ದಿನ ತನ್ನ ವಿರುದ್ಧವೇ ತಿರುಗಿ ಬೀಳಬಹುದೆಂದು ಅಮೆರಿಕವೂ ಊಹಿಸಿರಲಿಲ್ಲ). ೧೯೮೯ರಲ್ಲಿ ೧೦ ವರ್ಷಗಳ ಹೋರಾಟದ ನಂತರ ರಷಿಯನ್ನರು ವಿಚ್ಛಿದ್ರಗೊಂಡಿದ್ದ ಅಫ್ಘಾನಿಸ್ತಾನ ನಾಗರಿಕತೆಯನ್ನು ಬಿಟ್ಟು ಹಿಂತಿರುಗಿದರು.

ಅಫ್ಘಾನಿಸ್ತಾನದಲ್ಲಿ ಅಂತರ್ಯುದ್ಧ ಮುಂದುವರೆದೇ ಇತ್ತು. ಜೆಹಾದ್ ಚೆಚೆನ್ಯಾ, ಕೊಸೊವೊ ಹಾಗೂ ಕೊನೆಗೆ ಕಾಶ್ಮೀರಕ್ಕೂ ತಲುಪಿತು. ಸಿ.ಐ.ಎ. ತನ್ನ ಆರ್ಥಿಕ ಬೆಂಬಲ ಹಾಗೂ ಶಸ್ತ್ರಾಸ್ತ್ರ ನೀಡುವುದನ್ನು ಮುಂದುವರೆಸಿತು. ಆದರೆ ಖರ್ಚು ಹೆಚ್ಚುತ್ತಲೇ ಇತ್ತು. ರೈತರೆಲ್ಲರೂ 'ಕ್ರಾಂತಿಯ ಕಂದಾಯ'ವಾಗಿ ಅಫೀಮನ್ನು ಬೆಳೆಯಬೇಕೆಂದು ಮುಜಾಹಿದ್ದೀನ್ ಆದೇಶಿಸಿತು. ಅಫ್ಘಾನಿಸ್ತಾನದಲ್ಲಿ ನೂರಾರು ಹೆರಾಯಿನ್ ಪ್ರಯೋಗಾಲಯಗಳನ್ನು ಐ.ಎಸ್.ಐ. ಸ್ಥಾಪಿಸಿತು. ಸಿ.ಐ.ಎ. ಕಾಲಿಟ್ಟ ಎರಡು ವರ್ಷಗಳಲ್ಲೇ ಪಾಕಿಸ್ತಾನ-ಅಫ್ಘಾನಿಸ್ತಾನದ ಗಡಿ ಪ್ರದೇಶ ವಿಶ್ವದಲ್ಲೇ ಅತಿ ಹೆಚ್ಚು ಹೆರಾಯಿನ್ ಉತ್ಪಾದಿಸುವ ಪ್ರದೇಶವಾಗಿತ್ತು ಹಾಗೂ ಅಮೆರಿಕದ ಬೀದಿಗಳಲ್ಲಿ ಮಾರಾಟವಾಗುವ ಹೆರಾಯಿನ್ ಇಲ್ಲಿಂದಲೇ ಹೋಗುತ್ತಿತ್ತು. ಸುಮಾರು ೧೦೦ ಬಿಲಿಯನ್‌ನಿಂದ ೨೦೦ ಬಿಲಿಯನ್ ಡಾಲರ್‌ವರೆಗಿನ ವಾರ್ಷಿಕ ಲಾಭ ಗಳಿಕೆ ಉಗ್ರಗಾಮಿಗಳಿಗೆ ತರಬೇತಿ ನೀಡಲು ಹಾಗೂ ಅವರಿಗೆ ಶಸ್ತ್ರಾಸ್ತ್ರ ಪೂರೈಸಲು ಬಳಸಲಾಗುತ್ತಿತ್ತು.

೧೯೯೫ರಲ್ಲಿ ಅತ್ಯಂತ ಅಪಾಯಕಾರಿ ಹಾಗೂ ಮೂಲಭೂತವಾದಿಗಳ ಪಂಗಡವಾದ ತಾಲಿಬಾನ್ ಅಫ್ಘಾನಿಸ್ತಾನದ ಗದ್ದುಗೆ ಏರಿತು. ಅದಕ್ಕೂ ಸಹ ಐ.ಎಸ್.ಐ., ಸಿ.ಐ.ಎ. ಮತ್ತು ಪಾಕಿಸ್ತಾನದ ಇತರ ರಾಜಕೀಯ ಪಕ್ಷಗಳ ಬೆಂಬಲವಿದ್ದೇ ಇತ್ತು. ತಾಲಿಬಾನ್ ಆಡಳಿತ ಅಫ್ಘಾನಿಸ್ತಾನದ

ಚರಿತ್ರೆಯಲ್ಲಿ ಒಂದು ಭಯಾನಕ ಅಧ್ಯಾಯ. ಅದರ ಮೊದಲ ಬಲಿಪಶುಗಳು ಅದರ ನಾಗರಿಕರೇ ಆಗಿದ್ದರು, ಅದರಲ್ಲೂ ಹೆಂಗಸರು. ತಾಲಿಬಾನ್ ಬಾಲಕಿಯರ ಶಾಲೆಗಳನ್ನು ಮುಚ್ಚಿಸಿತು. ಸರ್ಕಾರಿ ಕೆಲಸಗಳಿಂದ ಹೆಂಗಸರನ್ನು ವಜಾ ಮಾಡಿತು ಮತ್ತು ಶರಿಯಾ ಕಾನೂನನ್ನು ಜಾರಿಗೆ ತಂದಿತು. ಆ ಕಾನೂನಿನಡಿಯಲ್ಲಿ 'ನಡತೆಗೆಟ್ಟ'ವರು ಎಂದೆನಿಸಿದ ಹೆಂಗಸರನ್ನು ಕಲ್ಲುಗಳಿಂದ ಹೊಡೆದು ಕೊಲ್ಲುತ್ತಿದ್ದರು. 'ಹಾದಿ ತಪ್ಪಿದ' ವಿಧವೆಯರನ್ನು ಜೀವಂತವಾಗಿ ಹೂತು ಬಿಡುತ್ತಿದ್ದರು.

ಪರಿಸ್ಥಿತಿ ಹೀಗಿದ್ದಾಗ ರಷ್ಯಾ ಮತ್ತು ಅಮೆರಿಕ ಅಫ್ಘಾನಿಸ್ತಾನದ ಪುನರ್-ನಾಶಕ್ಕೆ ಕೈಗೂಡಿಸಿದ್ದು ಪರಿಸ್ಥಿತಿಯ ಅಣಕವಲ್ಲದೆ ಮತ್ತೇನು ? ಇಲ್ಲಿನ ಪ್ರಶ್ನೆಯೆಂದರೆ ವಿನಾಶಗೊಂಡಿರುವುದನ್ನು ನಾಶಗೊಳಿಸಲು ಸಾಧ್ಯವೆ ? ಅಫ್ಘಾನಿಸ್ತಾನದ ಮೇಲೆ ಬಾಂಬುಗಳನ್ನು ಹಾಕುವುದರಿಂದ ಕಟ್ಟಡಗಳ ಶಿಥಿಲಗೊಂಡ ಅವಶೇಷಗಳು ಮೇಲುಕೆಳಗಾಗಬಹುದು. ಕೆಲವು ಹಳೆಯ ಸಮಾಧಿಗಳನ್ನು ಅಲುಗಾಡಿಸಬಹುದು ಮತ್ತು ಸತ್ತವರನ್ನೂ ಸಹ ನಿಶ್ಚಿಂತೆಯಾಗಿರಲು ಬಿಡದಿರಬಹುದು. ಅಫ್ಘಾನಿಸ್ತಾನದ ನಿರ್ಜನ ಪಾಳು ಅವಶೇಷಗಳು, ಸೋವಿಯತ್ ಕಮ್ಯೂನಿಸಂನ ಅಂತಿಮ ಯಾತ್ರೆಯ ರುದ್ರಭೂಮಿಯಾಯಿತು ಹಾಗೂ ಅಮೆರಿಕದ ಏಕಚಕ್ರಾಧಿಪತ್ಯಕ್ಕೆ ನಾಂದಿಯ ಸ್ಥಳವಾಯಿತು.

ಅಮೆರಿಕದ ಅತಿನಂಬುಗೆಯ ಗೆಳೆಯನಾದ ಪಾಕಿಸ್ತಾನದ ಪಾಡೇನಾಗಿದೆ ? ಪಾಕಿಸ್ತಾನವೇನು ಕಡಿಮೆ ಏಟು ತಿಂದಿಲ್ಲ. ಆ ದೇಶದಲ್ಲಿ ಪ್ರಜಾಸತ್ತೆ ಬೇರೂರಲು ಬಿಡದಂತೆ ಮಾಡುವ ಮಿಲಿಟರಿ ಸರ್ವಾಧಿಕಾರಿಗಳನ್ನು ಬೆಂಬಲಿಸಲು ಅಮೆರಿಕ ಎಂದೂ ಹಿಂದೇಟು ಹಾಕಿಲ್ಲ. ಸಿ.ಐ.ಎ. ಅಲ್ಲಿ ಕಾಲಿರಿಸುವ ಮೊದಲು ಅಫೀಮಿಗೆ ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರ ಸ್ವಲ್ಪ ಬೇಡಿಕೆ ಇತ್ತು. ಆದರೆ ೧೯೭೯ ಮತ್ತು ೧೯೮೫ರ ನಡುವೆ ಹೆರಾಯಿನ್‌ಗೆ ವ್ಯಸನಿಗಳಾದವರ ಸಂಖ್ಯೆ ಸೊನ್ನೆ ಪ್ರಮಾಣದಿಂದ ಹದಿನೈದು ಲಕ್ಷಕ್ಕೆ ಏರಿತ್ತು. ಸೆಪ್ಟೆಂಬರ್ ೧೧ರ ಮೊದಲೂ ಸಹ ಅಫ್ಘನ್-ಪಾಕಿಸ್ತಾನದ ಗಡಿಯಲ್ಲಿ, ಟೆಂಟುಗಳ ಕ್ಯಾಂಪ್‌ಗಳಲ್ಲಿ ಸುಮಾರು ಮುವ್ವತ್ತು ಲಕ್ಷ ಅಫ್ಘನ್ ನಿರಾಶ್ರಿತರು ಬದುಕುತ್ತಿದ್ದರು. ಪಾಕಿಸ್ತಾನದ ಆರ್ಥಿಕ ಸ್ಥಿತಿ ಶಿಥಿಲಗೊಳ್ಳುತ್ತಿದೆ. ಷಿಯಾ, ಸುನ್ನಿ ಹಾಗೂ ವಿವಿಧ ಪಂಗಡಗಳ ನಡುವಿನ ಹೊಡೆದಾಟ, ಹಿಂಸೆ, ಜಾಗತೀಕರಣದ ರಚನಾತ್ಮಕ ಹೊಂದಾಣಿಕೆ ಕಾರ್ಯಕ್ರಮಗಳು ಹಾಗೂ ಮಾದಕ ವಸ್ತುಗಳ ಮಾಫಿಯಾ ಮುಖಂಡರು ದೇಶವನ್ನು ಛಿದ್ರ ಛಿದ್ರಗೊಳಿಸುತ್ತಿದ್ದಾರೆ. ಆಗ ರಷ್ಯಾದವರ ವಿರುದ್ಧ ಹೋರಾಡಲು ಸ್ಥಾಪಿಸಿದ ಭಯೋತ್ಪಾದಕರ ತರಬೇತಿ ಕೇಂದ್ರಗಳು ಹಾಗೂ ಮದ್ರಸಾಗಳು ಇಂದು ದೇಶದಾದ್ಯಂತ ಬಿತ್ತಿದ ರಕ್ಕಸನ ಹಲ್ಲುಗಳಂತೆ, ಪಾಕಿಸ್ತಾನದ ಜನರೇ ಬೆಂಬಲಿಸುವಂತಹ ಮೂಲಭೂತವಾದಿಗಳನ್ನು ಸೃಷ್ಟಿಸುತ್ತವೆ. ಪಾಕಿಸ್ತಾನದ ಸರ್ಕಾರ ಬೆಂಬಲಿಸಿದ, ಧನಸಹಾಯ ನೀಡಿದ ತಾಲಿಬಾನ್ ಇಂದು ಪಾಕಿಸ್ತಾನದ ವಿವಿಧ ರಾಜಕೀಯ ಪಕ್ಷಗಳೊಂದಿಗೆ ಹಲವಾರು ರೀತಿಯ ಸಂಬಂಧಗಳನ್ನಿರಿಸಿಕೊಂಡಿದೆ.

ಈಗ ಅಮೆರಿಕ ಸರ್ಕಾರ ಪಾಕಿಸ್ತಾನವನ್ನು ತಾನೇ ತನ್ನ ಹಿತ್ತಲಿನಲ್ಲಿ ಸಾಕಿ ಬೆಳೆಸಿದ ಸಾಕು ಪಕ್ಷಿಯ ಕತ್ತು ಹಿಚುಕಿ ಕೊಲ್ಲಲು ಹೇಳುತ್ತಿದೆ. ಅಮೆರಿಕಕ್ಕೆ ತನ್ನ ಸಂಪೂರ್ಣ ಬೆಂಬಲವನ್ನು ಒತ್ತೆ ಇಟ್ಟಿರುವ ಅಧ್ಯಕ್ಷ ಮುಷರಫ್ ಇತ್ತ ತನ್ನ ದೇಶದಲ್ಲಿ ಅಂತರ್ಯುದ್ಧದಂತಹ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ.

ಇತ್ತೀಚೆಗೆ ಯಾರೋ ಹೇಳುತ್ತಿದ್ದರು, ಒಸಾಮ ಬಿನ್ ಲಾಡೆನ್ ಅನ್ನುವ ವ್ಯಕ್ತಿ ಇದ್ದೇ ಇರಲಿಲ್ಲ, ಅಮೆರಿಕ ಆತನನ್ನು ಸೃಷ್ಟಿ ಮಾಡಲೇಬೇಕಿತ್ತು ಎಂದು. ಒಂದು ರೀತಿಯಲ್ಲಿ ಅಮೆರಿಕವೇ ಆತನನ್ನು ಸೃಷ್ಟಿಸಿತು. ೧೯೭೯ರಲ್ಲಿ ಅಫ್ಘಾನಿಸ್ತಾನದಲ್ಲಿ ಸಿ.ಐ.ಎ. ತನ್ನ ಕಾರ್ಯಾಚರಣೆ ಪ್ರಾರಂಭಿಸಿದಾಗ ಅಲ್ಲಿಗೆ ಬಂದ ಜೆಹಾದಿಗಳಲ್ಲಿ ಆತನೂ ಒಬ್ಬ. ಆತನ ವೈಶಿಷ್ಟವೆಂದರೆ ಆತನ ಸೃಷ್ಟಿಯಾದದ್ದು ಸಿ.ಐ.ಎ.ನಿಂದ ಹಾಗೂ ಆತನನ್ನು ಇಂದು ಹುಡುಕುತ್ತಿರುವುದು ಎಫ್.ಬಿ.ಐ. ಹದಿನೈದು ದಿನಗಳಲ್ಲಿ ಆತ ಗುಮಾನಿಯ ಅಪರಾಧಿಯಿಂದ ಅತಿ ಮುಖ್ಯ ಗುಮಾನಿಯ ಅಪರಾಧಿಯಾದ ಹಾಗೂ ಯಾವುದೇ ಪುರಾವೆ ಇಲ್ಲದಿದ್ದರೂ ಸಹ 'ಜೀವಂತ ಅಥವಾ ಶವವಾಗಿ' ಬೇಕಾಗಿರುವ ಅಪರಾಧಿಯಾಗಿದ್ದಾನೆ.

ಯಾವುದೇ ರೀತಿಯಲ್ಲಿ ಪ್ರಯತ್ನಿಸಿದರೂ ಸೆಪ್ಟೆಂಬರ್ ೧೧ರ ದಾಳಿಗೆ ಬಿನ್ ಲಾಡೆನ್ನೇ ಕಾರಣನೆಂದು ರುಜುವಾತು ಪಡಿಸುವ (ನ್ಯಾಯಾಲಯಗಳು ಬಯಸುವಂತಹ) ಸಾಕ್ಷ್ಯಾಧಾರಗಳನ್ನು ಮುಂದಿಡುವುದು ಸಾಧ್ಯವೇ ಇಲ್ಲದ ಮಾತು. ಇದುವರೆಗೂ ಆತನೇ ಕಾರಣನೆಂದು ಹೇಳುವ ಬಹು ಮುಖ್ಯ ಸಾಕ್ಷಿಯೆಂದರೆ, ಆತ ಆ ದಾಳಿಯನ್ನು ಖಂಡಿಸದಿರುವುದು ಮಾತ್ರ.

ಇದುವರೆಗೆ ತಿಳಿದುಬಂದಿರುವ ಬಿನ್ ಲಾಡೆನ್ ಇರುವ ಸ್ಥಳ ಹಾಗೂ ಬದುಕುತ್ತಿರುವ ವಾತಾವರಣದಿಂದ ಆತ ಖುದ್ದಾಗಿ ಯೋಜಿಸಿ ಈ ದಾಳಿಗಳನ್ನು ನಡೆಸಲು ಸಾಧ್ಯವೇ ಇಲ್ಲ-ಆತ ಈ ಕಾರ್ಯಕ್ಕೆ ಸ್ಫೂರ್ತಿಯ ಮೂರ್ತಿಯಾಗಿರಬಹುದು ಹಾಗೂ ಆ 'ಕಂಪೆನಿ'ಯ ಮುಖ್ಯ ಕಾರ್ಯನಿರ್ವಾಹಕ 'ಅಧಿಕಾರಿ'ಯಾಗಿರಬಹುದಷ್ಟೆ. ಆತನನ್ನು ಹಿಡಿದೊಪ್ಪಿಸಿ ಎಂದ ಅಮೆರಿಕದ ಬೆದರಿಕೆಗೆ ತಾಲಿಬಾನ್‌ನ ಉತ್ತರ ಹೆಚ್ಚು ಸಮಂಜಸವಾಗಿತ್ತು-'ಸಾಕ್ಷ್ಯಾಧಾರಗಳನ್ನು ಕೊಡಿ, ನಂತರ ಆತನನ್ನು ಹಿಡಿದೊಪ್ಪಿಸುತ್ತೇವೆ'. ಅದಕ್ಕೆ ಬೇಡಿಕೆಯಲ್ಲಿ 'ಚೌಕಾಸಿಯಿಲ್ಲ' ಎಂಬುದು ಅಧ್ಯಕ್ಷ ಬುಶ್‌ರ ಪ್ರತಿಕ್ರಿಯೆಯಾಗಿತ್ತು.

ಈ 'ಮುಖ್ಯ ಕಾರ್ಯ ನಿರ್ವಹಣಾಧಿಕಾರಿ'ಗಳನ್ನು ಹಿಡಿದೊಪ್ಪಿಸುವ ಮಾತುಕತೆ ನಡೆದಿರುವಾಗಲೇ ಭಾರತ ಸಹ ಅಮೆರಿಕಾದ ವಾರೆನ್ ಆಂಡರ್ಸನ್‌ರನ್ನು ಹಿಡಿದೊಪ್ಪಿಸುವಂತೆ ಅಮೆರಿಕಾವನ್ನು ಒತ್ತಾಯಿಸಬಹುದಲ್ಲವೆ ? ಯಾಕೆಂದರೆ ೧೯೮೪ರ ಭೋಪಾಲ್ ಗ್ಯಾಸ್ ದುರಂತದಲ್ಲಿ ೧೬,೦೦೦ ಜನರನ್ನು ಕೊಂದ ಯೂನಿಯನ್ ಕಾರ್ಬೈಡ್ ಕಂಪೆನಿಯ ಅಧ್ಯಕ್ಷನಾಗಿದ್ದ ಮಹಾಪುರುಷನೀತ. ಅದಕ್ಕೆ ಬೇಕಾದ ಎಲ್ಲಾ ಸಾಕ್ಷ್ಯಾಧಾರಗಳು ನಮ್ಮ ಕಡತಗಳಲ್ಲಿವೆ. ಫೈಲುಗಳು ನುಸಿ ಹಿಡಿಯುತ್ತಿವೆ. ದಯವಿಟ್ಟು ಆತನನ್ನು ನಮಗೆ ಹಿಡಿದೊಪ್ಪಿಸುವಿರಾ ? ಅಮೆರಿಕನ್ನರನ್ನು ಕೊಂದ ಬಿನ್ ಲಾಡೆನ್ ನಿಮಗೆ ಬೇಕಿರುವಂತೆಯೇ ಭಾರತೀಯರನ್ನು ಕೊಂದ ಆಂಡರ್ಸನ್ ಎಂಬ ವಿಷಾನಿಕುಲದ ಭಯೋತ್ಪಾದಕ ವಿಚಾರಣೆಗಾಗಿ ನಮಗೂ ಬೇಕಿದ್ದಾನೆ. ದಯವಿಟ್ಟು ಅವನನ್ನು ಕೊಂಚ ಹಸ್ತಾಂತರಿಸುತ್ತೀರಾ ? ಜಾಗತಿಕ ನ್ಯಾಯವೆಂಬುದು ಅಮೆರಿಕದ ಧ್ವನಿಯಲ್ಲೇ ಹೊರಡಬೇಕು. ಜಗತ್ತಿನ ಇತರ ಮೂಲೆಗಳ ನ್ಯಾಯಯುತ ಕ್ಷೀಣ ಧ್ವನಿಗಳಿಂದಲ್ಲ ! ಇದು ಅಮೆರಿಕಾದ ನ್ಯಾಯ-ತರ್ಕದ ಅಸಹ್ಯ ವರಸೆ.

ವಾಸ್ತವವಾಗಿ ಒಸಾಮ ಬಿನ್ ಲಾಡೆನ್ ಯಾರು ? ನಾನು ಆತನನ್ನು ಹೀಗೆ ಹೇಳಬಯಸುತ್ತೇನೆ-ಒಸಾಮ ಬಿನ್ ಲಾಡೆನ್ ಎಂದರೆ ಏನು ? ಅದು ಅಮೆರಿಕಾದ ಒಂದು ಕುಟುಂಬ ರಹಸ್ಯ. ಆತ ಅಮೆರಿಕಾದ ಅಧ್ಯಕ್ಷರ ಕತ್ತಲ ಕೂಪದ ಕೂಸು. ಯಾವುದು ಸುಂದರ ಮತ್ತು ನಾಗರಿಕವೋ ಅದರ ಅನಾಗರಿಕ ಮತ್ತು ಕ್ರೌರ್ಯದ ಅವಳಿ. ಅಮೆರಿಕಾದ ವಿದೇಶಿ ನೀತಿಯಿಂದಾಗಿ ಛಿದ್ರಗೊಂಡ ಜಗತ್ತಿನ ಪಕ್ಕೆಲುಬಿನಿಂದ ಆತನನ್ನು ಕಡೆದು ನಿರ್ಮಿಸಲಾಗಿದೆ. ಅಮೆರಿಕಾದ ವಿದೇಶಿ ನೀತಿ, ಅದರ 'ಗನ್ ಬೋಟ್' ಡಿಪ್ಲೊಮೆಸಿ, ಅದರ ಅಣ್ವಸ್ತ್ರ ಕೋಠಿಗಳು, ಇಡೀ ಜಗತ್ತನ್ನೆಲ್ಲಾ ತಾನೇ ನಿಯಂತ್ರಿಸಬೇಕೆಂಬ ಸೊಕ್ಕಿನ ನೀತಿ, ಅಮೆರಿಕನ್ನರಲ್ಲದವರ ಜೀವಗಳ ಬಗೆಗೆ ಕಿಂಚಿತ್ತೂ ಗೌರವವಿಲ್ಲದಿರುವುದು, ಅದರ ಅಮಾನುಷ ಮಿಲಿಟರಿ ಅತಿಕ್ರಮಣ, ನಿರಂಕುಶ ಸರ್ವಾಧಿಕಾರಿಗಳಿಗೆ ಬೆಂಬಲ ನೀಡುವುದು, ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಬಂದು ಕ್ಷಣ ಮಾತ್ರದಲ್ಲಿ ಕಾಣುವ ಹಸಿರನ್ನೆಲ್ಲ ನಾಶಮಾಡುವ ಮಿಡತೆಗಳ ಹಾಗೆ ಬಡದೇಶಗಳ ಆರ್ಥಿಕ ವ್ಯವಸ್ಥೆಯನ್ನು ಛಿದ್ರಗೊಳಿಸುವ ಅದರ ಆರ್ಥಿಕ ನೀತಿ, ಅದರ ಕೊಲೆಗಡುಕ ಬಹುರಾಷ್ಟ್ರೀಯ ಕಂಪೆನಿಗಳು ನಾವು ಉಸಿರಾಡುವ ಗಾಳಿ, ನಿಂತಿರುವ ನೆಲ, ಕುಡಿಯುವ ನೀರು ಹಾಗೂ ನಮ್ಮ ಆಲೋಚನೆಗಳನ್ನೂ ಸಹ ಕಸಿದು ಕಬಳಿಸುತ್ತಿವೆ. ಈಗ ಕುಟುಂಬದ ರಹಸ್ಯ ಹೊರಬಿದ್ದ ಮೇಲೆ ಅದರ ಅವಳಿ-ಜವಳಿಗಳು ಪರಸ್ಪರ ಬದಲಾಗುತ್ತಿವೆ, ಕೆಲವೊಮ್ಮೆ ಒಂದೇ ಆಗುತ್ತಿವೆ. ಅವರ ಬಂದೂಕುಗಳು, ಬಾಂಬುಗಳು, ಹಣ ಮತ್ತು ಮಾದಕ ಪದಾರ್ಥಗಳು ಬೂಮ್‌ರಾಂಗ್‌ನ ಹಾಗೆ ಅಮೆರಿಕಕ್ಕೇ ಹಿಂತಿರುಗಿಬರುತ್ತಿವೆ. (ಅಮೆರಿಕದ ಹೆಲಿಕಾಪ್ಟರುಗಳ ಮೇಲೆ ಹಾಕಲಾಗುತ್ತಿರುವ ಸ್ಟಿಂಗರ್ ಕ್ಷಿಪಣಿಗಳು ಸಿ.ಐ.ಎ. ಸರಬರಾಜು ಮಾಡಿರುವಂತಹವು. ಅಮೆರಿಕಾದ ಮಾದಕ ವ್ಯಸನಿಗಳು ಉಪಯೋಗಿಸುವ ಹೆರಾಯಿನ್ ಬರುತ್ತಿರುವುದು ಅಫ್ಘಾನಿಸ್ತಾನದಿಂದ. ಇತ್ತೀಚೆಗೆ ಬುಶ್ ಸರ್ಕಾರ ಅಫ್ಘಾನಿಸ್ತಾನಕ್ಕೆ 'ಮಾದಕ ವಸ್ತುಗಳ ಮೇಲಿನ ಯುದ್ಧ'ಕ್ಕೆ ೪೩ ದಶಲಕ್ಷ ಡಾಲರ್‌ಗಳ ಸಹಾಯಧನ ನೀಡಿತು !)

ಇತ್ತೀಚೆಗೆ ಬುಶ್ ಮತ್ತು ಲಾಡೆನ್ ಪರಸ್ಪರರ ಮಾತುಗಳನ್ನು ಕದಿಯಲು ಆರಂಭಿಸಿದ್ದಾರೆ. ಒಬ್ಬರು ಮತ್ತೊಬ್ಬರನ್ನು 'ಹಾವಿನ ತಲೆ'ಯೆಂದು ಕರೆದುಕೊಳ್ಳುತ್ತಿದ್ದಾರೆ. ಇಬ್ಬರೂ ದೇವರ ಹೆಸರಿನಲ್ಲಿ ಒಳಿತು-ಕೆಡಕುಗಳ ಬಗ್ಗೆ ಮಾತನಾಡುತ್ತಾರೆ. ಇಬ್ಬರೂ ಅಕ್ಷಮ್ಯ ರಾಜಕೀಯ ಅಪರಾಧಗಳಲ್ಲಿ ತೊಡಗಿದ್ದಾರೆ. ಇಬ್ಬರೂ ಅಪಾಯಕಾರಿಯಾಗಿ ಶಸ್ತ್ರಾಸ್ತ್ರಗಳನ್ನು ಹೊಂದಿದ್ದಾರೆ-ಒಬ್ಬರಲ್ಲಿ ಭಯಂಕರವಾದ, ಹೇಯ ಅಣ್ವಸ್ತ್ರಗಳಿದ್ದರೆ ಮತ್ತೊಬ್ಬರಲ್ಲಿ ಹತಾಶ ವ್ಯಕ್ತಿಯ ಪ್ರಜ್ವಲ ವಿನಾಶಕಾರಿ ಶಕ್ತಿಯಿದೆ. ಒಂದು ಬೆಂಕಿಯುಂಡೆಯಾದರೆ ಮತ್ತೊಂದು ಚೂಪಾದ ಆಯುಧ. ಒಂದು ಗದೆಯಾದರೆ ಮತ್ತೊಂದು ಕೊಡಲಿ. ಇಲ್ಲಿ ಮುಖ್ಯವಾದ ವಿಷಯವೆಂದರೆ, ಈ ಎರಡೂ ಅಸ್ತ್ರಗಳು ಅಪಾಯಕಾರಿ ಹಾಗೂ ವಿನಾಶಕಾರಿ. ಒಂದು ಮತ್ತೊಂದಕ್ಕೆ ಸ್ವೀಕಾರಾರ್ಹ ಬದಲಿಯಾಗಲಾರದು.

ಅಧ್ಯಕ್ಷ ಬುಶ್ ಪ್ರಪಂಚದ ಜನಕ್ಕೆ ಕೊನೆಯ ಎಚ್ಚರಿಕೆ ನೀಡಿದ್ದಾರೆ-'ನೀವು ನಮ್ಮೊಂದಿಗಿಲ್ಲ ಎಂದರೆ ನಮ್ಮ ವಿರೋಧಿಗಳಾಗಿದ್ದೀರಿ'. ಈ ಮಾತು ಮಿತಿಮೀರಿದ ದುರಹಂಕಾರದ ಮಾತು. ಜನರು ಮಾಡಬಯಸುವ, ಮಾಡಬೇಕಾದ ಅಥವಾ ಮಾಡಲೇಬೇಕಾದ ಆಯ್ಕೆ ಇದಲ್ಲ.

ಸಾಮ್ರಾಜ್ಯವನ್ನು ಧಿಕ್ಕರಿಸುವುದಷ್ಟೇ ಅಲ್ಲ...

ಮೂಲ : ಅರುಂಧತಿ ರಾಯ್
ಕನ್ನಡಕ್ಕೆ : ಜೆ. ಬಾಲಕೃಷ್ಣ

ನಾವು 'ಸಾಮ್ರಾಜ್ಯ' ಎಂದಾಗ, ಮೊದಲಿಗೆ ಈ 'ಸಾಮ್ರಾಜ್ಯ' ಎನ್ನುವುದನ್ನು ಗುರುತಿಸಬೇಕಾಗುತ್ತದೆ. 'ಸಾಮ್ರಾಜ್ಯ' ಎಂದರೆ ಅಮೆರಿಕಾ ಸರ್ಕಾರವೆ (ಅಥವಾ ಅದರ ಯೂರೋಪಿನ ಚೇಲಾಗಳೆ ?). ವಿಶ್ವ ಬ್ಯಾಂಕೆ ? ಅಂತರರಾಷ್ಟ್ರೀಯ ಮಾನಿಟರಿ ಫಂಡೆ ? ವಿಶ್ವ ವ್ಯಾಪಾರ ಸಂಸ್ಥೆಯೆ ಅಥವಾ ಬಹುರಾಷ್ಟ್ರೀಯ ಕಂಪೆನಿಗಳೆ ? ಅಥವಾ ಇವೆಲ್ಲವನ್ನೂ ಮೀರಿದ ಮತ್ತಾವುದಾದರೂ ಇದೆಯೆ ?

ಹಲವಾರು ದೇಶಗಳಲ್ಲಿ 'ಸಾಮ್ರಾಜ್ಯ ಸರ್ಪ' ತನ್ನ ಹಲವಾರು ಹೆಡೆಗಳನ್ನು ಎತ್ತಿದೆ. ತನ್ನ ವಿಷದ ಭಯಾನಕ ಉಪಉತ್ಪನ್ನಗಳನ್ನು ಚೆಲ್ಲಿದೆ-ರಾಷ್ಟ್ರೀಯತೆ, ಧಾರ್ಮಿಕ ಮತಾಂಧತೆ, ಫ್ಯಾಸಿಸಂ, ಮತ್ತು ಎಲ್ಲರಿಗೂ ತಿಳಿದಂತೆ ಭಯೋತ್ಪಾದಕತೆ. ಈ ಎಲ್ಲವೂ ಕಾರ್ಪೊರೇಟ್ ಜಾಗತೀಕರಣವೆಂಬ ಬೃಹತ್ ಪ್ರಾಯೋಜನೆಯ ಮೆರವಣಿಗೆಯಲ್ಲಿ ಕೈ ಕೈ ಮಿಲಾಯಿಸಿ ಹೊರಟಿವೆ.

ಈ ನನ್ನ ಮಾತಿನ ಅರ್ಥವೆಂದರೇನೆಂದು ಬಿಡಿಸಿ ಹೇಳುತ್ತೇನೆ. ಭಾರತ-ವಿಶ್ವದಲ್ಲೇ ದೊಡ್ಡ ಪ್ರಜಾಪ್ರಭುತ್ವ-ಇಂದು ಕಾರ್ಪೊರೇಟ್ ಜಾಗತೀಕರಣ ಪ್ರಾಯೋಜನೆಯ ಮುಂಚೂಣಿಯಲ್ಲಿದೆ. ಅದರ ಕೋಟ್ಯಂತರ ಜನರ 'ಮಾರುಕಟ್ಟೆ'ಯನ್ನು ಇಂದು ವಿಶ್ವ ವ್ಯಾಪಾರ ಸಂಸ್ಥೆ ಕಬಳಿಸಬೇಕೆಂದಿದೆ. ಸರ್ಕಾರ ಮತ್ತು ಇಲ್ಲಿನ ಮೇಲ್ವರ್ಗದ ಜನ ಖಾಸಗೀಕರಣವನ್ನು ಮತ್ತು ಕಾರ್ಪೊರೇಟೈಜೇಶನ್ ಅನ್ನು ಸ್ವಾಗತಿಸುತ್ತಿವೆ.

ಇಲ್ಲಿನ ಪ್ರಧಾನಮಂತ್ರಿ, ಗೃಹಮಂತ್ರಿ ಮತ್ತು ಬಂಡವಾಳ ಹಿಂತೆಗೆತ (Disinvestment) ಮಂತ್ರಿ- ಎನ್‌ರೋನ್‌ನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದವರು, ದೇಶದ ಮೂಲಭೂತ ವ್ಯವಸ್ಥೆಗಳನ್ನು ಬಹುರಾಷ್ಟ್ರೀಯ ಕಾರ್ಪೊರೇಟ್ ಸಂಸ್ಥೆಗಳಿಗೆ ಹರಾಜು ಹಾಕುತ್ತಿರುವವರು, ಹಾಗೂ ನೀರು, ವಿದ್ಯುತ್, ತೈಲ, ಕಲ್ಲಿದ್ದಲು, ಉಕ್ಕು, ಆರೋಗ್ಯ ಸೌಲಭ್ಯಗಳು, ಶಿಕ್ಷಣ ಮತ್ತು ದೂರಸಂಪರ್ಕವನ್ನು

ಖಾಸಗೀಕರಣ ಮಾಡಬೇಕೆನ್ನುತ್ತಿರುವವರು-ಇವರೆಲ್ಲಾ ಆರ್.ಎಸ್.ಎಸ್.ನ ಸದಸ್ಯರು ಅಥವಾ ಆರಾಧಕರಾಗಿರುವುದು ಕಾಕತಾಳೀಯವೇನಲ್ಲ. ಈ ಆರ್.ಎಸ್.ಎಸ್. ಹಿಟ್ಲರ್ ಮತ್ತು ಆತನ ವಿಧಾನಗಳನ್ನು ಮುಚ್ಚುಮರೆಯಿಲ್ಲದೆ ಮೆಚ್ಚುವ ಒಂದು ಕಟ್ಟಾ ಹಿಂದೂ ರಾಷ್ಟ್ರೀಯವಾದದ ಬಲಪಂಥೀಯ ಸಂಘಟನೆ.

ಭಾರತ ಸರ್ಕಾರದ ಎರಡೂ ಕೈಗಳು ಬಲಿಷ್ಠ ಇಕ್ಕಳದ ಹಾಗೆ ಕೆಲಸ ಮಾಡುತ್ತಿವೆ. ಒಂದು ಕೈ ಭಾರತವನ್ನು ತುಂಡು ತುಂಡು ಮಾಡಿ ಮಾರಾಟ ಮಾಡುವಲ್ಲಿ ತೊಡಗಿದ್ದರೆ ಮತ್ತೊಂದು ಕೈ, ಗಮನ ಬೇರೆಡೆ ಸೆಳೆಯಲು ಹಿಂದೂ ರಾಷ್ಟ್ರೀಯವಾದದ ಹೆಸರಿನಲ್ಲಿ ಧಾರ್ಮಿಕ ಫ್ಯಾಸಿಸಂನ ಅಂಧಕಾರಕ್ಕೆ ದೇಶವನ್ನು ದೂಡಲು ಪ್ರಯತ್ನಿಸುತ್ತಿದೆ. ಅದು ಅಣುಪರೀಕ್ಷೆಗಳನ್ನು ನಡೆಸುತ್ತಿದೆ. ಚರಿತ್ರೆಯ ಪುಸ್ತಕಗಳನ್ನು ತಿರುಚಿ ಬರೆಯುತ್ತಿದೆ. ಚರ್ಚ್‌ಗಳನ್ನು ಸುಡುತ್ತಿದೆ ಹಾಗೂ ಮಸೀದಿಗಳನ್ನು ಕೆಡುವುತ್ತಿದೆ. ಈಗ ಭಾರತದಲ್ಲಿ ಸೆನ್ಸಾರ್‌ಶಿಪ್, ಸರ್ವೇಕ್ಷಣೆ, ಮಾನವ ಹಕ್ಕುಗಳ ಉಲ್ಲಂಘನೆ, ಧಾರ್ಮಿಕ ಅಲ್ಪಸಂಖ್ಯಾತರ ಕುರಿತಂತೆ ಭಾರತೀಯರೆಂದರೆ ಯಾರು, ಭಾರತೀಯರಲ್ಲವೆಂದರೆ ಯಾರು ಎನ್ನುವುದರ ಅರ್ಥವಿವರಣೆಯಲ್ಲಿ ತೊಡಗಿದೆ.

ಮುಕ್ತ ಮಾರುಕಟ್ಟೆ ರಾಷ್ಟ್ರೀಯ ಗಡಿಗಳನ್ನು ಇಲ್ಲವಾಗಿಸುತ್ತದೆನ್ನುವುದು ಒಂದು ಹುಸಿನಂಬಿಕೆ. ಮುಕ್ತ ಮಾರುಕಟ್ಟೆ ರಾಷ್ಟ್ರೀಯ ಏಕತೆಗೆ ಮಾತ್ರ ಅಪಾಯಕಾರಿಯಲ್ಲ, ಆದರೆ ಅದು ಪ್ರಜಾಸತ್ತೆಯ ಬುಡಕ್ಕೇ ಕೊಡಲಿಯೇಟು ಹಾಕುತ್ತದೆ. ಬಡವರ ಮತ್ತು ಸಿರಿವಂತರ ನಡುವಿನ ಅಂತರ ಅಗಾಧವಾಗುತ್ತಿರುವಂತೆ ಸಂಪನ್ಮೂಲಗಳನ್ನು ತಮ್ಮದಾಗಿಸಿಕೊಳ್ಳಲು ಹೊಡೆದಾಟ ಹೆಚ್ಚೆಚ್ಚು ತೀವ್ರವಾಗುತ್ತಿದೆ. ನಾವು ಬೆಳೆಯುವ ಬೆಳೆಗಳು, ಕುಡಿಯುವ ನೀರು, ಉಸಿರಾಡುವ ಗಾಳಿ, ನಾವು ಕಾಣುವ ಕನಸುಗಳನ್ನೂ ಸಹ ಕಾರ್ಪೊರೇಟೈಜ್ ಮಾಡಲಾಗುತ್ತಿದೆ. ಈ ಕಾರ್ಪೊರೇಟ್ ಜಾಗತೀಕರಣಕ್ಕೆ ತಮ್ಮ 'ಕುಖ್ಯಾತ ಸುಧಾರಣೆ'ಗಳನ್ನು ಜಾರಿಗೆ ತರಲು ಹಾಗೂ ಪ್ರತಿರೋಧಗಳನ್ನು ಹತ್ತಿಕ್ಕಲು ಬಡರಾಷ್ಟ್ರಗಳಲ್ಲಿ ಬೇಕಿರುವುದು ನಿಷ್ಠಾವಂತ, ದರ್ಪಯುತ ಸರ್ಕಾರಗಳು.

ಈ ಕಾರ್ಪೊರೇಟ್ ಜಾಗತೀಕರಣಕ್ಕೆ (ಅದನ್ನು ಅದರ ಹೆಸರಿನಿಂದಲೇ ಕರೆಯೋಣವೆ- ನಿರಂಕುಶ ಸಾಮ್ರಾಜ್ಯಶಾಹಿ ತತ್ವವೆಂದು ?) ಅದಕ್ಕೆ ಸ್ವತಂತ್ರವಾಗಿದೆಯೆಂದು 'ನಟಿಸುವ' ಪತ್ರಿಕಾರಂಗ ಬೇಕು ; ನ್ಯಾಯಪಾಲನೆ ಮಾಡುತ್ತಿರುವಂತೆ 'ನಟಿಸುವ' ನ್ಯಾಯಾಂಗ ಬೇಕು.

ಆದರೆ, ಉತ್ತರ ಭೂಗೋಲದ ರಾಷ್ಟ್ರಗಳು ಮಾತ್ರ ತಮ್ಮ ಗಡಿಗಳನ್ನು ಭದ್ರಪಡಿಸಿಕೊಳ್ಳುತ್ತಿವೆ. ಸರ್ವನಾಶದ ಅಸ್ತ್ರಗಳನ್ನು ಪೇರಿಸಿಕೊಳ್ಳುತ್ತಿವೆ. ಏಕೆಂದರೆ ಅವರಿಗೆ ಹಣ, ವಸ್ತುಗಳು, ಪೇಟೆಂಟ್‌ಗಳು ಮತ್ತು ಸೇವೆಗಳು ಮಾತ್ರ ಜಾಗತೀಕರಣಗೊಳ್ಳಬೇಕಿದೆ; ಜನರ ಸ್ವಚ್ಛಂದ ಓಡಾಟವಲ್ಲ. ಮಾನವ ಹಕ್ಕುಗಳ ಬಗೆಗೆ ಅವರಿಗೆ ಯಾವ ಗೌರವವೂ ಇಲ್ಲ. ಅವರಿಗೆ ವರ್ಣಭೇದದ ಬಗೆಗಾಗಲಿ, ರಾಸಾಯನಿಕ ಅಥವಾ ಅಣ್ವಸ್ತ್ರಗಳ ಬಗೆಗಾಗಲಿ ಅಥವಾ ಗ್ರೀನ್‌ಹೌಸ್ ಅನಿಲಗಳ ಬಗೆಗಾಗಲಿ ಅಥವಾ ವಾತಾವರಣ ಬದಲಾಗುತ್ತಿರುವ ಬಗೆಗಾಗಲಿ ಅಥವಾ ಕಣ್ತಪ್ಪಿಯೂ ಕೂಡ-ನ್ಯಾಯದ ಬಗೆಗಾಗಲಿ ಯಾವುದೇ ಅಂತರರಾಷ್ಟ್ರೀಯ ಒಪ್ಪಂದಗಳು ಬೇಕಿಲ್ಲ.

ಇದನ್ನೇ ನಾವು 'ಸಾಮ್ರಾಜ್ಯ'ವೆನ್ನಬೇಕಿರುವುದು. ದುಷ್ಪರ ಈ ರೀತಿಯ ಒಂದುಗೂಡಿರುವಿಕೆ ಹಾಗೂ ಅಧಿಕಾರ ಕೇಂದ್ರೀಕರಣದ ನೀಚತನ ಪ್ರತಿಯೊಂದು ನಿರ್ಧರಿಸುವವರ ಹಾಗೂ ಅದರಿಂದ ನೋವನನುಭವಿಸುತ್ತಿರುವವರ ನಡುವಿನ ಅಂತರ ಹೆಚ್ಚಿಸುತ್ತಿದೆ.

ನಮ್ಮದೇ ಮತ್ತೊಂದು ಜಗತ್ತಿನ ಕನಸು ಕಾಣುತ್ತಿರುವ ನಮ್ಮಂತಹವರ ಹೋರಾಟ, ನಮ್ಮ ಉದ್ದೇಶ ಈ ಅಂತರವನ್ನು ಕಡಿಮೆ ಮಾಡುವುದೇ ಆಗಿದೆ.

ಹಾಗಿರುವಾಗ ಈ ಸಾಮ್ರಾಜ್ಯ ರಕ್ಕಸವನ್ನು ತಡೆಯುವುದು ಹೇಗೆ ?

ಆದರೆ ಒಳ್ಳೆಯ ಸುದ್ದಿಯೆಂದರೆ, ನಾವೆಲ್ಲ ಈ ವಿಷಯದಲ್ಲಿ ಸೋಲುತ್ತಿಲ್ಲ. ಭಾರತದಲ್ಲಿ ಈ ಕಾರ್ಪೊರೇಟ್ ಜಾಗತೀಕರಣದ ವಿರುದ್ಧದ ಪ್ರತಿಭಟನೆ ದಿನೇದಿನೇ ಬೆಳೆಯುತ್ತಿದೆ ಹಾಗೂ ಇದೇ ಧಾರ್ಮಿಕ ಫ್ಯಾಸಿಸಂ ಅನ್ನೂ ಸಹ ಎದುರಿಸಬಲ್ಲ ರಾಜಕೀಯ ಶಕ್ತಿಯಾಗಲಿದೆ.

ಕಾರ್ಪೊರೇಟ್ ಜಾಗತೀಕರಣದ ಮಹಾನ್ ರಾಯಭಾರಿಗಳಾದ ಎನ್ರಾನ್, ಬೆಕ್ಟೆಲ್, ವರ್ಲ್ಡ್‌ಕಾಂ, ಆರ್ಥರ್ ಆಂಡರ್ಸನ್-ಇವರೆಲ್ಲ ಮೊದಲು ಎಲ್ಲಿದ್ದರು, ಈಗ ಎಲ್ಲಿದ್ದಾರೆ ?

ಆದರೂ ಹಲವಾರು ಅಂಧಕಾರದ ಘಟನೆಗಳು ನಮ್ಮನ್ನು ಹತಾಶೆಯ ಅಂಚಿಗೆ ತಳ್ಳಿವೆ. 'ಭಯೋತ್ಪಾದಕತೆಯ ವಿರುದ್ಧದ ಯುದ್ಧ'ದ ಹೆಸರಿನಲ್ಲಿ ಸೂಟುಬೂಟುಗಳಲ್ಲಿನ ಜನ ಇನ್ನೂ ಹೆಚ್ಚು ಕಾರ್ಯಪ್ರವೃತ್ತರಾಗಿದ್ದಾರೆ. ನಮ್ಮ ಮೇಲೆ ಬಾಂಬುಗಳು ಬೀಳುತ್ತಿರುವಂತೆ ಮತ್ತು ಕ್ರುಯ್ಸ್ ಮಿಸ್ಸೈಲ್‌ಗಳು ಆಕಾಶದಲ್ಲಿ ಹಾರಾಡುತ್ತಿರುವಂತೆ ಕಾಂಟ್ರಾಕ್ಟ್‌ಗಳಿಗೆ ಸಹಿ ಹಾಕುತ್ತಿರುವುದು, ಪೇಟೆಂಟ್‌ಗಳು ರಿಜಿಸ್ಟರ್ ಆಗುತ್ತಿರುವುದು, ತೈಲದ ಪೈಪ್‌ಲೈನ್‌ಗಳು ಹಾಕಲ್ಪಡುತ್ತಿರುವುದು, ಪ್ರಾಕೃತಿಕ ಸಂಪನ್ಮೂಲಗಳನ್ನು ದೋಚುತ್ತಿರುವುದು, ನೀರನ್ನು ಖಾಸಗೀಕರಣಗೊಳಿಸುತ್ತಿರುವುದು ಹಾಗೂ ಜಾರ್ಜ್ ಬುಶ್ ಇರಾಕಿನ ಮೇಲೆ ಯುದ್ಧ ಮಾಡುತ್ತಿರುವುದು ನಮಗೆಲ್ಲಾ ತಿಳಿದೇ ಇದೆ.

ಆದರೆ, 'ಸಾಮ್ರಾಜ್ಯ'ದ ಈ ದಬ್ಬಾಳಿಕೆ ಮತ್ತು ನಮ್ಮ ಪ್ರತಿಭಟನೆಯನ್ನು ನೇರ ಹೋರಾಟ ಎಂದು ಪರಿಗಣಿಸಿದಲ್ಲಿ, ನಾವು ಸೋಲುತ್ತಿದ್ದೇವೆ ಎಂದು ಅನ್ನಿಸುತ್ತದೆ.

ಆದರೆ ಅದನ್ನು ಬೇರೊಂದು ರೀತಿಯೇ ನೋಡಬಹುದು. ನಾವೆಲ್ಲಾ ಒಂದಾಗಿ ಒಂದು ರೀತಿ 'ಸಾಮ್ರಾಜ್ಯ'ವನ್ನೇ ದಿಕ್ಕಡಿಸಿದ್ದೇವೆ. ಅದನ್ನು ನಾವು ಸಂಪೂರ್ಣ ತಡೆಯಲು ಸಾಧ್ಯವಾಗದಿರಬಹುದು-ಆದರೂ-ಅದನ್ನು ಬೆತ್ತಲು ಮಾಡಿದ್ದೇವೆ. ಅದರ ಮುಖವಾಡ ಕಿತ್ತು ತೆಗೆದಿದ್ದೇವೆ. ಈಗ ಅದು ಈ ಪ್ರಪಂಚದ ರಂಗಮಂಚದ ಮೇಲೆ ತನ್ನ ಕ್ರೂರತೆ, ಅನ್ಯಾಯದ ಬೆತ್ತಲನ್ನು ಪ್ರದರ್ಶಿಸುತ್ತಿದೆ. ಕೆಲದಿನಗಳ ಹಿಂದಷ್ಟೆ ವಾಷಿಂಗ್ಟನ್‌ನಲ್ಲಿ ಎರಡೂವರೆ ಲಕ್ಷ ಜನ ಇರಾಕ್ ಮೇಲಿನ ಯುದ್ಧವನ್ನು ಪ್ರತಿಭಟಿಸಿ ಮೆರವಣಿಗೆ ಹೊರಟಿದ್ದರು. ಪ್ರತಿ ತಿಂಗಳೂ ಈ ಪ್ರತಿಭಟನೆ ಹೆಚ್ಚೆಚ್ಚು ಪ್ರಬಲವಾಗುತ್ತಿದೆ.

೨೦೦೧ರ ಸೆಪ್ಟೆಂಬರ್ ೧೧ರ ಮೊದಲು ಅಮೆರಿಕಕ್ಕೆ ಒಂದು ನಿಗೂಢ ಚರಿತ್ರೆ ಇತ್ತು. ಈ ನಿಗೂಢತೆ ವಿಶೇಷವಾಗಿ ತನ್ನ ಜನಗಳಿಂದಲೇ ಅವಿತಿಟ್ಟದ್ದಾಗಿತ್ತು. ಆದರೆ ಈಗ ಅದರ ನಿಗೂಢತೆಯೇ ಚರಿತ್ರೆಯಾಗಿದೆ ಹಾಗೂ ಅದರ ಚರಿತ್ರೆ ಅಲ್ಲಿನ ಜನರ ಸಾಮಾನ್ಯ ಜ್ಞಾನವಾಗಿದೆ. ಇಂದು ಅಮೆರಿಕದ ಬೀದಿಬೀದಿಗಳೂ ಮಾತನಾಡುತ್ತವೆ.

ಇರಾಕಿನ ಮೇಲೆ ಯುದ್ಧ ಮಾಡಲು ಹಾಗೂ ಅದನ್ನು ಸಮರ್ಥಿಸಿಕೊಳ್ಳಲು ಹೇಳಿದ ಪ್ರತಿಯೊಂದು ಮಾತು ಈಗ ಸುಳ್ಳೆಂದು ಸಾಬೀತಾಗಿದೆ. ಇರಾಕಿಗೆ ಪ್ರಜಾಸತ್ತೆಯನ್ನು ತರುವಲ್ಲಿನ ತನ್ನ ಬದ್ಧತೆಯ ಬಗೆಗಿನ ಅಮೆರಿಕದ ಮಾತು ಈಗ ಹಾಸ್ಯಾಸ್ಪದವಾಗಿದೆ.

ಸರ್ವಾಧಿಕಾರಿಯಿಂದ ಉಳಿಸಲು ಅಥವಾ ಐಡಿಯಾಲಾಜಿಕಲ್ ಭ್ರಷ್ಟತೆಯಿಂದ ಜನರನ್ನು ಉಳಿಸುವ ನೆಪದಲ್ಲಿ ಜನರನ್ನು ಕೊಲ್ಲುವುದು ಅಮೆರಿಕ ಮೊದಲಿನಿಂದಲೂ ಪರಿಪಾಲಿಸಿಕೊಂಡು ಬಂದ ಅಭ್ಯಾಸವಾಗಿದೆ. ಅಮೆರಿಕದ ದಬ್ಬಾಳಿಕೆಗೆ ಒಳಗಾದ ಲ್ಯಾಟಿನ್ ಅಮೆರಿಕದ ಜನರಿಗೆ ಅದು ಚೆನ್ನಾಗಿ ತಿಳಿದಿದೆ.

ಸದ್ದಾಂ ಹುಸೇನ್ ಒಬ್ಬ ಕ್ರೂರ ಸರ್ವಾಧಿಕಾರಿ ಹಾಗೂ ಒಬ್ಬ ಕೊಲೆಗಾರ ಎಂಬುದರಲ್ಲಿ ಎರಡು ಮಾತಿಲ್ಲ. ಆತನ ದಬ್ಬಾಳಿಕೆ ಹಾಗೂ ಕ್ರೌರ್ಯವನ್ನು ಮೊದಲು ಅಮೆರಿಕ ಹಾಗೂ ಗ್ರೇಟ್ ಬ್ರಿಟನ್ ಬೆಂಬಲಿಸಿದ್ದವು. ಇರಾಕಿನ ಜನ ಸದ್ದಾಂ ಇಲ್ಲದೆ ಸುಖವಾಗಿರುತ್ತಾರೆ ಎನ್ನುವುದೂ ಸಹ ನಿಜವೆ.

ಅದೇ ರೀತಿ, ಮಿಸ್ಟರ್ ಬುಶ್ ಇಲ್ಲದೆ ಇಡೀ ಪ್ರಪಂಚವೇ ಸುಖವಾಗಿರುತ್ತದೆ ಎನ್ನುವುದೂ ಸಹ ನಿಸ್ಸಂಶಯ. ವಾಸ್ತವವೆಂದರೆ ಸದ್ದಾಂಗಿಂತ ಬುಶ್ ಅತಿ ಹೆಚ್ಚು ಅಪಾಯಕಾರಿ.

ಹಾಗೆಂದು ನಾವು ಶ್ವೇತಭವನಕ್ಕೆ ಬಾಂಬ್ ಹಾಕಿಬಿಡೋಣವೆ ?

ಸತ್ಯಾಸತ್ಯತೆಯನ್ನು, ಅಂತರರಾಷ್ಟ್ರೀಯ ಜನಾಭಿಪ್ರಾಯವನ್ನು ಬದಿಗೊತ್ತಿ ಬುಶ್ ಈಗ ಇರಾಕಿನ ಮೇಲೆ ಯುದ್ಧ ಸಾರಲಿಲ್ಲವೆ ? ಸತ್ಯಾಸತ್ಯತೆಯನ್ನು ಅಮೆರಿಕವೇ ಹುಟ್ಟುಹಾಕುತ್ತಿದೆ.

ಈಗ ನಾವೇನು ಮಾಡಬೇಕು ? ನಮ್ಮ ಸ್ಮೃತಿಯನ್ನು ಕೆದಕೋಣ. ಚರಿತ್ರೆಯ ಪಾಠಗಳನ್ನು ಮತ್ತೊಮ್ಮೆ ಕಲಿಯೋಣ. ಈ 'ಸಾಮ್ರಾಜ್ಯ'ದ ವಿರುದ್ಧದ ಜನಾಭಿಪ್ರಾಯವನ್ನು ಇನ್ನಷ್ಟು ಬಲಿಷ್ಠಗೊಳಿಸುತ್ತಾ ಹೋಗೋಣ-ಅದು ಕಿವಿಗಡಚಿಕ್ಕುವ ಗರ್ಜನೆಯಾಗುವವರೆಗೂ.

ನಾವೆಲ್ಲ ಜಾರ್ಜ್ ಬುಶ್, ಟೋನಿ ಬ್ಲೇರ್‌ರವರನ್ನು ಹಾಗೂ ಅವರ ಸಂಗಾತಿಗಳ ನೈಜತೆಯನ್ನು, ಅವರ ಹೇಡಿ ಶಿಶುಹಂತಕ ಕೃತ್ಯಗಳನ್ನು, ನೀರಿಗೆ ವಿಷ ಬೆರೆಸುವ ಕೊಲೆಗಡುಕತನವನ್ನು ಹಾಗೂ ದೂರದಿಂದ ಬಾಂಬ್ ಹಾಕುವ ಅವರ ಪುಕ್ಕಲುತನವನ್ನು ಬಯಲಿಗೆಳೆಯಬಹುದು.

ನಾವು ಹತ್ತು ಲಕ್ಷ ವಿಧಗಳಲ್ಲಿ ಅಸಪಕಾರ ಚಳುವಳಿಯನ್ನು ಪುನರ್ ಸಂಶೋಧಿಸಬಹುದು. ಅಂದರೆ, ಅವರನ್ನು ಪೀಡಿಸುವ ಹತ್ತು ಲಕ್ಷ ವಿಧಾನಗಳನ್ನು ನಾವು ಕಂಡುಹಿಡಿಯಬಹುದು.

ಜಾರ್ಜ್ ಬುಶ್, 'ನೀವು ನಮ್ಮೊಂದಿಗಿದ್ದೀರಿ ಅಥವಾ ಭಯೋತ್ಪಾದಕರೊಂದಿಗಿದ್ದೀರಿ' ಎಂದು ಹೇಳುವಾಗ ನಾವು 'ಬೇಡ ವಂದನೆಗಳು' ಎಂದು ಹೇಳಬಹುದು. ಪ್ರಪಂಚದ ಜನಕ್ಕೆ 'ಹುಚ್ಚ ಮುಲ್ಲಾ'ಗಳ ಹಾಗೂ ಕೇಡೆಣಿಸುವ 'ಮಿಕ್ಕಿ ಮೌಸ್'ನ ನಡುವಿನ ಆಯ್ಕೆಗಳ ಅವಶ್ಯಕತೆ ಇಲ್ಲವೇ ಇಲ್ಲವೆಂದು ಆತನಿಗೆ ತಿಳಿಯುವಂತೆ ನಾವೆಲ್ಲ ಮಾಡಬಹುದು.

ನಮ್ಮ ಕಾರ್ಯತಂತ್ರ ಈ 'ಸಾಮ್ರಾಜ್ಯವನ್ನು ಧಿಕ್ಕರಿಸುವುದಷ್ಟೇ ಅಲ್ಲ, ಅದಕ್ಕೆ ಮುತ್ತಿಗೆ ಹಾಕುವುದಾಗಬೇಕಾಗಿದೆ. ಅದಕ್ಕೆ ಸಿಗುತ್ತಿರುವ ಆಮ್ಲಜನಕದ ಸರಬರಾಜನ್ನು ಕತ್ತರಿಸಬೇಕಾಗಿದೆ.

ಅದನ್ನು ನಾಚಿಕೆಗೀಡು ಮಾಡಬೇಕಾಗಿದೆ. ಅಣಕಿಸಬೇಕಾಗಿದೆ-ನಮ್ಮ ಕಲೆಯಿಂದ, ನಮ್ಮ ಸಂಗೀತ, ಸಾಹಿತ್ಯದಿಂದ, ನಮ್ಮ ಮೊಂಡಾಟದಿಂದ, ನಮ್ಮ ಸಂತೋಷ ಮತ್ತ ಬುದ್ಧಿಮತ್ತೆಯಿಂದ, ನಮ್ಮ ಛಲದಿಂದ ಹಾಗೂ ನಮ್ಮದೇ ಕತೆಗಳನ್ನು ಹೇಳುವ ನಮ್ಮ ಸಾಮರ್ಥ್ಯದಿಂದ-ಇದುವರೆಗೂ ಇಲ್ಲಸಲ್ಲದ ಕತೆಗಳನ್ನು ಹೇಳಿ ನಮ್ಮನ್ನು ನಂಬುವಂತೆ ಮಾಡಿರುವ ಕತೆಗಳಿಗಿಂತ ಭಿನ್ನವಾದ ಕತೆಗಳಿಂದ.

ಕಾರ್ಪೊರೇಟ್‌ಗಳು ಮಾರುತ್ತಿರುವುದನ್ನು-ಅವರ ಆಲೋಚನೆಗಳನ್ನು, ಚರಿತ್ರೆಯ ಅವರದೇ ಪರಿಕಲ್ಪನೆಗಳನ್ನು, ಅವರ ಯುದ್ಧಗಳನ್ನು, ಅವರ ಆಯುಧಗಳನ್ನು ಹಾಗೂ ಅವರಿಗೆ ಅನಿವಾರ್ಯವೆನ್ನುವುದನ್ನು ನಾವು ಕೊಳ್ಳುವುದನ್ನು ನಿಲ್ಲಿಸಿದರೆ ಕಾರ್ಪೊರೇಟ್ ಕ್ರಾಂತಿಯನ್ನು ಕುಸಿಯುವಂತೆ ಮಾಡಬಹುದು. ಅಮೆರಿಕದ ಕೋಕಾಕೋಲಾ, ಪೆಪ್ಸಿಗಳನ್ನು ಬಹಿಷ್ಕರಿಸುವುದರಿಂದಲೇ ಇದನ್ನು ಪ್ರಾರಂಭಸಬಹುದು.

ಇದು ನಿಮಗೆ ನೆನಪಿರಲಿ. ನಮ್ಮ ಸಂಖ್ಯೆ ಬಹಳ ಕಡಿಮೆ ಇರಬಹುದು. ಆದರೆ ನಮಗೆ ಅವರ ಅವಶ್ಯಕತೆಗಿಂತ ಅವರಿಗೆ ನಮ್ಮ ಆವಶ್ಯಕತೆ ಹೆಚ್ಚಾಗಿದೆ.

ಮತ್ತೊಂದು ಜಗತ್ತು ಸಾಧ್ಯವಷ್ಟೇ ಅಲ್ಲ, ಅದು ಸಾಕಾರದ ಹಾದಿಯಲ್ಲೇ ಇದೆ. ಒಂದು ನಿಶ್ಶಬ್ದದ ದಿನ ಅವರ ಆಗಮನದ ಹೆಜ್ಜೆಯ ಸಪ್ಪಳವನ್ನು ನಾನು ಆಲಿಸಬಲ್ಲೆ.

●

ಜೆ. ಬಾಲಕೃಷ್ಣ, ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ,
ಹೆಬ್ಬಾಳ, ಬೆಂಗಳೂರು - ೫೬೦ ೦೨೪.

ಚಕ್ರ

ಮೂಲ : ಕೆ.ಎಸ್. ದುಗ್ಗಾಲ್
ಅನು : ಎಸ್. ಜ್ಞಾನಮೂರ್ತಿ

'ಈ ಕೋಣೆಯ ಅಳತೆ ೧೦x೮ ಆಗಿರಲೇಬೇಕು'. ಹೇಳಿದರು ಶ್ರೀಮತಿ ಮಲಿಕ್, ತಮ್ಮ ಮುಂದಿನ ಮೇಜಿನ ಮೇಲಿದ್ದ ಮನೆಯ ನೀಲಿ ನಕಾಶೆಯ ಒಂದು ಭಾಗವನ್ನು ತೋರುತ್ತ. ಈ ಸಲಹೆ ಅವರಿಂದ ಮೂರನೆಯ ಬಾರಿ ಬರುತ್ತಿದ್ದುದಾಗಿತ್ತು. ಆದರೆ ಅವರ ಪತಿಯಾಗಲೀ ಅಥವಾ ವಾಸ್ತುತಜ್ಞನಾಗಲೀ ಅದು ಕೇಳಿಸಲಿಲ್ಲವೇನೋ ಎಂಬಂತೆ ತಮ್ಮ ಕೆಲಸದಲ್ಲಿ ನಿರತರಾಗಿದ್ದರು.

ಮಲಿಕ್ ದಂಪತಿಗಳು ದೆಹಲಿಯಲ್ಲಿ ಮನೆಯ ಮಾಲೀಕರಾಗುವವರಿದ್ದರು. ಅವರು ದೆಹಲಿಯ ಬಹುಸುಂದರ ಬಡಾವಣೆಯೊಂದರಲ್ಲಿ ನಿವೇಶನವನ್ನು ಖರೀದಿಸಿದ್ದರು. ಮತ್ತು ಈಗವರು ದೆಹಲಿಗೆ ಹಿಂತಿರುಗಿ ತಮ್ಮ ಸ್ವಂತ ಮನೆಯನ್ನು ಕಟ್ಟಲು ನಿರ್ಧರಿಸಿದ್ದರು.

ಶ್ರೀಮತಿ ಮಲಿಕ್‌ರು ಮನದಾಳದಲ್ಲಿ 'ಒಮ್ಮೆ ಈ ಮನೆಯನ್ನು ಕಟ್ಟಿದರೆ ಸಾಕು, ನಾನು ಇಲ್ಲಿಯೇ ಇರುತ್ತೇನೆ' ಎಂದುಕೊಂಡರು. ಶ್ರೀಮಲಿಕ್‌ರು ವರ್ಗಾವಣೆಯಾಗಿ ಬೇರೊಂದು ಸ್ಥಳಕ್ಕೆ ಹೋದರೂ ತಾವು ದೆಹಲಿಯಲ್ಲಿಯೇ ಉಳಿಯುವುದಾಗಿ ನಿರ್ಧರಿಸಿದ್ದರು. ವರ್ಗಾವಣೆಯಿಂದ ವಿವಿಧ ಸ್ಥಳಗಳನ್ನು ಸುತ್ತಿ ಸುತ್ತಿ ಅವರಿಗೆ ರೋಸಿಹೋಗಿತ್ತು. ಪ್ರತಿವರ್ಷವೂ ಅವರು ಒಂದಲ್ಲ ಒಂದು ಹೊಸ ಸ್ಥಳಕ್ಕೆ ಹೋಗಲೇಬೇಕಾಗುತ್ತಿತ್ತು. ಆದರೆ ಈಗ ಮಕ್ಕಳು ದೊಡ್ಡವರಾಗುತ್ತಿದ್ದಾರೆ. ಮತ್ತೆ ಮತ್ತೆ ಶಾಲೆಗಳನ್ನು ಬದಲಿಸುವುದು ಅವರ ಭವಿಷ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ಶ್ರೀಮತಿ ಮಲಿಕ್‌ರು ತಮ್ಮ ಪತಿಗೆ ಮತ್ತೊಮ್ಮೆ ವರ್ಗ ಅಂತೇನಾದರೂ ಆದರೆ ಅವರು ಒಬ್ಬರೇ ಹೋಗಬೇಕಾಗುತ್ತದೆಂದು ಹೇಳಿದ್ದರು. ಅವರು ತಮ್ಮ ಮಕ್ಕಳೊಂದಿಗೆ ದೆಹಲಿಯಲ್ಲಿಯೇ ಶಾಶ್ವತವಾಗಿ ನೆಲೆಸಬಯಸಿದ್ದರು. ಅವರ ಜೊತೆಗೆ ಅವರ ಅತ್ತೆಯೂ ಸಹ ಇರುವವರಿದ್ದರು. ಶ್ರೀಮಲಿಕ್‌ರಿಗೂ ಈ ಎಲ್ಲ ವ್ಯವಸ್ಥೆಗಳ ಬಗೆಗೆ ಯಾವುದೇ ಅಭ್ಯಂತರವಿರಲಿಲ್ಲ.

'ಈ ಕೋಣೆಯ ಅಳತೆ ೧೦x೮ ಇರಲೇಬೇಕು'. ಶ್ರೀಮತಿ ಮಲಿಕ್ ಪುನಃ ಹೇಳಿದರು. ಅವರ ಪತಿ ಪಕ್ಕದ ಕೋಣೆಯಲ್ಲಿ ಫೋನಿನಲ್ಲಿ ಯಾರೊಂದಿಗೋ ಮಾತನಾಡುತ್ತಿದ್ದರು.

'ಆದರೆ ಇದು ಉಗ್ರಾಣಕೋಣೆ' ವಾಸ್ತುತಜ್ಞ ಶ್ರೀಮತಿ ಮಲಿಕ್‌ರಿಗೆ ವಿವರಿಸಿದನು.

'ಹೌದು, ಆದರೆ ನಾನು ಯೋಚಿಸಿರುವುದು, ಈ ಕೋಣೆ ನಮ್ಮ ಅತ್ತೆಯವರದ್ದಾಗಿರುತ್ತೆ ಮತ್ತು ಅವರ ನಂತರ ಉಗ್ರಾಣಕೋಣೆಯಾಗಿ ಬಳಸಿಕೊಳ್ಳಬಹುದು.'

ಆತನಿಗೆ ಅವರು ಹೇಳಿದ್ದು ಅರ್ಥವಾಗಲಿಲ್ಲ. ಒಗಟು ಕೇಳಿದವನಂತೆ ಮುಖ ನೋಡಿದ.

'ನಾನು ಹೇಳಿದ್ದೇನೆಂದರೆ, ನನ್ನ ಅತ್ತೆ ಈ ಕೋಣೆಯನ್ನು ಸದ್ಯಕ್ಕೆ ಉಪಯೋಗಿಸುತ್ತಿರಬಹುದು. ನಿಮಗೂ ಗೊತ್ತು, ಅವರು ವಯಸ್ಸಾದ ಹೆಂಗಸು. ಹೆಚ್ಚು ಕಾಲ ಇರುವಂತವರಲ್ಲ. ಮತ್ತು ಅವರ ನಂತರ ಇದನ್ನು ಉಗ್ರಾಣ ಕೋಣೆಯಾಗಿ ಬದಲಿಸಿಕೊಳ್ಳಬಹುದು.' ಶ್ರೀಮತಿ ಮಲಿಕ್‌ರು ತಣ್ಣಗೆ ವಿವರಿಸಿದರು.

ಶ್ರೀಮಲಿಕ್‌ರು ಅವರನ್ನು ಕೂಡಿಕೊಂಡರು. ಫೋನಿನಲ್ಲಿ ಮಾತನಾಡುತ್ತಿರುವಾಗ ಅವರಿಗೂ ಈ ಯೋಚನೆ ಬಂದಿರಬಹುದೆನಿಸಿತು. ಅವರಿಗೂ ಸಹ ಉಗ್ರಾಣ ಕೋಣೆ ಸ್ವಲ್ಪ ದೊಡ್ಡದಾಗಿಯೇ ಇರಬೇಕೆಂಬ ಅಭಿಪ್ರಾಯವಿತ್ತು....ವಿಶಾಲವಾದ ಉಗ್ರಾಣ ಕೋಣೆಯಲ್ಲಿ ಪೆಟ್ಟಿಗೆಗಳನ್ನು ಸುಲಭವಾಗಿಡಬಹುದು ಮತ್ತು ಓಡಾಟಕ್ಕೂ ಅನುಕೂಲಕರ. ಜೊತೆಗೆ ದೊಡ್ಡ ಕೋಣೆಯನ್ನು ಶುಭ್ರವಾಗಿಡುವುದು ಸುಲಭ. ಹೀಗೆ ಎಲ್ಲ ರೀತಿಯಿಂದಲೂ ಒಳ್ಳೆಯದು.

ಅಡುಗೆ ಮನೆಗೆ ಅಂಟಿಕೊಂಡಂತಿರುವ ಕೋಣೆ ೧೦x೮ ಇರವುದೆಂದು ತೀರ್ಮಾನಿಸಲಾಯಿತು. ಅದರಿಂದಾಗಿ ಅಂಗಳವು ಸ್ವಲ್ಪ ಕಿರಿದಾದರೂ ಒಟ್ಟಾರೆ ಯೋಜನೆಯನ್ನು ಅಷ್ಟೇನೂ ಬದಲಿಸಬೇಕಿಲ್ಲದ್ದರಿಂದ ದೊಡ್ಡ ಸಮಸ್ಯೆಯೆನ್ನಿಸಲಿಲ್ಲ.

ಅವರು ಉಳಿದ ಎಲ್ಲ ಭಾಗಗಳ ಸ್ವರೂಪದ ಬಗ್ಗೆ ತೀರ್ಮಾನಿಸಿದರು ಹಾಗೂ ಯೋಜನೆಯು ಕಾರ್ಪೊರೇಷನ್‌ನ ಅನುಮೋದನೆಗಾಗಿ ಕಳುಹಿಸಲ್ಪಟ್ಟಿತು.

ಶ್ರೀಮತಿ ಮಲಿಕ್‌ರು ಮನೆಯ ನಿರ್ಮಾಣ ಕಾರ್ಯದಲ್ಲಿ ಅಪಾರ ಆಸಕ್ತಿ, ಕಾಳಜಿ ವಹಿಸಿದರು. ಅವರು ಮನೆ ಕಟ್ಟುವ ಸ್ಥಳದಲ್ಲಿ ಛತ್ರಿ ಹಿಡಿದು ನಿಂತಿರುವುದನ್ನು ದಿನಪೂರ್ತಿ ನೋಡಬಹುದಿತ್ತು. ಅವರು ಪ್ರತಿಯೊಂದನ್ನೂ ಪರಿಶೀಲಿಸುತ್ತಿದ್ದರು. ಸಮಯ ಬಿದ್ದಾಗ ಗಾರೆ ಕೆಲಸದವರಿಗೂ, ಇತರರಿಗೂ ಸಹಾಯ ಮಾಡಲು ಹಿಂದೆಗೆಯುತ್ತಿರಲಿಲ್ಲ. ಮನೆ ಕಟ್ಟುತ್ತಿದ್ದ ಜಾಗಕ್ಕೆ ಬರುವ ಮೊದಲ ವ್ಯಕ್ತಿ ಹಾಗೂ ಅಲ್ಲಿಂದ ಹೋಗುವ ಕೊನೆಯ ವ್ಯಕ್ತಿ ಅವರೇ ಆಗಿದ್ದರು. ಯಾವುದೇ ವಸ್ತುವು ಅಪ್ರಯೋಜಕವಾಗದಂತೆ ಹಾಗೂ ಕೆಲಸಗಾರರು ಸೋಮಾರಿಗಳಾಗಿ ಕಾಲ ಕಳೆಯದಂತೆ ಎಚ್ಚರ ವಹಿಸುತ್ತಿದ್ದರು.

ಕೆಲ ಸಮಯದಲ್ಲೇ ಮನೆ ಸಿದ್ಧವಾಯಿತು. ಶ್ರೀಮತಿ ಮಲಿಕ್‌ರು ಹೊಸ ಮನೆಗೆ ಹೊಸದಾದ ಪೀಠೋಪಕರಣಗಳನ್ನೇ ತರಬೇಕೆಂದೂ, ತಮ್ಮ ಹಳೆ ಮನೆಯ ಯಾವುದೇ ಹಳೆಯ ಪೀಠೋಪಕರಣಗಳನ್ನೂ, ಅಷ್ಟೇಕೆ ಅದರ ಒಂದು ತುಣುಕನ್ನೂ ತರಕೂಡದೆಂದು ಸಂಕಲ್ಪ ಮಾಡಿದ್ದರು.

ಅವರಿನ್ನೂ ತಮ್ಮ ಹೊಸ ಮನೆಗೆ ಪ್ರವೇಶಿಸಲು ಯೋಚಿಸುತ್ತಿರುವಾಗಲೇ ಮನೆಯನ್ನು ಸರ್ಕಾರವು ತನ್ನ ಉಪಯೋಗಕ್ಕಾಗಿ ಬಳಸಿಕೊಳ್ಳಲು ನಿರ್ಧರಿಸಿರುವುದು ತಿಳಿಯಿತು. ಶ್ರೀಮತಿ

ಮಲಿಕ್‌ರು ಬಹಳ ಕೋಪೋದ್ರಿಕ್ತರಾದರು. ಆದರೆ ಶ್ರೀಮಲಿಕ್‌ರು ತಮ್ಮ ಮನೆಗೆ ಎರಡರಷ್ಟು ಬಾಡಿಗೆ ಬರುವುದೆಂದು ವಿವರಿಸಿದಾಗ ಸಮಾಧಾನಗೊಂಡರು.

ಶ್ರೀಮತಿ ಮಲಿಕ್‌ರು ತಮ್ಮ ಮನೆಯ ನಿರ್ಮಾಣ ಕಾರ್ಯದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಾಗ, ತಮ್ಮ ಅಕ್ಕಪಕ್ಕದವರನ್ನು ಭೇಟಿ ಮಾಡಿದ್ದರು ಮತ್ತು ಕೆಲವರನ್ನು ಸ್ನೇಹಿತರನ್ನಾಗಿ ಮಾಡಿಕೊಂಡಿದ್ದರು. ಅವರು ಆಗಲೇ ತಮ್ಮ ಮನೆಯನ್ನು ಇವರೆಲ್ಲರಿಗಿಂತ ಹೇಗೆ ಉನ್ನತೀಕರಿಸಬೇಕೆಂದು ಯೋಜನೆ ಹಾಕಿದ್ದರು. ಆದರೆ ಈಗ ಅದೆಲ್ಲವನ್ನೂ ಮರೆತು ಬಿಡಬೇಕಾದ ಪರಿಸ್ಥಿತಿ ಬಂದಿತ್ತು.

ನಂತರ ಅವರಿಗೆ ದೆಹಲಿಯಿಂದ ಹೊರಕ್ಕೆ ವರ್ಗವಾಯಿತು. ಈಗ ಶ್ರೀಮತಿ ಮಲಿಕ್‌ರು ಬಹಳ ಖುಷಿಯಿಂದಿದ್ದರು. ತಮ್ಮದೇ ಮನೆಯಲ್ಲಿ ಯಾರೋ ಬದುಕುತ್ತಿರುವುದನ್ನು ಹಾಗೂ ತಾವು ಇರಲು ಸಾಧ್ಯವಾಗದ ಆ ಮನೆಯನ್ನು ನೋಡಲು ಅಸಹನೀಯವೆನಿಸಿತ್ತು. ಆದರೆ ತಾವು ದುಪ್ಪಟ್ಟು ಬಾಡಿಗೆ ಪಡೆಯುತ್ತಿರುವುದನ್ನು ನೆನೆದು ತೃಪ್ತರಾಗುತ್ತಿದ್ದರು.

ಹೀಗಿರುವಾಗ ಶ್ರೀಮತಿ ಮಲಿಕ್‌ರ ಅತ್ತೆ ತೀರಿಹೋದರು. ಅವರ ಮಗಳಿಗೆ ಮದುವೆಯಾಯಿತು.

ಮನೆಯು ಸರ್ಕಾರದ ವಶದಲ್ಲಿದ್ದುದರಿಂದ ಮಲಿಕ್ ದಂಪತಿಗಳು ಒಂದು ರೀತಿಯಲ್ಲಿ ಅದೃಷ್ಟವಂತರೇ ಆಗಿದ್ದರು. ಖಾಸಗಿ ಬಾಡಿಗೆದಾರರು ದೊಡ್ಡ ತಲೆನೋವಾಗಿ ಬಿಡುತ್ತಿದ್ದರು. ಅವರ ದೂರು ಮತ್ತು ಬೇಡಿಕೆಗಳಿಗೆ ಕೊನೆಯೇ ಇರುವುದಿಲ್ಲ. ಇವೆಲ್ಲದರ ಜೊತೆಗೆ ಬಾಡಿಗೆಯನ್ನೂ ಸರಿಯಾಗಿ ಕೊಡುವುದಿಲ್ಲ. ಈಗಲಾದರೋ ಅವರ ಮನೆ ಬಾಡಿಗೆಯು ನೇರವಾಗಿ ಅವರ ಬ್ಯಾಂಕ್ ಖಾತೆಗೆ ಜಮಾ ಆಗಿಬಿಡುತ್ತಿತ್ತು.

ಅವರ ಒಬ್ಬನೇ ಮಗನಿಗೆ ಮದುವೆ ಮಾಡಬೇಕಾಗಿತ್ತು. ಶ್ರೀಮಲಿಕ್‌ರು ಮದುವೆಯನ್ನು ತಾವು ನಿವೃತ್ತರಾಗುವ ಮುಂಚೆ ಮುಗಿಸಬೇಕೆಂದಿದ್ದರು. ಹಾಗೂ ಯೋಗ್ಯ ಹುಡುಗಿಗಾಗಿ ಹುಡುಕಾಟ ನಡೆಸಿದ್ದರು. ಅವರ ಮಗನಿಗೆ ಮದುವೆಯೂ ಆಯಿತು. ಶ್ರೀ ಮಲಿಕ್‌ರೂ ನಿವೃತ್ತರಾದರು. ಆದರೆ ಮನೆಯಿನ್ನೂ ಸರ್ಕಾರದಿಂದ ಬಿಡುಗಡೆಯಾಗಿರಲಿಲ್ಲ. ಮಲಿಕ್ ದಂಪತಿಗಳು ತಮ್ಮ ಮಗ, ಸೊಸೆಯೊಂದಿಗೆ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು.

ಶ್ರೀ ಮಲಿಕ್‌ರು ತಮ್ಮ ಮನೆಯನ್ನು ಮರಳಿ ಪಡೆಯುವುದಕ್ಕಾಗಿ ಹೋರಾಡುತ್ತಲೇ ಇದ್ದರು. ಇನ್ನೇನು ಮರಳಿ ಸಿಕ್ಕಿತೆನ್ನುವಾಗ ಶ್ರೀ ಮಲಿಕ್‌ರು ತೀರಿಹೋದರು. ತಮ್ಮದೇ ಸ್ವಂತ ಮನೆಯಲ್ಲಿ ಕನಿಷ್ಠ ಒಂದು ದಿನವಾದರೂ ವಾಸಿಸಲು ಅವರಿಗೆ ಅವಕಾಶ ಸಿಗಲಿಲ್ಲ.

ಮೂರು ತಿಂಗಳ ನಂತರ ಮನೆ ಸುಪರ್ದಿಗೆ ಬಂದಿತು. ಶ್ರೀಮತಿ ಮಲಿಕ್‌ರ ಸೊಸೆಯು ಹೊಸ ಮನೆಗೆ ಹೋಗಲು ಶ್ರೀಮತಿ ಮಲಿಕ್‌ರಿಗಿಂತಲೂ ಹೆಚ್ಚು ಹಾತೊರೆಯುತ್ತಿದ್ದಳು. ಮನೆಗೆ ಮತ್ತೊಮ್ಮೆ ಸುಣ್ಣ ಬಣ್ಣ ಮಾಡಿಸಲಾಯಿತು ಮತ್ತು ಹೊಸಮನೆಗೆ ಹೊರಡಲು ಸಿದ್ಧರಾಗತೊಡಗಿದರು. ಹಲವಾರು ಪೀಠೋಪಕರಣಗಳನ್ನು ಮಾಡಲು ಆರ್ಡರ್ ಕೊಡಲಾಯಿತು.

ಅವರು ಸೋಮವಾರ ಮುಂಜಾನೆ ಹೊಸಮನೆಗೆ ಹೋಗಲು ಯೋಚಿಸಿದ್ದರು. ಆದರೆ

ಸೋಮವಾರ ಬೆಳಗ್ಗೆ ಎದ್ದಾಗ ಮಳೆ ಸುರಿಯುತ್ತಿತ್ತು. ಮಳೆ ನಿಲ್ಲಬಹುದೆಂದು ಬಹಳ ಹೊತ್ತು ಕಾವರು. ಅಷ್ಟು ಹೊತ್ತಿಗೆ ಶ್ರೀಮತಿ ಮಲಿಕ್‌ರ ಮಗ ಆಫೀಸಿಗೆ ಹೋಗುವ ವೇಳೆಯಾಯಿತು. ಸಾಯಂಕಾಲ ಅವನು ಹಿಂದಿರುಗಿದ ತಕ್ಷಣ ಹೊರಡುವುದೆಂದು ತೀರ್ಮಾನಿಸಲಾಯಿತು. ಮಳೆಯು ದಿನಪೂರ್ತಿ ಸುರಿಯುತ್ತಿತ್ತು. ಸಾಯಂಕಾಲವಾದರೂ ನಿಲ್ಲುವ ಸೂಚನೆಗಳು ಕಾಣಲಿಲ್ಲ.

ಶ್ರೀಮತಿ ಮಲಿಕ್‌ರು ಸೋಮವಾರವೇ ಹೊಸ ಮನೆಗೆ ಹೋಗಬೇಕೆಂದಿದ್ದರು. ಏಕೆಂದರೆ ಸೋಮವಾರ ಗೃಹಪ್ರವೇಶಕ್ಕೆ ಪ್ರಶಸ್ತವೆಂದು ಅವರ ಅಭಿಪ್ರಾಯವಾಗಿತ್ತು. ಮಂಗಳವಾರ ಅಷ್ಟು ಶುಭವಲ್ಲವೆಂಬುದೂ ಅವರ ತಲೆಯಲ್ಲಿ ಕೊರೆಯುತ್ತಿತ್ತು.

ಶ್ರೀಮತಿ ಮಲಿಕ್‌ರ ಇಚ್ಛೆಯಂತೆಯೇ ಅವರ ಮಗ ಮಳೆ ಬರುತ್ತಿದ್ದರೂ ಅಂದೇ ಹೊಸಮನೆಗೆ ಹೋಗುವುದೆಂದು ತೀರ್ಮಾನಿಸಿದನು. ತಮ್ಮ ಸ್ವಂತ ಕಾರಿನ ಜತೆಗೆ ಒಂದು ಟ್ಯಾಕ್ಸಿಯನ್ನು ತರಿಸಿ, ಅವಶ್ಯಕವಾದ ವಸ್ತುಗಳನ್ನು ತೆಗೆದುಕೊಂಡರು. ಉಳಿದವನ್ನು ನಿಧಾನವಾಗಿ ತಂದುಕೊಳ್ಳುವುದೆಂದು ಕೊಂಡರು.

ಮಳೆ ಎಡೆಬಿಡದೆ ಸುರಿಯುತ್ತಲೇ ಇತ್ತು. ಶ್ರೀಮತಿ ಮಲಿಕ್‌ರು ಕಾರಿನ ಹಿಂದಿನ ಸೀಟಿನಲ್ಲಿ ಕುಳಿತರು ಮತ್ತು ಮನೆ ಕಟ್ಟುವ ಸಂದರ್ಭದ ನೆನಪುಗಳಲ್ಲಿ ಕಳೆದುಹೋದರು.

ಮನೆಯಿನ್ನೂ ಕಟ್ಟುವ ಹಂತದಲ್ಲಿದ್ದಾಗ ಎಂತಹ ಕಷ್ಟಗಳನ್ನು ಸಹಿಸಿದೆ ! ಎಷ್ಟೋ ದಿನಗಳು ಊಟವನ್ನೇ ತಪ್ಪಿಸಿಕೊಂಡದ್ದಿದೆ. ! ಉರಿಯುವ ಸೂರ್ಯನ ಕೆಳಗೆ ನಿಂತು ಕೆಲಸದ ಪ್ರಗತಿಯನ್ನು ಗಮನಿಸುತ್ತಿದ್ದುದು ! ಕೆಲ ದಿನ ಸುರಿವ ಮಳೆಯಲ್ಲೂ ನಿಂತದ್ದಿತ್ತು.

ವಾಸ್ತುತಜ್ಞನು ಮನೆಯ ನಕಾಶೆಯನ್ನು ಸಚಿತ್ರವಾಗಿ ಬಿಡಿಸಿದ್ದನು. ಏಕೆಂದರೆ ಮನೆ ಸಿದ್ಧವಾದ ಬಳಿಕ ಹೇಗೆ ಕಾಣುತ್ತದೆಂಬುದರ ಬಗೆಗೆ ಶ್ರೀಮತಿ ಮಲಿಕ್‌ರಿಗೆ ಮನವರಿಕೆ ಮಾಡಿಕೊಡುವುದಕ್ಕಾಗಿ. ಅದರಲ್ಲಿ ಮನೆಯ ಯಜಮಾನಿಯು ವರಾಂಡಾದಲ್ಲಿ ಕಲ್ಲಿನ ಕಂಬಕ್ಕೊರಗಿ ನಿಂತಿರುವ ಚಿತ್ರವಿತ್ತು. ಆಕೆ ಕುಂಕುಮವರ್ಣದ ಸೀರೆಯಲ್ಲಿ ಆಕರ್ಷಕವಾಗಿ, ಸುಂದರಳಾಗಿದ್ದ ಚಿತ್ರ ಒಂದು ಉತ್ಕೃಷ್ಟ ಕಲ್ಪನೆಯಾಗಿತ್ತು. ಶ್ರೀಮತಿ ಮಲಿಕ್‌ರು ವಾಸ್ತುಶಿಲ್ಪಿಯು ತಾನು ಕುಂಕುಮವರ್ಣದ ಸೀರೆಯನ್ನೇ ಎಂದಿಗೂ ಉಟ್ಟಿರದಿದ್ದರೂ, ಆ ಸೀರೆಯಲ್ಲಿ ನನ್ನ ಚಿತ್ರವನ್ನು ಹೇಗೆ ಬರೆದನೆಂದು ಸೋಜಿಗಪಟ್ಟಿದ್ದರು. ಮನೆ ಕಟ್ಟಿದ ಮೇಲೆ ನಿಲ್ಲಿಸಿದ್ದ ಆ ಆಕೃತಿ ಶ್ರೀಮತಿ ಮಲಿಕ್‌ರನ್ನೇ ಹೋಲುತ್ತಿತ್ತು. ಹಾಗೂ ಅವರಷ್ಟೇ ಎತ್ತರವಾಗಿತ್ತು. ಆ ಚಿತ್ರದಲ್ಲಿದ್ದಂತೆಯೇ ಅವರು ಕಂಬಕ್ಕೊರಗಿ ನಿಲ್ಲಲು ಪ್ರಯತ್ನಿಸುತ್ತಿದ್ದರು. ಶ್ರೀಮತಿ ಮಲಿಕ್‌ರು ಆ ಆಕೃತಿಯನ್ನು ಸೂಕ್ಷ್ಮವಾಗಿ ಗಮನಿಸಿ ಮನೆಗೆ ಹಿಂದಿರುಗಿದಾಗ ಡ್ರೆಸಿಂಗ್ ಟೇಬಲ್‌ನ ಮುಂದೆ ಅದೇ ಭಂಗಿಯಲ್ಲಿ ನಿಲ್ಲುತ್ತಿದ್ದರು. ತಮ್ಮ ಸೊಸೆಗೆ ಆ ಆಕೃತಿಯನ್ನು ಖಂಡಿತಾ ತೋರಿಸಬೇಕೆಂದುಕೊಂಡಿದ್ದರು.

ಅವರ ಸೊಸೆ ಕಾರಿನ ಮುಂದಿನ ಸೀಟಿನಲ್ಲಿ ತನ್ನ ಗಂಡನ ಪಕ್ಕದಲ್ಲಿ ಕುಳಿತಿದ್ದಳು. ಅವಳು ತನ್ನ ಪಕ್ಕದ ಕಾರಿನ ಕನ್ನಡಿಯಲ್ಲಿ ಮುಖ ನೋಡಿಕೊಂಡಳು ಮತ್ತು ತುಟಿಗೆ ಮತ್ತೊಮ್ಮೆ ಲಿಪ್‌ಸ್ಟಿಕ್ ಹಚ್ಚಲಾರಂಭಿಸಿದಳು.

ಅವರು ತಮ್ಮದೇ ಸ್ವಂತ ಮನೆಗೆ ಹೋಗುತ್ತಿರುವಾಗ, ತುಟಿಗೆ ಬಣ್ಣ ಹಚ್ಚಬೇಕಾದ

ಅಗತ್ಯವಾದರೂ ಏನಿತ್ತು ? ಅದರಲ್ಲೂ ಈಗವರು ಹೋದ ತಕ್ಷಣ ಊಟ ಮಾಡಿ ಮಲಗುವುದನ್ನು ಬಿಟ್ಟರೆ ಮತ್ತೇನೂ ಇರಲಿಲ್ಲ. ಈ ಆಧುನಿಕ ಹುಡುಗಿಯರ ರೀತಿ-ನೀತಿಗಳೇ ವಿಚಿತ್ರ ! ಅವಳು ಮಾತನಾಡುವುದೇನು ? ಬಿಡುವಿಲ್ಲದೆ ಗಂಡನ ಜತೆ ಹರಟುತ್ತಲೇ ಇದ್ದಳು. ತನ್ನ ಗಂಡನ ಜತೆಯಲ್ಲೇ ಇಂಗ್ಲಿಷ್‌ನಲ್ಲಿ ಮಾತನಾಡುವ ಅಗತ್ಯವಾದರೂ ಏನು ?

ಶ್ರೀಮತಿ ಮಲಿಕ್‌ರು ಇಂಗ್ಲಿಷ್ ಕಲಿತಿರಲಿಲ್ಲ. ಇದೊಂದು ವಿಷಯದಲ್ಲಿ ಮಾತ್ರ ಅವರು ಸೋತಿದ್ದರು. ಉಳಿದ ಪ್ರತಿಯೊಂದನ್ನೂ ಅವರು ನಿಭಾಯಿಸಬಲ್ಲವರಾಗಿದ್ದರು.

ತಕ್ಷಣ ಶ್ರೀಮತಿ ಮಲಿಕ್‌ರಿಗೆ ವಾಸ್ತುಶಿಲ್ಪಿ ರಚಿಸಿರುವ ಆಕೃತಿ ತನ್ನ ಸೊಸೆಯದ್ದೇ ಆಗಿರಬಹುದೇ? ಎಂಬ ಸಂಶಯ ಬಂದಿತು. ಆದರದು ಹೇಗೆ ಸಾಧ್ಯ? ಈ ಮನೆಯನ್ನು ಕಟ್ಟುವಾಗ ಅವಳಿನ್ನೂ ಬಂದಿರಲೇ ಇಲ್ಲ. ಆದರೆ ಕುಂಕುಮವರ್ಣದ ಸೀರೆಯನ್ನುಟ್ಟಾಗ ಶಿಲ್ಪದಲ್ಲಿರುವಂತೆಯೇ ಕಾಣುತ್ತಿದ್ದಳು. ಹೌದು ನಿಜವಾಗಿಯೂ ಶ್ರೀಮತಿ ಮಲಿಕ್‌ರಿಗೆ ಕುಂಕುಮವರ್ಣದ ಸೀರೆಯನ್ನು ಕಂಡರೆ ಎಂದೆಂದಿಗೂ ಇಷ್ಟವಿರಲಿಲ್ಲ. ಅದು ತುಂಬ ದಟ್ಟ ಬಣ್ಣದ್ದಾಗಿರುತ್ತದೆಂದು ಅವರಿಗನಿಸಿತ್ತು. ಅಂತಹ ಸೀರೆಯನ್ನು ತನ್ನ ಸೊಸೆಯಂತಹ ಹುಡುಗಿಯರು ಮಾತ್ರ ಇಷ್ಟಪಡಬಹುದು.

ಅವಳಿಗೆ ಖಂಡಿತವಾಗಿಯೂ ಇಷ್ಟವಿದ್ದರೆ ಕುಂಕುಮವರ್ಣದ ಸೀರೆಯನ್ನು ಉಟ್ಟುಕೊಳ್ಳಲಿ. ಶ್ರೀಮತಿ ಮಲಿಕ್‌ರು ತಮ್ಮಲ್ಲೇ ಹೇಳಿಕೊಂಡರು. ಆದರೆ ಅವಳು ನನ್ನಂತೆಯೇ ಶ್ರಮವಹಿಸಿ ಕೆಲಸ ಮಾಡಬೇಕು. ನಾನು ಈ ಮನೆಗೆ ಜೋಡಿಸಿರುವ ಪ್ರತಿ ಇಟ್ಟಿಗೆಯನ್ನೂ ನನ್ನ ಕಣ್ಣಾರೆ ಕಂಡಿದ್ದೇನೆ. ಬಿಸಿಲು, ಚಳಿಯಲ್ಲಿ ಬೆಳಗ್ಗಿನಿಂದ ತಡರಾತ್ರಿಯವರೆಗೆ ನಿಂತು ಕಟ್ಟುವ ಕೆಲಸವನ್ನು ನೋಡಿಕೊಂಡಿದ್ದೇನೆ. ಜೊತೆಗೆ ಗಾರೆ ಕೆಲಸದವರಿಗೆ ಇಟ್ಟಿಗೆ, ಸಿಮೆಂಟ್ ಎತ್ತಿಕೊಟ್ಟದ್ದುಂಟು. ಬಹಳಷ್ಟು ದಿನ ರಬ್ಬರ್ ಪೈಪ್ ಹಿಡಿದು ಸಿಮೆಂಟ್ ಪ್ಲಾಸ್ಟರ್ ಮಾಡಿದ ಗೋಡೆಗಳಿಗೆ ನೀರು ಹನಿಸುವುದನ್ನು ಸಹ...

ಅವರು ಮನೆಯನ್ನು ತಲುಪಿದರು. ಶ್ರೀಮತಿ ಮಲಿಕ್‌ರ ಮಗ ಕಾರನ್ನು ನೇರವಾಗಿ ಮನೆ ಮುಂದಿನ ಅಂಗಳಕ್ಕೆ ತಂದು ನಿಲ್ಲಿಸಿದನು ಮತ್ತು ಅವರಿಬ್ಬರೂ ಕಾರಿನಿಂದ ಧುಮುಕಿದರು. ಅವರ ಸೊಸೆ ನೇರವಾಗಿ ವರಾಂಡಾಕ್ಕೆ ಹೋಗಿ ವಾಸ್ತುಶಿಲ್ಪಿಯು ರಚಿಸಿದ್ದ ಶಿಲ್ಪದ ಭಂಗಿಯಲ್ಲೇ ಅದರೆದುರಿನ ಕಂಬಕ್ಕೊರಗಿ ನಿಂತಳು. ಶ್ರೀಮತಿ ಮಲಿಕ್‌ರ ಹೃದಯವನ್ನು ಯಾರೋ ಹಿಂಡಿದಂತಾಯಿತು. ವಾಸ್ತುತಜ್ಞ ತಮ್ಮನ್ನು ಅಣಕಿಸುತ್ತಿರುವಂತೆ ಭಾಸವಾಯಿತು.

ವರಾಂಡಾದ ಕಂಬಕ್ಕೊರಗಿ ನಿಂತು ತನ್ನ ಕೂದಲ ಗಂಟನ್ನು ಸೆರಗಿನಿಂದ ತಲೆಯ ಮೇಲೆಳೆದು ಮುಚ್ಚಿಸಲು ಯತ್ನಿಸುತ್ತ, ಟ್ಯಾಕ್ಸಿಯಲ್ಲಿರಿಸಿದ್ದ ಸಾಮಾನುಗಳನ್ನು ಇಳಿಸುವ ಬಗೆಗೆ ಆಳುಗಳಿಗೆ ಸೂಚನೆಗಳನ್ನು ನೀಡುತ್ತಿದ್ದಳು.

ಸಾಮಾನುಗಳನ್ನು ಟ್ಯಾಕ್ಸಿಯಿಂದ ಇಳಿಸಲಾಯಿತು. ಟ್ಯಾಕ್ಸಿಯವ ಬಾಡಿಗೆ ಪಡೆದು ಹೊರಟುಹೋದನು. ಶ್ರೀಮತಿ ಮಲಿಕ್‌ರು ಇನ್ನೂ ತಮ್ಮ ಕಾರಿನ ಹಿಂದಿನ ಸೀಟಿನಲ್ಲಿ ಕುಳಿತೇ ಇದ್ದರು. ಇದು ಅವರಿಗೆ ಒಂದು ರೀತಿಯ ಮುಜುಗರ ಹುಟ್ಟಿಸುತ್ತಿತ್ತು.

ಅವರ ಮಗ ಮನೆಯೊಳಕ್ಕೆ ಹೋದನು. ಸೊಸೆಯೂ ಅವನನ್ನೇ ಹಿಂಬಾಲಿಸಿದಳು. ಅವರು ಒಂದರ ನಂತರ ಒಂದು ಲೈಟುಗಳನ್ನು ಹಾಕಿದರು. ಎಲ್ಲ ಕೋಣೆಗಳು ಬೆಳಕಿನಿಂದ ತುಂಬಿದವು.

ಶ್ರೀಮತಿ ಮಲಿಕ್‌ರು ಇದನ್ನೆಲ್ಲ ಸೋಜಿಗವೆಂಬಂತೆ ನೋಡುತ್ತಿದ್ದರು. ಇನ್ನೂ ಕಾರಿನಲ್ಲಿಯೇ ಕುಳಿತಿದ್ದರು. ಯಾರೊಬ್ಬರೂ ಪ್ರತಿಸಾರಿಯಂತೆ ಇಂದು ಕಾರಿನ ಬಾಗಿಲನ್ನು ತೆಗೆಯದಿದ್ದುದು ಆಶ್ಚರಿಯ ವಿಷಯವಾಗಿತ್ತು. ಅವರಿಗೂ ಸಹ ಕಾರಿನ ಬಾಗಿಲು ತೆಗೆಯಲು ತಿಳಿದಿರಲಿಲ್ಲ.

ಮತ್ತೊಂದು ಗಂಟೆ ಕಳೆಯಿತು. ನಂತರ ಇನ್ನೊಂದು ಗಂಟೆ ಕಳೆಯಿತು. ಆಗ ಶ್ರೀಮತಿ ಮಲಿಕ್‌ರ ಮಗ ತನ್ನ ತಾಯಿಯನ್ನು ನೆನೆಸಿಕೊಂಡನು. ತಕ್ಷಣ ಓಡಿಬಂದು ಕಾರಿನ ಬಾಗಿಲನ್ನು ತೆಗೆದು ಒಳಕ್ಕೆ ಕರೆದೊಯ್ದನು.

"ಸಾಯಂಕಾಲದ ಪ್ರಯಾಣ ನನಗೆ ಯಾವಾಗಲೂ ನಿದ್ದೆ ತಂದುಬಿಡುತ್ತದೆ" ಶ್ರೀಮತಿ ಮಲಿಕ್‌ರು ವಟಗುಟ್ಟಿದರು. ಸ್ವಲ್ಪ ಹೊತ್ತಿನಲ್ಲಿ ಅವರ ಸೊಸೆಯು ಮನೆಯನ್ನು ನೋಡಿ ಬಂದಳು. ಎಲ್ಲರೂ ಶ್ರೀಮತಿ ಮಲಿಕ್‌ರನ್ನು ನೋಡಿ ನಗುತ್ತಿದ್ದರು. ಶ್ರೀಮತಿ ಮಲಿಕ್‌ರ ಸೊಸೆ ಮತ್ತೆ ವರಾಂಡದಲ್ಲಿದ್ದ ಶಿಲ್ಪದ ಎದುರು ಕಂಬಕ್ಕೊರಗಿ ನಿಂತಳು. ಅವಳು ತನ್ನ ತಲೆಯನ್ನು ಸೆರಗಿನಿಂದ ಬಳಸುತ್ತ ಕೂದಲನ್ನು ಅರ್ಧಮುಚ್ಚುವಂತೆ ಮಾಡಲು ಪ್ರಯತ್ನಿಸುತ್ತಿದ್ದಳು.

"ನನಗೆ ಹಸಿವಿಲ್ಲ, ಊಟ ಬೇಡ" ಎಂದರು ಶ್ರೀಮತಿ ಮಲಿಕ್. ನಾನು "ಮಲಗುತ್ತೇನೆ".

ಆ ಹೊತ್ತಿಗಾಗಲೇ ಆಳುಗಳು ಟೇಬಲ್ಲಿನ ಮೇಲೆ ಊಟಕ್ಕೆ ಅಣಿ ಮಾಡಿದ್ದರು.

'ಹಾಗಾದರೆ ನೀವು ನಿಮ್ಮ ಕೋಣೆಗೆ ಹೋಗುವುದೊಳಿತು' ಎಂದಳು ಅವರ ಸೊಸೆ, ೧೦x೮ರ ಕೋಣೆಯನ್ನು ತೋರುತ್ತಾ.

ಶ್ರೀಮತಿ ಮಲಿಕ್‌ರ ಮಗ ಅವರನ್ನು ಕೈಹಿಡಿದು ಕರೆದೊಯ್ದು ಅವರ ಕೋಣೆಗೆ ಬಿಟ್ಟುಬಂದನು.

"ಇದು ನನ್ನ ಅತ್ತೆಯವರ ಕೋಣೆಯಾಗಿರುತ್ತೆ. ಅವರ ನಂತರ ಅದನ್ನು ಉಗ್ರಾಣ ಕೋಣೆಯಾಗಿ ಬದಲಿಸಿಕೊಳ್ಳಬಹುದು." ಶ್ರೀಮತಿ ಮಲಿಕ್‌ರು ಹಾಸಿಗೆಗೊರಗಿದಾಗ ಅವರದೇ ಮಾತುಗಳು ಕಿವಿಯಲ್ಲಿ ಪ್ರತಿಧ್ವನಿಸಿದವು.

ಕೂಡಲೇ ಅವರಿಗೆ ತಮ್ಮ ಸೊಸೆಯ ಧ್ವನಿ ಕೇಳಿಬಂದಿತು.

"ಈ ಮನೆಯನ್ನು ನಿಜಕ್ಕೂ ಬಹಳ ಎಚ್ಚರಿಕೆಯಿಂದ, ಪೂರ್ವ ಯೋಜಿತವಾಗಿ ಕಟ್ಟಲಾಗಿದೆ. ಆದರೆ ಒಂದೇ ಒಂದು ಕೊರತೆ. ಇಲ್ಲಿ ಉಗ್ರಾಣ ಕೋಣೆಯಿಲ್ಲ. ನನಗೆ ದೊಡ್ಡದಾಗಿರುವ ಉಗ್ರಾಣ ಕೋಣೆಯಿರುವುದು ಬಹಳ ಇಷ್ಟ"

ಶ್ರೀಮತಿ ಮಲಿಕ್‌ರಿಗೆ ಈ ಮಾತುಗಳು ಕೇಳಿಸಿದವು ಮತ್ತು ತಾವು ತಳವಿಲ್ಲದ ಬಾವಿಯಲ್ಲಿ ಆಳಕ್ಕೆ ಮುಳುಗುತ್ತಿದ್ದೇನೆ ಅನ್ನಿಸತೊಡಗಿತು.

●

ಎಸ್. ಜ್ಞಾನಮೂರ್ತಿ, S/o ಟಿ.ವಿ. ಶ್ರೀನಿವಾಸಮೂರ್ತಿ, ಗಂಟಗಯ್ಯನಪಾಳ್ಯ, ಹುಳ್ಳೇನಹಳ್ಳಿ ಅಂಚೆ, ತಿಪ್ಪಸಂದ್ರ ಹೋಬಳಿ, ಮಾಗಡಿ ತಾಲೂಕು-೫೬೨೧೩೧, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಆಶುತೋಷ ದುಬೆ : ಎರಡು ಕವಿತೆಗಳು

ಹಿಂದಿಯಿಂದ ಕನ್ನಡಕ್ಕೆ : ಡಾ. ಪರಿಮಳಾ ಅಂಬೇಕರ

ಸೇತುವೆ

ದಿನವೆರಡರ ಮಧ್ಯೆ
ಥರಗುಟ್ಟುತ್ತಿರುವ ಒಂದು ಸೇತುವೆ
ರಾತ್ರಿಯದ್ದು

ಎರಡು ರಾತ್ರಿಗಳ ನಡುವಣ
ಥಡಗುಟ್ಟುತ್ತಿರುವ ಒಂದು ಸೇತುವೆ
ಹಗಲಿನದ್ದು

ಪ್ರವಹಿಸುತ್ತೇವೆ ನಾವು ರಾತ್ರಿಯಿಡೀ
ಮತ್ತೆ ಆವಾಗೆಲ್ಲೋ ಬಂದು ಸೇರುವೆವು
ಹಗಲಿನ ಸೇತುವೆಗೆ

ಹಗಲಿಡೀ ನಡೆನಡೆದು
ಮತ್ತೆ ಆವಾಗೆಲ್ಲೋ ದಣಿವಾರಿಸುತ್ತೇವೆ
ರಾತ್ರಿಯ ಸೇತುವೆ ಮೇಲೆ

ಹಾಗೆ ನೋಡಿದಲ್ಲಿ
ನಾವೂ ಕೂಡ ಹೊಯ್ದಾಡುವ ಸೇತುವೆಯೇ
ಹಗಲು ರಾತ್ರಿಗಳು ಅದರ ಮೇಲೆ
ಸಾಗುವವು ಕಳ್ಳನಡಿಗೆಯಿಂದ

ಹೋಗದಿರಿ ಮತ್ತೆ

ಬೆಳ ಬೆಳಗ್ಗೆ, ದಾಳಿಯಾಯಿತು
ಮಧ್ಯಾಹ್ನದವರೆಗೆ, ಎತ್ತಲೂ ಹೆಣಗಳೆ, ಟೀ.ವಿ.ಯಲ್ಲಿ
ಬಿಳಿಯ ಬಟ್ಟೆಯಲ್ಲಿ ಕಟ್ಟಿದ, ಮುಚ್ಚಿಟ್ಟ
ಸತ್ತ ಯಾವನ ಚಹರೆಯೂ ಕಾಣಿಸುತ್ತಿಲ್ಲ
ಯಾವ ಮಾಸೂಮು ಚಹರೆಯೂ ಇಲ್ಲ
ಅತಿರಿಕ್ತ ಶೋಕ, ಅಂಥದ್ದೇನೂ ಇಲ್ಲ
ಬಿಳೀ ಬಟ್ಟೆಯಲ್ಲಿ ಸುತ್ತಿದ ಶೋಕವಷ್ಟೆ
ಗಾರೆಯ ಗೋಡೆಗಳ ಮೇಲೆ ಚೆಲ್ಲಿದ ರಕ್ತದ ಬುಗ್ಗೆ, ಒಂದೇ ತರಹ
ಒಂದೇ ರೀತಿ ಮರುಗುವ ಹೆಣ್ಣುಮಕ್ಕಳು
ಬೆತ್ತಲೆ ಕಣ್ಣಿನ ಮಕ್ಕಳೂ ಸಮಾನವಾಗಿದ್ದರು
ಕರುಣೆಯ ಕ್ಯಾಮರಾ ಕಣ್ಣು, ಇದನ್ನೆಲ್ಲ ತೋರಿಸುತ್ತಿತ್ತು ಬಹಳ ಹೊತ್ತು

ಪೋಲೀಸರ ಹೈಕಮಾಂಡು
ಮತ್ತು ಊರಿನ ಶಾಸಕ, ಘಳಿಗೆ ಘಳಿಗೆಗೆ ಕೊಡುತ್ತಿದ್ದರು ವರದಿ
ನಿಂದನೆಯ, ಭರ್ತ್ಸನೆಯ ಸುದ್ದಿಗಳು ಬರುತ್ತಿದ್ದವು ಸ್ಟುಡಿಯೋಗಳಲ್ಲಿ
ಶುದ್ಧ ಹೇಡಿತನದ ಕೆಲಸವಿದು
ನಾಯಕನು ವ್ಯಾಕುಲತೆಯ ಸೋಗಿನಲ್ಲಿ ಹೇಳುತ್ತಿದ್ದ
ಅದಕ್ಕೂ ಸ್ವಲ್ಪ ಅಧಿಕ ಸಿಟ್ಟಿನಿಂದ ವಿರೋಧಿಗಳು
ಎತ್ತರದ ಸ್ವರದಲ್ಲಿ ಏನೋ ಹೇಳುತ್ತಿದ್ದರು
ಅವರನ್ನೆಲ್ಲ ಬದಿಗೊತ್ತಿ ಬರುತ್ತಿತ್ತು ಬ್ರೇಕು !
ಆಗ್ರಹಿಸುತ್ತ, ಎಲ್ಲಿಯೂ ಹೋಗದಿರಿ-ದೇಖ್‌ತೇ ರಹೋ
ನೋಡುತ್ತಲಿರಿ, ಇನ್ನೂ ಮುಂದುವರಿಯಲಿದೆ, ಬಹಳಷ್ಟು.

ಯಾವನು ತೋರಿಸುವನೋ ಅವನಿಗೆ ದೊಡ್ಡ ಚಿಂತೆ
ನೋಡುವವರು ಎಲ್ಲಿ ಹೋಗಿಬಿಡುವರೋ ಅದಕ್ಕೆ ಅಂಟದೆ
ಇನ್ನು ದೃಶ್ಯಗಳನ್ನು ಮಾಡುವವರೋ
ಅವರಿಗೆ ಎಷ್ಟು ನಿಶ್ಚಿಂತೆ ಎಂದರೆ
ಯಾರೂ ಎಲ್ಲಿಯೂ ಹೋಗುತ್ತಿಲ್ಲ
ಬರೀ ನೋಡುತ್ತಿರುವವರು ಎಲ್ಲರೂ !

ಡಾ। ಪರಿಮಳ ಅಂಬೇಕರ, ಉಪನ್ಯಾಸಕರು, ಹಿಂದಿ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-೬.

ವಿಷವೃಕ್ಷ

ಮೂಲ : ವಿಲಿಯಂ ಬ್ಲೇಕ್
ಅನು : ಹೆಸರು ಬರೆದಿಲ್ಲ

ನಾನೊಮ್ಮೆ ಕುಪಿತಗೊಂಡಿದ್ದೆ ಮಿತ್ರನೊಂದಿಗೆ
ಹರಿಯಬಿಟ್ಟೆ ನಾ ಕೋಪವನು, ಅದು ಕೊನೆಯಾಯಿತಲ್ಲಿಗೇ;
ನಾನೊಮ್ಮೆ ಕುಪಿತಗೊಂಡಿದ್ದೆ, ಶತೃವಿನೊಂದಿಗೆ,
ಹರಿಯಗೊಡಲಿಲ್ಲ ನಾ ಕೋಪವನು, ಅದು ಬೆಳೆಯಿತು ಹಾಗೇ.

ಮತ್ತು ನಾ ನೀರುಣಿಸಿದೆನದಕೆ ಅಂಜಿಕೆಗಳಲಿ
ಸಂಜೆ ಮುಂಜಾನೆಗಳಲಿ ನನ್ನ ಅಶ್ರುಧಾರೆಯಲಿ
ಹಾಗೆಯೇ ಬೆಳಕ ಬೀರಿದೆ ನಸುನಗೆಗಳಲಿ
ಅಂತೆಯೇ ನಯವಂಚಕ ಚತುರತೆಯಲಿ
ಮತ್ತದು ಬೆಳೆಯಿತು ಹಗಲಿರುಳುಗಳೆರಡರಲ್ಲಿಯೂ

ಒಮ್ಮೆ ಕಾಣಿಸಿತದರಲಿ ರಸಭರಿತ ಫಲವು
ನನ್ನ ಶತೃವಿನ ಕಣ್ಣುಕ್ಕಿತು ಅದರ ಒನಪು
ಅವನರಿತವನಿದ್ದ ಅದು ನನಗೆ ಸೇರಿದ್ದೆಂದು
ಆದರೂ ಒಳಹೊಕ್ಕ ನನ್ನ ತೋಟದೊಳಕ್ಕೆ ಕದಿಯಲೆಂದು,
ಇರುಳಸೆರಗು ಭೂರಮೆಯ ಮುಖವ ಮುಚ್ಚಿದಾಗ

ಆ ಮುಂಜಾವಿನಲಿ ನಲಿವಂತಾದೆ ನಾ ನೋಡಿ
ನನ್ನ ಶತೃ ಶವವಾಗಿ ವಿರಮಿಸಿದ್ದ ಆ ಮರದಡಿ.

ಗುರುರಾಜ್ ಅನುವಾದದ ಮೂರು ಕವಿತೆಗಳು

ಇಂಗ್ಲಿಷ್ ಮೂಲ : **ಡಬ್ಲ್ಯು.ಎಚ್. ಆಡೆನ್**

ನಿರಾಶ್ರಿತರ ಅಳಲು

ಹತ್ತು ಮಿಲಿಯ ಮಿಡಿಯುವಾತ್ಮಗಳು ಈ ನಗರದಲಿ
ಮಹಲಿನಾಸರೆ ಕೆಲವರಿಗೆ, ಹಲವು ಶಿಥಿಲ ಗುಡಿಸಲಲಿ :
ಆದರೆ ನಮಗಿನಿತೂ ನೆಲೆಯಿಲ್ಲ ಗೆಳೆಯಾ, ನಮಗಿನಿತೂ ನೆಲೆಯಿಲ್ಲ.

ಇತ್ತೊಮ್ಮೆ ನಮ್ಮದೆನ್ನುವುದೊಂದು ದೇಶ, ಬಲು ಚೆಲುವೆನಿಸಿತ್ತು.
ಭೂಪಟದ ಬಣ್ಣಮೊಡಲಲಿ ಕಣ್ಣಾಡಿಸಿ, ನಿಮಗದು ಕಂಡೀತು ;
ಹೋಗಲಾರೆವು ನಾವಲ್ಲಿಗೀಗ ಗೆಳೆಯಾ ಹೋಗಲಾರೆವು ನಾವಲ್ಲಿಗೀಗ.

ಹಳ್ಳಿಯಂಗಳದೊಳಗೆ ಬೆಳೆಯುವ ದೊಡ್ಡಾಲದ ಮರ,
ಪ್ರತಿ ವಸಂತಕೂ ಅರಳಿಸುತ ಹೊಚ್ಚ ಹೊಸ ಚಿಗುರ ;
ಹಳೆಯ ಪಾಸ್‌ಪೋರ್ಟುಗಳು ಹಾಗಲ್ಲ ಗೆಳೆಯಾ, ಹಳೆಯ ಪಾಸ್‌ಪೋರ್ಟುಗಳು ಹಾಗಲ್ಲ.

ಸಮಿತಿಯ ಬಳಿ ಹೋದೆ, ಕುರ್ಚಿಯಿತ್ತರೆನಗೊಂದು
ಮೃದು ಮಾತಲುಸುರಿದರು ಮರುವರ್ಷ ಹಿಂತಿರುಗೆಂದು ;
ಇಂದು ಹೋಗುವುದಾದರೂ ಎತ್ತ ಗೆಳೆಯಾ, ಇಂದು ಹೋಗುವುದಾದರೂ ಎತ್ತ.

ಹೆಜ್ಜೆ ಹರಿದವು ಸಾರ್ವಜನಿಕ ಸಭೆಗೆ : ಭಾಷಣಕಾರ ಒದರಿದ ಎದ್ದು ;
ಅವರನೊಳಬಿಟ್ಟೀರಿ ಜೋಕೆ, ಕಿತ್ತುಕೊಳುವರು ನಿಮ್ಮ ಪಾಲಿನ ತುತ್ತು
ಅವನಂದದ್ದು ನನ್ನ ನಿನ್ನನೇ ಕುರಿತು ಗೆಳೆಯಾ, ನನ್ನ ನಿನ್ನನೇ ಕುರಿತು.

ನಾ ಕೇಳಿದ್ದು ಬರಸಿಡಿಲಿನಬ್ಬರವೆಂದೇ ಭಾವಿಸಿದ್ದೆ ಆಗಸದಿ ;
ಅದು ಹಿಟ್ಲರ್ ಯೂರೋಪಿನ ಮೇಲೆ ಗುಡುಗಿದ್ದು : ಸಾಯಲೇಬೇಕವರು ;
ಓ ಅವನ ಮನದೊಳಿದ್ದುದು ನಾವು ಗೆಳೆಯಾ, ಅವನ ಮನದೊಳಿದ್ದುದು ನಾವು.

ಕಂಡೆನೊಂದು ಚಿಲುನಾಯಿ ಬಲು ಚೆಂದದುಡುಗೆಯಲಿತ್ತು,
ಮುಂಬಾಗಿಲನು ತೆರೆದು ಹೋಗಬಿಟ್ಟಿತು ಬೆಕ್ಕನೊಳಗಿನತ್ತ ;
ಆದರವು ಜರ್ಮನ್ ಜ್ಯೂಗಳಲ್ಲವೋ ಗೆಳೆಯಾ, ಅವು ಜರ್ಮನ್ ಜ್ಯೂಗಳಲ್ಲ.

ಕಾಲನೆಳೆದು ಬಂದರಿನತ್ತ ನಿಂತೆ ಸರಕು ಕಟ್ಟೆಯಲಿ ;
ಕಂಡವಲ್ಲಿ ಈಜುವ ಚೆಲುಮೀನು ಸ್ವಚ್ಛಂದದಲಿ,
ಬರೀ ಹತ್ತು ಅಡಿಗಳಾಚೆ ಗೆಳೆಯಾ, ಬರಿಯ ಹತ್ತು ಅಡಿಗಳಾಚೆ.

ಕಾಡಿನುದ್ದಕು ನಡೆದೆ, ರೆಂಬೆಕೊಂಬೆಯಲಿ ಹಕ್ಕಿಹಿಂಡಿನ ಸಂತೆ ;
ಅವಕಿಲ್ಲ ರಾಜಕಾರಣಿಗಳ ತಂಟೆ, ಹಾಡಿದ್ದವು ನಲಿದು ತಮ್ಮಿಚ್ಛೆಯಂತೆ ;
ಅವು ಮಾನವ ಜನಾಂಗವಲ್ಲ ಗೆಳೆಯಾ, ಅವು ಮಾನವ ಜನಾಂಗವಲ್ಲ.

ಕನಸೊಂದ ಕಂಡೆ ಸಾವಿರ ಮಹಡಿಗಳದೊಂದು ಚೆಲುಮಹಲು,
ಸಾಸಿರ ಕಿಟಕಿಗಳ ಜೊತೆಗೆ ಸಾಸಿರದಷ್ಟೇ ತೆಗೆದ ಬಾಗಿಲು ;
ಅವುಗಳಲೊಂದೂ ನಮಗಾಗಿ ಅಲ್ಲ ಗೆಳೆಯಾ, ಅವುಗಳಲೊಂದೂ ನಮಗಾಗಿ ಅಲ್ಲ.

ಹೋದೆನು ನಿಲ್ದಾಣದೆಡೆಗೆ ಹಿಡಿಯಲೆಂದು ರೈಲುಗಾಡಿಯನು,
ಕೇಳಿದೆನೆರಡು ಟಿಕೇಟುಗಳ ಕನವರಿಸಿ ಸಂತಸದೂರನು ;
ಆದರೆ ನೂಕುನುಗ್ಗಲು ಬೋಗಿಗಳೆಲ್ಲ ಗೆಳೆಯಾ, ನೂಕುನುಗ್ಗಲು ಬೋಗಿಗಳೆಲ್ಲ.

ನಿಂತೆ ಸುವಿಶಾಲ ಬಯಲೊಳಗೆ ಸುತ್ತ ಎತ್ತಲೂ ಸುರಿವ ಹಿಮ,
ನಡುವೆ ಹತ್ತು ಸಹಸ್ರ ಸೈನಿಕರ ಎಡೆಬಿಡದ ಪಥ ಸಂಚಲನ ;
ನನ್ನ ನಿನ್ನನೇ ಹುಡುಕುತ್ತ ಗೆಳೆಯಾ, ನನ್ನ ನಿನ್ನನ್ನೇ ಹುಡುಕುತ್ತ.

ಉಪಗುಪ್ತ

ಇಂಗ್ಲಿಷ್ : ರವೀಂದ್ರನಾಥ್ ಟಾಗೋರ್

೧.
ಉಪಗುಪ್ತ, ಬುದ್ಧನನುಯಾಯಿ ಮುಂಪರಿನ ಮೋಡದಲಿ ಧೂಳುಹಾಸಿನ ಮೇಲೆ
ಮಥುರಾನಗರಿಯ ಕೋಟೆ ಭಿತ್ತಿ ಸನಿಹ.
ತಪ್ತಸುತ್ತಲ ಹಣತೆ, ರೆಪ್ಪೆ ಮುಚ್ಚಿದ ದ್ವಾರಗಳು, ಮಿನುಗು ತಾರೆಗಳಿಗೆಲ್ಲ
ಶ್ರಾವಣದ ದಟ್ಟಮುಗಿಲಿನ ಸೆರಗ ಹೊದಿಕೆಯಲಿ ಸವಿನಿದ್ದೆ. ಯಾರವೋ
ಆ ಹೆಜ್ಜೆ ಗೆಜ್ಜೆಗಳ ಗುನುಗುನಿಸಿ ತಟ್ಟಿತೊಮ್ಮೆಗೆ ಅವನ

ಪ್ರಶಾಂತ ಹೃದಯ ?
ಅವನೆದ್ದ ಗಡಬಡಿಸಿ, ಮತ್ತೆ ಚೆಲುವೆ ಕೈದೀವಿಗೆಯ ಚೆಂಬೆಳಕು
ತಾಕಿತೊಮ್ಮೆಗೆ ಅವನ ಚೆಲುಕ್ಷಮೆಯ ನಯನ.
ನವಿಲ ನಾಚಿಸುವ ನಾಟ್ಯದ ಹೆಣ್ಣವಳು, ಮಿನುಗುವಾಭರಣ
ತೆಳು ನೀಲಿಯುಡುಗೆ ಮೈತುಂಬ ಸಪಿದು ಸಿಂದಂತೆ ಸುರಾಪಾನ
ತುಂಬು ಯೌವನದ ಒನಪು.
ದೀವಿಗೆಯ ಬಾಗಿಸುತ ದಿಟ್ಟಿಸಿದಳವನ ಸಿರಿಯೌವನ ಮೊಗ, ನಿರಾಭರಣ
ಸ್ನಿಗ್ಧ ಸೌಂದರ್ಯ
"ಮನ್ನಿಸಿರೆನ್ನ, ಓ ಯುವ ಸಾಧು," ಮೆಲ್ಲನುಸುರಿದಳು ಕಿನ್ನರಿ,
"ಬನ್ನಿರೆನ್ನ ಮನೆಗೆ ಕೃಪೆ ಮಾಡಿ. ಈ ಧೂಳನೆಲವಲ್ಲ
ನಿಮ್ಮ ಕೋಮಲ ಮೈಗೆ ತಕ್ಕುದೆನಿಸುವ ಹಾಸು."
ವಿರಾಗಿಯ ಪ್ರಶಾಂತ ನುಡಿ, "ಚೆಲುವೆ, ಸಾಗುತಿರು ನಿನ್ನ ಹಾದಿಯಲಿ ;
ಪಕ್ವವಾಗಲಿ ಕಾಲ, ನಾನೆ ಬರುವೆನು ಆಗ ನಿನ್ನ ಸನಿಹ"

೨.
ಝಗ್ಗನೊಮ್ಮೆಗೆ ಕಾಳರಾತ್ರಿ ತೋರಿತೆನ್ನಯ ನಗೆಯ, ಸೀಳಿ ನಿಶೆಯನು
ಹೊಳೆವ ಮಿಂಚಿನಲುಗಿನಿಂದ.
ಬೊಬ್ಬಿಟ್ಟಿತು ಬಿರುಗಾಳಿ ಕಡಲಂಚಿನೆಡೆಯಿಂದ, ಮತ್ತವಳು ಹೆಣ್ಣು
ಗಡಗಡಿಸಿದಳು ಬಲು ಭೀತಿಯಿಂದ.
ಹಾದಿಯಾಚೀಚಿನ ಸಾಲುವೃಕ್ಷದ ರೆಂಬೆಗಳ ಮೈತುಂಬ
ಮೊಂಚಿಗುರು, ಹೂವು ಹಣ್ಣಿನ ಭಾರ.
ಮಧುರ ಪಲ್ಲವಿಯ ಕೊಳಲುಲಿ ತೇಲಿಬಂದಿತು ಬೆಚ್ಚನೆ ವಸಂತದಲಿ
ದೂರತೀರದ ಕಂಪಿನಲರಿನೊಡನೆ.
ಮಂದಹಾಸದ ಪರಿಯೊಳರಳಿದ ದಟ್ಟಡವಿಗೆ ಲಗ್ಗೆ ಹಾಕಿತು ಪುರಜನ
ವಸಂತೋತ್ಸವದ ರಸಗವಳಕಾಗಿ.
ಬಿತ್ತರವಾಗಸದ ಒಡಲಿಂದ ನೆಟ್ಟನಯನದಿ ದಿಟ್ಟಿಸಿದ ಹೊಳೆವ ಚಂದಿರ
ನೀರವ ನಗರದ ನೆಳಲ ಬಿಂಬವನ್ನು.
ಯುವವೈರಾಗಿಯ ಲಗುಬಗೆಯ ಹೆಜ್ಜೆ ನಿರ್ಜನದ ಬೀದಿಯಲಿ.
ಪ್ರೇಮರಾಗದ ಕೋಕಿಲಗಳುಲಿ ಮಾಮರದ ತೋಪಿನೆದೆ ಸೀಳಿ
ಬಾರದ ನಿದ್ದೆಗೆ ದೂರು ದನಿ ಸೂಸುವಾಗ.
ಉಪಗುಪ್ತ ಪುರದ ದ್ವಾರಗಳ ಗಡಿದಾಟಿ ಗಾಂಭೀರ್ಯದಲಿ ನಿಂದನು
ಮಥುರಾ ನಗರಿಯ ಕೋಟೆ ಭಿತ್ತಿ ಸನಿಹ
ಯಾರದಾ ಹೆಣ್ಣು ಭಿತ್ತಿ ನೆಳಲೊಡಲಿಗೆ ಬಿದ್ದು ನಡೆವ ಪಾದಕೆ ತಾಕಿದವಳು,
ಸೋಂಕುಬೇನೆಯ ಇರಿವ ನರಳಿಕೆ, ಮೈತುಂಬಾ ಚುಕ್ಕಿಯಿಟ್ಟಂತೆ

ಹುಣ್ಣು, ಪುರದಿಂದಲಾಚೆಗೆ ಜನರಿಂದ ದೂಡಲಾದವಳು ?
ಸಾಧು ಕುಳಿತನಲ್ಲಿಯೆ ಸನಿಹ, ಅವಳ ತಲೆಯನೆತ್ತಿ
ತನ್ನ ಮಡಿಲೊಳಿರಿಸಿ ನೀರು ಹನಿಸಿದ ಒಣದುಟಿಗೆ, ವಾತ್ಸಲ್ಯದಿ ಸವರಿದ
ಹುಣ್ಣು ಹತ್ತಿದ ಮೈಯ ಹಸನಿಸುವ ಮುಲಾಮಿನಿಂದ.
"ಯಾರಪ್ಪಾ ನೀನು, ಹೇ ಕರುಣಾಳು ?!" ಕೃತಜ್ಞತೆಯ ಹೆಣ್ಣದನಿ.
"ಕಾಲ ಬಂದಿತು ಕೊನೆಗು ನಿನ್ನ ಭೇಟಿಗೆ, ಮತ್ತಿದೋ ನಾನು
ಬಂದಿಹೆನೀಗ ನಿನ್ನ ಸನಿಹ" ಸನ್ಯಾಸಿಯುಲಿದ ಪ್ರಶಾಂತ ಮಮತೆಯಿಂದ.

ಹೊಸಯುಗ

ಮೂಲ : ಬರ್ಟೋಲ್ಟ್ ಬ್ರೆಕ್ಟ್

ಇದ್ದಕಿದ್ದೊಲೆ ಮೈತಾಳಿ ಬಿಡುವುದಿಲ್ಲ ಹೊಸಯುಗ
ನನ್ನಜ್ಜನಾಗಲೇ ಹೊಸಯುಗದ ಹೊಸ್ತಿಲೊಳಗಿದ್ದ
ನನ್ನ ಮೊಮ್ಮಗನ ಹೆಜ್ಜೆ ಹಳತರಲೇ ಇದ್ದಾವು ಇನ್ನೂ !

ಹೊಸಮಾಂಸ ತಿನ್ನುವುದು ಹಳೆಯ ಚುಚ್ಚುಚಮಚದಿಂದ !

ಅದು ಮೊಟ್ಟಮೊದಲ ಕಾರುಗಳಿಂದಲ್ಲ
ಟ್ಯಾಂಕರುಗಳಿಂದಲೂ ಅಲ್ಲ.
ಅದು ನಮ್ಮ ಛಾವಣಿ ಮೇಲಿನ ವಿಮಾನಗಳಿಂದಲ್ಲ
ಬಾಂಬರುಗಳಿಂದಲೂ ಅಲ್ಲ ಹೊಸಯುಗವು ಬಂದದ್ದು !

ಹೊಸ ಸಂದೇಶಕಗಳಿಂದ ಬಂದದ್ದು ಹಳೆಮೌಢ್ಯ
ವಿದ್ವತ್ತು ಹರಿದದ್ದು ಸಹೃದಯರ ಬಾಯಿಂದ ಬಾಯ್ಗೆ !

ತಾ. ಶ್ರೀ. ಗುರುರಾಜ್ ಎಲ್ಲಾಪುರ, ಅಧ್ಯಾಪಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ವಿಜಯಪುರ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಪ್ರೀತಿ ಇಲ್ಲದ ಮೇಲೆ...

ಎಚ್. ದಂಡಪ್ಪ

ಪ್ರೀತಿಯ ಗರಗಸಕ್ಕೆ ಸಂಶಯವೇ ಹಲ್ಲು
ಅಪಾರ್ಥವೇ ಸಾಣೆ ।
ಒಲಿದವರನ್ನದು ಕೊಯ್ಯದೆ ಎಂದೂ
ಬಿಟ್ಟುದನೆ ಕಾಣೆ !

ಡಾ. ಜಿ.ಎಸ್. ಶಿವರುದ್ರಪ್ಪ, ಸಮಗ್ರಕಾವ್ಯ, ಪುಟ ೧೪೫

'ಪ್ರೀತಿಯ ಗರಗಸ' ಎಂಬ ಈ ನಾಲ್ಕು ಸಾಲಗಳ ಕವಿತೆಯು ಪ್ರೀತಿಯ ನಡುವೆ ಸಂಶಯ ಅಪಾರ್ಥಗಳು ಬಂದಾಗ ಒಲಿದವರನ್ನು ಕೊಯ್ಯುತ್ತವೆ ಎಂದು ಹೇಳುತ್ತದೆ. ಒಲವಿನ ವ್ಯಕ್ತಿಗಳ ಮಧ್ಯೆ ಅಪಾರ್ಥಗಳು ಉಂಟಾಗಲು ಕಾರಣ ವಿಶ್ವಾಸವಿಲ್ಲದಿರುವುದು. ಪ್ರೀತಿಯಿದ್ದರೆ ಸಾಲದು ಇದರೊಂದಿಗೆ ವಿಶ್ವಾಸವೂ ಇರಬೇಕು. ಇಲ್ಲದಿದ್ದರೆ ಯಾವುದೇ ಸಂಬಂಧಗಳು ಉಳಿಯಲಾರವು. ಮನುಷ್ಯ ಸಂಬಂಧಗಳು ಉಳಿದಿರುವುದೇ ಪ್ರೀತಿ ವಿಶ್ವಾಸಗಳ ಆಧಾರದ ಮೇಲೆ. ತಂದೆ-ಮಕ್ಕಳು, ಗಂಡ-ಹೆಂಡತಿ, ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು, ನಲ್ಲ-ನಲ್ಲೆಯರು, ಬಂಧು-ಬಳಗದವರು, ಸರ್ಕಾರಿ ನೌಕರರು, ಕಾರ್ಮಿಕರು, ಮಾಲೀಕರು ಇವರೆಲ್ಲರ ಮಧ್ಯೆ ಪ್ರೀತಿ ವಿಶ್ವಾಸಗಳು ಇಲ್ಲದಿದ್ದರೆ ಸಾಮರಸ್ಯ ಹೊರಟುಹೋಗಿ ಅಶಾಂತಿ ನೆಲೆಸುತ್ತದೆ. ಅಶಾಂತಿ ನೆಲೆಸಿದಾಗ ಸಮಾಜದ ಸ್ವಾಸ್ಥ್ಯ ಕೆಡುತ್ತದೆ. ಇದರಿಂದಾಗಿ ಜನರ ಬದುಕೂ ಕೂಡಾ ನಾಶವಾಗುತ್ತದೆ. ಎಲ್ಲಾ ಕ್ಷೇತ್ರಗಳ ಪ್ರಗತಿ ಕುಂಠಿತಗೊಳ್ಳುತ್ತದೆ. ಮನುಷ್ಯ ವಿನಾಶದ ಕಡೆಗೆ ಸಾಗುತ್ತಾನೆ.

ಮಾಲೀಕ ಮತ್ತು ಕಾರ್ಮಿಕರ ನಡುವಿನ ಸಂಬಂಧವನ್ನು ತೆಗೆದುಕೊಳ್ಳೋಣ. ಮಾಲೀಕನಿಗೆ ಕಾರ್ಮಿಕರ ಮೇಲೆ ಪ್ರೀತಿ ಇರುತ್ತದೆ. ಆದರೆ ವಿಶ್ವಾಸವಿರುವುದಿಲ್ಲ. ಕಾರ್ಮಿಕರು ಏನೇ ಮಾಡಿದರೂ ಮಾಲೀಕನಿಗೆ ಸಂಶಯ. "ನಮ್ಮ ಮಾಲೀಕ ಪ್ರೀತಿಯೇನೋ ತೋರಿಸುತ್ತಾನೆ. ಆದರೆ ವಿಶ್ವಾಸವೇ ಇಲ್ಲ. ಇದರಿಂದಾಗಿ ಮನಸ್ಸನ್ನು ಸಂಪೂರ್ಣವಾಗಿ ತೊಡಗಿಸಿ ನಿರ್ಧಾರ ತೆಗೆದುಕೊಂಡು ಮುನ್ನುಗ್ಗಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಮಾಡುವುದಕ್ಕಿಂತ ಸುಮ್ಮನಿರುವುದೇ ವಾಸಿ

ಎಂದು ಕೈಚೆಲ್ಲಿ ಕುಳಿತಿದ್ದೇವೆ" ಎಂದು ಕೆಲವರು ಮಾತನಾಡಿಕೊಳ್ಳುವುದನ್ನು ಕೇಳಿದ್ದೇವೆ. ಇದು ಯಾವುದೇ ಸಂಸ್ಥೆಗೆ ಅಪಾಯ. ಇದರಿಂದಾಗಿ ಅಭಿವೃದ್ಧಿ ಅಥವಾ ಉತ್ಪಾದನೆ ಕುಂಠಿತಗೊಳ್ಳುತ್ತದೆ. ಸಂಸ್ಥೆ ವಿನಾಶದ ಕಡೆಗೆ ಸಾಗಿ ಮಾಲೀಕನಿಗೂ ನಷ್ಟ. ಆ ಮೂಲಕ ಸಂಸ್ಥೆಯ ನೌಕರರೂ ನಿರುದ್ಯೋಗಿಗಳಾಗಬೇಕಾಗುತ್ತದೆ. ಎಲ್ಲವೂ ಬಾಂಧವ್ಯದ ವಿನಾಶದಲ್ಲಿ ಪರ್ಯವಸಾನವಾಗುತ್ತದೆ. ಆದ್ದರಿಂದಲೇ ಗಾಂಧೀಜಿ ಹೇಳಿದ್ದು, "ವಿಶ್ವಾಸವಿಡುವುದರಿಂದ ನಾವೇನನ್ನು ಕಳೆದುಕೊಳ್ಳುವುದಿಲ್ಲ. ಅವಿಶ್ವಾಸದಂತಹ ಅಪಾಯಕಾರಿ ಜೊತೆಗಾರನಿಲ್ಲ"ವೆಂದು.

ಬರೀ ಪ್ರೀತಿಯೊಂದೇ ಮಾನವನ ಬದುಕಿಗೆ ಆಧಾರವಲ್ಲ. ಮಾನವ ಬದುಕುವುದು ಕೇವಲ ಹಣದಿಂದ ಅಲ್ಲ. ಬಡತನದ ಸರಳತೆಯಿಂದಲೂ ಅಲ್ಲ. ಅಧಿಕಾರದಿಂದ ಅಲ್ಲ, ಅವನ ಜೀವನ ಉಳಿಯುವುದು, ಅವನ ಸೃಷ್ಟಿಗೆ ಅರ್ಥ ಬರುವುದು ಹಲವು ಬಗೆಯ ಕಾಳಜಿಗಳಿಂದ. ಅವುಗಳಲ್ಲಿ ಒಂದು-ಪ್ರೀತಿ. ಆದುದರಿಂದ ಪ್ರೀತಿಯೇ ಜೀವನ. ಪ್ರೀತಿಯೇ ಬದುಕು. ಪ್ರೀತಿಯೇ ಸರ್ವಸ್ವ. ಪ್ರೀತಿ ಇಲ್ಲದಿದ್ದರೆ ಏನೂ ಇಲ್ಲ ಎಂದು ಭಾವಿಸುವುದು ಒಮ್ಮೊಮ್ಮೆ ಮೂರ್ಖತನದ್ದಾಗಿಬಿಡುತ್ತದೆ. ಪ್ರೀತಿಯೊಂದಿಗೆ ನಂಬಿಕೆ ವಿಶ್ವಾಸಗಳು ಬೆರೆತರೆ ಅದು ಸಾರ್ಥಕವಾಗುತ್ತದೆ. ಮಹಾತ್ಮಗಾಂಧೀಜಿ ಹೇಳುತ್ತಾರೆ : "ಎಲ್ಲಿ ಪ್ರೀತಿ ಇದೆಯೋ ಅಲ್ಲಿ ದೇವರಿದ್ದಾನೆ. ಈ ಜಗತ್ತಿನಲ್ಲಿರುವ ಅತ್ಯಂತ ಬಲಯುತ ಶಕ್ತಿಯೆಂದರೆ ಪ್ರೀತಿ. ಪ್ರೀತಿ ಇಲ್ಲದ ಜೀವನ ಸಾವಿಗೆ ಸಮ. ಪ್ರೀತಿ ಏನನ್ನೂ ಪಡೆದುಕೊಳ್ಳುವುದಿಲ್ಲ, ಕೊಡುವುದಷ್ಟೇ ಅದಕ್ಕೆ ಗೊತ್ತು" ಗಾಂಧೀಜಿಯವರ ಈ ಮಾತುಗಳೊಂದಿಗೆ ವಿಶ್ವಾಸ ಎಂಬ ಪದವನ್ನು ಸೇರಿಸಿಕೊಳ್ಳಬೇಕು. ಆಗ ಪ್ರೀತಿ ವಿಶ್ವಾಸಗಳು ಕೂಡಿ ಪೂರ್ಣತೆಯೆಡೆಗೆ ಸಾಗುತ್ತವೆ. ಗಂಡ ಹೆಂಡತಿಯರಲ್ಲಿ ಪ್ರೀತಿ ಇದ್ದರಷ್ಟೇ ಸಾಲದು, ಅವರ ಮಧ್ಯೆ ಸಂಶಯ, ಅಪಾರ್ಥಗಳು ಸುಳಿದಾಗ ಪ್ರೀತಿಯು ಎದ್ದು ಬಿದ್ದು ಓಡಿ ಹೋಗುತ್ತದೆ. ಅವರಲ್ಲಿ ಮನಸ್ತಾಪ ಬೆಳೆಯುತ್ತದೆ. ಸಾಮರಸ್ಯ ಹಾಳಾಗಿ ಬದುಕು ರೋಧನವಾಗಿ ಬಿಡುತ್ತದೆ.

ಈ ಸಂದರ್ಭದಲ್ಲಿ ಜಿಎಸ್‌ಎಸ್ ಅವರ 'ಪ್ರೀತಿ ಇಲ್ಲದ ಮೇಲೆ' ಎಂಬ ಮತ್ತೊಂದು ಕವನದ ಈ ಕೆಳಗಿನ ಸಾಲುಗಳು ನೆನಪಿಗೆ ಬರುತ್ತವೆ :

ಪ್ರೀತಿ ಇಲ್ಲದ ಮೇಲೆ
ಸಂಶಯದ ಗಡಿಗಳುದ್ದಕ್ಕೂ
ಸಿಡಿ ಗುಂಡುಗಳ ಕದನ ನಿಂತೀತು ಹೇಗೆ ?
ಜಾತಿ-ಮತ-ಭಾಷೆ ಬಣ್ಣಗಳ ಗೋಡೆಯ ನಡುವೆ
ನರಳುವ ಪಾಡು ತಪ್ಪೀತು ಹೇಗೆ ?
ನಮ್ಮ ನಿಮ್ಮ ಮನಸ್ಸು
ಮರುಭೂಮಿಯಾಗದ ಹಾಗೆ
ತಡೆಗಟ್ಟುವುದು ಹೇಗೆ ?

ಪ್ರೀತಿ ವಿಶ್ವಾಸ ಇಲ್ಲದಿದ್ದರೆ ಜಾತಿ, ಮತ, ಭಾಷೆ, ಬಣ್ಣಗಳ ಗೋಡೆಗಳ ನಡುವೆ ನರಳುವ ಬವಣೆ ತಪ್ಪಿದ್ದಲ್ಲ. ನಮ್ಮ ಮನಸ್ಸುಗಳು ಮರುಭೂಮಿಯಂತೆ ಭಣಗುಡುವುದು ತಪ್ಪುವುದಿಲ್ಲ. ಪ್ರೀತಿ ವಿಶ್ವಾಸಗಳ ಕೊರತೆಯಿಂದಲೇ ಗಡಿವಿವಾದ; ಭಯೋತ್ಪಾದನೆ ಹೆಚ್ಚಿ, ದೇಶ ದೇಶಗಳ

ನಡುವೆ ಯುದ್ಧಗಳು ನಡೆದು, ಮನುಷ್ಯ ಇನ್ನೊಬ್ಬ ಮನುಷ್ಯನನ್ನು ವಿನಾಕಾರಣ ಕೊಲ್ಲುವಂತಹ ಘಟನೆಗಳು ಜರುಗುತ್ತಿವೆ. ಪ್ರೀತಿ ವಿಶ್ವಾಸಗಳಿದ್ದರೆ, ಜಾತಿ, ಧರ್ಮ, ಭಾಷೆ, ದೇಶ ವಿದೇಶಗಳ ನಡುವೆ ಸಾಮರಸ್ಯ ಏರ್ಪಡುತ್ತದೆ. ಇತ್ತೀಚೆಗೆ ನಾರಾಯಣ ಹೃದಯಾಲಯಕ್ಕೆ ಬಂದಿದ್ದ ಪಾಕಿಸ್ತಾನದ ಮಗುವಿಗೆ ಹೃದಯದ ಶಸ್ತ್ರಚಿಕಿತ್ಸೆಯನ್ನು ಮಾಡಿ ಪ್ರೀತಿ ವಿಶ್ವಾಸಗಳನ್ನು ತೋರಿಸಿದ್ದರ ಪರಿಣಾಮವಾಗಿ ಅಲ್ಲಿನ ಭಯೋತ್ಪಾದಕನೊಬ್ಬ ಇದನ್ನು ತಿಳಿದು ಶರಣಾಗತವಾಗಿ ಉಗ್ರಗಾಮಿತ್ವವನ್ನು ತೊರೆದನೆಂಬ ವಿಚಾರವನ್ನು ಪತ್ರಿಕೆಗಳಲ್ಲಿ ಓದಿದ್ದೇವೆ. ಪ್ರೀತಿ ವಿಶ್ವಾಸಗಳ ಕೊರತೆಯಿಂದಲೇ ಕ್ರೈಸ್ತ ಪಾದ್ರಿ ಮತ್ತು ಅವರ ಇಬ್ಬರು ಮಕ್ಕಳ ಕೊಲೆಯ ಪ್ರಕರಣ ನಡೆದದ್ದು. ಇದೊಂದು ಮನುಷ್ಯಕುಲಕ್ಕೆ ಕಳಂಕ ತರುವಂತಹ ಅನಾಗರಿಕ ವರ್ತನೆ. ಇದು ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಪ್ರೀತಿಯಿಂದ ನಡೆಸಿಕೊಳ್ಳುವಂತಹ ಧರ್ಮವನ್ನು ನಾವು ಹೊಂದಿಲ್ಲವೆಂಬುದರ ಸೂಚನೆಯಾಗಿದೆ.

ಪ್ರೀತಿ ಇಲ್ಲದ ಮೇಲೆ
ಹೂವು ಅರಳೀತು ಹೇಗೆ ?
ಮೋಡ ಕಟ್ಟೀತು ಹೇಗೆ ?
ಹನಿಯೊಡೆದು ಕೆಳಗಿಳಿದು
ನೆಲಕ್ಕೆ ಹಸಿರು ಮೂಡೀತು ಹೇಗೆ ?

ಪ್ರೀತಿ ವಿಶ್ವಾಸಗಳಿದ್ದರೆ ಲೋಕದಲ್ಲಿ ಶಾಂತಿ ಸಮೃದ್ಧಿ ನೆಲೆಸಿ ಮನುಷ್ಯನು ಅಭಿವೃದ್ಧಿಯ ಕಡೆ ಸಾಗುತ್ತಾನೆ. ಇದನ್ನು ಮೋಡ, ಹನಿ, ಹಸಿರು ಇವುಗಳ ಮೂಲಕ ವ್ಯಕ್ತಪಡಿಸಲಾಗಿದೆ. ಯುದ್ಧಗಳಾದಾಗ ಹಾನಿಗೊಳಗಾದ ಪ್ರದೇಶಗಳಲ್ಲಿ ಯಾವುದೇ ಅಭಿವೃದ್ಧಿಯಾಗದೆ ಜನತೆಯು ಹಸಿವಿನಿಂದ ಸಾಯುವಂತಹ ಪರಿಸ್ಥಿತಿ ಉಂಟಾಗುತ್ತದೆ. ಇದಕ್ಕೆ ನಿದರ್ಶನ ಇತ್ತೀಚೆಗೆ ಅಫಘಾನಿಸ್ಥಾನದಲ್ಲಿ ನಡೆದ ಯುದ್ಧ. ಅಲ್ಲಿ ಈಗ ಬೆಳೆ ಬೆಳೆಯಲಾಗದೆ, ಹಸಿವು, ರೋಗ, ರುಜಿನಗಳಿಂದ ಜನ ಸಾಯುತ್ತಿದ್ದಾರೆ. ವಿಧವೆಯರು, ಮಕ್ಕಳು ತುತ್ತು ಅನ್ನಕ್ಕಾಗಿ ಪರದಾಡುವಂತಹ ಸ್ಥಿತಿ ಏರ್ಪಟ್ಟಿದೆ. ಆದುದರಿಂದ ಯುದ್ಧಗಳಾಗುವುದು ಕೂಡಾ ಪ್ರೀತಿ ವಿಶ್ವಾಸ ನಂಬಿಕೆಯ ಕೊರತೆಯಿಂದ. ಪ್ರೀತಿ ವಿಶ್ವಾಸಗಳೇ ಮನುಷ್ಯನನ್ನು ಬೆಸೆಯುವ ಕೊಂಡಿ. ಒಂದು ಝೆನ್ ಕತೆಯನ್ನು ಉದಾಹರಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಒಬ್ಬ ದರ್ಜಿ ಇದ್ದ. ಬಹಳ ಸಾತ್ವಿಕ ಸ್ವಭಾವದವನು. ತನ್ನನ್ನು ಧಾರ್ಮಿಕ ಕೆಲಸಗಳಲ್ಲಿ ತೊಡಗಿಸಿಕೊಂಡು ಸಾಧುವಾದ. ಈತನನ್ನು ನೋಡಲು ಒಮ್ಮೆ ರಾಜ ಬಂದ. ಸಾಧುವಿನ ದರ್ಶನದಿಂದ ರಾಜನಿಗೆ ಅತೀವ ಸಂತೋಷವಾಗಿ ವಜ್ರ ಖಚಿತವಾದ ಬಂಗಾರದ ಕತ್ತರಿಯನ್ನು ಉಡುಗೊರೆಯಾಗಿ ನೀಡಿದ. ಆದರೆ ಸಾಧು ಅದನ್ನು ಸ್ವೀಕರಿಸಲಿಲ್ಲ. ತಾನು ಕೊಟ್ಟಿದ್ದನ್ನು ಸಾಧು ಸ್ವೀಕರಿಸಲಿಲ್ಲವೆಂದು ರಾಜನಿಗೆ ಕಸಿವಿಸಿಯಾಯಿತು. ನಿಮಗೆ ಇಷ್ಟವಾಗುವ ಯಾವ ವಸ್ತುವನ್ನು ಉಡುಗೊರೆಯಾಗಿ ನೀಡಲಿ ಎಂದು ಸಾಧುವನ್ನೇ ಕೇಳಿದ. ಅದಕ್ಕೆ ಸಾಧು ಕೇಳಿದ : 'ನನಗೊಂದು ಸೂಜಿ ಕೊಡಿ ಅಷ್ಟೇ ಸಾಕು !' ಸಾಧುವಿನ ಅಪೇಕ್ಷೆಯಂತೆ ಸೂಜಿಯನ್ನು ತರಿಸಿಕೊಟ್ಟ. ಆದರೆ ಸೂಜಿಯನ್ನು ಬಯಸಿದ್ದೇಕೆಂದು ರಾಜನಿಗೆ ಅರ್ಥವಾಗಲಿಲ್ಲ.

ಸಾಧುವನ್ನೇ ಪ್ರಶ್ನಿಸಿದ. ಅದಕ್ಕೆ ಸಾಧು ನುಡಿದ. ನಾನ್ಯಾಕೆ ಕತ್ತರಿ ಬೇಡ ಅಂದೆ ಅಂದರೆ, ಕತ್ತರಿ ಕಬ್ಬಿಣದ್ದಿರಲಿ, ಬಂಗಾರದ್ದಿರಲಿ ಅದರ ಗುಣಧರ್ಮ ಕತ್ತರಿಸುವುದು, ತುಂಡು ಮಾಡುವುದು. ಅದನ್ನು ಕೈಗೆತ್ತಿಕೊಂಡರೆ ಸಾಕು ಅದು ಏನನ್ನಾದರೂ ಕತ್ತರಿಸು ಎನ್ನುತ್ತದೆ. ಆದರೆ ಸೂಜಿ ಹಾಗಲ್ಲ, ಸೂಜಿ ಯಾವತ್ತೂ ಹೊಲಿಯುತ್ತದೆ, ಕೂಡಿಸುತ್ತದೆ. ಒಂದಕ್ಕೊಂದು ಜೋಡಿಸುತ್ತದೆ.

ಆದುದರಿಂದ ಇಂದು ನಮಗೆ ಬೇಕಿರುವುದು ಪ್ರೀತಿ ವಿಶ್ವಾಸವೆಂಬ ಸೂಜಿಯೇ ಹೊರತು, ದ್ವೇಷ ಅಸೂಯೆಯೆಂಬ 'ಕತ್ತರಿ' ಅಲ್ಲ.

●

ಎಚ್. ದಂಡಪ್ಪ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಡಿ.ಸಿ. ಕಾಂಪೌಂಡ್, ಧಾರವಾಡ

ಮುಸ್ಲಿಂ ಸಂಸ್ಕೃತಿಯ ಅಮ್ಮ ಮತ್ತು ಯುದ್ಧ

ಕೆ. ಷರೀಫಾ

ಇಸ್ಲಾಂ ಸಂಸ್ಕೃತಿಯ ಅಮ್ಮ ಮಾನವ ಸಂಬಂಧಗಳ ಬಗ್ಗೆ, ಬದುಕಿನ ಬಗ್ಗೆ ತೀವ್ರ ಕಾಳಜಿಯನ್ನು ಹೊಂದಿದ್ದಾಳೆ. 'ಅಮ್ಮ' ಪ್ರೀತಿಯ ಸಂಕೇತವಾದರೆ, 'ಯುದ್ಧ' ಕ್ರೌರ್ಯದ ಸಂಕೇತ. ಅಮ್ಮ ರಕ್ಷಕಳಾದರೆ ಯುದ್ಧ ವಿನಾಶವಾಗಿದೆ. ಸಂಸ್ಕೃತಿ ಕಟ್ಟುವ ಕ್ರಿಯೆ ಅಮ್ಮನದಾದರೆ, ಕೆಡಹುವ ಕ್ರಿಯೆ ಯುದ್ಧದ್ದು.

'ಅಮ್ಮ'ನನ್ನು ಭೂಮಿಗೆ, ಪೃಥ್ವಿಗೆ ಹೋಲಿಸಲಾಗುತ್ತದೆ. ಶಾಂತಿ ಕಾಲವೇ ಇರಲಿ ಯುದ್ಧ ಕಾಲವೇ ಬರಲಿ ಮಹತ್ವದ ಹೊಣೆಗಾರಿಕೆಯ ಪಾತ್ರ ನಿರ್ವಹಿಸಿದವಳೇ 'ಅಮ್ಮ'. ಜೀವರಕ್ಷಕ, ಪೋಷಕ ಇಸ್ಲಾಂನ ಅಮ್ಮ ಕಟ್ಟಿದ ಸಂಸ್ಕೃತಿ ವಿರಾಟ್ ಸ್ವರೂಪವನ್ನು ದರ್ಶಿಸುತ್ತದೆ. ಜಗತ್ತಿನ ಎಲ್ಲ ಜನಾಂಗಗಳು, ಬುಡಕಟ್ಟುಗಳು, ಬದುಕಿದ ನಿಜ ಸಂಸ್ಕೃತಿಯ ತಾಯಿ ಬೇರೇ 'ಅಮ್ಮ'. ಈ ಅಮ್ಮನ ಹೃದಯ ಅಂತಃಕರಣದಿಂದ ಕೂಡಿದೆ. ಜೀವಪೋಷಕ ಅಮ್ಮ ತನ್ನೆಲ್ಲ ಶಕ್ತಿ ಮೀರಿ ಯುದ್ಧವನ್ನು ವಿರೋಧಿಸುತ್ತಾಳೆ.

ಇಸ್ಲಾಂ ಪೂರ್ವ ವೃತ್ತಾಂತ

ಪುರಾತನ ಅರೇಬಿಯಾದಲ್ಲಿ ಉತ್ಕೃಷ್ಟ ಪರಂಪರೆ ಹೊಂದಿದ ನಾಗರೀಕತೆಯನ್ನು ಅರಬರು ನಿರ್ಮಿಸಿದರು. ಆಗ ಅರೇಬಿಯಾದಲ್ಲಿದ್ದ ಎಲ್ಲ ಬುಡಕಟ್ಟುಗಳನ್ನು ಇಸ್ಲಾಂ ತನ್ನತ್ತ ಅಯಸ್ಕಾಂತದಂತೆ ಆಕರ್ಷಿಸಿತು. ಮುಹಮ್ಮದರ ಆಗಮನಕ್ಕಿಂತ ಪೂರ್ವದ ಅರಬ್ಬರಲ್ಲಿ ಅನೇಕ ಬರ್ಬರ ಯುದ್ಧ, ಆಂತರಿಕ ಒಳಜಗಳಗಳಿಂದ ಮತ್ತು ಕ್ರೌರ್ಯದಿಂದ ಕೂಡಿತ್ತು. ಇಸ್ಲಾಂ ಹುಟ್ಟುವುದಕ್ಕೆ ಮುನ್ನ ಅರಬರು ಸುಮಾರು ೧೭೦೦ ಯುದ್ಧಗಳನ್ನು ಮಾಡಿದ್ದರೆಂದು 'ಆಯಾಮ್ ಅಲ್ ಅರಬ್' ಎಂಬ ಐತಿಹಾಸಿಕ ಗ್ರಂಥದಲ್ಲಿ ದಾಖಲಿಸಲಾಗಿದೆ.

ಮುಹಮ್ಮದರ ಆಗಮನಕ್ಕಿಂತ ೬೦೦ ವರ್ಷಗಳಷ್ಟು ಪೂರ್ವದಲ್ಲಿಯೇ ಅರಬರು ಕುರಿ ಮತ್ತು ಕುದುರೆಗಳ ಸಾಕಾಣಿಕೆಯನ್ನು ತಮ್ಮ ಮೂಲ ವೃತ್ತಿಯಾಗಿಸಿಕೊಂಡಿದ್ದರು. ದರೋಡೆ ಮತ್ತು ವ್ಯಾಪಾರವನ್ನು ಅವರು ತಮ್ಮ ಪ್ರಮುಖ ವೃತ್ತಿಯಾಗಿಸಿಕೊಂಡಿದ್ದರು-ಎಂದು ರೋಮನ್

ಇತಿಹಾಸಕಾರ ಪ್ಲೇಯಿನಿ ಬರೆಯುತ್ತಾರೆ. ಆಗಿನ ಅರೇಬಿಯಾದಲ್ಲಿ ದರೋಡೆ ಮತ್ತು ವ್ಯಾಪಾರಕ್ಕೆ ಹೆಚ್ಚಿನ ವ್ಯತ್ಯಾಸವಿರಲಿಲ್ಲ. ಆದರೆ ದರೋಡೆಗಿಂತ ವ್ಯಾಪಾರವೇ ಅರಬರಿಗೆ ಲಾಭದಾಯಕ ವೃತ್ತಿಯಾಯಿತು. ಆಗಿನ ಅರಬ್ ಸಮಾಜ ಯುದ್ಧ, ಕ್ರೌರ್ಯಗಳಿಂದ ಕೂಡಿದ್ದರೂ ಸಹ, ಶೌರ್ಯದ ಜೊತೆ ಗೌರವ, ಘನತೆಯ ನೀತಿ ಸಂಹಿತೆಯನ್ನು ಒಳಗೊಂಡಿತ್ತು. ಅರಬ್ಬರ ಕಾನೂನುಬದ್ಧ ವ್ಯಾಪಾರ-ವೃತ್ತಿಯು ದರೋಡೆಗಿಂತ ಲಾಭದಾಯಕವಾಯಿತು.

ಆಗಿನ ಅರಬರು ಸಿರಿಯಾ, ಭಾರತ, ಪರ್ಶಿಯಾ, ಅಸ್ಸಿರಿಯಾ, ಯಮನ್, ಈಜಿಪ್ಟ್, ಅಬಿಸಿನಿಯಾ ಮತ್ತು ಪ್ಯಾಲೆಸ್ತೇನ್‌ಗಳ ಜೊತೆ ನೆಲ ಹಾಗೂ ಜಲಮಾರ್ಗದ ಕ್ಯಾರವಾನ್ ಮೂಲಕ ವಾಣಿಜ್ಯ ವ್ಯವಹಾರ ನಡೆಸುತ್ತಿದ್ದರು. ಆಗಿನ ಬೈಜಾಂಟಿಯನ್ ರಾಜಸತ್ತೆಯು ವಿಪರೀತ ಕರ ಹೇರಿಕೆ, ಸ್ಥಳೀಯ ಅಧಿಕಾರಿಗಳ ನಿರಂತರ ಕಿರುಕುಳದಿಂದಾಗಿ ತಮ್ಮ ವ್ಯಾಪಾರ ಮಾರ್ಗ ಕಠಿಣವಾದರೂ ಸ್ನೇಹದಿಂದ ಕೂಡಿದ ಅರೇಬಿಯನ್ನರೊಂದಿಗೆ ತಮ್ಮ ವ್ಯಾಪಾರ ವಹಿವಾಟನ್ನು ಇರಿಸಿಕೊಂಡರು.

ಕೆಂಪು ಸಮುದ್ರದ ತೀರದಲ್ಲಿ ಬೀಡುಬಿಟ್ಟಿದ್ದ ಬುಡಕಟ್ಟಿನವರು ಅಬಿಸೀನಿಯಾದ ವ್ಯಾಪಾರ ನಿಯಂತ್ರಿಸುತ್ತಿದ್ದರು. ಆಗಿನ ಮೆಕ್ಕಾ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಅಲ್ಲಿನ ಖುರೇಶಿ ಬುಡಕಟ್ಟಿನ ರಾಜಧಾನಿಯಾದ ಮೆಕ್ಕಾ ಅತ್ಯಂತ ಸಮೃದ್ಧ ಪಟ್ಟಣವಾಗಿತ್ತು.

ಅರೇಬಿಯಾದ ಇತರ ಬುಡಕಟ್ಟುಗಳು, ದೇವರು, ಆರಾಧನೆ, ಅಧಿಕಾರ, ವ್ಯಾಪಾರದ ವಿಷಯವಾಗಿ ಆಂತರಿಕ ಯುದ್ಧಗಳನ್ನು ನಡೆಸುತ್ತಿದ್ದರು. ಅಂತ್ಯರಹಿತ ಒಳಜಗಳಗಳ ಮಧ್ಯೆಯೂ ಎಲ್ಲ ಅರೇಬಿಯನ್ ಬುಡಕಟ್ಟುಗಳು ಮೆಕ್ಕಾದ ಕಾಬಾದಲ್ಲಿ ಪೂಜೆ ನಡೆಸುತ್ತಿದ್ದರು. ಆಗಿನ ಕಾಬಾ ಒಂದರಲ್ಲೇ ೩೬೦ಕ್ಕೂ ಹೆಚ್ಚು, ಮನುಷ್ಯ, ಪ್ರಾಣಿ, ಪಕ್ಷಿಗಳ ಮೂರ್ತಿಗಳಿದ್ದವು. ಆರಾಧನೆಯ ಅಪಾರ ಹಕ್ಕನ್ನು ಖುರೇಶಿ ಬುಡಕಟ್ಟಿನ ಹಾಶಿಂ ಮನೆತನ ಪಡೆದಿತ್ತು.

ಕ್ರಮೇಣವಾಗಿ ಈ ಖುರೇಶಿ ಬಡುಕಟ್ಟಿನ ಹಾಶಿಂ ಮನೆತನದ ಒಂದು ಪೀಳಿಗೆ, ಎಲ್ಲ ದೇವರನ್ನು ನಿರಾಕರಿಸಿ, ಕೇವಲ ಒಬ್ಬನೇ ದೇವರನ್ನು ನಂಬಿದ ಹೊಸ ಧರ್ಮದ ಮೂಲಕ ಬಹುದೇವಾರಾಧನೆಯನ್ನು ನಿಲ್ಲಿಸಿ, ಏಕದೇವಾರಾಧನೆಯ ಮೂಲಕ ಅನೇಕ ಬುಡಕಟ್ಟುಗಳನ್ನು ಒಂದೇ ತತ್ವದಡಿ ಒಂದುಗೂಡಿಸಿದರು. ಹಲವಾರು ಬುಡಕಟ್ಟುಗಳ ನಡುವೆ ಹರಿದು ಹಂಚಿಹೋಗಿದ್ದ ಬುಡಕಟ್ಟುಗಳನ್ನು ಒಂದುಗೂಡಿಸಿದರು.

ಕ್ಯಾಥೊಲಿಕ್ ಚರ್ಚ್‌ಗಳ ಅಸಹಿಷ್ಣುತೆ, ಕ್ರಿಶ್ಚಿಯನ್ನರ ಮತಾಂಧತೆ, ಯಹೂದಿಯರ ನಿರರ್ಥಕ ಸಂಪ್ರದಾಯಗಳು ಮತ್ತು ಅತಿಮಾನುಷ ನಂಬಿಕೆಗಳಿಂದ, ಈಜಿಪ್ಟ್, ಪ್ಯಾಲೆಸ್ತೇನ್, ಸಿರಿಯಾ, ಪರ್ಶಿಯಾ ಮತ್ತು ಮೆಸಪೊಟೋಮಿಯಾದ ಜನರು ಆಚಾರ ಮತ್ತು ಸಂಪ್ರದಾಯಗಳಿಂದ ಬೇಸತ್ತಿದ್ದರು. ಅನೇಕ ದೇವದೂತ, ಸಂತ, ಅಪೋಸ್ತಲರ, ಯಹೂದಿಗಳ ಗೊಂದಲಮಯ ಆಚರಣೆಗಳಲ್ಲಿ ದೇವರನ್ನೇ ಮರೆತಿದ್ದರು. ಧಾರ್ಮಿಕ ಉತ್ತರಾಧಿಕಾರಕ್ಕಾಗಿ ಬರ್ಬರ ಕಾರಸ್ಥಾನಗಳಲ್ಲಿ ಮುಳುಗಿದ್ದ ಕಾಲವದು. ಇಸ್ಲಾಂಧರ್ಮದ ಹೊಂದಾಣಿಕೆಯ ಸ್ವಭಾವ, ಬಹುಸಂಸ್ಕೃತಿಗಳ ಸ್ಫೂರ್ತಿಯಾಗಿ ಜನಪರ ನಿಲುವುಗಳಿಂದಾಗಿ ತಾಯ್ನೆಲದ ಸನ್ನಿವೇಶಗಳಿಗೆ ತಕ್ಕಂತೆ ಹೊಸ ಧರ್ಮದ ಉದಯವಾಯಿತು.

ಶಾಂತಿಪ್ರಿಯ, ಉದಾತ್ತ ಇಸ್ಲಾಂನ ಸಂಸ್ಕೃತಿಯನ್ನು ಕಟ್ಟಿದ ಮಹಾಮಾತೆಯೇ ಇಸ್ಲಾಂನ 'ಅಮ್ಮ'. ಇಸ್ಲಾಂ ಧರ್ಮ ಮಹಮ್ಮದರ ಬೌದ್ಧಿಕ ಉತ್ಪನ್ನವಲ್ಲ. ಅದು ಅರೇಬಿಯಾದ ಜನತೆಯ ಆತ್ಮಸಾಕ್ಷಿಯಲ್ಲಿ ಹದಗೊಂಡು, ಹೃದಯ ಶ್ರೀಮಂತಿಕೆಯಲ್ಲಿ ಬೆಸಗೊಂಡು, ಭೂಮಿಯಲಿ ಮೊಳಕೆಯೊಡೆದ ಸ್ಥಿತ್ಯಂತರದ ಸಸಿ. ಪುರಾತನ ನಾಗರಿಕತೆಗಳಲ್ಲಿ ಕಾಣದಾಗಿದ್ದ ಸಮಾನತೆ ಮತ್ತು ಸ್ವಾತಂತ್ರ್ಯದ ತತ್ವಗಳಿಗೆ ಸಂಬಂಧಿಸಿದಂತೆ ಇಸ್ಲಾಂ ಮಾನ್ಯ ಮಾಡಿದ ಉತ್ಕೃಷ್ಟ ಪರಂಪರೆಯನ್ನು ಬುಡಕಟ್ಟುಗಳಲ್ಲಿ ಕಲೆ ಹಾಕಿದ ಸಂಸ್ಕೃತಿಯೇ 'ಅಮ್ಮ'ನ ಸಂಸ್ಕೃತಿ. ರೋಮನ್ನರ ಗುಲಾಮಗಿರಿ, ಕ್ರಿಶ್ಚಿಯನ್ನರ ಮೇಲಾಳುತನ, ಯಹೂದಿಗಳ ಅಸಮಾಧಾನ, ಎಲ್ಲ ನೊಂದವರ, ಬಂಡಾಯದ ಫಲವಾಗಿ ಕಟ್ಟಿಕೊಂಡ ಇಸ್ಲಾಂ ಸಂಸ್ಕೃತಿಯು ಅಮ್ಮನ ಅಂತಃಕರಣದ, ಪ್ರೀತಿಯ ಸಂಸ್ಕೃತಿಯನ್ನು ಒಳಗೊಂಡಿದೆ.

ಏಷ್ಯಾದ ಫಲವತ್ತಾದ ಪ್ರದೇಶ ಮತ್ತು ನೈಲ್ ನದಿ ತೀರದಲ್ಲಿ ಕಂಡುಬಂದ ನಾಗರೀಕತೆ ಕ್ರಿಸ್ತ ಪೂರ್ವ ೬ ರಿಂದ ೭ ಸಾವಿರ ಹಳೆಯದಾದರೆ ಮೆಸಪೊಟೇಮಿಯಾ (ಇರಾಕ್) ನಾಗರೀಕತೆ ಅದಕ್ಕಿಂತಲೂ ಹಿಂದಿನದು. ಕ್ರಿ.ಪೂ. ೮ ರಿಂದ ೯ ಸಾವಿರ ವರ್ಷಗಳಷ್ಟು ಹಳೆಯ ಸಂಸ್ಕೃತಿ ಇರಾಕಿನದು ಎಂದು ಇತಿಹಾಸಜ್ಞರು ಗುರುತಿಸಿದ್ದಾರೆ.

"ಯುಪ್ರೆಟಿಸ್, ಟೈಗ್ರಿಸ್ ನದಿಯ ಫಲವತ್ತಾದ ಭೂಮಿಯಲ್ಲಿ ಸುಮೇರಿಯನ್ನರು ಪಟ್ಟಣಗಳನ್ನು ನಿರ್ಮಿಸಿದ್ದರು" ಎಂದು ಹೆಚ್.ಜಿ. ವೇಲ್ಸ್ ಬರೆದ 'ಎ ಶಾರ್ಟ್ ಹಿಸ್ಟರಿ ಆಫ್ ವರ್ಲ್ಡ್' ಎಂಬ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಸಾಂಸ್ಕೃತಿಕ ಜಗತ್ತಿನ ನಾಗರೀಕ ಬದುಕು, ನಗರ ನಿರ್ಮಾಣ ಕಾರ್ಯ ಮತ್ತು ಜಗತ್ತಿನ ಮೊಟ್ಟಮೊದಲ ಕಾನೂನು ಗ್ರಂಥಗಳು ರಚನೆಯಾದದ್ದು ಇರಾಕಿನಲ್ಲಿಯೇ ಎಂದು ಇತಿಹಾಸಜ್ಞರು ಗುರುತಿಸಿದ್ದಾರೆ. ಯುಪ್ರೆಟಿಸ್, ಟೈಗ್ರಿಸ್ ನದಿ ನಡುವಿನ ಪ್ರದೇಶದ ಒಂದೊಂದು ಕಲ್ಲೂ ಮನುಕುಲದ ಇತಿಹಾಸ ಹೇಳುತ್ತದೆ. ಇಲ್ಲಿ ವಾಸವಾಗಿದ್ದ ಸುಮೇರಿಯನ್ ನೆಲೆಯಿಂದ ಬಂದ ದೇವರೇ 'ಸುವಾ' ಅಥವಾ 'ಶಿವಾ'. ಅವೈದಿಕ ಹಿಂದುಗಳ ದೇವತೆಯಾದ ಶಿವನು ಸುಮೇರಿಯನ್ ನೆಲೆಯಿಂದ ಬಂದವನೆಂದು ಇತಿಹಾಸ ಗ್ರಂಥಗಳು ತಿಳಿಸುತ್ತವೆ. ಜಯಸ್ವಲಾಲ್ ಅವರ "ಹಿಂದು ಸಿವಿಲೈಜೇಶನ್" ಕೃತಿಯಲ್ಲಿ ಸುಮಾರು ಕ್ರಿ.ಪೂ. ೬೦೦೦ ವರ್ಷಗಳಷ್ಟು ಹಿಂದೆಯೇ ಭಾರತ ಮತ್ತು ಸುಮೇರಿಯನ್ನರ ನಡುವೆ ವ್ಯಾಪಾರ ವಹಿವಾಟು ಇತ್ತು. ಶಿವನ ಆರಾಧನೆ ಮೊದಲು ಸುಮೇರಿಯನ್ನರ (ಈಗಿನ ಇರಾಕ್) ನಡುವೆ ಇದ್ದು, ನಂತರ ಸಿಂಧೂ ತೀರದ ದ್ರಾವಿಡರವರೆಗೆ ತಲುಪಿತು ಎಂಬ ವಿವರಗಳಿವೆ.

ಇರಾಕ್ ಮೆಸಪೊಟೇಮಿಯಾ ಅಥವಾ ಸುಮೇರಿಯನ್ನರ ಸಂಸ್ಕೃತಿಗೆ ಸಂಬಂಧಿಸಿದ ಸುಮಾರು ೨೫,೦೦೦ ರಕ್ಷಿತ ಸ್ಮಾರಕಗಳಿವೆಯೆಂಬುದು ಪುರಾತತ್ವ ಶಾಸ್ತ್ರಜ್ಞರ ಅಭಿಪ್ರಾಯ. ಈ ಅಮೂಲ್ಯ ಸ್ಮಾರಕಗಳಿಂದು ಅಮೆರಿಕ ಸಾಮ್ರಾಜ್ಯಶಾಹಿ ಬಾಂಬುಗಳ ದಾಳಿಯಲ್ಲಿ ಬಹುತೇಕ ನಾಶವಾಗಿವೆ.

ಪುರಾತನ ಗ್ರೀಸಿನ ವೈಭವಪೂರ್ಣ ನಾಗರೀಕತೆಯನ್ನು ರೋಮನ್ ಕ್ರಿಶ್ಚಿಯನ್ನರು ಕತ್ತಲಲ್ಲಿ ಮುಳುಗಿಸಿದ್ದನ್ನು ಇಸ್ಲಾಂ ಬೆಳಕಿಗೆ ತಂದು ರಕ್ಷಿಸಿ, ಪೋಷಿಸಿ, ಹೊಸ ಹೊಸ ಸ್ಮಾರಕಗಳ ರಚನೆಯಲ್ಲಿ ತೊಡಗಿದ ಇಸ್ಲಾಂನ ತಾಯಿ ಅನೇಕ ಬುಡಕಟ್ಟುಗಳನ್ನು, ಸ್ಮಾರಕಗಳನ್ನು ಒಗ್ಗೂಡಿಸಿದವಳು.

ಝೂರತುಷ್ಟ್ರರ ಸಂಪ್ರದಾಯವಾದಿ ಬುಡಕಟ್ಟಿನಿಂದ ಅಸ್ಸಿರಿಯನ್ನರು-ಅರೇಬಿಯಾದ ಮರಳುಗಾಡಿನಲ್ಲಿ ಮುಕ್ತತೆಯನ್ನು ಕಂಡರು. ಮೂರ್ತಿಪೂಜೆ ನಿರಾಕರಿಸಿ-ಝೂರತುಷ್ಟ್ರರ ಕ್ರೂರತೆಯನ್ನು

ವಿರೋಧಿಸಿ ಬ್ಯಾಬಿಲೋನಿಯನ್ನರ ಜೊತೆ ಸೇರಿಕೊಂಡು ಬದುಕಿದ ವಿಶ್ವಾಸವೇ ಇಸ್ಲಾಂ. ಬುಡಕಟ್ಟುಗಳು ಆತ್ಮಸಾಕ್ಷಿಯಲಿ ಬದುಕಿ, ಸಹ್ಯವಾದ ಬದುಕನ್ನು ರೂಪಿಸಿಕೊಂಡ ಇತಿಹಾಸವೇ ಅಮ್ಮನ ಸಂಸ್ಕೃತಿ.

ಇಂತಹ 'ಇಸ್ಲಾಂ'ನ ಅಮ್ಮನೊಬ್ಬಳು 'ಜೆಹಾದ್' ಹೂಡುವುದೇ ಆದಲ್ಲಿ ಅದು ಅಜ್ಞಾನದ ವಿರುದ್ಧ, ಬಡತನದ ವಿರುದ್ಧ, ಶೋಷಣೆಯ ವಿರುದ್ಧ, ಮನುಕುಲಕ್ಕೆ ಒದಗುವ ಆಪತ್ತುಗಳ ವಿರುದ್ಧ. ಆಕೆಯ 'ಜೆಹಾದ್' ನಿರಂತರ ನಡೆಯುತ್ತದೆ. 'ಇಂತಹ ಅಮ್ಮನ ಸೇವೆಗಿಂತ ಉತ್ಕೃಷ್ಟವಾದ ಜೆಹಾದ್-ಮತ್ತೊಂದಿಲ್ಲ' ಎಂದು ಮಹಮ್ಮದರು ಹೇಳುತ್ತಾರೆ.

ಮಹಮ್ಮದರ ಅಮ್ಮ ಮತ್ತು ಯುದ್ಧ ಕುರಿತ ಅಭಿಪ್ರಾಯಗಳು:

ಮುಸ್ಲಿಮರು ಯುದ್ಧ ಪೀಡಿತರಲ್ಲ. ಧರ್ಮದ ಹೆಸರಿನಲ್ಲಿ ವಿನಾಶ ಬಯಸುವವರೂ ಅವರಾಗಿರಲಿಲ್ಲವೆಂಬುದಕ್ಕೆ ಅನೇಕ ಸಾಕ್ಷ್ಯಾಧಾರಗಳು ದೊರಕುತ್ತವೆ. ಇಸ್ಲಾಂ ಹುಟ್ಟುವುದಕ್ಕೆ ಮುನ್ನವೇ ರಚಿತವಾದ ಕಲ್ಹಣನ 'ರಾಜತರಂಗಿಣಿ' ಮತ್ತು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಹಿಂದೂ ರಾಜರು ಮೂರ್ತಿ ಭಂಜಕರಾಗಿದ್ದ ಉಲ್ಲೇಖಗಳಿವೆ. ಇದಕ್ಕೆ ಕಾರಣ ಮೂರ್ತಿಗಳಡಿಯಲ್ಲಿ ಹುದುಗಿಸಿಡುತ್ತಿದ್ದ ರಾಜರ ಅಪಾರ ಸಂಪತ್ತು.

ಪೈಗಂಬರರ ಕಾಲದಲ್ಲಿ ಹೆಣ್ಣು ಶಿಶುವನ್ನು ಜೀವಂತ ಹುಗಿಯುವ ಪದ್ಧತಿ ಜಾರಿಯಲ್ಲಿತ್ತು. ಮಹಮ್ಮದರು ಅದನ್ನು ತಡೆದು-"ಮೂರು ಜನ ಹೆಣ್ಣುಮಕ್ಕಳನ್ನು ಸಾಕಿ, ಸಲಹಿ ಪ್ರಾಯಕ್ಕೆ ಬಂದಾಗ ಉತ್ತಮ ಜೀವನ ಸಂಗಾತಿಗೆ ಮದುವೆ ಮಾಡಿ ಕೊಟ್ಟರೆ 'ಹಜ್' ಮಾಡಿದಷ್ಟು ಪುಣ್ಯ ಸಿಗುವುದೆಂದು" ಬೋಧಿಸಿದರು.

ಒಬ್ಬ ಸಹಾಬಿ ಮುಹಮ್ಮದರಲ್ಲಿಗೆ ಬಂದು ತಾನೂ 'ಜೆಹಾದ್'ನಲ್ಲಿ ಭಾಗವಹಿಸುವ ಅಭಿಲಾಷೆ ವ್ಯಕ್ತಪಡಿಸಿದಾಗ ಮಹಮ್ಮದರು ಹೇಳುತ್ತಾರೆ :

"ನಿಮ್ಮ ತಂದೆ ತಾಯಿ ಜೀವಿಸಿರುವರೆ ?" 'ಹೌದು' ಎಂದಾಗ,

"ಹೋಗಿ ಅವರ ಸೇವೆಗೈಯಿರಿ-ಇದುವೆ 'ಜೆಹಾದ್' ಎಂದು ಆದೇಶಿಸುತ್ತಾರೆ. ಒಬ್ಬ ಪ್ರವಾದಿಯವರಲ್ಲಿ 'ನಿಮ್ಮ ಸದ್ವರ್ತನೆಗೆ ಅತ್ಯಧಿಕ ಅರ್ಹ ವ್ಯಕ್ತಿ ಯಾರು ?' ಎಂದು ಕೇಳಿದಾಗ ಒಂದು, ಎರಡು, ಮೂರನೆಯ ಸ್ಥಾನಗಳನ್ನು ತಾಯಿಗೆ ನೀಡಿದ ಪೈಗಂಬರರು-ನಾಲ್ಕನೇ ಸ್ಥಾನ ತಂದೆಗೆ ನೀಡುತ್ತಾರೆ. ಇದರಿಂದ ಅವರು 'ಅಮ್ಮ'ನಿಗೆ ನೀಡುವ ಗೌರವ ಕಂಡುಬರುತ್ತದೆ. ಹಜ್ರತ್ ಜಾಹೀಮ್‌ರವರಿಗೂ ಪೈಗಂಬರರು "ತಂದೆ ತಾಯಿಗಳ ಸೇವೆ ಮಾಡಿರಿ. ಏಕೆಂದರೆ, ಅವರ ಪಾದದಡಿಯಲ್ಲಿಯೇ ಸ್ವರ್ಗವಿದೆ" ಎಂದು ಹೇಳಿದರು (ಇಬ್ನ ಮಾಜಾ-ನಸಾಈ).

ಆಗಿನ ಕಾಲದಲ್ಲೂ ಮಹಿಳೆಯರು ಅಪವಾದಗಳನ್ನೆದುರಿಸಿದ್ದಾರೆ. ಪ್ರವಾದಿ ಪತ್ನಿ ಆಯಿಶಾರ ಬಗ್ಗೆಯೂ ಜನರು ಸಲ್ಲದ ಮಾತುಗಳನ್ನಾಡಿದಾಗ ಅದನ್ನು ತಿಳಿದು ಪೈಗಂಬರರು ಆಯಿಶಾರ ಬಳಿ ಬಂದು ಹೇಳುತ್ತಾರೆ : "ಆಯಿಶಾ ನೀನು ತಪ್ಪುಗಾರಳಲ್ಲದಿದ್ದರೆ ಅಲ್ಲಾಹ್‌ನು ನಿನ್ನ ನಿರಪರಾಧಿತ್ವವನ್ನು ಸಾಬೀತುಪಡಿಸುತ್ತಾನೆ. ಒಂದು ವೇಳೆ ತಪ್ಪು ಮಾಡಿದ್ದರೆ ಅಲ್ಲಾಹ್‌ನೊಡನೆ ಕ್ಷಮೆಯಾಚಿಸು. ಪಶ್ಚಾತ್ತಾಪಪಡುವವರನ್ನು ಆತ ಕ್ಷಮಿಸುತ್ತಾನೆ".

ಹಿಜ್ರಾದ ೩ನೇ ವರ್ಷ 'ಉಹೈದ್' ಯುದ್ಧ ನಡೆಯಿತು. ವೈರಿಗಳ ಆಕಸ್ಮಿಕ ಆಕ್ರಮಣದಿಂದ

ಮುಸ್ಲಿಮರಿಗೆ ಭಾರಿ ನಷ್ಟವುಂಟಾಯಿತು. ಸುಮಾರು ೭೦ ಸಹಾಬಿಗಳು ಹುತಾತ್ಮರಾದರು. ಆಗ ಮಹಮ್ಮದರಿಗೂ ಗಂಭೀರ ಗಾಯಗಳಾದವು. ರಣಭೂಮಿಯಲ್ಲಿ ಬಳಲಿದ ಗಾಯಾಳುಗಳಿಗೆ ಆಯಿಶಾ, ಉಮ್ಮೆ, ಸುಲೈಮಾ, ಫಾತಿಮಾ, ಉಮ್ಮಾ ಅಮ್ಮಾರ್ ಮುಂತಾದ ಮಹಿಳೆಯರು ಚರ್ಮದ ಚೀಲಗಳಲ್ಲಿ ನೀರು ತುಂಬಿಕೊಂಡು ಗಾಯಾಳುಗಳಿಗೆ ಕುಡಿಸಿ, ಗಾಯಗಳಿಗೆ ಮುಲಾಮು ಪಟ್ಟಿ ಕಟ್ಟುವ ಧೈರ್ಯ ಮೆಚ್ಚುವಂತಹುದು. ಆಗ ಮಹಿಳೆಯರಿಗೆ ಪರ್ದಾ ಕಡ್ಡಾಯವಿರಲಿಲ್ಲ. ನಂತರದಲ್ಲಿ ದಿನಗಳಲ್ಲಿ ಹಿಜಾಬ್ (ಪರ್ದಾ) ಜಾರಿಯಾಯಿತು.

ಮಹಮ್ಮದರ ಪತ್ನಿ ಆಯಿಶಾ ಸರಳ ಜೀವನ ನಡೆಸುತ್ತಿದ್ದು ಹೊಟ್ಟೆ ತುಂಬಾ ಊಟ ಮಾಡುತ್ತಿರಲಿಲ್ಲ. ಖುರೇಶೀ ಮಹಿಳೆಯಾದ ಹಜ್ರತ್ ಝೈನಬ್‌ರವರು ಸದಾ ಬಡವರ ದುಃಖಿತರ ಸೇವೆಯಲ್ಲಿ ತೊಡಗಿರುತ್ತಿದ್ದರು. ಇಸ್ಲಾಂನ ಹದೀಸ್‌ಗಳನ್ನು ವರದಿ ಮಾಡಿದ ಪ್ರಥಮ ಮಹಿಳೆ ಆಯಿಶಾ ಆಗಿದ್ದರೆ, ದ್ವಿತೀಯ ಸ್ಥಾನ ಉಮ್ಮೆಸಲ್ಮರು ಪಡೆದಿದ್ದರು. ಧರ್ಮೋಪದೇಶ ಮಾಡುವ ಈ ಸಹಾಬಿಗಳಲ್ಲಿ ಉಮ್ಮು ಹಬೀಬರವರು ಧೃಡ ವಿಶ್ವಾಸದ ಸ್ತ್ರೀಯಾಗಿದ್ದರು. ಮದೀನಾದ ಮಹಿಳೆಯರು ಅವರ ಪುರುಷರ ಮೇಲೆ ಅಧಿಕಾರವುಳ್ಳವರಾಗಿದ್ದರೂ ಸರಳ ಜೀವನ ತಮ್ಮದಾಗಿಸಿಕೊಂಡಿದ್ದರು.

ಮಹಮ್ಮದರ ಕಾಲದ ಖನ್ಸಾ ಎಂಬ ಓರ್ವ ಸಹಾಬಿ ಮಹಿಳೆ ಸಾಹಿತ್ಯ ವಿಮರ್ಶಕಿಯಾಗಿದ್ದರು. ಅವರ ಕವಿತೆಗಳು 'ದೀವಾನಿ ಖನ್ಸಾ' ಎಂಬ ಹೆಸರಿನಲ್ಲಿ ಪ್ರಕಾಶನಗೊಂಡಿವೆ. ಇದು ಫ್ರೆಂಚ್ ಮತ್ತು ಐರೋಪ್ಯ ಭಾಷೆಗಳಿಗೂ ತರ್ಜುಮೆಯಾಗಿದೆ. ಅರಬ್ ಕವಿಗಳು ಗೋತ್ರಗಳನ್ನು ಖಂಡಿಸುತ್ತಿದ್ದರು. ಖನ್ಸಾರ ಕವಿತೆಗಳನ್ನು ಮಹಮ್ಮದರು ಬಹಳವಾಗಿ ಮೆಚ್ಚಿಕೊಂಡಿದ್ದರು. ಇಸ್ಲಾಂ ಪೂರ್ವದ ಅರೇಬಿಯಾ, ರೋಮ್, ಗ್ರೀಕ್‌ನ ತತ್ವಜ್ಞಾನಿಗಳು ಹಾಗೂ ವಿದ್ವಾಂಸರು ಮಹಿಳೆಗೆ ಆತ್ಮವಿದೆಯೇ ? ಅಥವಾ ಇಲ್ಲವೊ ? ಎಂದು ಜಿಜ್ಞಾಸೆ ನಡೆಸಿದಂತಹ ಕಾಲ ಅದಾಗಿತ್ತು. ಸ್ತ್ರೀಪರ ವಾದಿಸಲು ಯಾರೂ ಇಲ್ಲದ ಪರಿಸ್ಥಿತಿಯಲ್ಲಿ ಮಹಮ್ಮದರು ಸ್ತ್ರೀಯರ ಪರವಾಗಿ ಮಾತನಾಡಿದರು.

ಆ ಕಾಲದಲ್ಲಿ ಪೈಗಂಬರರು ಸ್ತ್ರೀ-ಪುರುಷರ ಸಮಾನತೆಗೆ ಒತ್ತು ನೀಡಿದರು. ಕುರಾನಿನ ಸೂರ : ಅನ್ನಿಸಾ-೧ ರಲ್ಲಿ ಹೇಳುತ್ತಾರೆ : "ಭಗವಂತ ನಿಮ್ಮನ್ನು ಯಾವ ಜೀವದಿಂದ ಸೃಷ್ಟಿಸಿದನೋ-ಅದೇ ಜೀವದಿಂದ ನಿಮ್ಮ ಸಂಗಾತಿಯನ್ನು ಸೃಷ್ಟಿಸಿದ್ದಾನೆ". "ಪುರುಷರು ಶ್ರಮಪಟ್ಟು ಸಂಪಾದಿಸಿದುದರ ಪಾಲು ಅವರಿಗೆ, ಸ್ತ್ರೀಯರು ಶ್ರಮಪಟ್ಟು ಸಂಪಾದಿಸಿದುದರ ಪಾಲು ಅವರಿಗಿದೆ" ಎಂದು ಕುರಾನಿನ 'ಅನ್ನಿಸಾ'ದ ೩೨ರಲ್ಲಿ ಹೇಳಲಾಗಿದೆ.

ಇಸ್ಲಾಂ ಜೀವಪರವಾದ ಪೈಗಂಬರರನ್ನು ಸೃಷ್ಟಿಸಿದೆ. "ಸಮಾಜದಲ್ಲಿ ಕ್ಷೋಭೆ, ಕೊಲೆಗಿಂತ ಕೆಟ್ಟದು. ನಿಮ್ಮೊಡನೆ ಯುದ್ಧ ಮಾಡುವವರೊಂದಿಗೆ ನೀವೂ ಯುದ್ಧ ಮಾಡಿರಿ. ಆದರೆ ಅತಿಕ್ರಮಿಸಬೇಡಿರಿ" ಎಂದರು. ಇಸ್ಲಾಂ ಎಂದರೆ 'ಶಾಂತಿ' ಎಂದರ್ಥ. ಈಮಾನ್, ಮೋಮಿನ್, ಅಮ್ನ (ಶಾಂತಿ) ಗಳನ್ನೊಳಗೊಂಡಿದೆ. ರೋಮನ್ನರು, ಗ್ರೀಕರು ಹಾಳುಗೆಡವಿದ ಈಜಿಪ್ತನ್ನು ಮತ್ತೆ ಎತ್ತಿ ನಿಲ್ಲಿಸಿದವರು ಇಸ್ಲಾಂ ಮೂಲದ ತಾಯಂದಿರು.

ಇಸ್ಲಾಂನ ಮೊದಲ ಖಲೀಫಾ ಅಬೂಬಕರ್‌ರವರು ಸೈನ್ಯಕ್ಕೆ ಮಾಡಿದ ಆದೇಶ ಹೀಗಿದೆ : "ನ್ಯಾಯಪರರಾಗಿರಿ, ಅನ್ಯಾಯ ಮಾಡದಿರಿ, ಧೈರ್ಯವಾಗಿರಿ, ಶರಣಾಗುವುದಕ್ಕಿಂತ ಸಾಯುವುದೇ ಮೇಲು. ಕರುಣಾಮೂರ್ತಿಗಳಾಗಿರಿ, ವೃದ್ಧರನ್ನು, ಮಹಿಳೆ, ಮಕ್ಕಳನ್ನು ಕೊಲ್ಲದಿರಿ. ಹಣ್ಣು, ಆಹಾರ

ಧಾನ್ಯಗಳನ್ನು, ಪ್ರಾಣಿಗಳನ್ನು ನಾಶ ಮಾಡದಿರಿ. ನಿಮ್ಮ ಶತೃಗಳಿಗೂ ನೀಡಿದ ಮಾತು ಉಳಿಸಿಕೊಳ್ಳಿ. ಐಹಿಕ ಬದುಕಿನಿಂದ ನಿವೃತ್ತರಾಗಿರಿ. ಜನರ ಮೇಲೆ ಅತ್ಯಾಚಾರ ಮಾಡದಿರಿ." ಈ ಮಾತನ್ನು ಸೈನಿಕರು ಮೀರದಂತೆ ದಳಪತಿಗಳಿಗೆ ಆದೇಶಿಸುತ್ತಿದ್ದರು. ಹೀಗಾಗಿ ಮುಸ್ಲಿಂ ಯೋಧರು ಹೋದ ಕಡೆಯೆಲ್ಲಾ ಅವರಿಗೆ ಬೃಹತ್ ಸ್ವಾಗತ, ಸಹಾನುಭೂತಿ ದೊರಕಿತು. ಖಲೀಫರ ಸರಳ, ನೇರ, ಸಮಾನ ನಡೆಗಳು, ಸಹಭೋಜನಗಳು ಜನರನ್ನು ಇಸ್ಲಾಂನತ್ತ ಆಕರ್ಷಿಸಿತು. ಮುಸ್ಲಿಮರು ಯುದ್ಧಕ್ಕಿಂತ ಸಂಸ್ಕೃತಿಗೆ ಹೆಚ್ಚಿನ ಸಮಯ ವ್ಯಯಿಸಿದರು. ಇಸ್ಲಾಂನ ಮೊದಲ ಧರ್ಮಯುಜ್ಞ "ಜಂಗ್-ಎ-ಬದರ್'ನಲ್ಲಿ ಸೋತ ಯಹೂದಿ ಖೈದಿಗಳನ್ನು ಕೊಲ್ಲುವುದಕ್ಕಿಂತ ಒಬ್ಬೊಬ್ಬ ಖೈದಿ ನಮ್ಮ ೫ ಜನ ಸೈನಿಕರಿಗೆ ತಮ್ಮ ಯುದ್ಧ ನೀತಿ ಕಲಿಸಿದ ನಂತರ ಅವರನ್ನು ಕೊಲ್ಲದೆ ಬಿಡುಗಡೆ ಮಾಡಿರಿ" ಎಂದು ತಮ್ಮ ಶತೃಗಳಿಂದಲೂ ಪ್ರಯೋಜನ ಪಡೆದರು.

"ಒಬ್ಬ ಮನುಷ್ಯನನ್ನು ಕೊಂದರೆ ಅವನು ಇಡೀ ಮಾನವ ಕುಲವನ್ನೇ ಕೊಂದಂತೆ. ಒಬ್ಬರಿಗೆ ಜೀವದಾನ ಮಾಡಿದರೆ ಸಕಲ ಮಾನವ ಕುಲಕ್ಕೇ ಜೀವದಾನ ಮಾಡಿದಂತೆ. ಜೀವ ಉಳಿದರೆ ಧರ್ಮ ಉಳಿದೀತು-ತಾಳಿದವನೊಡನೆ ಅಲ್ಲಾಹ್ ಇರುತ್ತಾನೆ-(ಇನ್ನಲ್ಲಾಹು ಮಅಸ್ಸಾಬಿರೀನ್) ಎಂದು ಉಪದೇಶಿಸಿದವರು ಮಹಮ್ಮದರು.

"ಜನರ ಮೇಲೆ ಕರುಣೆ ತೋರದವರ ಮೇಲೆ ಅಲ್ಲಾಹ್ ಕರುಣಿಸಲಾರ". ನೆರೆಯವರ ಸುರಕ್ಷತೆ ನಿಜವಾದ ಮುಸ್ಲಿಂ ಧರ್ಮ." "ಧರ್ಮವೆಂದರೆ ಹಿತಚಿಂತನೆ ಮತ್ತು ನಿಷ್ಠೆ". "ಭೂಮಿಯಲ್ಲಿ ಅಶಾಂತಿ ಹರಡದಿರಿ. ಧರ್ಮವೆಂದರೆ ಮನುಕುಲದ ಹಿತಚಿಂತನೆ." ಎಂದು ಹೇಳಿದ್ದು ಪೈಗಂಬರರ ಸಂಸ್ಕೃತಿಯಾದರೆ, "ನೆರೆಯವರನ್ನು ಪ್ರೀತಿಸು-ಹಸಿದವರಿಗೆ ಅನ್ನ, ಬಾಯಾರಿದವರಿಗೆ ನೀರು, ಬೆತ್ತಲೆ ನಿಂತವರಿಗೆ ಬಟ್ಟೆ, ಸೂರಿಲ್ಲದವರಿಗೆ ಆಶ್ರಯ, ಖೈದಿ, ವಿಧವೆ, ರೋಗಿಗಳಿಗೆ ಆಶ್ರಯ ನೀಡಿರಿ" ಎಂಬುದು ಏಸುಕ್ರಿಸ್ತನ ಸಂಸ್ಕೃತಿಯಾಗಿದೆ. ಇಂತಹ ಮಾನವೀಯ ಸಂಸ್ಕೃತಿಯನ್ನು ಜಾರ್ಜ್‌ಬುಶ್, ಅಥವ ಬ್ಲೇರ್‌ರಲ್ಲಿ ಕಾಣಲು ಸಾಧ್ಯವೆ ? ಇವರು ಹುಟ್ಟುಹಾಕಿದ ಸಾಮ್ರಾಜ್ಯಶಾಹಿ ಹಿಂಸೆಯ ಪ್ರತಿಹಿಂಸಾ ರೂಪವೇ ಇಂದಿನ ಭಯೋತ್ಪಾದನೆಯಲ್ಲವೇ ? ಹಿಂಸೆಯಿಲ್ಲದಿರುವೆಡೆಯಲ್ಲಿ ಪ್ರತಿಹಿಂಸೆಯ ಮಾತೇ ಇರುವುದಿಲ್ಲವಲ್ಲ ?

ಪೈಗಂಬರರ ಕಾಲದ ಮಹಿಳೆಯರು ಅವರೊಂದಿಗೆ ಸಾರ್ವಜನಿಕ ಚರ್ಚೆಗಳಲ್ಲಿ, ಯುದ್ಧಗಳಲ್ಲೂ ಭಾಗವಹಿಸುತ್ತಿದ್ದರು. ಆದರೆ ಬುರ್ಖಾ ಧರಿಸುತ್ತಿರಲಿಲ್ಲ. ಆದ್ದರಿಂದಲೇ ಇಂದಿಗೂ ಮೆಕ್ಕಾಗೆ 'ಹಜ್' ಯಾತ್ರೆಗೆ ಹೋಗುವ ಸ್ತ್ರೀಯರು ಬುರ್ಖಾ ಧರಿಸುವುದಿಲ್ಲ. ಪೈಗಂಬರರ ಪತ್ನಿ ಖದೀಜಾ ಎಂದೂ ಬುರ್ಖಾ ಹಾಕಲಿಲ್ಲ. ಆಕೆ ಆಮದು ರಫ್ತು ಸಂಸ್ಥೆಯೊಂದರ ಮಾಲೀಕಳೂ ಆಗಿದ್ದಳು. ವ್ಯಾಪಾರ ವಹಿವಾಟು ಸ್ವತಃ ಖದೀಜಾರವರೇ ನೋಡಿಕೊಳ್ಳುತ್ತಿದ್ದರು. ಪೈಗಂಬರರು ತಮ್ಮ ಮಗಳು ಫಾತಿಮಾರನ್ನು ಬಹುವಾಗಿ ಪ್ರೀತಿಸುತ್ತಿದ್ದರು. "ಆಕೆಗೆ ನೋವು ನೀಡಿದರೆ ನನಗೆ ನೋವು ನೀಡಿದಂತೆ" ಎನ್ನುತ್ತಿದ್ದರು.

ಇಸ್ಲಾಂ ಮೂಲದ ಅರಬ್, ಇರಾನ್, ಇರಾಕ್, ಅಫಘಾನಿಸ್ತಾನ, ಪ್ಯಾಲೆಸ್ತೀನ್‌ಗಳ ಮಹಿಳೆಯರು ಆಗ ಹೊಲಗದ್ದೆಗಳಲ್ಲಿ ದುಡಿಯುತ್ತಿದ್ದರು. ಸರಳ ಜೀವನ ನಡೆಸುತ್ತಿದ್ದರು. ಈಗ ಅವರು ವೈದ್ಯರಾಗಿ, ಇಂಜಿನಿಯರ್‌ಗಳಾಗಿ, ಪತ್ರಕರ್ತರಾಗಿ, ವಕೀಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಜೀವಿಸಲು ಯೋಗ್ಯವಾದ ಪೃಥ್ವಿಗೆ ಯುದ್ಧಗಳು ಆವರಿಸಿದಾಗ, ಪುರುಷರು ಮರಣ ಹೊಂದಿ,

ಅನೇಕ ಕುಟುಂಬಗಳು ಸ್ತ್ರೀಯರ ದುಡಿಮೆಯನ್ನೇ ಆಧಾರವಾಗಿಟ್ಟುಕೊಂಡವು. ನೆರೆಯವನು ಹಸಿದಿದ್ದಾಗ ಒಬ್ಬ ನೈಜ ಮುಸ್ಲಿಂ ಹೊಟ್ಟೆ ತುಂಬಾ ತಿನ್ನಬಾರದೆಂದು ಹದೀಸ್ ಹೇಳುತ್ತದೆ.

ಚಳಿಗಾಲ ಹತ್ತಿರವಾದಂತೆ ಮರಳುಗಾಡಿನ ಮಾತೆಯರು ಆಹಾರ ಸಾಮಗ್ರಿಗಳ ಕೊರತೆ ಅನುಭವಿಸಿದರ, ಯುದ್ಧಭೂಮಿಯಿಂದ ತನ್ನ ಕರುಳ ಕುಡಿಗಳ ಸಾವು ನೋವಿನ ಆಕ್ರಂದನ ಸಹಿಸಲಸಾಧ್ಯ. ಚಳಿ-ಹಸಿವು, ಯುದ್ಧ, ಬಾಂಬು-ಬುಲೆಟ್ಟುಗಳು ಲಕ್ಷಾಂತರ ಮಾತೆಯರ ಪ್ರೀತಿಪಾತ್ರರಿಗೆ ಸಾವು ನೀಡಿದೆ. ಬಹುಸಂಸ್ಕೃತಿಯ ವಿರುದ್ಧ ಏಕಸಂಸ್ಕೃತಿ, ಸಣ್ಣದರ ವಿರುದ್ಧ ದೊಡ್ಡದು, ನಿಸರ್ಗದ ವಿರುದ್ಧ ತಂತ್ರಜ್ಞಾನವನ್ನು ಎತ್ತಿ ನಿಲ್ಲಿಸಿರುವ ಜಾಗತೀಕರಣದ ಸಮರಗಳನ್ನು 'ಅಮ್ಮ' ಬಯಸುವುದಿಲ್ಲ. 'ಅಮ್ಮ'ನ ಬೆಬಿಲೋನಿಯಾ, ಮೆಸಪೊಟೇಮಿಯಾ, ಸುಮೇರಿಯನ್ ನಾಗರೀಕತೆಯ ತೊಟ್ಟಿಲುಗಳ ಮೇಲೆ ಬಾಂಬಿನ ಮಳೆಗರೆದು ಅದೇ 'ಅಮ್ಮ'ನಿಗೆ ವಿಮಾನದ ಮೂಲಕ ಆಹಾರದ ಪೊಟ್ಟಣ ನೀಡಿದರೆ, ಅವಳು ರಕ್ತ ಪಿಪಾಸು, ಯುದ್ಧದಾಹಿಗಳನ್ನು, ಯುದ್ಧೋನ್ಮಾದಕರನ್ನು, ಶಸ್ತ್ರಾಸ್ತ್ರೋತ್ಪಾದಕರನ್ನು, ಕೊಲೆಗಡುಕರನ್ನು ಕ್ಷಮಿಸಲು ಸಾಧ್ಯವೆ ?

ಮಾನವ ಸಂಪತ್ತಿನ, ಹಸಿವಿನ, ಬಡತನದ ತೀವ್ರತೆ ಏನೆಂದು ಅರಿಯದ ಸಾಮ್ರಾಜ್ಯಶಾಹಿ ವಕ್ತಾರರು ಸಾಮಾಜಿಕ ಬದ್ಧತೆ ತೋರಿಸಲು, ತಾಯಿ ಮತ್ತು ವೃದ್ಧರಿಂದ ಮಕ್ಕಳನ್ನು ಕಸಿದು, ಮಕ್ಕಳಿಂದ ತಂದೆ, ಗಂಡನನ್ನು ಕಸಿದುಕೊಂಡು ಭಿಕ್ಷೆ ಎಸೆಯುವ ಸೋಗನ್ನು ಇಸ್ಲಾಮಿನ ತಾಯಿ ಬಲ್ಲಳು. ಗೌರವ, ಸ್ವಾಭಿಮಾನಗಳು ಎಲ್ಲ ಮಾತೆಯರ ಹಕ್ಕಾಗಿದೆ. ತಾಯಿ ಯಾವ ಧರ್ಮದವಳೇ ಆಗಿರಲಿ ಅವಳು ಮೊದಲು ತಾಯಿಯಾಗಿದ್ದಾಳೆ.

ಅಫಘಾನಿಸ್ಥಾನದ ರಾವಾ (RAWA) ಸಂಸ್ಥಾಪಕಿ ಮೀನಾರವರ 'ನಾನು ಹಿಂತಿರುಗುವುದಿಲ್ಲ' ಕವಿತೆಯಲ್ಲಿ ಹೀಗೆ ಹೇಳುತ್ತಾರೆ :

> "ಹೊಸ ಹುಟ್ಟು ಪಡೆದು, ದಹಿಸಿಹೋದ ಮಕ್ಕಳ
> ಬೂದಿಯಿಂದೆದ್ದ ಬಿರುಗಾಳಿ ।
> ನನ್ನ ಸಹೋದರರು ಹರಿಯಿಸಿದ
> ರಕ್ತದ ಹೊಳೆಯಲ್ಲಿ ಹುಟ್ಟಿದವರು"

ತಾಯಿ ತನ್ನ ಮಕ್ಕಳ ಸಾವನ್ನು ಬಯಸುವ ಯುದ್ಧಗಳನ್ನು ವಿರೋಧಿಸುತ್ತಾಳೆ. ರಾಜ್ಯಾಧಿಕಾರಕ್ಕೆ ಬೇಕಿದ್ದರೆ ನನ್ನ ರಕ್ತ ತೆಗೆದುಕೊಳ್ಳಲಿ. ನನ್ನ ಮಕ್ಕಳು, ಮನೆಯವರ ಗೊಡವೆಗೆ ಹೋಗದಿರಲಿ ಎನ್ನುತ್ತಾಳೆ-ಕ್ಷಣದಲ್ಲಿ ನಮ್ಮ ಮಕ್ಕಳು ಬಾಂಬಿನ ಬಾಯಿಗೆ ಆಹುತಿಯಾಗುವುದನ್ನು ನೋಡಬೇಕೆ ? ಒಬ್ಬ ತಾಯಿಗೆ ಯುದ್ಧವೆಂದರೆ ಕೇವಲ ಸಾವು ನೋವುಗಳಷ್ಟೇ ಅಲ್ಲ. ಅತ್ಯಾಚಾರ, ಬಲಾತ್ಕಾರ, ನಿರ್ಗತಿಕತನ, ವಿನಾಶ, ಕಾಯಿಲೆ, ಬಲವಂತದ ವೇಶ್ಯಾವೃತ್ತಿ ಮತ್ತು ಆಹಾರದ ಕೊರತೆಗಳನ್ನು ತರುತ್ತದೆ. ಮನುಕುಲದ ವಿನಾಶ ಮತ್ತು ಮಾನವೀಯ ಮೌಲ್ಯಗಳ ಪತನವೇ ಯುದ್ಧವಾಗಿದೆ. ಅಷ್ಟೇ ಅಲ್ಲದೆ, ನೆಲ, ಜಲ, ಆಹಾರಗಳನ್ನು ವಿಷವಾಗಿಸಿ, ಭಯಂಕರ ಕ್ಷಾಮ, ರೋಗಗಳ ಬಾಯಿಗೆ ಅಳಿದುಳಿದ ಜನಾಂಗವನ್ನು ನೂಕುತ್ತದೆ.

ಮೊದಲನೇ ಮಹಾಯುದ್ಧವನ್ನು ವಿರೋಧಿಸಿ ತಮ್ಮ ಮಕ್ಕಳಿಗೆ ರೊಟ್ಟಿಯನ್ನು ಒದಗಿಸುತ್ತಲೇ ಬಲಿಷ್ಠ ತಡೆಗೋಡೆ ನಿರ್ಮಿಸಿದ ಪೆಟ್ರೋಗ್ರಾಡ್‌ನ ಲಕ್ಷಾಂತರ ಮಹಿಳೆಯರು, ತಮ್ಮ ಗಂಡಂದಿರನ್ನು ರಣರಂಗದಿಂದ ಹಿಂತಿರುಗಿಸಿ ಮನೆಗೆ ಕಳಿಸಿದರು.

ರಾಜಸತ್ತೆ ಎಷ್ಟೋ ಸಲ ತಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳಲು, ಜನರ ಆಕ್ರೋಶದಿಂದ ಪಾರಾಗಲು, ತನ್ನ ಜನತೆಯ ಗಮನ ನಿಜವಾದ ಸಮಸ್ಯೆಗಳಿಂದ ದೂರ ಮಾಡಲುಯುದ್ಧ ಘೋಷಿಸುತ್ತದೆ. ದೇಶಭಕ್ತಿಯ ಸೋಗು ನಿಜವನ್ನು ಒಪ್ಪದಂತೆ ಮಾಡುತ್ತದೆ.

ಕುರಾನಿನ 'ಜೆಹಾದ್'ನ ಅರಬ್ಬಿ ಪದ 'ಜಾಹದಾತ್' ಎಂದಿದೆ. 'ಜೆಹಾದ್' ಎಂದರೆ ಒತ್ತಡ ಹೇರುವುದು ಎಂದಾಗುತ್ತದೆಯೇ ವಿನಃ ಯುದ್ಧವಲ್ಲ. ಒಂದು ಸಲ ಪ್ರವಾದಿಯವರು 'ತನ್ನ ಚಿತ್ತವನ್ನು ನಿಯಂತ್ರಿಸುವುದೇ ಅತಿ ದೊಡ್ಡ ಜೆಹಾದ್ ಆಗಿದೆ'' (ಹದೀಸ್) ಎಂದು ಹೇಳಿದುದರ ಉಲ್ಲೇಖವಿದೆ. ತನ್ನ ಮೇಲೆ ತಾನು ನಿಯಂತ್ರಣ ಸಾಧಿಸುವುದೇ ಜೆಹಾದ್ ಎಂದಿದ್ದಾರೆ ಮಹಮ್ಮದರು. ಕುರಾನ್ ತಾಯಿಯೊಂದಿಗೆ ಸದ್ವರ್ತನೆ ಮಾಡಲು ಬೋಧಿಸುತ್ತದೆ. ಕುರಾನಿನಲ್ಲಿ ಅಸ್ಪೃಶ್ಯತೆಯ ಕಲ್ಪನೆಯಿಲ್ಲ. ಎಲ್ಲ ಮಾನವರು ಒಂದೇ ಮಾತಾಪಿತರ ಸಂತಾನವಾಗಿದ್ದಾರೆ. ಸಂತಾನಕ್ಕಾಗಿ, ಸಂಸ್ಕೃತಿ ಕಟ್ಟುವುದಕ್ಕಾಗಿ ಅವಳು ಪಡುವ ಯಾತನೆಗಳೂ ಸಮಾನವಾಗಿವೆ. ಕುರಾನ್ ಹೆತ್ತ ತಾಯಿಗೆ ಕೃತಜ್ಞತೆ ಸಲ್ಲಿಸಲು ಹೇಳುತ್ತದೆ. ಎಲ್ಲ ಮಾನವ ಜನಾಂಗದ ಸಂಸ್ಕೃತಿಗಳು ಹೊಂದಿರುವ ಮಾನವೀಯ ಮೌಲ್ಯಗಳ ಮೂಲಕವೇ ಶ್ರೇಷ್ಠ ಅಥವಾ ನಿಕೃಷ್ಟ ಸಂಸ್ಕೃತಿಗಳಾಗುತ್ತವೆ. ಹಿಟ್ಲರನ ಪೊಲೀಸ್ ಮಂತ್ರಿ ಗೋರಿಂಗ್‌ಗೆ ಸಂಸ್ಕೃತಿ ಎಂದಾಕ್ಷಣ "ನನ್ನ ಕೈ ರಿವಾಲ್ವಾರ್ ಹಿಡಿಯುತ್ತೆ" ಎಂದು ಹೇಳಿದ್ದ. ಬುಷ್‌ನ ಸಂಸ್ಕೃತಿ ಏಸುವಿನದಲ್ಲ; ಮಹಮ್ಮದರ ಸಂಸ್ಕೃತಿ ತಾಲಿಬಾನಿಗಳದಲ್ಲ. ಪೈಗಂಬರರು ಹೇಳಿದ ಇಸ್ಲಾಂ ಧರ್ಮವೇ ಬೇರೆ. ಸರ್ವಮಾನವ ಸಮಾನತೆಯೊಂದಿಗೆ ಮಾನವ ಸೋದರತೆ ಇಸ್ಲಾಮನ ಪ್ರಣಾಳಿಕೆಯಾಗಿದೆ. ಕುರಾನ್ ಪ್ರಕಾರ ಅಶಾಂತಿ, ದಂಗೆ, ಕ್ಷೋಭೆಗಳನ್ನು ಕೊಲೆಪಾತಕಕ್ಕಿಂತ ಭೀಕರ ಅಪರಾಧವಾಗಿ ಪರಿಗಣಿಸಿದೆ.

ಅಫಘಾನಿನ ತಾಯಂದಿರು ಕ್ರೂರ ತಾಲಿಬಾನಿಗಳ ಅಟ್ಟಹಾಸದ ವಿರುದ್ಧ ತಲೆ ಎತ್ತಿ ನಿಂತಿದ್ದಾರೆ. ಓಸಾಮಾನಂತಹ ಕ್ರೂರಿಯನ್ನು ಜನ್ಮ ಕೊಟ್ಟದ್ದಕ್ಕಾಗಿ ಇಸ್ಲಾಂನ ತಾಯಿ ಗೋಳಿಟ್ಟಂತೆ, ಬುಷ್‌ನಂತ ಸರ್ವಾಧಿಕಾರಿ ಪಾತಕಿಯನ್ನು ಜನ್ಮ ಕೊಟ್ಟದ್ದಕ್ಕಾಗಿ ಕ್ರಿಶ್ಚಿಯನ್ ಮಾತೆಯರು ನೊಂದಿದ್ದಾರೆ. ಬೀದಿಗಿಳಿದು ಪ್ರತಿಭಟಿಸಿದ್ದಾರೆ.

ಚೆಂಗೇಜ್‌ಖಾನನ ವಂಶಜನಾದ ತೈಮೂರ್ ಅವರ ಸೇನಾನಿಯಾಗಿದ್ದನು. ಕ್ರಿ.ಶ. ೧೩೮೩ರಲ್ಲಿ ಪರ್ಶಿಯಾವನ್ನು ಪ್ರವೇಶಿಸಿದ ತೈಮೂರ ಸೋತವರನ್ನು ನಿರ್ದಾಕ್ಷಿಣ್ಯವಾಗಿ ಕೊಲ್ಲುತ್ತಿದ್ದನು. ಹೀಗಾಗಿ ತೈಮೂರನ ಹೆಸರನ್ನು ಕೇಳಿದರೆ ಜನ ನಡುಗುತ್ತಿದ್ದರು. "ಹಮೀದಾಬಾನು" ಎಂಬ ಮಹಿಳೆ ತೈಮೂರ ತನ್ನವರನ್ನು ಕೊಲ್ಲುತ್ತಿರುವುದನ್ನು ಸಹಿಸಲಾರದೆ ಪುರುಷ ಸೈನಿಕನ ವೇಷ ಧರಿಸಿ, ರಣಾಂಗಣಕ್ಕಿಳಿದಳು. ವೀರಾವೇಶದಿಂದ ಹೋರಾಡಿ ತೈಮೂರನ ಸೆರೆಯಾದಳು. ಆಗ ತೈಮೂರ ಆಕೆಯನ್ನು ಕೊಲ್ಲಲು ಆದೇಶಿಸುತ್ತಾನೆ. ಧೈರ್ಯದಿಂದ ಹಮೀದಾಬಾನು ತೈಮೂರನಿಗೆ ಹೇಳುತ್ತಾಳೆ: "ಚಕ್ರವರ್ತಿಗಳೇ, ನನ್ನನ್ನು ನೋಡಿರಿ. ನಾನೋರ್ವ ಅಬಲೆ, ನಿಸ್ಸಹಾಯಕಳು. ನನ್ನಂತಹ ಸಹಸ್ರಾರು ಮಂದಿಯನ್ನು ನೀವು ಅನಾಥ ಮತ್ತು ವಿಧವೆಯರನ್ನಾಗಿಸಿದ್ದೀರಿ. ಆದರೆ ನಾವು ನಿಮ್ಮಂತಹ ಗಂಡಸರನ್ನು ಹೆರಬೇಕಾದವರೆಂಬುದು ನೆನಪಿರಲಿ" ಎಂಬ ಹಮೀದಾರ ಮಾತುಗಳು ತೈಮೂರನನ್ನು ತಲ್ಲಣಗೊಳಿಸಿದವು. ಆಗ ತೈಮೂರ ಎಲ್ಲ ಯುದ್ಧಕೈದಿಗಳನ್ನು ಬಿಡುಗಡೆಗೊಳಿಸಿ, ತನ್ನ ನಡತೆಯಲ್ಲಿ ಬದಲಾವಣೆ ತಂದುಕೊಂಡು ಕೊನೆಗೆ ತನ್ನ ಬದಲಾವಣೆಗೆ ಕಾರಣಳಾದ ಹಮೀದಾರನ್ನು ವಿವಾಹವಾದರು.

ಮರಳುಗಾಡಿನ ಅರೇಬಿಯಾದಲ್ಲಿ ಅಸ್ಥಿರತೆಯುಂಟಾದಾಗ ಮಾನವತೆಯ ಉಳಿವಿಗಾಗಿ, ಪ್ರಗತಿಗಾಗಿ, ಜನಾಂಗಗಳನ್ನು ಬೆಸೆಯುವ ಕಾರ್ಯವನ್ನು ಇಸ್ಲಾಂನ ಮಾತೆಯರಾದ, ಬಿವಿ ಖತೀಜಾ, ಫಾತಿಮಾ, ಆಮಿನಾ, ಬಡವರ ಮಾತೆಯೆನಿಸಿಕೊಂಡ ಝೈನಬ್, ಸಫಿಯಾ, ಮೈಮೂನ, ಉಮ್ಮೆಸುಲೈಮ, ಅಸ್ಮಾಬಿಂತು ಉಮೈಸ್‌ರಂತಹ ಮಹಿಳೆಯರು ಮಾಡಿದ್ದಾರೆ.

ಮಹಮ್ಮದರ ಪತ್ನಿಯಾದ ಬಿವಿ ಖತೀಜಾರವರು ಆ ಕಾಲದ ಪ್ರಮುಖ ವರ್ತಕಿಯಾಗಿದ್ದರು. ಅವರು ತಮ್ಮ ಸರಕುಗಳನ್ನು ಯಮನ್, ಸಿರಿಯಾಕ್ಕೆ ಕಳಿಸುತ್ತಿದ್ದರು. ೪೦ ವರ್ಷ ವಯಸ್ಸಿನ ಖತೀಜಾರವರು ಮುಹಮ್ಮದರನ್ನು ವಿವಾಹವಾದಾಗ ಅವರ ವಯಸ್ಸು ಕೇವಲ ೨೫ ವರ್ಷವಿತ್ತು. ಪೈಗಂಬರರು ಹೀರಾ ಎಂಬ ಗುಹೆಯಲ್ಲಿ ಏಕಾಂಗಿಯಾಗಿ ಧ್ಯಾನಾಸಕ್ತರಾಗಿರುವಾಗ ಜಿಬ್ರಿಲ್ ಪ್ರತ್ಯಕ್ಷನಾಗುತ್ತಾನೆ. ಹೆದರಿದ ಮುಹಮ್ಮದರು ಖದೀಜಾರ ಬಳಿ ನಡುಗುತ್ತ ಬಂದಾಗ ಅವರಿಗೆ ಸಾಂತ್ವನ ಹೇಳಿ, ಕಂಬಳಿ ಹೊದಿಸಿ ಹೇಳುತ್ತಾರೆ. "ನೀವು ಸತ್ಯ ಹೇಳುತ್ತಿದ್ದಿರಿ. ಕುಟುಂಬ ಸೌಹಾರ್ದ ಬೆಳೆಸುತ್ತಿದ್ದಿರಿ. ಅತಿಥಿಗಳನ್ನು ಸತ್ಕರಿಸುತ್ತಿದ್ದಿರಿ. ನಿರ್ಗತಿಕರಿಗೆ ನೆರವಾಗುತ್ತಿದ್ದಿರಿ. ಆದ್ದರಿಂದ ಅಲ್ಲಾಹು ನಿಮಗೆ ನೆರವಾಗುವನು" ಎಂದು ಹೇಳಿ ಮಹಮ್ಮದರ ಭಯವನ್ನು ದೂರ ಮಾಡಿದವಳು ಒಬ್ಬ ಮಹಿಳೆಯಾಗಿದ್ದಾಳೆ. ಬಿವಿ ಖತೀಜಾ ಅಂದಿನ ಅರೇಬಿಯಾದ ಪ್ರಥಮ ಮುಸ್ಲಿಂ ಮಹಿಳೆಯೂ ಆಗಿದ್ದಾರೆ.

ಶೌರ್ಯ, ಸಾಹಸ, ಯುದ್ಧ, ಹಿಂಸೆ, ಕ್ರೌರ್ಯಗಳೆಲ್ಲ ಗಂಡಸಿನ ಸುತ್ತ ಹೆಣೆದ ಶಬ್ದಗಳಾದರೆ-ತಾಯಿ ತ್ಯಾಗ, ಬಲಿದಾನದ ಜೀವರಕ್ಷಕ ಕವಚವಾಗಿದ್ದಾಳೆ.

ಇಸ್ಲಾಂ ಅಮ್ಮನ ಪೂರ್ವಾಗ್ರಹಗಳು :

ಪೈಗಂಬರರು ಹೇಳಿದ ಇಸ್ಲಾಂ ಸಂಸ್ಕೃತಿಯ ತಾಯಿಯೇ ಬೇರೆ-ತಾಲಿಬಾನಿಗಳು ಕೊಡುವ ತಾಯಿಯೆಂಬ ಮೂಟೆಯ ಕಲ್ಪನೆಯೇ ಬೇರೆ. ಧರ್ಮಯುದ್ಧದ ಹೆಸರಿನಲ್ಲಿ ಸ್ತ್ರೀಯರ ಮೇಲೆ ನಿರ್ಬಂಧ ಹೇರಿ ಅವರ ಬದುಕುವ ಹಕ್ಕನ್ನು ಕಿತ್ತುಕೊಳ್ಳಲು ತಾಲಿಬಾನಿಗಳಿಗೆ ಯಾವ ಅಧಿಕಾರವೂ ಇಲ್ಲ. ಭಯಂಕರ ಯುದ್ಧಗಳನ್ನೆದುರಿಸಿದ ಇಸ್ಲಾಮಿಕ್ ರಾಷ್ಟ್ರಗಳ ಅಮ್ಮನ ಹೃದಯದಲ್ಲಿ ನೋವು ಮಡುಗಟ್ಟಿ ನಿಂತಿದೆ.

ಕ್ಯಾಲಿಫೋರ್ನಿಯಾದ ಶಾಲೆಯಲ್ಲಿ ೧೫ ವರ್ಷದ ಬಾಲಕ ತನ್ನ ಸಹಪಾಠಿಗೆ ಗುಂಡಿಟ್ಟು ಕೊಲ್ಲುತ್ತಾನೆ. ಭಾರತದಲ್ಲಿ ಕೋಮು ಗಲಭೆಗಳಲ್ಲಿ ನಿರಪರಾಧಿ ಲಕ್ಷಾಂತರ ಜನ ಜೀವ ಕಳೆದುಕೊಳ್ಳುತ್ತಾರೆ. ಅಫಘಾನಿನಲ್ಲಿ ಶಾಂತಮೂರ್ತಿ ಬುದ್ಧನ ವಿಗ್ರಹವನ್ನು ತಾಲಿಬಾನಿಗಳು ಸ್ಫೋಟಿಸುತ್ತಾರೆ. ಅಮೆರಿಕಾದ ಸರ್ವಾಧಿಕಾರಿ ಪುರಾತನ ನಾಗರೀಕತೆಯ ಬಾಗ್ದಾದಿನ ಮೇಲೆ ಬಾಂಬ್ ದಾಳಿ ನಡೆಸುತ್ತಾನೆ. ಯೂರೋಪಿನಲ್ಲಿ ರೋಗಕ್ಕೆ ತುತ್ತಾದ ಸಾವಿರಾರು ದನಗಳನ್ನು ಸಾಮೂಹಿಕವಾಗಿ ಸುಡುತ್ತಾರೆ-ಮಾನವನ ವಿಕೃತ ಬುದ್ಧಿಯಿಂದ ಸಮಸ್ತ ಜೀವನಕ್ರಮ, ನಿಸರ್ಗವನ್ನು ನಿಯಂತ್ರಿಸುತ್ತಿದ್ದೇವೆ. ಇದು ಸಾಮಾಜಿಕ, ಜೈವಿಕ ವಿಘಟನೆಗಳಿಗೆ ತುತ್ತಾಗುತ್ತಿದೆ.

'ಅಮ್ಮ'ನ ನೋವು ಪ್ರಾದೇಶಿಕ ಭಿನ್ನತೆಗಳಿಗನುಗುಣವಾಗಿ ಭಿನ್ನಭಿನ್ನವಾಗಿವೆ. ಇರಾಕಿನಲ್ಲಿ ಯುದ್ಧ ನಡೆದಾಗ ಇರಾಕಿನ ಮುಸ್ಲಿಂ ತಾಯಿ, ಭಾರತದ ಇಸ್ಲಾಂ ತಾಯಿಯ ನೋವುಗಳು ಒಂದೇ ಆಗಿರುವುದಕ್ಕೆ ಸಾಧ್ಯವಿಲ್ಲ. ಅದೇ ರೀತಿ ಅಫಘಾನಿಸ್ಥಾನದಲ್ಲಿ ಯುದ್ಧ ನಡೆಯುವಾಗ ಅಫಘಾನಿಸ್ತಾನದ

ಮುಸ್ಲಿಂ ತಾಯಿಯು ನೋವು ಪಾಕಿಸ್ತಾನದ ತಾಯಿಯ ನೋವಿಗಿಂತ ಭಿನ್ನವಾಗಿದೆ. ಭಾರತದ ಗುಜರಾತಿನ ಗೋದ್ರಾದ ಇಸ್ಲಾಂ ತಾಯಿ ಅನುಭವಿಸಿದ ನೋವು ಅಪಮಾನಗಳ ತೀವ್ರತೆ-ಕರ್ನಾಟಕದ ಮುಸ್ಲಿಂ ಮಾತೆಯದಾಗಿರುವುದಿಲ್ಲ. ಅಮ್ಮನ ನೋವುಗಳು ಪ್ರಾದೇಶಿಕ ಭಿನ್ನತೆಯನ್ನೊಳಗೊಂಡಿದೆ. ಸಮುದಾಯಗಳ, ಜನಾಂಗಗಳ, ಬುಡಕಟ್ಟುಗಳ ಸಂಕಟ, ನೋವುಗಳನ್ನು ಅಳೆಯುವಾಗ, ಅದರಲ್ಲೂ ಇಸ್ಲಾಂ ಸಂಸ್ಕೃತಿ ಮೂಲದ ಮಾತೆಯೊಬ್ಬಳ ನೋವುಗಳು ದೇಶ, ಭಾಷೆ, ಗಡಿ, ಗೆರೆಗಳನ್ನು ದಾಟಿ ಜಾಗತಿಕ ಅಮ್ಮನಿಗೆ ಎದುರಾಗುತ್ತವೆ.

ಧರ್ಮದ ಪರಿಧಿಯ ಒಳಗೆ ಇಸ್ಲಾಂ ತಾಯಿಯನ್ನು ಪರಿಗಣಿಸಿದರೆ ಅವರ ಒಳಗೆಯೇ ಹತ್ತಾರು ಬಗೆಯ ಸಮುದಾಯಗಳು, ಜನಾಂಗಗಳು, ಸಮಾಜ,ಉಪಸಮಾಜಗಳಿವೆ. ಭಿನ್ನ ಭಿನ್ನ ಯುದ್ಧದ ಪರಿಣಾಮಗಳಿವೆ. ಆದರೆ ಆ ಭಿನ್ನತೆಯನ್ನು ಮೀರಿ ಪರಸ್ಪರ ಅವಳ ಒಳಸಂಬಂಧಗಳು, ಒಳಭೇದಗಳ ಪರಿಣಾಮವಾಗಿ ಯುದ್ಧವಿರೋಧಿ ಇಸ್ಲಾಂನ ತಾಯಿಯ ಧೋರಣೆಗಳು, ಹೆಚ್ಚು ಸ್ಫುಟಗೊಳ್ಳುತ್ತವೆ. ಒಬ್ಬ ಹಿಂದೂ ತಾಯಿಯ ಹಿಂದುತ್ವಕ್ಕಿಂತ ಒಬ್ಬ ಮುಸ್ಲಿಂ ತಾಯಿಯ ಇಸ್ಲಾಮೀತನಗಳು ಅವಳ ಮೇಲೆ ಘೋರ, ದಾರುಣ ಪರಿಣಾಮ ಬೀರಿವೆ. ಅವಳ ನೆಲದಲ್ಲಿರುವ ಅನಿಲ, ತೈಲ ನಿಕ್ಷೇಪಗಳೇ ಅವಳ ಕುಡಿಗಳನ್ನು ಕೊನೆಯಾಗಿಸಲು ನೆಪಗಳಾಗಿರುವುದು ದುರಂತವಾಗಿದೆ.

ಇಸ್ಲಾಂನ ತಾಯಿ ನಮ್ಮ ರಾಜಸತ್ತೆ ನೀಡುವ ಬುರ್ಖಾದ ಬಂಧಿಯಾಗಿ, ಅಸಹಾಯಕಳೂ, ಅಬಲೆಯು ಆಗಿ ತೋರಿಸುವ ರೂಪ ಅವಳದಲ್ಲ. ಸಂದರ್ಭ ಬಂದಾಗ ತಮ್ಮ ಕುಟುಂಬದ ರಕ್ಷಣೆಗಾಗಿ ಶಿಶುಮಕ್ಕಳ ಬೆನ್ನಿಗೆ ಕಟ್ಟಿಕೊಂಡು ಕೈಯಲ್ಲಿ ಕೋವಿ ಹಿಡಿಯುವಷ್ಟು ಎದೆಗಾರಿಕೆಯಿರುವ ಈ ಅಮ್ಮ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಯಜಮಾನಿಕೆ ವಹಿಸಿಕೊಳ್ಳುವ ಬಲಿಷ್ಟ ರಾಷ್ಟ್ರಗಳನ್ನು ಎದುರಿಸಿ ನಿಲ್ಲುವ ಎದೆಗಾರಿಕೆಯಿದ್ದರೂ ಸಾಮರ್ಥ್ಯ ಹೆಚ್ಚಿಸಿಕೊಳ್ಳಬೇಕಿದೆ.

ಇಸ್ಲಾಂ ಸಂಸ್ಕೃತಿಯ ಅಮ್ಮ ಹೆಚ್ಚಾಗಿ ಅಸಂಘಟಿತಳಾಗಿದ್ದಾಳೆ. ಅಸಹಾಯಕಳಾಗಿದ್ದಾಳೆ. ಯುದ್ಧಕಾಲದ ಅವಳ ನೋವುಗಳು ಶಬ್ದಕ್ಕೆ ನಿಲುಕಲಾರವು. ಅವಳ ಕರುಳು ಸುಟ್ಟು ಹೊರಡುವ ಆರ್ತನಾದಗಳು ಚರಿತ್ರೆಯಲ್ಲಿ ದಾಖಲಾಗದೆ ಮೌನ ಸಂಕಟಗಳಾಗುತ್ತಿವೆ. ಅವಳ ಕರುಳ ಸಂಕಟಕ್ಕೆ ಕ್ವಚಿತ್ತಾಗಿ ಮಾತು ದಾಖಲಿಸಲಾಗಿದೆ. ಅವಳ ಸಾಗರದಷ್ಟು ಸಂಕಟಗಳಲ್ಲಿ ದಾಖಲಾಗಿದ್ದು ಸಾಸಿವೆಯಷ್ಟು ಇಲ್ಲ.

ಇಸ್ಲಾಂ ಸಂಸ್ಕೃತಿ ಕಟ್ಟಿದ ತಾಯಿಯನ್ನು ವಿಶ್ಲೇಷಿಸುವಾಗ ಅವಳ ಧಾರ್ಮಿಕ ತತ್ವಗಳು ವಿಶ್ಲೇಷಣೆಗೊಳಪಡುತ್ತದೆ. ಧಾರ್ಮಿಕ ಕಟ್ಟಳೆಗಳು ವಿಮರ್ಶೆಗೊಳಪಡುತ್ತವೆ. ಒಬ್ಬ ಭಾರತೀಯ ಮುಸ್ಲಿಂ ಸಮುದಾಯದ ತಾಯಿ ಎದುರಿಸುತ್ತಿರುವ ಪೂರ್ವಾಗ್ರಹಗಳೇ ಬೇರೆ. ಅಫಘಾನಿಸ್ತಾನದ ಮಾತೆಯರು ಎದುರಿಸುತ್ತಿರುವ ಪೂರ್ವಾಗ್ರಹಗಳೇ ಬೇರೆ. ಭಾರತೀಯ ಮೂಲದ ಮುಸ್ಲಿಂ ತಾಯಂದಿರು ಕೋಮುವಾದದ ಬೆಂಕಿಯಲ್ಲಿ ಬೇಯುತ್ತಿದ್ದಾರೆ. ಪರಕೀಯರೆಂದು ಜರಿಯುವ ಸಂಶಯದ ದೃಷ್ಟಿಗಳನ್ನೆದುರಿಸುತ್ತಿದ್ದಾರೆ. ಅನಾಥಪ್ರಜ್ಞೆ, ಸಂಶಯದ ದೃಷ್ಟಿಗಳನ್ನೆದುರಿಸಬೇಕಾದ, ಪರಕೀಯತೆಯ ನೋವು ಇರಾಕಿನ ತಾಯಿಗಿಲ್ಲ.

ಅದೇ ಸಂದರ್ಭದಲ್ಲಿ ಇರಾಕಿನ ತಾಯಿ ಎದುರಿಸುತ್ತಿರುವ ಯುದ್ಧಗಳು, ಸಂಕಟಗಳು, ಜೀವಭಯದ ಬಾಂಬುಗಳ ಹೆದರಿಕೆ ಭಾರತೀಯ ಮುಸ್ಲಿಂ ಅವ್ವನಿಗೆ ಇಲ್ಲ. ಇಂದಿನ ಇಸ್ಲಾಂ ವರ್ತಮಾನ ಅತ್ಯಂತ ಕ್ರೂರ ಮತ್ತು ಭಯಂಕರ ದಾಳಿಗಳನ್ನೆದುರಿಸಬೇಕಾಗಿದೆ. ಮೇರೆ ಮೀರಿದ

ಕ್ರೌರ್ಯಕ್ಕೆ ಕಾಗದದ ಹುಲಿಗಳ ತಂತ್ರಗಾರಿಕೆಯ ಒಪ್ಪಂದಗಳಿಗೆ, ಲೂಟಿ ಮಾಡುವ ಹುನ್ನಾರಗಳಿಗೆ ವಿಶ್ವದ ಮಾತೆಯರೇ ಒಂದು ದಿನ ಗೋರಿ ಕಟ್ಟುತ್ತಾರೆ; ಚರಿತ್ರೆಯಲ್ಲಿ ದಾಖಲಾಗುತ್ತಾರೆ.

ಅನಕ್ಷರಸ್ಥ ಮ್ಯಾಗ್ಸಿಂಗಾರ್ಕಿಯ ಎಚ್ಚೆತ್ತ 'ತಾಯಿ' ಭಾಷೆ, ಗಡಿ, ಲಿಂಗ, ಜಾತಿಯನ್ನು ಮೆಟ್ಟಿ ನಿಲ್ಲುವಂತೆ ವಿಶ್ವದ ತಾಯಂದಿರು ನಿಲ್ಲುತ್ತಾರೆ. ತಮ್ಮ ಮಕ್ಕಳಿಗಾಗಿ ಸುಭದ್ರ ತಾಣವನ್ನು ಹುಡುಕುತ್ತಾರೆ. ಕತ್ತಲ ಭೂಮಂಡಲದಲ್ಲಿ ಬೆಳಕಿನ ದೀಪ ಹಚ್ಚುತ್ತಾರೆ. ಉಡಿಯಲ್ಲಿ ಕಂದಮ್ಮಗಳ ತಟ್ಟಿ ಜೋಗುಳ ಹಾಡಿ ಮಲಗಿಸುತ್ತಾರೆ. ಬಾಳ ಬೆಳಗಿಸುವ, ಜೀವ ಸೆಲೆಯ ಭೂಮಿಯನ್ನು ಪ್ರೀತಿಸುವ ಧರಿತ್ರಿಯ ಪ್ರೀತಿಯ ಕಲೆ ಕರಗತವಾಗಬೇಕಿದೆ. ಅಮಾನವೀಯ ದಾಳಿಗಳ ವಿರುದ್ಧ ಅಮ್ಮನ ಆಕ್ರೋಶವಿದೆ. ಒಂದು ನೂರು ವರ್ಷಗಳ ಹಿಂದೆಯೇ ಲೆನಿನ್ನರು ಹೇಳಿದ್ದರು-"ಬಂಡವಾಳಶಾಹಿ ಎಂದರೆ ಯುದ್ಧ" ಎಂದು. 'ಸ್ನೇಹ ಸೌಹಾರ್ದ, ಅನ್ಯಧರ್ಮೀಯರಲ್ಲಿ ಮಾನವೀಯ ಅನುಕಂಪಗಳನ್ನು ತೋರುವುದೇ ಇಸ್ಲಾಂನ ಸಂದೇಶ' ಎಂದು ಹದೀಸ್‌ನಲ್ಲಿ ಹೇಳಿದೆ. "ನೆರೆಯವನ ಹಸಿವಿರುವಾಗ, ಒಬ್ಬ ನೈಜ ಮುಸ್ಲಿಂ ಹೊಟ್ಟೆ ತುಂಬಾ ತಿನ್ನಬಾರದು" ಎಂದು ಹೇಳಿದ ಇಸ್ಲಾಂನ ಹದೀಸ್ ಮನುಕುಲದ ಮಿತ್ರನಾಗುತ್ತದೆ.

ಮುಸ್ಲಿಂ ಸಮುದಾಯದ ಮಾತೆಯರು ಇಂದು ಜಗತ್ತಿನಾದ್ಯಂತ ನಿಶ್ಶಸ್ತ್ರೀಕರಣವನ್ನು ಬಯಸುತ್ತಿದ್ದಾರೆ. ಏಕೆಂದರೆ ಮಾನವನ, ನೈಸರ್ಗಿಕ ನಿರ್ಮಿತಿಗಳನ್ನೆಲ್ಲಾ ನಾಶ ಮಾಡುವ ವಿಕೃತ ಶಕ್ತಿ ಯುದ್ಧವಾಗಿದೆ.ಅಣ್ವಸ್ತ್ರ ಹಿಡಿದುಕೊಂಡು ಜಗತ್ತನ್ನು ಹೆದರಿಸುವುದು ತರವಲ್ಲ. ಕ್ರಿಸ್ತ, ಪೈಗಂಬರ್, ಗಾಂಧಿ, ಲೆನಿನ್, ಹೊ ಚಿ ಮಿನ್‌ರಂತೆ ಅತ್ಯಂತ ಸರಳತೆಯನ್ನು ಜಗತ್ತು ರೂಢಿಸಿಕೊಂಡಾಗ ಲೋಕದಲ್ಲಿ ಶಾಂತಿ ನೆಲೆಸುತ್ತದೆ. ಯುದ್ಧ ಪ್ರೀತಿಸುವವರು ಮಾನವ ಪ್ರೇಮಿಯಲ್ಲ. ಯುದ್ಧ ಪ್ರೀತಿಸದವರು ದೇಶದ್ರೋಹಿಗಳೂ ಅಲ್ಲ. ಆದರೆ ಯುದ್ಧ ಮಾಡುವುದೊಂದೇ ರಾಷ್ಟ್ರಪ್ರೇಮವಲ್ಲ. ವಿಶ್ವದ ಇತಿಹಾಸದಲ್ಲಿ ಇದುವರೆಗೂ ಸುಮಾರು ೧೫,೦೦೦ ಯುದ್ಧಗಳಾಗಿವೆ. ಈ ಭಯಂಕರ ಯುದ್ಧಗಳ ಮಧ್ಯೆ ಶಾಂತಿ ಸ್ಥಾಪಿಸಲು ಜಗತ್ತಿನ ತಾಯಂದಿರು ಭಾರಿ ಬೆಲೆ ತೆತ್ತಿದ್ದಾರೆ. ಅಮೆರಿಕವು ಇಡೀ ವಿಶ್ವವನ್ನು ಒಂದು ನೂರು ಸಲ ಸುಟ್ಟು ಬಿಡುವಷ್ಟು ರಾಸಾಯನಿಕ, ಜೈವಿಕ (ಪ್ಲೇಗ್, ಸಾರ್ಸ್, ಎಬೋಲಾ ಇತ್ಯಾದಿ). ಹಾಗೂ ಅಣು ಅಸ್ತ್ರಗಳನ್ನು ಹೊಂದಿರುವ ದೇಶವಾಗಿದೆ. ಈ ಅಗಾದ ಪ್ರಮಾಣದ ಅಸ್ತ್ರಗಳನ್ನು ಹೊಂದುವುದು ಅಪರಾಧವಾಗಿದೆ. ಪಾಕಿಸ್ತಾನಿ ಕವಿ ಸರಸುಮ್ ಸಮೀವಾಲೆ ಎಂಬ ಕವಿ ತನ್ನ 'ಹಿಂದುಸ್ತಾನಿ ಪಾಕಿಸ್ತಾನಿ' ಕವಿತೆಯಲ್ಲಿ ಹೇಳುತ್ತಾನೆ.

'ಬಾಂಬ್ ತಾಜಮಹಲ್ ಸೃಷ್ಟಿಸುವುದಿಲ್ಲ
ಕುತುಬ್ ಮಿನಾರ್ ಕಟ್ಟುವುದಿಲ್ಲ
ಚಾರಮಿನಾರ್ ಆಗಿ ಹೈದ್ರಾಬಾದಿನಲಿ ನಿಲ್ಲುವುದಿಲ್ಲ
ಬಿಸ್ಮಿಲ್ಲಾ ಖಾನರ ಶಹನಾಯಿಯಾಗಿ
ವಾತಾವರಣವನ್ನು ತುಂಬುವುದಿಲ್ಲ
ಬಾಂಬ್ ಬರಿ ಬೂದಿಯನ್ನು
ನಿರ್ಮಿಸುವ ಒಂದು ಶಕ್ತಿ"

ಸಮಸ್ತ ಜೀವರಾಶಿಯನ್ನು ಕೊಂದು ಪೃಥ್ವಿಯನ್ನೂ, ನಿಸರ್ಗವನ್ನೂ ನಾಶಮಾಡುವ ಜೀವ ವಿರೋಧಿ ಯುದ್ಧಗಳನ್ನು 'ಅಮ್ಮ' ತನ್ನೆಲ್ಲ ಶಕ್ತಿ ಮೀರಿ ವಿರೋಧಿಸುತ್ತಾಳೆ. ಏಕೆಂದರೆ ಅವಳು

ಸೃಷ್ಟಿಯನ್ನೂ, ಬದುಕನ್ನೂ ಪ್ರೀತಿಸುತ್ತಾಳೆ. ತನ್ನ ಮಡಿಲಲ್ಲಿ ಜೀವವನ್ನು ರಕ್ಷಿಸಿದ್ದಾಳೆ. ಪೋಷಿಸಿದ್ದಾಳೆ. ಸಂಸ್ಕೃತಿಯನ್ನು ಕಟ್ಟಿದ್ದಾಳೆ.

ಕೆ. ಷರೀಫಾ, ಎ.ಪಿ.ಎಂ.ಸಿ., ಹರಿಹರ - ೫೭೭ ೬೦೧, ದಾವಣಗೆರೆ ಜಿಲ್ಲೆ
ದೂರವಾಣಿ : ೦೮೧೯೨ - ೨೪೩೧೩೮ (ಮನೆ), ೨೪೧೩೧೭ (ಕಚೇರಿ)

ಮುಗ್ಧರ ಮೇಲೆ ಗುಂಡಿನ ಮಳೆ

ಬಿಳುಮನೆ ರಾಮದಾಸ್

ನಾನು ಚಿಕ್ಕವನಿದ್ದಾಗ ಶಾಲೆಗೆ ಬೇಸಿಗೆ ರಜ ಬಂದಿತೆಂದರೆ ನಮ್ಮ ತಾಯಿಯವರು ಮಕ್ಕಳನ್ನು ಕಟ್ಟಿಕೊಂಡು ಅವರ ಚಿಕ್ಕಮ್ಮನ ಊರು ಕುಣಿಗದ್ದೆಗೆ ಹೋಗಿಬಿಡುತ್ತಿದ್ದರು. ಕುಣಿಗದ್ದೆಯು ಶಾಂತವೇರಿ ಗೋಪಾಲಗೌಡರ ಊರು. ಆರಗ ಪೇಟೆಯ ಹೊರವಲಯದಲ್ಲಿ ಇದ್ದಿತು. ಗದ್ದೆಯಾಚೆಗೆ ಸಾಲಾಗಿದ್ದ ಮನೆಗಳಲ್ಲಿ ಅಜ್ಜಿಯ ಮನೆಯು ಒಂದು. ಹಳ್ಳಿಯ ಹೆಸರೆ ಹೇಳುವಂತೆ ಗದ್ದೆಗಳಲ್ಲಿ ದೊಡ್ಡ ಗುಣಿಗಳು ಇದ್ದು ಮಳೆಗಾಲದಲ್ಲಿ ಅಲ್ಲಿ ನೀರು ಶೇಖರಣೆಯಾಗಿ ಹರಳು ಕುರುಡ ಸುರಗಿ ಮುಂತಾದ ದೊಡ್ಡ ದೊಡ್ಡ ಮೀನುಗಳು ಅಲ್ಲಿ ಸೇರಿಕೊಳ್ಳುತ್ತಿದ್ದವು. ಮನೆಗೆ ನೆಂಟರು ಬಂದಾಗ ಸಾಕಿದ ಕೋಳಿಗಳನ್ನು ಹಿಡಿದು ಸಾರು ಮಾಡುವಂತೆಯೇ ಮೀನುಗಳನ್ನು ಮಾವ ಹಿಡಿದು ತರುತ್ತಿದ್ದರು. ನಾನೂ ಅವರೊಂದಿಗೆ ಹೋಗುತ್ತಿದ್ದೆ. ನನಗೆ ಕುಣಿಗದ್ದೆ ಹಳ್ಳಿಗೆ ಹೋಗುವುದೆಂದರೆ ಎಲ್ಲಿಲ್ಲದ ಹಿಗ್ಗು. ಅವರ ಮನೆಮುಂದಿನ ವಿಸ್ತಾರವಾದ ಗದ್ದೆ ಬಯಲು, ಮನೆ ಹಿಂದೆ ಸ್ವಲ್ಪ ದೂರದಲ್ಲಿ ಕಾಡಿನ ಮಧ್ಯೆ ಇದ್ದ ಅವರ ಅಡಿಕೆತೋಟ, ಅವರ ಮನೆಯಲ್ಲಿದ್ದ ಅಧಿಕ ಸಂಖ್ಯೆಯ ಜಾನುವಾರುಗಳನ್ನು ನೋಡುವುದೆಂದರೆ ನನಗೆ ಖುಷಿಯೋ ಖುಷಿ. ಮಾವನ ಚಿಕ್ಕಪ್ಪನ ಮಕ್ಕಳು ನನ್ನ ಓರಗೆಯವರಾದ್ದರಿಂದ ನನ್ನನ್ನು ವಿದೇಶದಿಂದ ಬಂದವರನ್ನು ನೋಡುವಂತೆ ಅವರು ನೋಡುತ್ತಿದ್ದರು. ನಾನು ಕೂಡ ಸ್ವಲ್ಪ ಹಾಗೆಯೆ ನಟಿಸುತ್ತಿದ್ದೆ. ಅನಕ್ಷರಸ್ಥರಾದ ಅವರಿಗೆ ನನಗೆ ಏನು ತೋರಿಸಿದರೂ ಸಾಲದು. ನನ್ನೊಂದಿಗೆ ಎಷ್ಟು ಮಾತನಾಡಿದರೂ ಸಾಲದು. ಅದು ಖರ್ಚಾಗದ ಬುತ್ತಿ. ಆ ಹಳ್ಳಿಯ ವಾತಾವರಣ ನನಗೆ ತುಂಬಾ ಹಿಡಿಸುತ್ತಿತ್ತು. ಮಳೆಗಾಲದಲ್ಲಿ ಮನೆ ಮುಂದಿನ ಗದ್ದೆಯಲ್ಲಿ ಹಸಿರಾಗಿ ನಳನಳಿಸುತ್ತ ತೂರಾಡುವ ಭತ್ತದ ಸಸಿಗಳನ್ನು ನೋಡುವುದೆಂದರೆ ನನಗೆ ಅತ್ಯಾಸಕ್ತಿ. ಎಷ್ಟೋ ಸಾರಿ ನಾನು ಭತ್ತದ ಸಸಿಗಳಲ್ಲಿ ಎವೆಯಿಕ್ಕದೆ ನೋಡುತ್ತ ನಿಲ್ಲುವುದನ್ನು ನೋಡಿದ ಅಜ್ಜಯ್ಯ ನಮ್ಮ ತಾಯಿಯೊಂದಿಗೆ "ನಿನ್ನ ಮಗನಿಗೆ ಹಸಿರು ಗದ್ದೆ ನೋಡಾದಂದ್ರೆ ಬಾಳ ಕುಸಿ. ಕರದ್ರು ಅವನಿಗೆ ಕಿವಿ ಕೇಳಾದಿಲ್ಲ" ಅನ್ನುತ್ತಿದ್ದರು. ಅವರು ಹಾಗೆ ಹೇಳಿದಾಗ ನಾನು ನಾಚಿ ನೀರಾಗುತ್ತಿದ್ದೆ. ಅಜ್ಜಿ ಮನೆ ಅಂಗಳದಲ್ಲಿ ಒಂದು ಕಸೆ ಮಾವಿನ ಮರವಿತ್ತು. ಅದು ಕಾಯಿ ಬಿಟ್ಟಾಗ ಅಜ್ಜಿ ಗಾಡಿ ಕಟ್ಟಿಸಿಕೊಂಡು ಬಂದು ಮೇಗರವಳ್ಳಿಯ ನಮ್ಮ ಮನೆಗು ಅವರ ತಮ್ಮನ ಮನೆಗು ಮಾವಿನಕಾಯಿ ತಂದುಕೊಡುತ್ತಿದ್ದಳು.

ಪೇಟೆಯಲ್ಲಿ ಮಾರುವಮಾವಿನ ಹಣ್ಣಿನಂತೆ ಅಜ್ಜಿ ತಂದು ಕೊಡುವ ಮಾವಿನಕಾಯಿಗಳು ದೊಡ್ಡದಾಗಿದ್ದು ಅವು ಹಣ್ಣಾದಾಗ ಅದರ ಬಣ್ಣಗಳು ಅತ್ಯಾಕರ್ಷಕವಾಗಿರುತ್ತಿದ್ದವು. ನಾನು ಹೈಸ್ಕೂಲು ಮುಗಿಸಿದಾಗ ಅಜ್ಜಿಯನ್ನು ನೋಡಲು ಒಬ್ಬನೆ ಹೋದಾಗ ಮಾವಿನ ಮರವನ್ನು ಕಡಿಸಿ ಹಾಕಿದ್ದರು. ಅದು ನನಗೆ ಬಹಳ ಯಾತನೆಯನ್ನು ಕೊಟ್ಟಿತು. ಅದೇಕೆ ಮಾವಿನಮರವನ್ನು ಕಡಿಸಿ ಹಾಕಿದಿರಿ ಎಂದು ಕೇಳಿದಾಗ ಅಜ್ಜಿ ಕೊಟ್ಟ ವಿವರಣೆ ನನಗೆ ಸಮಾಧಾನವನ್ನು ಕೊಟ್ಟರೂ ದಾಯಾದಿಗಳು ಮಾವಿನಕಾಯನ್ನು ಹಂಚಿಕೊಳ್ಳಬಹುದಿತ್ತು ಅನ್ನಿಸಿತ್ತು. ಅಜ್ಜಿ ಹೇಳಿದ್ದೇನೆಂದರೆ ಮಾವಿನ ಕಾಯನ್ನು ರಾತ್ರಿ ಹೊತ್ತಿನಲ್ಲಿ ದಾಯಾದಿಗಳು ಕದಿಯುತ್ತಿದ್ದರಂತೆ. ಅದರಿಂದಾಗಿ ಮಾವನಿಗೂ ದಾಯಾದಿಗಳಿಗೂ ಜಗಳವಾಗುತ್ತಿತ್ತಂತೆ. ಆ ರಣರಂಪವನ್ನು ತಪ್ಪಿಸಲು ಅಜ್ಜಯ್ಯ ಮಾವಿನ ಮರವನ್ನು ಕಡಿಸಿಹಾಕಿದರಂತೆ. ಅಲ್ಲಿಗೆ ದಾಯಾದಿ ಕಲಹ ನಿಂತುಹೋಯಿತಂತೆ. ಮಾವಿನ ಮರವೆ ದಾಯಾದಿ ಕಲಹಕ್ಕೆ ಕಾರಣವಾಯಿತೆ ? ದಾಯಾದಿಗಳಿಗೆ ಮಾವಿನಕಾಯನ್ನು ಹಂಚಿಕೊಟ್ಟಿದ್ದರೆ ಮಾವಿನಮರವು ಉಳಿಯುತ್ತಿತ್ತು. ಎಲ್ಲರೂ ಹಣ್ಣು ತಿನ್ನಬಹುದಿತ್ತಲ್ಲ ಎಂಬ ರಾಜಿ ಸೂತ್ರವನ್ನು ನಾನು ಹೇಳಿದೆ. ಅಜ್ಜಯ್ಯ 'ನಿನ್ನ ಮಾತು ವಪ್ಪಿದೆ ವಪ್ಪಿದೆ" ಎಂದರು. ಅಜ್ಜಿ ನನ್ನ ಮಾತನ್ನು ಒಪ್ಪದೆ 'ನೀನೊಬ್ಬ ನಮ್ಮ ವಂಸದಾಗೆ ಧರ್ಮರಾಯ. ನಿನ್ನಂತವನನ್ನು ಹೈಕೋರ್ಲ್ಟ್ ಜಡ್ಜಿ ಮಾಡಬೇಕು' ಎಂದು ನನಗೆ ಛೀಮಾರಿ ಹಾಕಿದಳು.

ಒಂದು ಸಾರಿ ನಾನು ನಮ್ಮ ತಾಯಿಯೊಂದಿಗೆ ಅಜ್ಜಿ ಮನೆಗೆ ಹೋದಾಗ ಇನ್ನೂ ಮಳೆಗಾಲ ಶುರುವಾಗಿರಲಿಲ್ಲ. ಬೆಚ್ಚ ಬೇಸಿಗೆಯ ಕಾಲ. ಒಂದೆರಡು ದಿನ ನಾನು ಮಾವನ, ಚಿಕ್ಕಪ್ಪನ ಮಕ್ಕಳು ಚಿನ್ನಯ್ಯ, ವೆಂಕಟಪ್ಪ, ರಾಮಪ್ಪರೊಂದಿಗೆ ದನ ಕಾಯುವ ನೆಪದಲ್ಲಿ ಕಾಡು ಹೊಳೆ ತಿರುಗಿದೆ. ಸಬೆವೊಡ್ಡಿ ಕಾಡುಕೋಳಿ ಚಿಟಕೋಳಿಯನ್ನು ಹಿಡಿಯಲು ನೋಡಿದೆವು. ಕೋಳಿ ಸಿಕ್ಕಿಬೀಳುವುದಿರಲಿ ಕಡ್ಡಿ ಕೂಡ ಸಟಕ್ ಎಂದಿರಲಿಲ್ಲ. ಅದರಿಂದ ನಾನು ತುಂಬಾ ಬೇಸರಗೊಂಡೆ. ಒಂದು ಶಿಕಾರಿ ಮಾಡಲಿಲ್ಲ. ಹೊಳೆ ಕೆರೆಗೆ ಬಲೆ ಹಾಕಿ ಮೀನು ಹಿಡಿಯಲಿಲ್ಲ. ಅಜ್ಜಿ ಮನೆಗೆ ಬಂದ ಎರಡನೇ ದಿನದಲ್ಲಿ ಬಹಳ ಜುಗುಪ್ಸೆಗೊಂಡೆ. ಮಾವನೊಂದಿಗೆ ನನ್ನ ದುಃಖವನ್ನು ತೋಡಿಕೊಂಡೆ. ಮಾವ ಶಿಕಾರಿ ಮಾಡುವ ಭರವಸೆ ಕೊಟ್ಟು ನನ್ನನ್ನು ಸಮಾಧಾನಗೊಳಿಸಿದರು. ಮರುದಿನ ಬೆಳಗ್ಗೆ ಅವರು ಶಿಕಾರಿ ಧಿರಿಸು ತೊಟ್ಟು ಈಡು ಸಾಮಾನಿನ ಚೀಲವನ್ನು ಹೆಗಲಾಗೆ ಹಾಕಿಕೊಂಡು ತನ್ನೊಂದಿಗೆ ಬರಲು ಹೇಳಿದರು. ಖುಷಿಯಿಂದ ಅವರೊಂದಿಗೆ ಹೋದೆ. ಕುಣೆಗದ್ದೆ ಹಳ್ಳಿಯಿಂದ ಸುಮಾರು ಎರಡು ಮೂರು ಮೈಲಿ ಕಾಡಿನಲ್ಲಿ ಹೋದೆವು. ದುರ್ಗಮವಾದ ಕಾಡು. ನಿರ್ಜನವಾದ ಪ್ರದೇಶ. ಹಕ್ಕಿಗಳದ್ದೆ ಕಾರುಬಾರು. ಕುವೆಂಪು ಅವರ 'ಇಲ್ಲಿ ಹುಗಲಿಲ್ಲ ನಿನಗೆ ಓ ಬಿಯದ. ಇದು ಪಕ್ಷಿಕಾಶಿ' ಎಂಬ ಕವನ ನೆನಪಿಗೆ ತರುವಂತಹ ವಾತಾವರಣ. ಮಾವ ಕಾಲುದಾರಿ ಬಿಟ್ಟು ಕಾಡಿನೊಳಕ್ಕೆ ನಡೆದರು. "ಕಾಲಕಡೆ ನೋಡಿಕೊಂಡು ಬಾ. ಹಾವು ಚೇಳು ಇರತಾವೆ" ಎಂದು ಎಚ್ಚರಿಕೆಯ ಮಾತು ಆಡಿದರು. ಕಾಡಿನ ಮಧ್ಯೆ ನಾನು ಬೆಳೆದವನಾದರು ಬೇರೊಂದು ಹಳ್ಳಿಯ ಕಾಡಿನಲ್ಲಿ ಏನು ಪ್ರಾಣಿಗಳಿವೆಯೊ ಎಂದು ಹೆದರಿಕೊಂಡು ಪೊದೆಗಳು ಅಲ್ಲಾಡಿದರು ದಿಗಿಲು ಬೀಳುತ್ತ ಸುತ್ತಮುತ್ತ ನೋಡುತ್ತ ಹೋದೆನು. 'ಹಮಾರ ಕುತ್ತ ಹಮಾರ ಗಲ್ಲಿಮೆ ಶೇರ್' ಎಂಬ ಗಾದೆ ನನ್ನ ನೆನಪಿಗೆ ಬಂದಿತು. ಒಂದು ಹೊತ್ತಿನಲ್ಲಿ ಮಾವನಿಗೆ ಯಾಕಾದರು ಶಿಕಾರಿ ಮಾಡಲು ದುಂಬಾಲು ಬಿದ್ದೆನೊ ಅನ್ನಿಸಿತು.

ಬಹಳ ದೂರ ಕಾಡಿನಲ್ಲಿ ನಡೆದ ಮೇಲೆ ಮಧ್ಯೆ ಒಂದು ಸಣ್ಣ ಬಯಲು ಬಂದಿತು. ತೋಟ ಗದ್ದೆ ಮಾಡಲು ಅನುಕೂಲವಾದ ಜಾಗವದು. ಮಾವ ಗಕ್ಕನೆ ನಿಂತು ಏನನ್ನೋ ನೋಡಹತ್ತಿದರು. ಬಂದೂಕನ್ನು ನನ್ನ ಕೈಗೆ ಕೊಟ್ಟು ಬೀಡಿ ಹಚ್ಚಿಕೊಂಡು "ಎದುರಿಗೆ ದೂರದಲ್ಲಿ ಒಂದು ಗುಹೆ ಕಾಣುತದೆನೋ?" ಕೇಳಿದರು. ಬಯಲಾಚೆಗೆ ಮತ್ತೆ ಕಾಡು ಶುರುವಾಗುವಲ್ಲಿ ಒಂದು ಗುಹೆ ಕಾಣುತ್ತಿತ್ತು. ಗುಹೆಯ ಬಾಯಿ ಒಬ್ಬ ಮನುಷ್ಯ ಕೂತು ತೆವಳಿಕೊಂಡು ಒಳಗೆ ಹೋಗುವಷ್ಟಿತ್ತು. 'ಹುಂ ಕಾಣತದೆ' ಎಂದೆ. ನಾನು ಗುಹೆ ಒಳಗೆ ಹೋಗಿ ಬತ್ತಿನಿ. ಇಲ್ಲೀತಂಕ ಅದರೊಳಗೆ ಹೋದವರು ಯಾರೂ ಇಲ್ಲ. ನಾನು ಹೋಗಿ ಬತ್ತಿನಿ. ನೀನು ಇಲ್ಲೆ ನಿಂತಿರು. ಹೆದರಬ್ಯಾಡ" ಎಂದು ಅರ್ಧ ಸೇದಿದ ಬೀಡಿ ಎಸೆದು ಬಂದೂಕನ್ನು, ಈಡು ಸಾಮಾನಿನ ಚೀಲವನ್ನು ಎತ್ತಿಕೊಂಡು ಹೋದರು. ನಾನು ನೋಡುತ್ತಿದ್ದಂತೆಯೇ ಅವರು ಗುಹೆಯ ಬಾಯಲ್ಲಿ ನಿಂತು ಸ್ಥಳ ಪರಿಶೀಲನೆ ನಡೆಸಿದರು. ಪ್ರಾಣಿಗಳು ಒಳಗೆ ಹೊರಗೆ ಓಡಿಯಾಡಿದ ಹೆಜ್ಜೆ ಗುರುತು ನೋಡುತ್ತಿರಬಹುದೆಂದು ನಾನೆಣಿಸಿದೆ. ಅನಂತರ ಮಾವನ ಸವಾರಿ ಗುಹೆಯ ಬಾಯಲ್ಲಿ ಕೂತು ತೆವಳುತ್ತ ಒಳಗೆ ಸಾಗಿತು. ಆಮೇಲೆ ಅವರು ಕಾಣದಾದರು. ನಾನು ಅವರು ಹಿಂದಿರುಗಿ ಬರುವವನ್ನೆ ಕಾಯುತ್ತ ಕಾಡಿನಲ್ಲಿ ಅತ್ತಿತ್ತ ಅಲೆದಾಡಹತ್ತಿದೆ. ಗಿಳಿಗಳು ಸ್ವಚ್ಛಂದವಾಗಿ ಹಾರಾಡುತ್ತ ಮರಿಗಳಿಗೆ ಗುಟುಕು ಕೊಡುವುದನ್ನು ನೋಡಿದೆ. ಮರ ಕುಟುಕನ ಹಕ್ಕಿ ಒಣಮರವನ್ನು ಕೊರೆದು ಹುಳು ಹುಪ್ಪಟೆಯನ್ನು ತಿನ್ನುವುದನ್ನು ನೋಡಿದೆ. ಕಾಡಿನ ನಾನಾ ತೆರನಾದ ಹಕ್ಕಿಗಳು ಹಾರಾಡುವುದನ್ನು ನೋಡಿದೆ. ನಾನಾ ತೆರನಾದ ವೃಕ್ಷ ಸಂಪತ್ತನ್ನು ಕಣ್‌ತುಂಬ ನೋಡಿದೆ. ಹಳೆಯ ಮರಗಳ ವಯಸ್ಸು ಎಷ್ಟಾಗಿರಬಹುದೆಂದು ಲೆಕ್ಕಾಚಾರ ಹಾಕತೊಡಗಿದೆ. ಸಮಯ ಸರಿದದ್ದೆ ತಿಳಿಯಲಿಲ್ಲ. ಸೂರ್ಯ ನೆತ್ತಿಗೆ ಬರಹತ್ತಿದ. ಹತ್ತಿರದಲ್ಲೆಲ್ಲೊ ಕಾಡುಕೋಳಿಗಳು ಕೂಗಹತ್ತಿದವು. ಬರಬರುತ್ತ ಆ ಕೂಗು ನನ್ನ ಕಡೆಗೆ ಬರುವಂತೆ ಕಂಡಿತು. ಕೋಳಿಗಳನ್ನು ನೋಡುವಾಸೆಯಿಂದ ನಾನು ಹತ್ತಿರದ ಮರವೊಂದನೇರಿ ಕೂತೆ. ಮೊದಲು ಹುಂಜವೊಂದು ಅನಂತರ ಹ್ಯಾಟೆಗಳು ಅನಂತರ ಸಳಗಗಳು ಬಂದವು. ಎಲ್ಲವು ಬಯಲಲ್ಲಿ ಮೇವು ಹೆಕ್ಕತೊಡಗಿದವು. ಅದೇ ತಾನೆ ಗದ್ದೆ ಕೊಯಿಲು ಮುಗಿದದ್ದರಿಂದ ಗದ್ದೆ ಬಯಲಿನಲ್ಲಿ ಉದುರಿದ ಭತ್ತವನ್ನು ತಿಂದು ಕೋಳಿಗಳು ಸೊಕ್ಕಿ ಬೆಳೆದಿದ್ದವು. ಹುಂಜ ಗರ್ವಿಷ್ಠವಾಗಿ ಓಡಿಯಾಡುತ್ತ ಸುತ್ತಮುತ್ತ ಏನಾದರು ಅಪಾಯವಿದೆಯೆ ಎಂದು ನೋಡುತ್ತಿತ್ತು. ಹುಂಜದ ಬಣ್ಣ ಬಹಳ ಆಕರ್ಷಕವಾಗಿತ್ತು. ಬಹಳ ಖುಷಿಯಿಂದ ನೋಡಹತ್ತಿದೆ. ಇದಕ್ಕಿದ್ದಂತೆ ಕೋಳಿಗಳು ಪುರ್‍ರನೆ ಹಾರಿಹೋದವು. ಅದೇಕೆ ಅವು ಹಾರಿಹೋದವು ? ಎಂದು ಸುತ್ತಮುತ್ತ ನೋಡಿದೆ. ಮಾವನ ಸವಾರಿ ಗುಹೆಯಿಂದ ಹೊರಗ ಬರುತ್ತಿತ್ತು. ಕಾಡುಕೋಳಿಗಳು ಬಹಳ ಸೂಕ್ಷ್ಮ ಪಕ್ಷಿಗಳು. ಕೊಂಚ ಅಪಾಯ ಕಂಡುಬಂದರೂ ಹಾರಿಹೋಗುತ್ತವೆ.

ಮಾವನ ಸವಾರಿ ಬಯಲಿಗೆ ಬಂದೊಡನೆ ನನ್ನನ್ನು ಕಾಣದೆ 'ಕುಯ್' ಎಂದು ಕೂಗಿದರು. 'ಕುಯ್' ಎಂದು ನಾನೂ ಕೂಗಿ ಮರದಿಂದ ಇಳಿದೆ. "ಇದೇನೊ, ಹೆದರಿಕೆ ಆಯ್ತೆನೊ, ಮರ ಹತ್ತಿ ಕೂತಿದಿಯಲ್ಲ" ಎಂದರು. "ಹೌದು ಮಾರಾಯರೆ. ಕಾಣದ ಕಾಡು. ಹುಲಿ ಚಿರತೆ ಇದಿಯೊ ಅಂತ ಮರ ಹತ್ತಿ ಕೂತೆ" ಎಂದೆ. "ಹುಲಿ ಚಿರತೆ ಎಲ್ಲೂ ಅವೆ. ನೀನು ಹೆದರಕುಂತಿಯಂತ ನಾನು ಹೇಳ್ಳಿಲ್ಲ" ಎಂದು ಮಾವ ನನ್ನನ್ನು ದಿಗಿಲುಗೊಳಿಸಿದರು. "ಸತತವಾಗಿ ಎರಡು ಮೂರು ಗಂಟೆ ಕಾಡಿನಲ್ಲಿ ನನ್ನೊಬ್ಬನನ್ನೆ ಕಾಯಿಸಿದ್ದೇಕೆ, ಏನಾದರು ಶಿಕಾರಿಯಾಯಿತೆ ?" ಎಂದು ಅವರನ್ನು ಕೇಳಿದೆ. ಅವರು ಅಚ್ಚರಿಗೊಳಿಸುವ ಕತೆಯನ್ನು ವಿವರವಾಗಿ ಹೇಳಿದರು.

"ಗುಹೆ ಒಳಗೆ ಕಗ್ಗತ್ತಲೆ. ನಿಂತುಹೋಗುವಂತಿಲ್ಲ. ಕೂತು ತೆವಳಿಕೊಂಡು ಹೋದೆ. ದಾರಿ ಸುರಂಗದಂತಿತ್ತು. ಬ್ಯಾಟರಿಯ ಬೆಳಕಿನಲ್ಲಿ ದಾರಿಯಲ್ಲಿ ಒಳಗೆ ಹೊರಗೆ ಓಡಿಯಾಡಿದ ಕಾಡುಹಂದಿ ಮುಳ್ಳು ಹಂದಿಗಳ ಹೆಜ್ಜೆಗಳು. ಹಾವು ಹರಿದು ಹೋದುದಕ್ಕೆ ಸಾಕ್ಷಿಯಾಗಿ ಅಂಕುಡೊಂಕಾಗಿ ಸಾಗಿದ ನುಣುಪು ಗುರುತು. ನುಣುಪು ಗುರುತು ನೋಡಿದರೆ ಚಿಕ್ಕ ಹಾವು ಆ ಗುಹೆಯಲ್ಲಿ ವಾಸವಾಗಿದ್ದಂತೆ ಕಾಣಲಿಲ್ಲ. ಹೆಬ್ಬಾವೊ, ದಾಸರ ಹಾವೊ, ಕಾಳಿಂಗ ಹಾವೊ ಗುಹೆಯಲ್ಲಿ ಇರುವ ಸೂಚನೆ ಕಂಡುಬಂತು. ಹೆಬ್ಬಾವಿನ ಹಿಡಿತದಿಂದ ಕಾಳಿಂಗನ ವಿಷದಿಂದ ತಪ್ಪಿಸಿಕೊಳ್ಳುವುದು ಕಷ್ಟ. ಗುಹೆಯಲ್ಲಿ ಮುಂದೆ ಹೋಗುತ್ತಿದ್ದಂತೆ ಸಾವನ್ನು ನಾನು ತಬ್ಬಿಕೊಳ್ಳುತ್ತಿದ್ದೇನೆಯೆ ಎಂಬ ಭಯವಾಗಿ ಹಿಂದಿರುಗುವುದೆ ವಾಸಿ ಅನ್ನಿಸಿತು. ಏಕೆಂದರೆ ಸುರಂಗ ಅಂಕುಡೊಂಕಾಗಿ ಸಾಗುತ್ತಲೆ ಇತ್ತು. ಏನಿಲ್ಲವೆಂದರೂ ನಾನು ಒಂದು ಫರ್ಲಾಂಗ್ ದೂರ ಪಯಣಿಸಿದ್ದೆ. ಆದರೂ ಅದರ ತುದಿ ಮುಟ್ಟಲಾಗಿರಲಿಲ್ಲ. ಗಾಳಿ ಇಲ್ಲದೆ ಉಸಿರು ಕಟ್ಟುವ ವಾತಾವರಣ. ಹತ್ತಿರದಲ್ಲೆಲ್ಲೊ ಬಾವಲಿಗಳು ಇರುವ ಸೂಚನೆಯಾಗಿ ಹಕ್ಕಿಯ ವಾಸನೆ ಮೂಗಿಗೆ ಬಡಿದರೆ, ಅವು ಕಿರಿಚಿಕೊಳ್ಳುವ ಸದ್ದು ಕೇಳಿ ಬರುತ್ತಿತ್ತು. ವಾಪಸಾದರೆ ಹೇಡಿ ಎಂದು ಹಳ್ಳಿಯವರಿಂದ ಉಗಿಸಿಕೊಳ್ಳಬೇಕಿತ್ತು. ಗುಹೆಯ ತುದಿ ಮುಟ್ಟಿದರೆ ಕೊಲಂಬಸನಿಗೆ ಸಿಕ್ಕ ಮರ್ಯಾದೆ. ಮೊದಲು ಗುಹೆಯ ತುದಿ ಮುಟ್ಟಿದವನು ಎಂಬ ಗೌರವ. ಹೀಗೆಲ್ಲ ಯೋಚನೆ ಮಾಡುತ್ತ ಹೋಗುತ್ತಲೆ ಇದ್ದೆ. ಕೊನೆಗೊಮ್ಮೆ ಗುಹೆಯ ತುದಿ ಸಿಕ್ಕಿತು. ಬ್ಯಾಟರಿಯ ಬಿಟ್ಟೆ. ಬೆಳಕು ಗುಹೆಯೊಳಗಿನ ಗೋಡೆಗೆ ಬಿದ್ದಿತು. ಬೆಳಕಿಗೆ ಬಾವಲಿಗಳು ಹಾರಾಡತೊಡಗಿದವು. ದೊಡ್ಡ ಗಾತ್ರದ ಬಾವಲಿಗಳು. ಗುಹೆಯ ಒಳಗೆ ಹತ್ತು ಹದಿನೈದು ಜನ ಮಲಗಲು ಅನುಕೂಲವಾಗುವಷ್ಟು ಜಾಗ ವಿಸ್ತಾರವಾಗಿತ್ತು. ಮನುಷ್ಯ ನಿಲ್ಲುವಷ್ಟು ಎತ್ತರಕಿತ್ತು ಗುಹೆ. ಗುಹೆಯ ದಾರಿ ಮೊಟಕಾಗುವಲ್ಲಿ ಒಳಗೆ ಇಳಿಯುವಲ್ಲಿ ಇಳಿಜಾರಾದ ದಾರಿ. ಇಳಿಯುವಲ್ಲಿ ಕೂತು ಗುಹೆಯ ಒಳಗೆಲ್ಲ ಬ್ಯಾಟರಿಯ ಬೆಳಕು ಚೆಲ್ಲಿದೆ. ಆದಿಮಾನವರು ವಾಸ ಮಾಡಲಿಕ್ಕೆ ಗುಹೆ ಕೊರೆದಿದ್ದರೇನೊ. ಗೋಡೆಯನ್ನು ನಯವಾಗಿ ಕೆತ್ತಲಾಗಿತ್ತು. ಅನಿರೀಕ್ಷಿತವಾಗಿ ಬಂದ ಬೆಳಕಿನಿಂದ ಬಾವಲಿಗಳು ಹಾರಾಡುತ್ತಲೆ ಇದ್ದವು. ಅದನ್ನು ನೋಡುತ್ತಿರುವ ಹೊತ್ತಿಗೆ ಗುಹೆಯೊಳಗೆ ಗೆಜ್ಜೆಯ ಸದ್ದು ಕೇಳಿಬಂದಿತು. ಈ ಗುಹೆಯೊಳಗೆ ನರ್ತಿಸುತ್ತಿರುವ ನರ್ತಕಿ ಯಾರೆಂದು ದಿಗ್‌ಭ್ರಮೆಯಾಯಿತು. ರಾತ್ರಿ ಹೊತ್ತು ಅಲ್ಲಿ ಇಲ್ಲಿ ಬಿಳಿಯ ಸೀರೆ ಉಟ್ಟ ಮೋಹಿನಿ ಕಾಣಿಸಿಕೊಳ್ಳುತ್ತದೆ ಎಂದು ಹಿರಿಯರು ಹೇಳಿದ್ದನ್ನು ಕೇಳಿಸಿಕೊಂಡಿದ್ದೆ. ಈ ಗುಹೆಯೊಳಗೆ ಯಾವುದಾದರು ಹೆಣ್ಣು ದೆವ್ವ ವಾಸವಾಗಿದೆಯೆ ಎಂದು ಭಯವಾಯಿತು. ಸದ್ದು ಕೇಳಿದತ್ತ ಬೆಳಕು ಚೆಲ್ಲಿದೆ. ಎರಡು ಮುಳ್ಳುಹಂದಿಗಳು ಎದ್ದು ನಿಂತು ಮುಳ್ಳುಗಳನ್ನು ಕೆದರಿಕೊಂಡು ಅಪಾಯದ ಸೂಚನೆ ಕಂಡು ಯುದ್ಧಕ್ಕೆ ಸಿದ್ಧವಾಗಿ ನಿಂತಿದ್ದವು. ಮುಳ್ಳುಹಂದಿಗಳನ್ನು ಬೇಟೆಯಾಡುವುದು ಕಷ್ಟ. ಹುಲಿ ಚಿರತೆಗಳೆ ಅವುಗಳನ್ನು ಬೇಟೆಯಾಡಲಿಕ್ಕಾಗದೆ ಹೆದರಿಕೊಳ್ಳುತ್ತವೆ. ತಮ್ಮ ಜೀವಕ್ಕೆ ಅಪಾಯ ಒದಗಿದಾಗ ಬಾಣದಂತಹ ಮುಳ್ಳುಗಳನ್ನು ಶತ್ರುಗಳ ಮೇಲೆ ಬಿಟ್ಟು ಹಿಮ್ಮೆಟ್ಟಿಸುತ್ತವೆ. ಮನುಷ್ಯ ಮುಳ್ಳುಹಂದಿಯ ಮುಸುಡಿಗೆ ಗುಂಡು ಹೊಡೆಯುವುದರಿಂದ ಅವು ಸಾಯುತ್ತವಷ್ಟೆ. ನನ್ನ ಬ್ಯಾಟರಿ ಬೆಳಕಿಗೆ ಹೆದರಿಕೊಂಡು ಮುಳ್ಳುಗಳನ್ನು ನನ್ನ ಮೇಲೆ ಪ್ರಯೋಗಿಸಿಯೇಬಿಟ್ಟವು. ಕೆಲವು ಮುಳ್ಳುಗಳು ನನಗೆ ನಾಟಿ ಯಾತನೆಯನ್ನು ಕೊಟ್ಟವು. ನನ್ನ ಸ್ಥಿತಿ 'ಇತ್ತ ದರಿ ಅತ್ತ ಪುಲಿ' ಎನ್ನುವಂತಾಗಿತ್ತು. ಮುಳ್ಳುಹಂದಿಗಿಂತ ಅಲ್ಲಿದ್ದ ಕಾಳಿಂಗ ನನಗೆ ಅಪಾಯಕಾರಿಯಾಗಿತ್ತು. ಕಾಳಿಂಗ ಹಾವಿನ ವಿಷ ನಾಗರಹಾವಿನ ವಿಷಕ್ಕಿಂತ ಉಗ್ರ ಸ್ವರೂಪದ್ದು.

ಕಚ್ಚಿಸಿಕೊಂಡವರು ಬೇಗನೆ ಸಾಯುತ್ತಾರೆ. ಆ ಕಾರಣಕ್ಕಾಗಿ ಕಾಳಿಂಗನ ತಲೆಗೆ ಗುರಿ ಇಟ್ಟು ಗುಂಡು ಹಾರಿಸಿದೆ. ಗುಂಡಿನ ಸದ್ದು ಗುಹೆಯೊಳಗೆ ಮಾರ್ದನಿಗೊಂಡು ಹೊಗೆ ಎದ್ದಿತು. ಬಾವಲಿ ಹಕ್ಕಿಗಳು ಚೀರಾಡುತ್ತ ಗುಹೆಯೊಳಗೆ ಕಲಸು ಮೇಲೋಗರವಾಗಿ ಹಾರಾಡಿದವು. ಕೆಲವು ಹಕ್ಕಿಗಳ ರೆಕ್ಕೆಗಳು ನನ್ನ ಮುಖಕ್ಕೆ ಬಡಿದವು. ಗುಂಡಿನ ಸದ್ದಿಗೆ ಮುಳ್ಳುಹಂದಿಗಳು ಕಂಗಾಲಾಗಿ ಗುಹೆಯೊಳಗೆ ದಿಕ್ಕಾಪಾಲಾಗಿ ಓಡಿಯಾಡಿದವು. ಕಾಳಿಂಗನ ತಲೆ ಚಿದ್ರವಾಗಿ ಅದು ನೆಲಕ್ಕೊರಗಿತು. ಯಾತನೆಯಿಂದ ಅದು ಸುರುಳಿ ಸುತ್ತಿಕೊಂಡು ವಿಲವಿಲನೆ ಒದ್ದಾಡ ಹತ್ತಿತು. ಕೋವಿಗೆ ತೋಟಾ ತುಂಬಿಕೊಂಡು ಅಲ್ಲಿ ಇಲ್ಲಿ ಭೀತಿಯಿಂದ ಓಡಿಯಾಡುವ ಹಂದಿಯೊಂದರ ತಲೆಗೆ ಹೊಡೆದೆ. ಇನ್ನೊಂದಕ್ಕೆ ಹೊಡೆಯುವುದರೊಳಗೆ ಅದು ನನ್ನನ್ನು ದೂಡಿಕೊಂಡು ಹೊರಗೋಡಿತು. ಅದು ಹೋಗುವಾಗ ನನ್ನ ಮೈಗೆ ಬಾಣ ಬಿಟ್ಟು ನಾನು ಪರದಾಡುವಂತೆ ಮಾಡಿತು. ಏಟು ತಿಂದ ಹಂದಿ ಸಾಯದೆ ಅರೆಜೀವವಾಗಿ ಓಡಿಯಾಡಹತ್ತಿತು. ಮತ್ತೊಂದು ಗುಂಡು ಹೊಡೆದೆ. ಕಾಳಿಂಗ, ಹಂದಿ ಎರಡೂ ನಿಶ್ಚೇಶ್ಚಿತವಾಗಿ ಮಲಗಿದವು."

"ಅಂತು ಶಿಕಾರಿ ಆಯಿತಾ ?" ನಾನು ಕೇಳಿದೆ.

"ಆಯಿತು ಮಾರಾಯ. ಇವತ್ತು ನಾನು ಬದುಕಿ ಬಂದದ್ದೆ ದೊಡ್ಡದು" ಎಂದು ಹಂದಿಯ ಮುಳ್ಳು ಚುಚ್ಚಿ ಗಾಯವಾಗಿ ಮೈಯಲ್ಲಿ ಸುರಿಯುವ ರಕ್ತವನ್ನು ಒರೆಸಿಕೊಳ್ಳುತ್ತ ಮಾವ ಹೇಳಿದರು.

ಅನಂತರ ನಾವು ಗುಹೆಯಿಂದ ಹಂದಿಯನ್ನು ಹೊರತರಲೋಸುಗ ಜನಗಳನ್ನು ಕರೆತರಲು ಮನೆಗೆ ಹೋದೆವು.

●

ಬಿಳುಮನೆ ರಾಮದಾಸ್, ೧೪೦೧, ೩೭ನೇ 'ಬಿ' ತಿರುವು, ೧೧ನೇ ಮುಖ್ಯರಸ್ತೆ,
೪ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು - ೫೬೦ ೦೪೧

‘ತುಳು ಕಾದಂಬರಿಗಳು’-ಒಂದು ಸಂಕ್ಷಿಪ್ತ ನೋಟ

ಮುದ್ದು ಮೂಡುಬೆಳ್ಳೆ

ಕಾದಂಬರಿ ಪ್ರಕಾರವೆಂಬುದು ಭಾರತೀಯ ಭಾಷೆಗಳಲ್ಲಿ ಒಂದಿಷ್ಟು ಅಂತರದೊಂದಿಗೆ ಸರಿಸುಮಾರಾಗಿ ಒಂದೇ ಕಾಲಘಟ್ಟದಲ್ಲಿ ಆರಂಭಗೊಂಡಿತು. ಮೊದಲು ಬಂಗಾಲಿ, ಅನಂತರ ಮರಾಠಿ, ಬಳಿಕ ಕನ್ನಡ ಹೀಗೆ. ಕನ್ನಡದಲ್ಲಿ ೧೮೯೯ರಲ್ಲಿ ಗುಲ್ವಾಡಿ ವೆಂಕಟರಾಯರು ಬರೆದ ‘ಇಂದಿರಾಬಾಯಿ’ ಅಥವಾ ‘ಸಧ್ಧರ್ಮ ವಿಜಯ’ ಪ್ರಥಮದ್ದೆನ್ನಲಾಗಿದೆ. ತುಳು ಭಾಷೆಯಲ್ಲಿ ಪಣಿಯಾಡಿಯವರ ‘ತುಳು ಪುನರುಜ್ಜೀವನ ಚಳುವಳಿ ಕಾಲ’ದಲ್ಲಿ ಅಂದರೆ ಈಗ್ಗೆ ಸುಮಾರು ಏಳು ದಶಕಗಳ ಹಿಂದೆ ಕತೆ, ಕಾದಂಬರಿ, ನಾಟಕ ರಚನೆಯ ಪ್ರಥಮ ಹೆಜ್ಜೆಗಳನ್ನು ಗುರುತಿಸಬಹುದು.

ಪಣಿಯಾಡಿಯವರ ‘ತುಳುವ ಸಾಹಿತ್ಯ ಮಾಲೆ’ಯಲ್ಲಿ ೧೯೩೫ರಲ್ಲಿ ಹೊಳಲಿ ಶೀನಪ್ಪ ಹೆಗ್ಗಡೆಯವರ ‘ಮಿತ್ಯನಾರಾಯಣ ಕತೆ’ ಎನ್ನುವ ಪ್ರಥಮ ಕಾದಂಬರಿ ಪ್ರಕಟವಾಯಿತು. ಇದೊಂದು ಕಿರು ಕಾದಂಬರಿ. ಪಣಿಯಾಡಿಯವರು ೧೯೨೧ರಲ್ಲಿ ಬರೆದುದೆನ್ನಲಾಗಿರುವ ‘ಸತೀಕಮಲೆ’ ೧೯೩೬ರಲ್ಲಿ ಪ್ರಕಟಗೊಂಡಿತು.

ಮುಂದೆ ಕೆದಂಬಾಡಿ ಜತ್ತಪ್ಪ ರೈಗಳು ೧೯೮೫ರಲ್ಲಿ ಶಿವರಾಮ ಕಾರಂತರ ‘ಚೋಮನ ದುಡಿ’ಯನ್ನೂ, ಮರುವರ್ಷ ೮೬ರಲ್ಲಿ - ನಿರಂಜನರ ‘ಚಿರಸ್ಮರಣೆ’ (‘ಮದಪ್ಪಂದಿ ನೆಂಪು’)ಯನ್ನೂ ಅಚ್ಚ ತುಳುವಿನದೆಂಬಷ್ಟು ಸುಂದರವಾಗಿ ತುಳುವಿಗೆ ಅನುವಾದಿಸಿ ಪ್ರಕಟಿಸಿದರು.

ಪರಕೀಯರ ಆಳ್ವಿಕೆಯ ಕಾಲದಲ್ಲಿ ಭಾರತೀಯ ಶಿಕ್ಷಿತ ಮೇಲ್ವರ್ಗ ಹಾಗೂ ಮಧ್ಯಮ ವರ್ಗದ ರಾಷ್ಟ್ರೀಯ ಆದರ್ಶದ ಮನೋಧರ್ಮವನ್ನು ‘ಸತೀಕಮಲೆ’ ಬಿಂಬಿಸಿದರೆ ‘ಮಿತ್ಯನಾರಾಯಣ ಕತೆ’ ಅದೇ ಚಿಂತನೆಯಲ್ಲಿ ಮೂಡಿದ ಒಂದು ಫ್ಯಾಂಟಸಿ ಕಥೆ ಎನ್ನಬಹುದು. ಇಲ್ಲಿ ಬ್ರಾಹ್ಮಣ ಪ್ರೇಮಿಯೋರ್ವ ಕ್ಷಾತ್ರ ಮನೋಧರ್ಮ ತೋರಿ, ಕೀಲು ಕುದುರೆ ಸಿದ್ಧಪಡಿಸಿ ತಾನು ಪ್ರೇಮಿಸಿದ ರಾಜಕುಮಾರಿಯನ್ನು ಅಂತಃಪುರದಿಂದ ಹಾರಿಸಿಕೊಂಡೊಯ್ಯುತ್ತಾನೆ.

ಎರಡನೆಯ ಹಂತದಲ್ಲಿ ಬಂದ ಅನುವಾದ ಕಾದಂಬರಿಗಳು ವಾಸ್ತವಿಕ ವಿಚಾರಗಳ ಪ್ರಗತಿಶೀಲ ಧೋರಣೆಯವುಗಳು.

ಮುಂದಿನ ಹತ್ತುವರ್ಷಗಳ ಶೂನ್ಯದಲ್ಲಿ ಕಾದಂಬರಿಕಾರರ ಚಿತ್ತಹುತ್ತಗಟ್ಟುತ್ತಿತ್ತೇನೋ ಎಂಬಂತೆ, ೧೯೯೪ರಲ್ಲಿ ತುಳುಕಾದಂಬರಿಗಳ ಮಹತ್ವ ಶಕೆ ಆರಂಭಗೊಂಡಿತು. ಆ ವರ್ಷ ಎರಡು ಪ್ರಮುಖ ಪ್ರೇರಣೆಗಳು ಹುಟ್ಟಿಕೊಂಡವು. ಒಂದು-ಉಡುಪಿ ತುಳು ಕೂಟವು ಯುಎಇ ತುಳುವರ ನೆರವಿನಿಂದ 'ಪಣಿಯಾಡಿ ಸ್ಮಾರಕ ತುಳು ಕಾದಂಬರಿ ರಚನಾ ಸ್ಪರ್ಧೆ' ಆರಂಭಿಸಿತು. ಇನ್ನೊಂದು - ಅದೇ ವರ್ಷದ ಕೊನೆಯ ವೇಳೆಗೆ ಅಸ್ತಿತ್ವಕ್ಕೆ ಬಂದ ತುಳು ಸಾಹಿತ್ಯ ಅಕಾಡೆಮಿ ಹಾಗೂ ಅದರ ಯೋಜನೆಗಳು.

೧೯೯೪ರ ಒಂದೇ ವರ್ಷದಲ್ಲಿ ಐದು ಕಾದಂಬರಿಗಳು ಹೊರಬಂದವು. ಮಹತ್ವದ ಈ ತಿರುವನ್ನು ಮೀಟಿದವರು ಶ್ರೀ ಕೆ. ಮಹಾಲಿಂಗ. ಮೊದಲು ಬಂದ ಅವರ ಕೃತಿ 'ನಾಣಜ್ಜೆರ್ ಸುದೆ ತಿರ್ಗಾಯೆರ್' (ನಾಣಜ್ಜರು ನದಿ ತಿರುಗಿಸಿದರು). ಕಥಾವಸ್ತು, ಭಾಷೆ, ಆಶಯ, ನಿರೂಪಣೆ - ಎಲ್ಲ ದೃಷ್ಟಿಯಿಂದಲೂ ಉತ್ಕೃಷ್ಟವೆನಿಸಿ, ಡಾ. ವಿವೇಕ ರೈಯವರೆನ್ನುವಂತೆ ಅಚ್ಚ ತುಳುವಿನ ಕಾದಂಬರಿಗಳಿಗೊಂದು ಹೊಚ್ಚ ಹೊಸ ಮಾರ್ಗವನ್ನು ಕಡೆದು ತೋರಿಸಿತು. ಪ್ರಕೃತಿಯ ಅಸೀಮತೆ ಮತ್ತು ಮನುಷ್ಯನ ಸಾಹಸ ಪ್ರವೃತ್ತಿ ವಸ್ತು. ವಾಸ್ತವಿಕತೆಯತ್ತ ಸದಾ ತುಡಿಯುವ ನಾಣಜ್ಜ ಏನಾದರೊಂದು ಹೊಸ ಕಾರ್ಯ ನಡೆಸುತ್ತಲೇ ನದೀ ಹರಿವೊಂದರ ದಿಕ್ಕು ಬದಲಾಯಿಸುವ 'ಸಮರ'ದಲ್ಲಿ ಮುಂದೆ ಸೋತರೂ ಒಂದು ದಿನಕ್ಕಾದರೂ ಗೆದ್ದು ಸಂಭ್ರಮಿಸುವುದು-ಲವಲವಿಕೆಯ, ತುಂಟಾಟದಂಥ ನಿರೂಪಣೆ 'ನಾಣಜ್ಜೆರ್ ಸುದೆ ತಿರ್ಗಾಯೆರ್' ಕಾದಂಬರಿಯನ್ನು ಎತ್ತರಕ್ಕೇರಿಸಿತು. ಈ ಬಗ್ಗೆ ಶ್ರೀ ಅರುಣ್ ಕುಮಾರರು ಅಕಾಡೆಮಿ ಗೋಷ್ಠಿಯೊಂದರಲ್ಲಿ ಮಾತನಾಡುತ್ತಾ 'ತುಳುನಾಡ್ದ ಬೀರೆರೆಗ್ಲಾ ನಾಣಜ್ಜೆರೆಗ್ಲಾ ಮಲ್ಲ ವ್ಯತ್ಯಾಸೊ ಇಜ್ಜಿ' (ತುಳುನಾಡಿನ ಜನಪದ ವೀರರಿಗೂ ನಾಣಜ್ಜರಿಗೂ ದೊಡ್ಡ ವ್ಯತ್ಯಾಸವೇನೂ ಇಲ್ಲ) ಎಂದುದು ಸೂಕ್ತವಾಗಿಯೇ ಇದೆ.

ಅದೇ ವರ್ಷವೇ ಇನ್ನೂ ನಾಲ್ಕು ಕಾದಂಬರಿಗಳು ಪ್ರಕಟವಾದವು. 'ಕುದುರುದ ಕೇದಗೆ' (ಎಂ. ಜಾನಕಿ ಬ್ರಹ್ಮಾವರ), 'ಬೊಂಬಾಯಿದ ಇಲ್ಲ್' (ಕೆ.ಟಿ. ಗಟ್ಟಿ), 'ಲೆಕ್ಕೆಸಿರಿ' (ಕುದ್ಕಾಡಿ ವಿಶ್ವನಾಥ ರೈ), 'ಏಥಿತ್ತ ಮದಿಪು' (ಶಕುಂತಳಾ ಭಟ್ ಹಳೆಯಂಗಡಿ). ಕೆ. ಮಹಾಲಿಂಗರು ತುಳುವಿಗೆ ಹಾಕಿಕೊಟ್ಟ ವಿಶಿಷ್ಟ ಹೆಜ್ಜೆಯಲ್ಲಿ ದೃಢವಾಗಿ ಮುನ್ನಡೆದ ಜಾನಕಿ ಬ್ರಹ್ಮಾವರ ಇವರು, 'ಕುದುರುದ ಕೇದಗೆ'ಯಿಂದ ತೊಡಗಿ, ಕಪ್ಪುಗಿಡಿ (೯೮), ಹಾಗೂ 'ಯುಗಮುಗ್ರ್ನಗ' (೨೦೦೨), ವರೆಗೆ ಕೃತಿಯಿಂದ ಕೃತಿಗೆ ವೈಶಿಷ್ಟ್ಯ ದಾಖಲಿಸುತ್ತಾ, ತುಳು ಸಂಸ್ಕೃತಿಯ ಪದರ ಪದರಗಳನ್ನು ಪಡಿ ಮೂಡಿಸಿದರು. ಸಾಂಸ್ಕೃತಿಕ ಪಲ್ಲಟದ ಪ್ರಭಾವ, ಪರಿಣಾಮಗಳನ್ನು, ಶತಮಾನದ ಹೊಸ್ತಿಲಲ್ಲಿ ಲೋಕವಿದ್ಯಮಾನಗಳನ್ನು ತುಳುನಾಡಿನ ವ್ಯಷ್ಟಿ ಸಮಷ್ಟಿ ಸಂವಹನದ ನಿಕಷಕ್ಕೊಡ್ಡಿ ಸಮರ್ಥವಾಗಿ 'ಯುಗಮುಗ್ರ್ನಗ' ಎನ್ನುವ ಕೃತಿಯಾಗಿಸಿದರು.

ಸಂಕಲಕರಿಯ ಕೃಷ್ಣಸಾಲಿಯಾನರ 'ಚಂದ್ರಳ್ಳಿದ್ ಬೊಳ್ಸಾಂಡ್' (೯೭) ಮಾಧವ ಪೆರಾಜೆಯವರ 'ನಿಲೆ' (೯೭), ಪ. ರಾಮಕೃಷ್ಣ ಶಾಸ್ತ್ರಿಯವರ 'ಪುದ್ವಾರ್' (೯೭), ಜಿತು ನಿಡ್ಲೆ ಅವರ 'ಮೂಜಂಜ ಆನಗ' (೯೯) ಕೆ. ಬಾಲಕೃಷ್ಣರ 'ಅಗ್ಗ-ಒನೆ' (೨೦೦೦), ಹೀಗೆ ತುಳುನಾಡಿನ ವಿವಿಧ ಪ್ರದೇಶಗಳ ಬದುಕನ್ನು ಚಿತ್ರಿಸಿದ ಚೊಕ್ಕವಾದ ಹಲವು ಕಾದಂಬರಿಗಳು ಪ್ರಕಟವಾದವು, ಪ್ರಶಸ್ತಿಗಳಿಸಿದವು. ಕೆ.ಟಿ. ಗಟ್ಟಿ, ಎಚ್. ಶಕುಂತಳಾ ಭಟ್, ಕುದ್ಕಾಡಿ ವಿಶ್ವನಾಥ ರೈ, ಗಣೇಶ್

ಅಮೀನ್ ಸಂಕಮಾರ್, ಉಮೇಶ್ ಬಂಗೇರ ಕುಡ್ಲ, ಎಂ. ವಿಠಲ, ಬಿ.ಪಿ. ಕೋಡಿಬೆಂಗ್ರೆ, ಹಂಝು ಮಲಾರ್, ಜಯಂತಿ ಎಸ್. ಬಂಗೇರ, ಯಜ್ಞಾವತಿ ಕಂಗೆನ್ - ಮುಂತಾದವರು ತುಳು ಜಾನಪದ, ಪ್ರಾದೇಶಿಕ ಐತಿಹ್ಯ, ಚರಿತ್ರೆ, ಭೂತ ವರ್ತಮಾನಗಳ ಕಥಾವಸ್ತುವಿನ ಕಾದಂಬರಿಗಳನ್ನು ರಚಿಸಿದರು. ಪ್ರಭಾಕರ ನೀರುಮಾರ್ಗ ಇವರ 'ದಳವಾಯಿ ದುಗ್ಗಣ್ಣ' (೨೦೦೩) - ಚಾರಿತ್ರಿಕ ಕಾದಂಬರಿಯವರೆಗೆ ಸುಮಾರು ಇಪ್ಪತ್ತೈದು ಕಾದಂಬರಿಗಳು ಪ್ರಾದೇಶಿಕ ಬದುಕಿನ ವೈವಿಧ್ಯವನ್ನು ಸಾಹಿತ್ಯ ಲೋಕಕ್ಕೆ ನೀಡಿವೆ.

ಸಂಖ್ಯೆ ಸೀಮಿತವಿದ್ದರೂ ತುಳುಕಾದಂಬರಿಗಳು ಅನಾವರಣಗೊಳಿಸತೊಡಗಿರುವ ಅನೂಹ್ಯ ಕಥಾವಸ್ತು, ಹೂರಣ ಸಾಕಷ್ಟು ಕುತೂಹಲದಾಯಕವಾಗಿದೆ. ವಿವಿಧ ನಂಬಿಕೆ, ಆರಾಧನೆ, ನಡಾವಳಿಗಳ ಆಗರವಾದ ತುಳುನಾಡು, ಇಲ್ಲಿನ ಕಡಲು, ನದಿ, ಬೆಟ್ಟಗುಡ್ಡಗಳ ಮೇರೆಗಳಿಂದಾಗಿ ದ್ವೀಪ ಸದೃಶವಾಗಿದ್ದೂ, ಕಡಲ ತೀರದ ಬಂದರುಗಳ ಕಾರಣದಿಂದಾಗಿ ದೂರದ ವಿದೇಶಿಯರ ಸಂಪರ್ಕವನ್ನೂ ಹೊಂದಿದ್ದು, ಹಲವು ರಾಜ ಮನೆತನಗಳ ಸ್ವತಂತ್ರ ಹಾಗೂ ಅಧೀನ ರಾಜ್ಯ ಅಧಿಪತ್ಯವನ್ನೂ ಕಂಡುಕೊಂಡಿದೆ. ಹಾಗೆಯೇ ಅರ್ವಾಚೀನದಲ್ಲಿ ಅತ್ಯಾಧುನಿಕತೆಯೂ, ಜಾಗತೀಕರಣದ ಬಿಸಿಯೂ ಅಷ್ಟೇ ವೇಗವಾಗಿ ತಟ್ಟುತ್ತಿರುವ ವಿಶಿಷ್ಟ ನೆಲ. ಹೀಗಾಗಿ ಚಿಂತನಶೀಲ ಸಾಹಿತಿಗಳ ಕೃತಿಗಳಲ್ಲೂ ಇದರ ಪ್ರಭಾವ ಸಹಜವಾಗಿದೆ.

'ಪರಶುರಾಮ ದೇವೆರೆ ಸೃಷ್ಟಿ ಈ ತುಳುನಾಡ್' (೯೪) ಕಾದಂಬರಿಯಲ್ಲಿ ಎಂ. ವಿಠಲ ಪುತ್ತೂರು - ಅವರು ತುಳುನಾಡಿನ ಪ್ರಾಚೀನ ಐತಿಹ್ಯದ ಆಧಾರದಿಂದ ಈ ನಾಡು ರೂಪುಗೊಂಡ ಹಂತಗಳನ್ನು ಪರಶುರಾಮನ ಪುರಾಣ, ಐತಿಹ್ಯ ನೆಲೆಯಲ್ಲೇ ರಚಿಸಿದ್ದಾರೆ.

ಈ ಕಾಲಮಾನ ಮತ್ತು ಅನಂತರದ ಎಲ್ಲ ಕಾದಂಬರಿಗಳು ವರ್ತಮಾನದ ನೆಲೆಯಲ್ಲೇ ರಚನೆಗೊಂಡಿದ್ದರೂ 'ನಿಲೆ' ಮತ್ತು 'ಅಗ್ಗ-ಓನೆ' ಪ್ರತ್ಯೇಕವಾಗಿ ನಿಲ್ಲುತ್ತವೆ. ಕೆ. ಬಾಲಕೃಷ್ಣರ 'ಅಗ್ಗ-ಓನೆ' (೨೦೦೦) ತುಳುನಾಡಿನಲ್ಲಿ ಪ್ರಾಚೀನ ಮಾನವ ಜೀವನ ರೂಪುಗೊಳ್ಳುವ ಹಂತವನ್ನು ಒಂದಿಷ್ಟು ವೈಜ್ಞಾನಿಕವಾಗಿ ಕಲ್ಪಿಸಿಕೊಂಡು ರಚಿಸಿದ ಕಾದಂಬರಿ. ಈ ಪ್ರದೇಶದ ದಕ್ಷಿಣ ಅರಣ್ಯ ಪ್ರದೇಶದಲ್ಲಿ ಹೆಚ್ಚು ಕಡಿಮೆ ಕಾಡು ಮನುಷ್ಯರಾಗಿಯೇ ಇದ್ದಂತಹ 'ಅಗ್ಗ' ಎನ್ನುವ ತರುಣ, ಮತ್ತು ಅವನ ಒಡನಾಡಿ 'ಓನೆ' - ನದೀ ಮೂಲ ಎಲ್ಲೆಂದು ಅರಸಿಕೊಂಡು ಅದರ ಕಿನಾರೆಯಲ್ಲಿ ದೂರ ಬಹುದೂರ ಕರಾವಳಿವರೆಗೂ ಸಾಗುತ್ತಾರೆ. ಇಲ್ಲಿನ ವಿವಿಧ ಘಟನಾವಳಿಗಳು ಮುಗ್ಧ ಪ್ರಪಂಚವೆಲ್ಲವನ್ನು ತೆರೆದಿಡುತ್ತಾ ಕುತೂಹಲ ಕೆರಳಿಸುತ್ತವೆ. ಕೊನೆಯಲ್ಲಿ ಭ್ರಷ್ಟರೂ, ಧೂರ್ತರೂ ಆದ ಒಂದಿಷ್ಟು ಆಧುನಿಕರಿಂದ ನಡೆಯುವ ಕ್ರೌರ್ಯ, 'ಓನೆ'ಯ ದುರಂತಮರಣ, 'ಅಗ್ಗ'ನ ಪ್ರತೀಕಾರದ ತುಡಿತ - ಉದ್ದಕ್ಕೂ ಬಿಗಿಯಾದ ನಿರೂಪಣೆಯಲ್ಲಿ ಸಾಗುವ ಈ ಕಾದಂಬರಿ, ಲೇಖಕರ ಪ್ರಚಾರದ ಅನಾಸಕ್ತಿಯಿಂದಾಗಿ ಹೆಚ್ಚು ಓದುಗರ ಗಮನಕ್ಕೆ ಬಂದಿಲ್ಲ.

ಮಾಧವ ಪೆರಾಜೆ ಅವರ 'ನಿಲೆ' (೯೭) ತುಳುವಿನ ಪ್ರಥಮ ದಲಿತ ಕಾದಂಬರಿ. ಅತಂತ್ರವಾದ ದಲಿತ ಬದುಕನ್ನು ಚಿತ್ರಿಸಿದ ಈ ಕೃತಿಯಲ್ಲಿ ಎರಡು ತಲೆಮಾರಿನ ದಲಿತ ಯುವ ಜನರ ಕಥೆಯಿದೆ. ಮೇಲ್ಜಾತಿಯ ಕುಟುಂಬದ ಹೆಣ್ಣೊಬ್ಬಳು ಸರ್ಪಸಂತತಿಗೆ ಸನಿಹಳಾಗಿ ಅಲೌಕಿಕ ರೀತಿಯಲ್ಲಿ ಜೀವಿಸುವ

ಫ್ಯಾಂಟಸಿಯೂ ಇದೆ. ಸುಳ್ಯ ಪ್ರದೇಶದ ದಲಿತರ ಬದುಕಿನ ಹಲವು ಎಳೆಗಳು ಪ್ರಾದೇಶಿಕ ಭಾಷಾ ಸೊಗಡಿನೊಂದಿಗೆ ಇಲ್ಲಿ ಮೈದಾಳಿವೆ.

ಎಚ್. ಶಕುಂತಳಾ ಭಟ್ಟರ ಕಾದಂಬರಿ 'ಪಿಧಿತ್ತ ಮುದಿಪು' (೯೪) ಐತಿಹಾಸಿಕ ಕಾದಂಬರಿ. ಉಳ್ಳಾಲದ ರಾಣಿ ಅಬ್ಬಕ್ಕನ ಚರಿತ್ರೆಯನ್ನಾಧರಿಸಿ, ಸಾಕಷ್ಟು ಶ್ರಮವಹಿಸಿ ಬರೆದಿರುವ ಕೃತಿ. ಗಣೇಶ್ ಅಮೀನ್ ಸಂಕಮಾರರ 'ಅಮರ್ ಜೀರೆರ್ ಕೋಟಿಚೆನ್ನಯೆರ್' (೯೭) ತುಳುನಾಡಿನ ಪ್ರಸಿದ್ಧ ಜನಪದ ವೀರರಾದ ಕೋಟಿಚೆನ್ನಯರ ಕಥೆ. ಸುಂದರವಾದ ಕಾವ್ಯಮಯ ಭಾಷೆ, ನಿರೂಪಣೆಯಲ್ಲಿ ಕಾದಂಬರಿಕಾರರ ಸ್ವಂತಿಕೆಯಿದೆ.

ತುಳು ಮಾತೃಭಾಷೆಯವರಲ್ಲದೆಯೂ ಕನ್ನಡದ ತರುಣ ಕವಿ ಕತೆಗಾರ ಹಂಝ ಮಲಾರ್ ೨೦೦೨ರಲ್ಲಿ 'ಕೋಟಿಚೆನ್ನಯ' ತುಳು ಕಾದಂಬರಿಯನ್ನು ಒಂದಿಷ್ಟು ಭಿನ್ನ ರೀತಿಯಲ್ಲಿ ಬರೆದಿದ್ದಾರೆ.

ಉಮೇಶ್ ಬಂಗೇರರ 'ಶಿಲ್ಪೋ-ಶಿವಾನಿ' (೨೦೦೧) ಮತ್ತೊಂದು ಐತಿಹಾಸಿಕ ಕೃತಿ. ಕಲ್ಕುಡ-ಕಲ್ಲುರ್ಟಿ ಐತಿಹ್ಯ ಮತ್ತು ಇತಿಹಾಸದ ಕೆಲವು ಹಂದರಗಳ ಆಧಾರದಿಂದ ಯಕ್ಷಗಾನ, ನಾಟಕಗಳಾಗಿಯೂ ಪ್ರಚಲಿತವಿರುವ ಕಥೆಯನ್ನು ಸ್ವತಃ ನಾಟಕಕಾರರೂ ಆಗಿರುವ ಈ ಲೇಖಕ, ಶಿಲ್ಪರಚನಾ ಮೂಲಕ್ಕೆ ಹೆಚ್ಚು ಒತ್ತುನೀಡಿ ಈ ಕಾದಂಬರಿ ರಚಿಸಿದ್ದಾರೆ.

ಚಾರಿತ್ರಿಕ ಕಾದಂಬರಿಗಳ ಸಾಲಿನಲ್ಲಿ ಈ ವರ್ಷ (೨೦೦೩) ಬಂದಿರುವ ಕೃತಿ 'ದಳವಾಯಿ ದುಗ್ಗಣ್ಣ' ಕನ್ನಡದಲ್ಲಿ ಹಲವು ಕಾದಂಬರಿಗಳನ್ನು ಬರೆದಿರುವ ಶ್ರೀ ಪ್ರಭಾಕರ ನೀರ್‌ಮಾರ್ಗ ಅವರ ಚೊಚ್ಚಲ ತುಳು ಕೃತಿ. ಸುಮಾರು ನಾಲ್ಕು ಶತಮಾನಗಳ ಹಿಂದೆ ನಂದಾವರ ರಾಜ್ಯದ ದಳವಾಯಿಯಾಗಿ ಪ್ರಖ್ಯಾತನಾದ ದುಗ್ಗಣ್ಣನ ಪರಾಕ್ರಮ, ನ್ಯಾಯ ನಿಷ್ಠುರತೆ, ಸ್ವಾಮಿ ಭಕ್ತಿಗಳ ಸುಂದರ ಕಥನ. ಇದೇ ಕಥಾವಸ್ತು ದಶಕಗಳ ಹಿಂದೆ ನಾಟಕ ಮತ್ತು ಯಕ್ಷಗಾನವಾಗಿಯೂ ಪರಿಚಿತ. ಈ ಆಧಾರಾಂಶಗಳಿಂದ ಲೇಖಕರು ಕಾದಂಬರಿಯನ್ನು ಹೆಣೆದಿಟ್ಟಿದ್ದಾರೆ.

ಉಳಿದಂತೆ ಎಲ್ಲವೂ ಸಾಮಾಜಿಕ ಕಾದಂಬರಿಗಳು. ಅಂತರ್ಗತ ಸ್ತ್ರೀವಾದಿ ಚಿಂತನೆಗಳೊಂದಿಗೆ ಮೂಡಿಬಂದ 'ಕುದುರುದ ಕೇದಗೆ'ಯನ್ನು ಬರೆದ ನಾಲ್ಕು ವರ್ಷಗಳ ಅಂತರದಲ್ಲಿ ಜಾನಕಿ ಬ್ರಹ್ಮಾವರ ಅವರು, ಭೂಮಸೂದೆ ಜಾರಿಯ ಹಿನ್ನೆಲೆಯೊಂದಿಗೆ ಎರಡು ತಲೆಮಾರುಗಳ ಸಮಾನಾಂತರ ಚಿಂತನೆಗಳುಳ್ಳ ದಾಮಜ್ಜ, ಶಶಾಂಕ ಪಾತ್ರಗಳ ಸುತ್ತ ಹೆಣೆದ 'ಕಪ್ಪುಗಿಡಿ' (೯೮) ಕಾದಂಬರಿಯನ್ನು ಹೊರತಂದರು.

ಕೆ.ಟಿ. ಗಟ್ಟಿಯವರ 'ಬೊಂಬಾಯಿದ ಇಲ್ಲ್' ಕುದ್ಕಾಡಿ ವಿಶ್ವನಾಥ ರೈಯವರ 'ಲೆಕ್ಕೆಸಿರಿ' - ಇವೆರಡೂ ೯೪ರಲ್ಲೇ ಬಂದಿರುವ ಎರಡು ಕಾದಂಬರಿಗಳು. ೯೭ರಲ್ಲಿ ಬಂದ ಸಂಕಲಕರಿಯ ಕೃಷ್ಣ ಸಾಲಿಯಾನರ 'ಚಂದ್ರಳ್ಳಿದ್ ಬೊಳ್ಪಾಂಡ್' ಗಮನಿಸತಕ್ಕ ಕೃತಿಗಳಲ್ಲೊಂದು. ಗ್ರಾಮೀಣ ಬಡಜನರ ಬದುಕನ್ನು ಹಿಂಡುವ ಕುಡಿತದ ಚಟ, ಅನಕ್ಷರತೆ - ಇದಕ್ಕೆ ಗ್ರಾಮದ ಮುಖಂಡರೇ ಮುಂದೆ ನಿಂತು ಸುಧಾರಣೆಗೆ ಕೈಯಿಕ್ಕಿ ಗಡಂಗಿನ ಎತ್ತಂಗಡಿ, ಊರಲ್ಲಿ ಅಕ್ಷರ ಕ್ರಾಂತಿ ಮೂಡಿಸುವುದು ಈ ಕಾಲಕ್ಕೆ ಅತ್ಯಂತ ಸಹಜವಾಗಿ ಬಂದಿದೆ. ಪ್ರೀತಿಯ ಬೆಲೆ, ತ್ಯಾಗಕ್ಕೆ ಗೌರವ, ಹೆಣ್ಣಿನ ಒಡಲ ನೋವು - ಮುಂತಾದ ಅಂಶಗಳೊಂದಿಗೆ ವೈಚಾರಿಕ ನೋಟವನ್ನೂ ತೋರ್ಪಡಿಸಿದ ಕೃತಿಯಿದು.

'ರಂಗೆಸಾ ಮಲೆ ಮಂಗೆಸಾ' (೯೮) - ವಿಡಂಬನಾ ಧಾಟಿಯಲ್ಲೇ ಪಾತ್ರವೊಂದನ್ನು ಬೆಳೆಸಿದ ಯಜ್ಞಾವತಿ ಕಂಗೆನ್ ಅವರ ಕೃತಿ. ೧೯೯೮ರಲ್ಲಿ ಬಂದ ಪ. ರಾಮಕೃಷ್ಣ ಶಾಸ್ತ್ರಿಯವರ 'ಪುದ್ವಾರ್' ಪುಟ್ಟಕೃತಿಯಾದರೂ ಗ್ರಾಮೀಣ ದುರ್ಬಲರ ಕತೆಯನ್ನು ಮನಕಲಕುವಂತೆ ತೆರೆದು ತೋರುವ ಸರಳ ಕಾದಂಬರಿ. 'ಮೂಜಂಜ ಆನಗ' (೯೯) ಜಿತು ನಿಡ್ಲೆಯವರ ಕಿರುಕಾದಂಬರಿ. ಪ್ರಾದೇಶಿಕತೆ ಮತ್ತು ಜಾಗತೀಕರಣದ ನಡುವಣ ಕೊಳುಕೊಡೆಯ ದುರಂತದ ಎಳೆಯೆಂಬಂತೆ ಇಲ್ಲಿಗೆ ವಲಸಿಗರು ಬಂದು ಸ್ಥಳೀಯರನ್ನು ಮೋಸಗೊಳಿಸಿ ತೋಟ ಮಾಡುತ್ತೇವೆಂದು ನಂಬಿಸಿ ಜಮೀನು ಕೊಂಡು ಅಲ್ಲಿ ಗಾಂಜಾ ಬೆಳೆ ಚಟುವಟಿಕೆ ನಡೆಸುವುದು ಈ ಕಾದಂಬರಿಯ ವಸ್ತು.

ಬಿ.ಪಿ. ಕೋಡಿ ಬೆಂಗ್ರೆ ಅವರ 'ಕಡಲಬರಿತ ಕಂಜರಣ್ಣೆ' (೨೦೦೧) - ಕರಾವಳಿಯ ಮೀನುಗಾರ ಕುಟುಂಬಗಳ ಬದುಕನ್ನೂ ಅವರ ಕೌಟುಂಬಿಕ ರೀತಿ ರಿವಾಜುಗಳನ್ನೂ ಒಂದಿಷ್ಟು ಕಾವ್ಯಮಯ ಭಾಷೆಯಲ್ಲಿ ಚಿತ್ರಿಸಿದ್ದರೆ, ಜಯಂತಿ ಎಸ್. ಬಂಗೇರ ಅವರ 'ಸೊರಗೆದ ಪೂ' - (೨೦೦೨) 'ನಾಣಜ್ಜೆರ್' ಸಾಹಸವನ್ನು ನೆನಪಿಸುವಂತೆ, ಬೆಟ್ಟದ ಮೇಲಿಂದ ನೀರ ಹರಿವನ್ನು ಕೆಳಗಿಳಿಸಿಕೊಂಡು ತರುವ ಭಗೀರಥ ಯತ್ನದ ಒಂದು ಮುಗ್ಧ ಪ್ರಯತ್ನ.

'ಯುಗ ಮಗ್'ರ್ನಗ' - (೨೦೦೩) ಎಂ. ಜಾನಕಿ ಬ್ರಹ್ಮಾವರ್ ಅವರ ಮೂರನೆಯ ಕಾದಂಬರಿ. ಶೀರ್ಷಿಕೆಯೇ ಸೂಚಿಸುವಂತೆ ದ್ವಿಸಹಸ್ರಮಾನದ ಹೊಸ್ತಿಲಲ್ಲಿ ನಿಂತು ಘಟನಾವಳಿಗಳನ್ನು ಸೆರೆಹಿಡಿದ ಕೃತಿಯಿದು. ಪಟೇಲರ ತಲೆಮಾರಿನ ಸದ್ಗೃಹಸ್ಥ ಎಚ್ಚಣ್ಣ-ಈ ಕಾದಂಬರಿಯ ಕೇಂದ್ರಬಿಂದು. ಅವರ ವಿಚಾರಗಳ ನೋಟದ ಮೂಲಕವೇ ನಿಂತ ನೆಲ, ಸಮಾಜ, ರಾಷ್ಟ್ರ ಹಾಗೂ ಜಾಗತಿಕ ವಿದ್ಯಮಾನಗಳೆಲ್ಲವೂ ಸಹಾ ಕಾದಂಬರಿಯಲ್ಲಿ ನಡೆಯುತ್ತವೆ. ವಿಧುರ ಎಚ್ಚಣ್ಣ ದುರಂತದಿಂದ ಸಾವನ್ನಪ್ಪಿದ ಪತ್ನಿ ಲಕ್ಷ್ಮಿಯ ನೆನಪನ್ನು ಜೀವಂತವಾಗಿರಿಸಿಕೊಂಡು ಕರ್ತವ್ಯಗಳನ್ನು ನಿಭಾಯಿಸುತ್ತಾ, ಊರಿಗೆ ಉಪಕಾರಿಯಾಗಿ ಕ್ರಿಯಾಶೀಲನಾಗಿರುತ್ತಾ ಮಗಳು, ಅಳಿಯ, ಕೆಲಸದಾಳು ಕುಸೆಲ, ಊರು, ನೆರೆಹೊರೆ, ಸಂಸ್ಕೃತಿ ಪ್ರೇಮ - ಎಲ್ಲದರ ಹಿಂದೆ ಒಲವು ಬೆರೆತ ವಿವೇಚನಾ ಪ್ರಜ್ಞೆ, ಪ್ರಗತಿಪರ ಧೋರಣೆಯಿಂದ ಗಮನಸೆಳೆಯುತ್ತಾನೆ. ಸಂಧಿಕಾಲದಲ್ಲಿ ಸಮಾಜ ಕಂಡ ಸಂಸ್ಕೃತಿ ಪಲ್ಲಟದ ಸಂಕ್ರಮಣ ಸ್ಥಿತಿ, ಒರಿಸ್ಸಾದ ಮಹಾಪೂರ, ಕಾರ್ಗಿಲ್ ಕಾರ್ಯಾಚರಣೆಯ ಉದ್ವಿಗ್ನತೆ, ಕಂದಹಾರ್ - ವಿಮಾನಾಪಹರಣ ಘಟನೆ ಹೀಗೆ ಒಂದು ಕಾಲ ಘಟ್ಟದ ಎಲ್ಲ ತುಡಿತ - ಮಿಡಿತಗಳೂ ಈ ಬೃಹತ್ ಕಾದಂಬರಿಯಲ್ಲಿ ಸಮ್ಮಿಳಿತವಾಗಿದೆ. ಎಚ್ಚಣ್ಣನ ಪಾತ್ರದ ಶ್ರೇಷ್ಠತೆಯನ್ನೂ ಕಾದಂಬರಿಯ ಮುಕ್ತಾಯ ಘಟ್ಟ ಸಮರ್ಥವಾಗಿ ಎತ್ತಿತೋರಿಸುತ್ತದೆ. ಇಲ್ಲಿನ ಭಾಷೆಯೂ ಅಷ್ಟೇ, ಎಲ್ಲ ಭಾಗದ ತುಳುವರಿಗೂ ಸಂವಹನೀಯವಾಗಿದೆ. ತುಳು ಭಾಷೆಯಲ್ಲಷ್ಟೇ ಅಲ್ಲ, ಆಧುನಿಕ ಕನ್ನಡ ಕಾದಂಬರಿಗಳ ಶ್ರೇಷ್ಠ ಮೌಲ್ಯಗಳನ್ನೂ ಮೈದಾಳಿಸಿಕೊಂಡು ಬಂದಿರುವ 'ಯುಗ ಮಗ್'ರ್ನಗ' ಮಹತ್ವದ ಕೃತಿಗಳಲ್ಲೊಂದಾಗಿದೆ.

ತುಳು ಜನಪದ ಸಾಹಿತ್ಯ, ಸಂಸ್ಕೃತಿ ಕುರಿತಾಗಿ ಬಹಳಷ್ಟು ಅನುಭವಿಗಳಾಗಿ ಕನ್ನಡದಲ್ಲಿ ನಾಲ್ಕೈದು ಕೃತಿಗಳನ್ನು ರಚಿಸಿರುವ ಶ್ರೀ ಬನ್ನಂಜೆ ಬಾಬು ಅಮೀನರ ಪ್ರಥಮ ತುಳು ಕಾದಂಬರಿ 'ಪೂ-ಪೊಡ್ದೊಲು' (೨೦೦೩) ಈ ಲೇಖನದ ವೇಳೆಗೆ ಅಚ್ಚಾಗಿದೆ. ನಿಕಟಪೂರ್ವ ತುಳುನಾಡಿನ ಉಡುಪಿ ಪ್ರದೇಶದ ಸಮಗ್ರ ಗ್ರಾಮೀಣ ಜನಜೀವನವನ್ನೇ ತೆರೆದಿಡುವಷ್ಟು ವಿವರಗಳು ಈ

ಕಾದಂಬರಿಯಲ್ಲಿ ಅಡಕವಾಗಿವೆ. ಸುಮಾರು ೬೦-೭೦ ವರ್ಷಗಳ ಹಿಂದಣ ಕೃಷಿ ಮೂಲವಾದ ಗ್ರಾಮ ಜೀವನದ ಚಿತ್ರ 'ಪೆರಲ'ವೆನ್ನುವ ಕಾಡುಗುಡ್ಡೆಗಳಿಂದಾವೃತವಾದ ಊರು. ಅವಿಭಕ್ತ ಕುಟುಂಬ ಪದ್ಧತಿಯ ಯೆಂಕಣ್ಣನೆನ್ನುವ ಸಾತ್ವಿಕ ಪರೋಪಕಾರಿ ಮುಖಂಡ, ಅವನ ಮಿತ್ರರಾದ ಊರ ಪಟೇಲ ಸುಬ್ಬಯ್ಯ ಶೆಟ್ಟರ ಸುತ್ತಲಿನ ವಿವರಗಳು ಇಲ್ಲಿ ಅನಾವರಣಗೊಳ್ಳುತ್ತಾ, ಅಂದಿನ ನಿತ್ಯ ಬದುಕಿನ ಎಳೆಎಳೆಗಳನ್ನು ಬಿಚ್ಚಿಡುತ್ತಾ, ಒಂದು ಅಪೂರ್ವ ಅನುಭವರಾಶಿಯ ದಾಖಲೆಯನ್ನು ಸರಳ, ಬೆರಕೆಯಾಗಿಲ್ಲದ ಪ್ರಾದೇಶಿಕ ಭಾಷೆಯಲ್ಲಿ ನಿರೂಪಣೆಯೊಂದಿಗೆ ಈ ಕಾದಂಬರಿಯಲ್ಲಿ ನೀಡಲಾಗಿದೆ.

ಹೀಗೆ ಕಳೆದ ಸುಮಾರು ಏಳುದಶಕಗಳ ಹಿಂದೆ ತುಳುವಿನ ಕಾದಂಬರಿ ಶಕೆ ಆರಂಭವಾಗಿ, ಕಳೆದೊಂದು ದಶಕದಿಂದ ಸೈಜ ತುಳು ಬದುಕಿನ ಒಳನೋಟಗಳೊಂದಿಗೆ ಹುರುಪಿನಿಂದ ಮುಂದುವರಿಯುತ್ತಾ, ತುಳುವಿನ ವಿಶಿಷ್ಟ ಸಂಸ್ಕೃತಿಯನ್ನು ತೋರ್ಪಡಿಸುತ್ತಾ, ಆಶಾದಾಯಕ ನೆಲೆಗೆ ತಲುಪಿವೆ. ಕೊಂಡು, ಓದಿ ಪ್ರೋತ್ಸಾಹಿಸುವವರ ಸಂಖ್ಯೆ ಹೆಚ್ಚಾದರಷ್ಟೇ ಈ ಉತ್ಕೃಷ್ಟವಾದ ಪ್ರಯತ್ನಗಳು ಸಾರ್ಥಕವಾದಾವು, ಇನ್ನಷ್ಟು ಕೆಲಸಗಳು ನಡೆದಾವು. ತುಳುವರ ಭಾಷಾಭಿಮಾನ ವೆಂಬುದು ಕೃತಿಯಲ್ಲಿ ವ್ಯಕ್ತವಾದಾಗ, ಇದು ನಮ್ಮದು, ನಮಗೆ ಸಂಬಂಧಿಸಿದ್ದು ಎನಿಸಿದಾಗ ಅರ್ಥಪೂರ್ಣವಾದೀತು.

ಮುದ್ದು ಮುಡುಬೆಳ್ಳೆ, ಸೀನಿಯರ್ ಅನೌನ್ಸರ್
ಆಕಾಶವಾಣಿ, ಮಂಗಳೂರು-೫೭೫೦೦೪

ಗುನ್ನಾರ್ ಎಕಲೋಫ್ : ಬೆಳಗುವ ಪ್ರತಿಮೆಗಳ ಕವಿ

ಆರ್. ವಿಜಯರಾಘವನ್

ಭಾಗ ೧

ಗುನ್ನಾರ್ ಎಕಲೋಫ್ ಸ್ವೀಡನ್‌ನ ಅತಿ ಮುಖ್ಯಕವಿ. ೧೯೦೭ರಲ್ಲಿ ಸ್ಟಾಕ್‌ಹೋಂ ನಗರದಲ್ಲಿ ಹುಟ್ಟಿದ ಎಕಲೋಫ್ ಪ್ಯಾರಿಸ್‌ನಲ್ಲಿ ಕೆಲ ಕಾಲ ಸಂಗೀತವನ್ನು ಅಧ್ಯಯನ ಮಾಡಿದ. ಬಳಿಕ ಲಂಡನ್ ಮತ್ತು ಸ್ವೀಡನ್‌ನ ಉಪ್ಸಲ ಯೂನಿವರ್ಸಿಟಿಗಳಲ್ಲಿ ಪೌರಾತ್ಯ ಭಾಷಾ ಅಧ್ಯಯನದಲ್ಲಿ ತೊಡಗಿದ. ಫಾತುಮಾ, ದಿವಾನ್ ಮುಂತಾದ ಈತನ ಕೃತಿಗಳು ಪೌರಾತ್ಯ ಅತೀಂದ್ರಿಯ ಅನುಭಾವವನ್ನು ಕುರಿತಂತೆ ಒಂದು ಬಗೆಯ ಅಬ್ಸೆಸಿವ್ ಎನ್ನಬಹುದಾದಂತಹ ತಾದಾತ್ಮ್ಯವನ್ನು ವ್ಯಕ್ತಪಡಿಸುತ್ತವೆ. ಐರೋಪ್ಯ ಲೇಖಕ, ವಿಮರ್ಶಕರನ್ನು ಬಹುವಾಗಿ ಆಕರ್ಷಿಸಿದ ಕವಿ ಈತ. ೧೯೬೮ರಲ್ಲಿ ಗಂಟಲಿನ ಕ್ಯಾನ್ಸರ್‌ನಿಂದ ಮೃತಪಟ್ಟ.

ಆಜೀವ ಪರಿಯಂತರ ಅನುಭಾವದಲ್ಲಿ ಎಕಲೋಫನಿಗಿದ್ದ ಆಸಕ್ತಿ ಅವನ ಮೊದಲ ಕೃತಿ 'ಲೇಟ್ ಅರೈವಲ್ ಆನ್ ಅರ್ತ್'ನಲ್ಲೇ ಕಂಡುಬರುತ್ತದೆ. ಇದು ಫ್ರೆಂಚ್ ಮಾದರಿಯ ಸರ್ರಿಯಲಿಸ್ಟ್ ಪಂಥದ ಕವಿತೆಗಳ ಸಂಕಲನವೆಂದು ಗುರುತಿಸಲ್ಪಟ್ಟಿತು. ಆದರೆ ಅದನ್ನು ಹಾಗೆ ಕರೆಯಲು ಎಕಲೋಫ್ ನಿರಾಕರಿಸಿದ್ದ. ಅನಂತರದ ಕೃತಿಗಳಾದ 'ಫೆರ್ರಿ ಸಾಂಗ್' (೧೯೪೧) ಮುಂತಾದುವು ಅತೀಂದ್ರಿಯ ಅನುಭಾವಿಕತೆಗೂ ವಿವೇಚನೆಗೂ ನಡುವೆ ಏರ್ಪಟ್ಟ ಘರ್ಷಣೆಯನ್ನು ಒಳಗೊಂಡಿವೆ. ೧೯೬೦ರಲ್ಲಿ ಪ್ರಕಟವಾದ 'ಎ ಮೋಲ್ನ ಎಲಿಜಿ'ಯಲ್ಲಿ ಎಕಲೋಫ್, ಕಾಲದ ಭೂತ ಮತ್ತು ಭವಿಷ್ಯಗಳ ಬಹುತ್ವವನ್ನು, ಬದುಕಿನಲ್ಲಿ ಸಾವಿನ ಪಾತ್ರವನ್ನು ಕುರಿತು ಚಿಂತಿಸಿದ್ದಾನೆ. ನಂತರದ 'ದಿವಾನ್ ಓವರ್ ದಿ ಪ್ರಿನ್ಸ್ ಆಫ್ ಎಂಜಿಯಾನ್' ಮತ್ತು 'ಎ ಟೇಲ್ ಆಫ್ ಫಾತುಮಾ' ಕೃತಿಗಳಲ್ಲಿ ಎಕಲೋಫ್ ಕಾಲದ ವ್ಯಕ್ತಿನಿಷ್ಠ ಅನುಭವವನ್ನು ಅನ್ವೇಷಿಸಿದ. ಅಷ್ಟೇ ಅಲ್ಲ, ಈ ಕೃತಿಗಳು ಅನುಭಾವೀ ಪ್ರೇಮದೊಂದಿಗೆ ಅಭೇದ ತಾದಾತ್ಮ್ಯ ಹೊಂದಿವೆ. ೧೯೪೦ ಮತ್ತು ೫೦ರ ದಶಕಗಳಲ್ಲಿ ಅವನು ಕಾವ್ಯಕ್ಕೆ ಸಂಗೀತದ ಪ್ರಕಾರಗಳನ್ನು ಅಳವಡಿಸುವ ಪ್ರಯತ್ನ ಮಾಡಿದ. ಎಕಲೋಫ್‌ನ ಕೃತಿಗಳು ಅವುಗಳ ವಿಚಾರಶೀಲತೆಯಿಂದ, ಭಿನ್ನವಸ್ತು ನಿರ್ವಹಣೆಯಿಂದ

ಕಾವ್ಯಾಸಕ್ತರಿಗೆ ಪ್ರಿಯವಾಗಿವೆ. ಅವನ ಕಾವ್ಯ ಸ್ವೀಡಿಶ್ ಕಾವ್ಯದ ಮೇಲೆ ಬೀರಿರುವ ಪ್ರಭಾವ ಅಚ್ಚಳಿಯದಂತಹುದು. ಎಕಲೋಫ್ ತನ್ನ ಹದಿನೈದು ಕಾವ್ಯ ಕೃತಿಗಳನ್ನ ಅನುವಾದಿಸಿದ್ದಾನಲ್ಲದೆ ಹಲವು ಅನ್ಯಭಾಷೆಯ ಕಾವ್ಯವನ್ನು ಸ್ವೀಡಿಶ್ ಭಾಷೆಗೆ ಅನುವಾದಿಸಿದ್ದಾನೆ.

"ಯೂರೋಪ್ ಮತ್ತು ಕ್ರಿಶ್ಚಿಯಾನಿಟಿ ಎರಡನ್ನೂ ನಾನು ದ್ವೇಷಿಸಲು ಕಲಿತೆ. ವಿರೋಧ ವ್ಯಕ್ತಪಡಿಸಲೆಂದು ಬೆಳಗಿನ ಪ್ರಾರ್ಥನೆಗಳಲ್ಲಿ ಓಂ ಮಣಿ ಪದ್ಮಾಹಂ ಎಂದು ಗುನುಗಿಕೊಳ್ಳಲು ತೊಡಗಿದೆ" ಎಂದು ಬೆಳೆದು ದೊಡ್ಡವನಾಗಿ ಪೌರಾತ್ಯ ಅತೀಂದ್ರಿಯ ಅನುಭಾವದಲ್ಲಿ ಪೂರ್ತಿಯಾಗಿ ತೊಡಗಿಕೊಂಡ ನಂತರ ಎಕಲೋಫ್ ಹೇಳಿದ.

ರಾಯಲ್ ಲೈಬ್ರರಿಯಲ್ಲಿ ಇಬ್ನ್ ಇಲ್ ಅರಬಿಯ 'ತರ್ಜುಮಾನ್ ಇಲ್ ಅಶ್ವಾಖ್' ಕೃತಿಯನ್ನು ನೋಡಿದ ಎಕಲೋಫ್‌ಗೆ ದೀರ್ಘಕಾಲ ಅದು ಬಹಳ ಪ್ರಿಯವಾದ ಪುಸ್ತಕವಾಗಿತ್ತು. ಅದರಿಂದ ಅವನು ಸಿಂಬಾಲಿಸಂ ಮತ್ತು ಸರ್ರಿಯಲಿಸಂ ಎಂದರೆ ಏನೆಂದು ಅರಿತುಕೊಂಡ. ಅವನಿಗೆ ಭಾರತಕ್ಕೆ ಬರುವ ಮನಸ್ಸೂ ಬಲವಾಗಿತ್ತು. ಅದನ್ನು ಹತ್ತಿಕ್ಕಿ ಅವನು ಉಪ್ಸಲ ಯೂನಿವರ್ಸಿಟಿಯಲ್ಲಿ ಪರ್ಷಿಯನ್ ಕಲಿಯಲು ಸ್ವೀಡನ್‌ಗೆ ಹಿಂತಿರುಗಿದ.

ಅವನ ಅತಿ ದೊಡ್ಡ ವ್ಯಾಮೋಹ ಸಂಗೀತ. ಅದನ್ನು ಕಲಿಯಲು ಅವನು ಪ್ಯಾರಿಸ್‌ಗೆ ಹೋಗಿದ್ದು. ಆದರೆ ಕಾವ್ಯ ಭಾಷೆಯ ತೊಡಕುಗಳು ಅವನನ್ನು ತಮ್ಮತ್ತ ಸೆಳೆದುಕೊಂಡವು. ಪದದ ಪಕ್ಕ ಪದವಿಟ್ಟು ಕಷ್ಟದಿಂದ ವಾಕ್ಯವನ್ನು ರಚಿಸಲು ತಾನು ಪ್ರಯತ್ನಿಸಿದ್ದಾಗಿ ಅವನು ಹೇಳಿಕೊಂಡಿದ್ದಾನೆ. 'ಸಹಜವಾಗಿಯೆ ಇದು ಇದೇ ಎಂಬ ಅರ್ಥದಲ್ಲಿ ವಾಕ್ಯಗಳನ್ನಲ್ಲ, ಪದಗಳ ಸೂಕ್ಷ್ಮವನ್ನು ಹಿಡಿದಿರಿಸಿದ ವಾಕ್ಯಗಳನ್ನು. ಅದರಲ್ಲಿ ಅಡಗಿದ ಅರ್ಥವನ್ನು ಕಾಣಲು ನಾನು ಅನ್ವೇಷಿಸುತ್ತಿದ್ದದ್ದು. ಕಾವ್ಯವೊಂದು ಸಂಘರ್ಷಾತ್ಮಕ ಸಂಬಂಧ, ಪದ ಪದಗಳ ನಡುವೆ, ಸಾಲು ಸಾಲುಗಳ ನಡುವೆ, ಅರ್ಥ ಅರ್ಥಗಳ ನಡುವೆ ನಡೆಯುವ ಸಂಘರ್ಷ' ಎಂದು ಎಕಲೋಫ್ ಹೇಳುತ್ತಾನೆ.

೧೯೩೨ರಲ್ಲಿ ಪ್ರಕಟವಾದ 'ಸೆಂಟ್ ಪ ಜೋರ್ಡನ್' ಸಂಕಲನದ ಬಹುಪಾಲು ಕವಿತೆಗಳು ಪ್ಯಾರಿಸ್‌ನಲ್ಲಿಯೇ ಬರೆದವು. ೧೯೪೦ರಲ್ಲಿ ತನ್ನ 'ಫೆರಿ ಸಾಂಗ್' ಪ್ರಕಟವಾಗುವ ವೇಳೆಗೆ ಆತ ಸ್ವೀಡನ್‌ನ ಮುಖ್ಯ ಕವಿಯಾಗಿದ್ದ. ಇಲ್ಲಿ ಪ್ರಕಟವಾಗಿರುವ ಎರಡೂ ಕೃತಿಗಳು ನಂತರದ ದಿನಗಳಲ್ಲಿ, ಅಂದರೆ ಸಾವಿಗೆ ಸ್ವಲ್ಪ ಮೊದಲು, ಬರೆದವು. ದಿವಾನ್ ೧೯೬೫ರಲ್ಲಿ ಬಂತು. ಫಾತುಮಾ ೧೯೬೬ರಲ್ಲಿ ಬಂತು.

ಪ್ರಿನ್ಸ್ ಆಫ್ ಎಂಜಿಯಾನ್, ಎಕಲೋಫ್‌ನ ಹಿಂದಿನ ಎರಡು ಕವಿತೆಗಳಲ್ಲಿಯು ಕಂಡುಬಂದಿದ್ದಾನೆ. ದಿವಾನ್ ಕುರಿತು ಎಕಲೋಫ್ ಹೇಳಿದ್ದಾನೆ, "೩೦ರ ದಶಕದಲ್ಲಿ ಧಾರ್ಮಿಕ ಕೂಟವೊಂದರಲ್ಲಿ ಪಾರಮಾರ್ಥಿಕವಾದ ಅರ್ಥದಲ್ಲಿ 'ನಾನು' ಎನ್ನುವುದನ್ನು ಕಾಣುವುದು ಎಲ್ಲಿ ಎಂದು ಪ್ರಶ್ನಿಸಿಕೊಂಡೆ. ಮೇಜಿನ ಮೇಲೆ ತಲೆಕೆಳಗಾಗಿ ಇರಿಸಿದ್ದ ಕುಡಿಯುವ ನೀರಿನ ಲೋಟ ಭವಿಷ್ಯವಾಣಿ ನುಡಿಯಿತು, ಅದು ಪರ್ಷಿಯಾದಲ್ಲಿ ಮತ್ತು ಆತನ ಹೆಸರು ಎಂಜಿಯಾನಿನ ರಾಜ ಎಂದು." ಆಮೇಲೆ ಎಕಲೋಫ್ ಆ ರಾಜ ಅರ್ಮೇನಿಯನ್ - ಕುರ್ದಿಶ್ ಮೂಲದವನೆಂದೂ ಅರೆ ಕ್ರಿಶ್ಚಿಯನ್, ಅರೆ ಅಧ್ಯಾತ್ಮವಾದಿ ಎಂದೂ ನಂಬಿದ್ದ. ದಿವಾನ್ ಕೃತಿಯ ರಚನೆ ೧೯೬೫ರಲ್ಲಿ

ಕಾಂಸ್ಟಾಂಟಿನೋಪಲ್‌ನಲ್ಲಿ ಆರಂಭವಾಯಿತು. ಇಲ್ಲಿನ ಬಹುತೇಕ ಕವಿತೆಗಳ ರಚನೆಯ ಕಾಲ ನಾಲ್ಕು ವಾರಗಳು. ಆತ 'ಇವು ತನ್ನ ರಾಗ ಮತ್ತು ಪ್ರೀತಿಯ ಅತಿ ಶ್ರೇಷ್ಠ ರಚನೆಗಳು. ಇವನ್ನು ಮುಟ್ಟಲು, ನೋಡಲು ನನ್ನಿಂದ ಸಾಧ್ಯವಾಗದು. ಏಕೆಂದರೆ ಈ ಹಿಂಸೆಗೆ ಬಲಿಯಾದ ಕುರುಡನನ್ನು ನೋಡಿದರೆ ರೋಗ ಮುಚ್ಚಿಕೊಂಡಂತಾಗುತ್ತದೆ. ಈ ಕವಿತೆಗಳನ್ನು ನನ್ನ ಮೂಲಕ ಯಾರೋ ಬರೆದಿದ್ದಾರೆ. ನಿಜಕ್ಕೂ ನನಗೆ ಇಂತಹ ಅನುಭವ ಆಗಿಯೇ ಇಲ್ಲ' ಎಂದು ತನ್ನ ಗೆಳೆಯನೊಬ್ಬನಿಗೆ ಬರೆದ ಪತ್ರದಲ್ಲಿ ಹೇಳಿಕೊಂಡಿದ್ದ.

ಇದರಲ್ಲಿ ಕಾಣುವ ಪಾತ್ರ ರಾಜನದಲ್ಲ, ಅದು ೧೧ನೆಯ ಶತಮಾನದ ಬೈಜಾಂಟಿಯನ್ ಪ್ರಣಯ ಮಹಾ ಕಾವ್ಯದ ನಾಯಕ ದಿಜಿನಿಸ್ ಅಕ್ರಿಟಸ್‌ನದು. ದಿಜಿನಿಸ್ ಅಕ್ರಿಟಸ್ ಅರಬ್ ತಂದೆ ಮತ್ತು ಬೈಜಾಂಟಿಯನ್ ತಾಯಿಯ ಮಗ. ಯುದ್ಧದಲ್ಲಿ ಸೆರೆಯಾದ ಅವನನ್ನು ಬಂಧನದಲ್ಲಿಟ್ಟು ಚಿತ್ರ ಹಿಂಸೆಗೆ ಗುರಿಮಾಡಿ ಬಳಿಕ ಅಂಧನನ್ನಾಗಿಸಲಾಯಿತು. ಅವನ ಯಾತನೆ ತುಂಬಿದ ಬದುಕಿನಲ್ಲಿ ಒಂದೇ ಒಂದು ಸಮಾಧಾನ ನೀಡಿದ ಅಂಶವೆಂದರೆ ಅವನು ಉತ್ಕಟತೆಯಿಂದ ತನ್ನೆಲ್ಲ ಸ್ತೋತ್ರ ಗೀತೆಗಳನ್ನು ಅರ್ಪಿಸಿದ ವರ್ಜಿನ್. ಈ ಪ್ರತಿಮೆ ಮೂಲಭೂತವಾಗಿ ಕ್ರಿಶ್ಚಿಯನ್ ಮಡೋನಾಳದಲ್ಲ. ಇದು ನಮಗೆ ಸೇಂಟ್ ಪಾಲರ ಮುಖಾಂತರ ತಿಳಿದುಬಂದಿರುವ ಡಯಾನಾ ಆಫ್ ಎಫೇಸಿಯನ್ಸ್ ಎಂಬ ಭೂಮಿ ತಾಯಿಯದು. ದಿವಾನ್‌ನಲ್ಲಿ ನಮಗೆ ಇನ್ನೊಂದು ಸ್ತ್ರೀ ಪಾತ್ರ ಕಾಣಸಿಗುತ್ತದೆ. ಅದು ಮಾನವ ಪಾತ್ರ, ದೈವೀ ಪಾತ್ರವಲ್ಲ - ಬಹುಶಃ ಹೆಂಡತಿ, ಬಹುಶಃ ತಂಗಿ ಅಥವಾ ಮಗಳು. ಈ ಪಾತ್ರ ನಾವು ಸಾಮಾನ್ಯವಾಗಿ ಪರಿಭಾವಿಸುವ ಹೆಣ್ಣುಗಳಿಗಿಂತ ತೀರ ಭಿನ್ನವಾದದ್ದು:

ಮಗಳೊಬ್ಬಳು ತನ್ನ ಗಂಡನ ತಂದೆಯಾಗಿ
ತಂದೆಯ ತಂದೆಯಾಗಿ ಇರಬಹುದು.

ದಿಜಿನಸ್ ಮತ್ತು ಆ ಹೆಣ್ಣಿನ ಸಂಬಂಧ ತೀರಾ ಅಸ್ಪಷ್ಟವಾಗಿದೆ. ಉದಾಹರಣೆಗೆ ಈ ಸಾಲುಗಳನ್ನು ಗಮನಿಸಬಹುದು.

ನಿನ್ನ ಪಾದಕ್ಕಲ್ಲ ನಾನು ಹಾತೊರೆದಿದ್ದು / ಯಾರ ಹೆಜ್ಜೆಗುರುತು ಯಾವುದರೆಡೆಗೂ / ಒಯ್ಯದೋ ಆ ಅಂಥ ಪಾದದಲ್ಲಿನ / ನಿನ್ನ ಪಾದಗಳಿಗೆ /

ನಿನ್ನ ಜೊತೆ ಮಲಗಿದ್ದೇನೆ ಫಾತಿಮಾ / ನಿನ್ನ ಪಾರ್ಶ್ವವಾಯು ಬಡಿದ ದೇಹವನ್ನು / ನನ್ನ ದೇಹಕ್ಕೆ ಒತ್ತಿಕೊಂಡು / ಕೊನೆಯಿರದ ಅಪ್ಪುಗೆಯಲ್ಲಿ / ನಮ್ಮಲ್ಲಿ ಯಾರೊಬ್ಬರೂ ಕದಲಲಾರೆವು / ಯಾರೊಬ್ಬರೂ ಇನ್ನೊಬ್ಬರ ಮೈದಡವಲಾರೆವು /

ಫಾತುಮಾಳ ಕಥೆಯೂ ಅಷ್ಟೇ ದುಃಖಮಯವಾದದ್ದು. ದಯಾಮಯಿಯಾದ ಸುಂದರ ಹೆಣ್ಣೊಂದರ ಕಥೆಯನ್ನು ಇದು ಹೇಳುತ್ತದೆ. ಮೊದಲು ವಾರಾಂಗನೆಯಾಗಿದ್ದು ಬಳಿಕ ಅರಸನ ಮನೋವಲ್ಲಭೆಯಾಗಿ ಅವನ ಮಗುವಿನ ತಾಯಿಯಾಗುವ ಈಕೆಯನ್ನು ಅವನು ತೊರೆದುಬಿಡುತ್ತಾನೆ. ಅವಳನ್ನು ಅಲ್ಲಿಂದ ಎರೆಕ್ತಿಯಾನ್‌ನ ಹೆಂಗಸರಿರುವ ಸ್ಥಳವೊಂದಕ್ಕೆ ಕರೆತರಲಾಗುತ್ತದೆಯಾದರೂ ಅವಳಿಗೆ ಅಲ್ಲಿ ಉಳಿಗಾಲವಿಲ್ಲದೆ ಹೋಗಿ ಹೊರದೂಡಲ್ಪಟ್ಟು ಉಳಿವಿಗೆ ತನ್ನನ್ನು ತಾನು ಮಾರಿಕೊಂಡು ದಯನೀಯ ಅಪರ ವಯಸ್ಸಿನ ಬದುಕು ತೇಯುತ್ತಾಳೆ. ಡಿಜಿನಸ್‌ನ ಹಾಗೆಯೇ

ಆಕೆ ತನ್ನ ಕಾಣ್ಕೆಗಳಿಂದ ಉಳಿದುಕೊಂಡವಳು. ಏನೇ ಆಗಿದ್ದರೂ, ಏನೇ ಆದರೂ, ಎಂಥ ದುರಂತವೇ ಘಟಿಸಿದರೂ ಆಕೆಯ ಆತ್ಮವನ್ನು ಯಾವುದೂ ಕಲುಷಿತಗೊಳಿಸಲಾರದು.

ಗ್ರೀಕ್ ಕವಿ ಕಾಂಸ್ಟಾಂಟಿನ್ ಕವಾಯಿಯ ಹಾಗೆ ಎಕಲೋಫ್ ಕೂಡಾ ತನ್ನ ಕವಿತೆಗಳನ್ನು ಎಂದೋ ಆಗಿಹೋದ ಕಾಲದಲ್ಲಿ ನಿಲ್ಲಿಸುತ್ತಾನೆ. ಆದರೆ ಎಕಲೋಫ್ ಭಾವುಕ. ಅಲ್ಲಿ ಮಗ್ನನಾಗುವವನು. ಅವನು ಭೂತವನ್ನು ಪಲಾಯನದ ದಾರಿಯಾಗಿ ಆಯ್ಕೆ ಮಾಡಿಕೊಳ್ಳುವುದಿಲ್ಲ. ಅವನಿಗೆ ಅದು ವರ್ತಮಾನವನ್ನು ಬೆಳಗುವ, ಟೀಕೆಗೆ ಒಳಪಡಿಸುವ ಮಾರ್ಗ. ಬೈಜಾಂಟಿಯಂನಿಂದ ಅಷ್ಟು ಆಕರ್ಷಿತನಾಗಿದ್ದರೂ ಅದನ್ನವನು ಉದಾತ್ತೀಕರಿಸಿಲ್ಲ. ಅದನ್ನು ಕುರಿತಂತೆ ತನ್ನಲ್ಲಿ ಹುಟ್ಟಿದ್ದ ಅದಮ್ಯ ಆಕರ್ಷಣೆಗೆ ಅವನು ನೀಡುವ ಕಾರಣವಿದು: "ಬೈಜಾಂಟಿಯನ್ ಬದುಕು, ಪಾರಂಪರಿಕವಾಗಿ ಮತ್ತು ಸಾಂಪ್ರದಾಯಿಕವಾಗಿ, ನಮ್ಮ ನಗರಗಳ, ರಾಜ್ಯಗಳ ರಾಜಕೀಯ ಬದುಕಿನ ಹಾಗೆ. ನಾನು ಅದರಲ್ಲಿ ಅಷ್ಟು ಆಸಕ್ತಿ ತಾಳಲು ಕಾರಣ ನಾನು ಅದನ್ನು ಅಷ್ಟೊಂದು ದ್ವೇಷಿಸುತ್ತೇನೆ." ದಿವಾನ್ ನಾವು ನಮ್ಮ ಸುತ್ತು ಕಾಣುತ್ತಿರುವ ರಾಜಕೀಯ ಅವನತಿಯ ಪ್ರತೀಕ. ಫಾತುಮಾ ಅಷ್ಟೇ ಮುಖ್ಯವಾಗಿ ಶಿಥಿಲವಾಗುತ್ತಿರುವ ಸಂಬಂಧಗಳ, ವ್ಯಕ್ತಿಗಳ ನಡುವಿನ ಆರಿಹೋಗುತ್ತಿರುವ ಹಿತಬಿಸುಪಿನ ಸಂಕೇತ.

ಎಕಲೋಫ್ ವಿಶೇಷವಾದ ಸಂಖ್ಯಾ ಶಾಸ್ತ್ರದ ಸಿದ್ಧಾಂತವನ್ನು ಇರಿಸಿಕೊಂಡಿದ್ದ. ಅವನ ಪ್ರಕಾರ ಸಾವು ಬೆಸ ಸಂಖ್ಯೆ, ಬದುಕು ಸಮ ಸಂಖ್ಯೆ, ಫಾತುಮಾಳ ಕಥೆಯ ನಿರೂಪಣೆಯಲ್ಲಿ ಅವನು ಸಂಖ್ಯಾಧಾರಿತ ಲಯದ ಸೂತ್ರವೊಂದನ್ನು ಅನುಸರಿಸುತ್ತಾನೆ. ಈ ವ್ಯವಸ್ಥೆಯನ್ನು ಅನುವಾದದಲ್ಲಿ ಅನುಸರಿಸಲಾಗದ್ದೆಂದು ಆಡೆನ್ ಸ್ವಯಂ ಕೈಬಿಟ್ಟಿದ್ದಾನೆ.

ಭಾಗ ೨

ಎಕಲೋಫ್‌ನ ಕಾವ್ಯ ಉತ್ಕಟ ಅನುಭವಕ್ಕೆ ನಮ್ಮನ್ನು ಹಚ್ಚುವಂತಹುದು. ದಿವಾನ್ ಮತ್ತು ಫಾತುಮಾ ಎಂಬ ಎರಡು ಭಾಗದ ಕವಿತೆಗಳನ್ನು ಬೇರೆ ಬೇರೆಯೂ ಸಮಗ್ರವೂ ಆದ, ವಾಗಿಮ್ದೂ ಒಂದು ಇನ್ನೊಂದರಲ್ಲಿ ನೆರಳು ಕೊಂಬೆಗಳನ್ನು ಚಾಚಿಕೊಂಡಿರುವ ಎರಡು ಕೃತಿಗಳನ್ನು ಓದುವಂತೆ ಓದಬೇಕು. ಒಂದು ಕವಿತೆಯಿಂದ ಇನ್ನೊಂದಕ್ಕೆ ಇಲ್ಲಿನ ವಸ್ತು, ಭಾವ ಹರಿಯುತ್ತವೆ. ಬದುಕಿನ ಕೊನೆಯ ಕವಿತೆಗಳಾದ ಇವುಗಳಲ್ಲಿ ಅವನು ತನ್ನ ಆರಂಭಿಕ ಕಾವ್ಯದೊಡನೆ ಪುನರ್ ಅನುಸಂಧಾನದಲ್ಲಿ ತೊಡಗಿದ. ಆದರೆ ಇದರಲ್ಲಿ ಅವನಿಗೆ ಯೇಟ್ಸ್ ಅಥವ ಆಡೆನ್‌ಗೆ ಹಾಗೆ ಬರೆಯಲು ಇದ್ದಂತಹ ಕಾರಣಗಳಿರಲಿಲ್ಲ. ಸ್ವರ್ಣಯುಗ ಮುಗಿದಿದೆ, ಅಷ್ಟೇಕೆ ಮಾಯಾವಾಗಿಯೇ ಹೋಗಿದೆ. ಆದರೂ ನಾವು, ಅದನ್ನು ಸಾಧ್ಯವನ್ನಾಗಿ ಮಾಡಿದ್ದ ಅಂತಸ್ಸತ್ವದ ಒಂದು ನವಿರಾದ ಎಳೆಯನ್ನು ಹಿಡಿದು ಅದರೊಂದಿಗೆ ಸಂಬಂಧವನ್ನು ಸ್ಥಾಪಿಸಿಕೊಳ್ಳಲು ಸಾಧ್ಯ. ಹಾಗೆ ಮಾಡಲು ಸಾಧ್ಯವಾಗುವುದು ಎಲ್ಲಕ್ಕು ತಡೆಯಾಗಿರುವ, ನಮ್ಮಲ್ಲಿಯೇ ಅಂತಸ್ಥವಾಗಿರುವ, ಕಿಟ್ಟ ಕಟ್ಟಿರುವ ಸಾಂಸ್ಕೃತಿಕ ಹೂಳನ್ನು ನಾವು ಪದರ ಪದರವಾಗಿ ಹೆರೆದು ಹಾಕಿದಾಗ ಮಾತ್ರ ಎನ್ನುವುದು ಅವನ ಗಾಢ ನಂಬಿಕೆಯಾಗಿತ್ತು.

ನಾನು ತೋಳುಗಳನ್ನು ಕಳಚಿಬಿಡುತ್ತೇನೆ
ಗುಲಾಬಿ ಛಾಯೆಯ ಕಂದು ಕೈಗಳು

ಕಂದು ಮೊಲೆಗಳು, ಮೊದಲು ಬಲಮೊಲೆ
ನಂತರ ಎಡಮೊಲೆ...

ಆಮೇಲೆ ನೆತ್ತಿಯ ಚರ್ಮ, ಕೆನ್ನೆ
ಆಮೇಲೆ ಅಸ್ತಿವಲಯ...
ಕೊನೆಗೆ
ಈಗಲೂ ನನ್ನತ್ತಲೇ ಎವೆ ಪಿಳುಕಿಸದೆ
ನೋಡುತ್ತಿರುವ ಆ ದೊಡ್ಡ ಕಣ್ಣುಗಳು

ಹೀಗೆ ಅವೆಲ್ಲವನ್ನೂ ತೆಗೆದ ಬಳಿಕ
ಹೊನ್ನ ಗಾಜನ್ನೂ ಹೊನ್ನ ಬಳ್ಳಿಯ
ಲೇಪನವನ್ನೂ ನಾನು ತೆಗೆದುಬಿಡುವೆ
ಹಿಂದಿನ ಮರ ತೋರುವವರೆಗೂ

ಮನುಷ್ಯ ಪರಸ್ಪರ ವಿರೋಧಿ ಶಕ್ತಿಗಳ ನಡುವೆ ಸಿಕ್ಕು ನಜ್ಜುಗುಜ್ಜಾಗುವ ಒಂದು ಸಂಕೀರ್ಣ ಸೃಷ್ಟಿ. ಕಾವ್ಯಕ್ಕೆ ಚರಿತ್ರೆಯ ಮೊಗಸಾಲೆಯಲ್ಲಿ ವೈಯಕ್ತಿಕ ವಿಸಂಗತಿಗಳನ್ನು ಅರಸಿ ದಣಿಯುವುದಕ್ಕಿಂತ ಶ್ರೇಷ್ಠವಾದ ಉದ್ದೇಶವೆಂದರೆ ಸಾಂಸ್ಕೃತಿಕ ಕಿಟ್ಟವನ್ನು ಪದರ ಪದರ ತೆಗೆದುಹಾಕುವುದು ಎಂಬ ನಿಲುವು ಅವನದಾಗಿತ್ತು.

ನಿಜಕ್ಕೂ ಮಾನವೀಯವಾದದ್ದೊಂದನ್ನು, ಮನುಷ್ಯರಿಗೆಲ್ಲ ಸಾಮಾನ್ಯವಾದದ್ದನ್ನು ತಲುಪಲು ಇರುವುದು ಇದೊಂದೇ ದಾರಿ. ಅದನ್ನು ಹಾಗೆ ಮಾಡಬಲ್ಲವರು ತಾವು ಏಕಾಂಗಿಗಳಲ್ಲ, ಮಂದಿ ತನ್ನನ್ನು ಗಮನಿಸುತ್ತಿದ್ದಾರೆ ಎನ್ನುವುದನ್ನು ಅರಿತುಕೊಳ್ಳುತ್ತಾರೆ. ಅಳಿಸಿಹಾಕುವ ಇಂತಹ ಒತ್ತಾಯದಿಂದಲೆ ಎಕಲೋಫ್ ತನ್ನ ಕೃತಿಗಳನ್ನು ಸಾಂಸ್ಕೃತಿಕ ಸವಲತ್ತುಗಳಿಂದ ವಂಚಿತಗೊಳಿಸುತ್ತಾನೆ ಅಥವಾ ಪಾರುಮಾಡುತ್ತಾನೆ ಮತ್ತು ತುಂಬ ಸ್ಪಷ್ಟವಾಗಿ ಬದುಕಿನಿಂದಲೇ ಹೆಕ್ಕಿದ ವಿವೇಕವನ್ನು ನಮ್ಮ ಮುಂದಿಡುತ್ತಾನೆ :

ನಾವೇನಾದರೂ ಪರಸ್ಪರ ಇದಿರಾಗಿದ್ದಿದ್ದರೆ
ಡಿಜೇನಿಸ್
ಶಸ್ತ್ರಾಸ್ತ್ರಗಳನ್ನೆಲ್ಲ ನೆಲಕ್ಕೆ ಚೆಲ್ಲಿ
ಒಬ್ಬರನ್ನೊಬ್ಬರು ಅಪ್ಪಿಕೊಳ್ಳುತ್ತಿದ್ದೆವು
ದೀರ್ಘವಾಗಿ
ಇವತ್ತು ನಾವು ಯಾವುದರ ವಿರುದ್ಧ

ಹೋರಾಡಬೇಕು ಎಂದು
ಮಾತಾಡಿಕೊಳ್ಳುತ್ತಿದ್ದೆವು
ಮತ್ತೆ
ನಾವು ಬೀಳ್ಕೊಡುತ್ತಲೂ
ಒಬ್ಬರನ್ನೊಬ್ಬರು
ಅಪ್ಪಿಕೊಳ್ಳುತ್ತಿದ್ದೆವು

ಎಕಲೋಫ್‌ನ ಕಾವ್ಯದ ಉದ್ದೇಶವಿಲ್ಲಿ ಸಫಲವಾಗಿದೆ. ಅವನ ಆಕಾಂಕ್ಷೆಯ ಹರವು

ಸಮೀಪಿಸುತ್ತಿರುವ ಈ ಕೊನೆಯಿರದ ಇರುಳಲ್ಲಿ
ಈ ಹಾಡು
ನಮ್ಮನ್ನು ಒಂದು ಮಾಡುವ ಹಾಡಾಗಿರಲಿ -

ಎಂಬಲ್ಲಿ ಸ್ಪಷ್ಟವಾಗಿ ವಿಸ್ತಾರಗೊಂಡಿದೆ.

ಐವತ್ತರ ದಶಕದ ಕೊನೆಯ ಮತ್ತು ಅರವತ್ತರ ದಶಕದ ಆರಂಭದ ಅವನ ಕೃತಿಗಳು ಸರಳಗೊಳಿಸಬೇಕೆಂಬ ಇರಾದೆಯಿಂದ ಹುಟ್ಟಿದವು. ಆದರೆ ಬೈಜಾಂಟಿಯನ್ ತ್ರಿವಳಿಗಳಲ್ಲಿ ಅವನು ಡಾನ್ ಕ್ವಿಕ್ಸೋಟ್‌ನ ಕಥೆಯನ್ನು ಯಥಾವತ್ತು ಬರೆಯಲು ಬಯಸಿದ್ದ ಬೋರ್ಜೆಸ್‌ನ ಕಥಾ ಪಾತ್ರ ಪಿಯರೆ ಮೆಸ್ನಾರ್ಡ್‌ನಂತೆ ಅನುಕರಣ ಕೃತಿಗಳ ನಿಷ್ಠೆಯನ್ನು ಒಪ್ಪಿಕೊಂಡಿದ್ದ. ಆದರೆ ಅವನಿಗೇನೆ ತನ್ನ ವ್ಯಕ್ತಿತ್ವವನ್ನಾಗಲಿ, ಭಾಷೆಯ ಮೇಲಿನ ತನ್ನ ಪ್ರಭುತ್ವವನ್ನಾಗಲಿ ಬಿಟ್ಟುಕೊಡಲು ಸಾಧ್ಯವಾಗಲಿಲ್ಲ. ಎಕಲೋಫ್‌ನಲ್ಲಿ, ಹಾಗಾಗೇ, ಬೆಳಗುವ ಪ್ರತಿಮೆಗಳನ್ನು ಮತ್ತೆ ಮತ್ತೆ ನಾವು ಎದುರುಗೊಳ್ಳುತ್ತೇವೆ.

ಒಂದು ದಿನ
ನಾನು ನಿನ್ನ ನೆನಪನ್ನು
ನಿನ್ನಲ್ಲಿನ ನನ್ನ ಕುರಿತ ನೆನಪುಗಳನ್ನು
ತೊಳೆದುಬಿಡುತ್ತೇನೆ
ನಮ್ಮಿಬ್ಬರ ನಡುವೆ
ಎಂಥದೂ ಬಂದು ನಿಲ್ಲದಂತೆ....

ಎಂದ ಎಕಲೋಫ್‌ನ ಆ ಎಚ್ಚರವು ಕೇವಲ ಬೌದ್ಧಿಕ ಎಚ್ಚರವಲ್ಲ. ಸೂಕ್ಷ್ಮವಾದ ಭಾವನಾತ್ಮಕ ಎಚ್ಚರ. ಆದ್ದರಿಂದಲೇ ಅವನ ಕಾವ್ಯ ನಾಯಕ ಅಂಧ ದಿಜೆನಿಸ್ ಗೋಳಾಡುವುದಿಲ್ಲ. ನರಳುವುದಿಲ್ಲ. ಕೈಯನ್ನೂ, ಅದು ಹಿಡಿದ ತುಂಬಿದ ಚಮಚೆಯನ್ನೂ ಅತ್ತ ತಳ್ಳುತ್ತಾನೆ. ನಿರ್ಮೋಹದಿಂದಲೇ ಎಲ್ಲವನ್ನೂ ನೋಡುತ್ತಾನೆ. ರಿಲ್ಕ್‌ನ ಅಂಧನಿಗೆ ಅಂಧತ್ವವೊಂದು ಹೇವರಿಕೆ, ಅದೊಂದು ಶಾಪ. ಅದೆಲ್ಲವೂ ವಿಧಿಲಿಖಿತ. ಎಲ್ಲವೂ ಪ್ರಭುವಿನದು. ಕೊಡುವವನೂ ಅವನೆ. ಆದರೆ ಎಕಲೋಫ್‌ನ

ಅಂಥ ಸದ್ದಿನಿಂದ, ಸ್ಪರ್ಶದಿಂದ, ಪರಿಮಳದಿಂದ, ಸ್ಮೃತಿಯಿಂದ, ಮೌನದಿಂದ ಎಲ್ಲವನ್ನೂ ಗ್ರಹಿಸಬಲ್ಲವನು.

ನಾನು ನನ್ನ ಕೈಗಳಿಗೆ
ಇನ್ನೊಂದು ಬೆಳಕು ನೋಡಲು ಕಲಿಸಿದೆ
ಸ್ಪರ್ಶದ ಬೆಳಕನ್ನು

ಕುರುಡನಲ್ಲ, ಕಣ್ಣು ಕಿತ್ತವನು ದಿಜೆನಿಸ್

ನನ್ನ ಮಸ್ಸಿನಲ್ಲಿ
ನಿನ್ನ ಕಣ್ಣು ಕಪ್ಪಾಗುವುದನ್ನು ಕಂಡೇನು
ನಿನ್ನ ಕಣ್ಣಿನ ಆಳದಲ್ಲಿ
ಮಧುವಿನ ಕೆಂಪು ಹೊಳಪನ್ನು
ಅವುಗಳ ಸುತ್ತು
ಪರಿಶುದ್ಧ ನೀರಿನ ಉಂಗುರವನ್ನು
ಕಂಡೇನು.... ಎನ್ನುತ್ತಾನೆ.

ಎಕಲೋಫ್‌ನದು ಸ್ವಯಂ ನಿರಸನಗೊಳ್ಳುವ, ಕಳಚಿಕೊಳ್ಳುವ, ಅದ್ವೈತ. ಆದರೆ ಪೊಸೆಸಿವ್ ಆಗದ ಎಚ್ಚರ. ಆ ಮೂಲಕ ತನ್ನ ಇಡೀ ವ್ಯಕ್ತಿತ್ವಕ್ಕೆ ಸಮಗ್ರತೆಯ ಆಯಾಮವನ್ನು ಒದಗಿಸಿಕೊಳ್ಳುವ ಎಕಲೋಫ್‌ನ ನಂಬಿಕೆಗಳು ಬದುಕಿನತ್ತ ಕರೆದೊಯ್ಯುವ ದಾರಿಯನ್ನು ತೋರಲು ಒದಗಿಬರುತ್ತವೆ.

ಹೇಗೆ ನಾನು ಕಾವಲು ಬೆಂಕಿಗಳ
ಅವರಿಗಾಗಿ ಹೊತ್ತಿಸಿದ್ದೆ
ಇರದ ಮರದ
ಇರುವ ಮರದ
ಆರಣಿಗಳನ್ನು ಒಂದಕ್ಕೊಂದು
ತಿಕ್ಕಿ ತಿಕ್ಕಿ

ಎಕಲೋಫ್‌ನ ಓದು ಏಕೆ ಅಗತ್ಯವಾಗಿದೆ ? ಅವನನ್ನು ಅದೇಕೆ ಪಾಜ್, ಆಡೆನ್, ಲ್ಯಾಂಬರ್ಟ್ ಮುಂತಾದ ಅಷ್ಟೊಂದು ಘನವಾದ ಹೆಸರಾಂತ ಕವಿಗಳು ಅನುವಾದಕ್ಕೆ ಎತ್ತಿಕೊಂಡರು ? ಇದಕ್ಕೆ ಎಕಲೋಫ್‌ನ ಕಾವ್ಯದ ಓದು ಮಾತ್ರವೇ ಸರಿಯಾಗಿ ಉತ್ತರಿಸಬಲ್ಲದು. ಎಕಲೋಫ್‌ನ ಭಾಷೆ ಕಠಿಣ ಮತ್ತು ಬಹಳ ಸಂಕೀರ್ಣ. ತನ್ನ ಭಾಷೆಯ ಸಂಕೀರ್ಣ ಗುಣಗಳನ್ನು ಅದು ಶೋಧಿಸಿದ ಹಾಗೆಲ್ಲ ಕಾವ್ಯ, ಅನುವಾದಕ್ಕೆ ದುರ್ಲಭವಾಗಿ ಹೋಗುತ್ತದೆ ಎನ್ನುತ್ತಾರೆ.

ಅದೊಮ್ಮೆ ನಾವು ಕಾವ್ಯವನ್ನು ಅದರ ಭಾಷಿಕ ಸಂಕೀರ್ಣತೆಗಾಗಿ ಆದರಿಸಿದೆವಾದರೆ ಅನುವಾದ ಕಲೆಗೆ ಅಂಥ ಭವಿಷ್ಯವೇನೂ ಇರಲಾರದು. ಈಗಾಗಲೆ ಹೇಳಿದ ಹಾಗೆ ಎಕಲೋಫ್‌ನ

ಭಾಷೆ ನಿಸ್ಸಂಶಯವಾಗಿಯೂ ಕಠಿಣ ಮತ್ತು ಬಹಳ ಸಂಕೀರ್ಣ. ಆದರೆ ಅವನ ನಂತರದ ಕವಿತೆಗಳಲ್ಲಿ ಸಂಕೀರ್ಣತೆಯನ್ನು ಆವರಿಸಿಬಿಡುವ ಅದೊಂದು ಬಗೆಯ ನೈತಿಕ ಬಲವಿದೆ. ಅವನು ಕತ್ತಲು ರಾಜ್ಯದ ದೊರೆಯಲ್ಲ, ಅವನು ಅದನ್ನಿದೀ ಬೆಳಗಿಸಿ ಇಟ್ಟಿದ್ದಾನೆ, ಪ್ರಣತೆಗೆ ಬತ್ತಿ ಹಾಕಿ, ಎಣ್ಣೆ ಹಾಕಿ, ಬೆಳಕ ಮುಡಿಸಿ

ನೀನು ಹೋದ ಮೇಲೆ

ನನಗೊಂದು

ಬೆಳ್ಳಿ ಸೊಡರನ್ನು ಕೊಟ್ಟೆ ...

ಆದ್ದರಿಂದಲೇ ಅವುಗಳನ್ನು ಅನುವಾದಿಸುವುದು ಸರಳೂ ಹೌದು. ಇದು ಭಾಷಿಕ ಸರಳತೆಯ ಕಾರಣದಿಂದಲ್ಲ, ಅವುಗಳ ಹಿಂದಿನ ತುರ್ತು ಸಂಬಿಕೆಗಳ ಕಾರಣದಿಂದಾಗಿ, ಅಭಿವ್ಯಕ್ತಿಯ ಕಾತರದಿಂದಾಗಿ. ಅವುಗಳಲ್ಲಿ ಒಂದು ಧ್ವನಿಯಿದೆ, ಉಸಿರಿದೆ, ಮೂಕವಾಗಿ, ಭಾವುಕಾಗಿ ಆದರೆ ಅದೇ ವೇಳೆ ಭಾವನಾರಹಿತವಾಗಿ. ಇದನ್ನು ಮರೆಯಲಾಗದು, ಪರರದೆಂದು ಊಹಿಸಲಾಗದು, ಏಕಲೋಫ್‌ನ ಸಾವಿನ ಬಳಿಕ ಪ್ರಕಟಿಸಲಾದ ಅವನ ಕೊನೆಯ ಹಾಗೂ ಅತ್ಯಂತ ಯಾತನಾಮಯವಾದ 'ಪಾರ್ಟಿಟ್ಯೂರ್' ಎಂಬ ಸಂಕಲನದಲ್ಲಿ ಅವನು ತುಂಬ ಸರಳವಾಗಿ ತಾನು ಶೂನ್ಯದಲ್ಲಿ ನಿಂತಿರುವುದಾಗಿ ನಿರೂಪಿಸುತ್ತಾನೆ. ಈ ದುರಂತಮಯ ಒಳನೋಟ ಏಕಲೋಫ್‌ನ ಮನಸ್ಸಿನಲ್ಲಿನ ನಿರಾಶೆಯನ್ನಲ್ಲ, ಅಲ್ಲಿನ ನಿರಾಳವನ್ನು, ಸ್ಪಷ್ಟತೆಯನ್ನು ಅನಾವರಣಗೊಳಿಸುತ್ತದೆ. ಏಕಲೋಫ್ ಬದುಕಿದ್ದುದ್ದೂ ತನ್ನ ಅನಂತರದ ಕೃತಿಗಳಲ್ಲಿನ ದಿವೆನಿಸ್ ಅಕ್ರಿಟಸ್‌ನಂತೆಯೇ ದ್ವಿಜನಂತೆ ಬದುಕಿದ, ಎರಡು ಮಂಶ: ಸಂಸ್ಕೃತಿ ಮತ್ತು ಸ್ವಭಾವ, ಮಾನವೀಯತೆ ಮತ್ತು ಹತಾಶೆ, ಮತ್ತು ಮನಸ್ಸಿನ ಎಲ್ಲೆಗಳ ಪ್ರಹರಿಯಾಗಿ.

ಭಾಗ ೩

'ದಿವಾನ್ ಓವರ್ ದಿ ಪ್ರಿನ್ಸ್ ಆಫ್ ಎಂಜಿಯಾನ್' ಮತ್ತು 'ದಿ ಟೇಲ್ ಆಫ್ ಫಾತುಮಾ' ಈ ಎರಡು ಕೃತಿಗಳೂ ಇಡಿಯೂ ಬಿಡಿಯೂ ಆಗಿರುವಂತಹವು - ಇದರಲ್ಲಿರುವ ಕವಿತೆ ಈರುಳ್ಳಿಯ ಹಾಗೆ :

ಇಲ್ಲ ನನಗೆ ಎರಡೂ ಬೇಕು

ಇಡಿಯ ತುಂಡು ಹಾಗೂ ಇಡಿಯ ಇಡೀ

ಬಿಡಿಯನ್ನು ಸವಿದರೂ ಇಡಿಯನ್ನು ಹಿಡಿಯಲೇಬೇಕು.

ಹಿಂದೊಮ್ಮೆ ನಾನು ಕಂಡದ್ದನ್ನು

ಈಗ ಕೇಳುತ್ತಿರುವೆ

ಎಂದ ಏಕಲೋಫ್ ನಮ್ಮಲ್ಲಿ ಉಳಿಯುವುದು ಹಿಂದೊಮ್ಮೆ ಕಂಡದ್ದನ್ನು ಮತ್ತೆ ಎಂದೋ ಕೇಳಿದಹಾಗೆ, ಅವನ ಕಾವ್ಯ ನಮ್ಮನ್ನು ಆವರಿಸಿಕೊಳ್ಳುವುದು ಹೀಗೆ :

ಸಮುದ್ರವೇ
ಹಿಂಬಾಲಿಸಿ ಬಂದು
ಇರುಳಲ್ಲಿ
ನನ್ನ ಕೋಣೆಯಲ್ಲಿ
ತನ್ನ ಬಾಹುಗಳಿಂದ
ನನ್ನ ಬಳಸಿದಂತೆ

ಸಮುದ್ರ ತನ್ನ
ಶಬ್ದಬಾಹುಗಳನ್ನ
ನನ್ನ ಸುತ್ತಲೂ
ಬಿಗಿದಂತೆ

ಸಮುದ್ರ ನನ್ನ
ಬಿಗಿಯಾಗಿ
ಹಿಡಿದುಕೊಳ್ಳುತ್ತದೆ

ಸಮುದ್ರ ನನ್ನ
ಅಪ್ಪಿಕೊಳ್ಳುತ್ತದೆ

ನಿಜಕ್ಕೂ ಈ ಕಾವ್ಯ ಬೇಡುವ ಧ್ಯಾನ ನಗರ ಗದ್ದಲದಲ್ಲಿನ ಯೋಗನಿರತನ ಮೌನವಲ್ಲ:

ಅಲ್ಲಿ ತೊರೆಗಳ ಮೌನವನ್ನು ಕೇಳಲು
ಪರ್ವತದ ಝರಿಗಳ ಮೌನವನ್ನು ಆಲಿಸಲು
ನಾನು ಬಯಸುತ್ತೇನೆ
ಹಾಗೆ ಮತ್ತೊಮ್ಮೆ ಮರ್ಮರವ
ಕೇಳುವಂತಾಗಲು... ಅವಕಾಶ ಮಾಡಿಕೊಡುವ ಮೌನ

ಈ ಮೌನದಲ್ಲಿ ನಾನು ಆಲಿಸಲು ಸಾಧ್ಯವಾದದ್ದು:

ಒಂದೊಂದರ ಘಮಲೂ
ಎಷ್ಟೊಂದು ಭಿನ್ನವಿದೆ
ಇದು ನನಗೆ ಮತ್ತೆ
ದೊರಕಿಸಿಕೊಡುತ್ತಿದೆ... ಎನ್ನುವುದನ್ನು.

ಆರ್. ವಿಜಯರಾಘವನ್, ಸೀನಿಯರ್ ಮೇನೇಜರ್, ಕೋಲಾರ ಗ್ರಾಮೀಣ ಬ್ಯಾಂಕ್, ಕೇಂದ್ರ ಕಛೇರಿ,
ಕೋಲಾರ - ೫೬೩೧೦೧.

'ತಪ್ಪಂದ': ಸಮಾನತೆಯ ಶೋಧನೆಯ ಕತೆಗಳು

. ಎಚ್. ದಂಡಪ್ಪ

ಕನ್ನಡ ಸಣ್ಣಕತೆಯ ಇತಿಹಾಸವನ್ನು ಗಮನಿಸಿದರೆ ಎರಡು ಪರಂಪರೆಗಳನ್ನು ಗುರುತಿಸಬಹುದು. ಒಂದು, ಮಾಸ್ತಿ ಪರಂಪರೆ, ಎರಡು ಮಾಸ್ತಿ ಪರಂಪರೆಯಿಂದ ಬಿಡಿಸಿಕೊಂಡು ಬರೆದ ಲಂಕೇಶ್, ತೇಜಸ್ವಿ, ಅನಂತಮೂರ್ತಿ, ದೇವನೂರು ಮಹಾದೇವ ಅವರ ಪರಂಪರೆ. ಮಾಸ್ತಿ ಪರಂಪರೆಯಲ್ಲಿ ನೈತಿಕತೆ ಮುಖ್ಯವಾಗುತ್ತದೆ. ಆದರೆ ಎರಡನೇ ಪರಂಪರೆಯಲ್ಲಿ ನೈತಿಕತೆಯ ಜೊತೆಗೆ ಸಾಮಾಜಿಕ ಮತ್ತು ಆರ್ಥಿಕ, ರಾಜಕೀಯ ನೆಲೆಗಳೂ ಕೂಡಾ ಮುಖ್ಯವಾಗುತ್ತವೆ. ಇವರ ಕತೆಗಳಲ್ಲಿನ ಹೆಚ್ಚು ಪಾತ್ರಗಳು ಬದುಕಿನಲ್ಲಿ ಬಲಿಪಶುಗಳಾದ, ನೋವು, ಅವಮಾನಗಳಿಗೀಡಾದ ಪರಕೀಯತೆ, ಅನಾಥ ಪ್ರಜ್ಞೆಗಳಿಂದ ತೊಳಲಾಡುವ ವ್ಯಕ್ತಿಗಳಾಗಿರುತ್ತಾರೆ. ಈ ಮೇಲಿನ ಎರಡೂ ಪರಂಪರೆಗೆ ಸೇರಿದವರು ಡಾ. ಬಸವರಾಜ ಸಾದರ ಅವರು. ಇವರ ಕತೆಗಳು ಸಾಂಸ್ಕೃತಿಕ, ಕಲಾತ್ಮಕ ಮತ್ತು ಸಾಹಿತ್ಯಕ ಶಕ್ತಿಗಳೊಂದಿಗೆ ಫ್ಯೂಜನ್ ಮಿಲನಗೊಂಡು ಅನನ್ಯವಾಗಿವೆ. ಆದ್ದರಿಂದಲೇ ಸಮಾಜದಲ್ಲಿನ ಕಟ್ಟ ಕಡೆಯ ಮನುಷ್ಯನ, ಅವನ ಅಲಕ್ಷಿತ ಬದುಕನ್ನು ಚಿತ್ರಿಸುವ ಸಾದರ ಅವರ ಕತೆಗಳು ಈ ಶತಮಾನದ ಬಹಳ ಮುಖ್ಯವಾದ 'ಸಮಾನತೆಯ ಹುಡುಕಿನ' ಪರಿಕಲ್ಪನೆಯನ್ನು ಶೋಧಿಸುತ್ತವೆ. ಕತೆಯ ಸ್ವರೂಪದ ಬಗ್ಗೆ ಅವರೇ ಹೇಳುವ ಮಾತುಗಳನ್ನು ನಿದರ್ಶನಕ್ಕಾಗಿ ನೋಡಬಹುದು.

> "ನಾ ಬರೆದ ಕಥೆಗಳೆಲ್ಲಾ ನನ್ನ ಕಣ್ದೃಷ್ಟಿಯಲ್ಲಿ ಅಂದ್ರೆ ನನ್ನ ಅನುಭವದ ವ್ಯಾಪ್ತಿಯಲ್ಲಿ ಬಂದಂತಹವು ಎಂದು ಹೇಳಬಹುದು. ಕಥಾ ವಸ್ತುವಿನ ನಿರ್ವಹಣೆಯ ಸಾಧ್ಯತೆ ಕಥೆಗಾರನ ಅರ್ಹತೆಯನ್ನವಲಂಬಿಸಿರುತ್ತದೆ. ನಮ್ಮಲ್ಲಿ ಸಾವಿರಾರು ವಸ್ತುಗಳಿದ್ದರೂ ಕಥೆ ಹೆಣೆಯುವ ಕೌಶಲ್ಯ ನಮ್ಮಲ್ಲಿಲ್ಲದಿದ್ದರೆ ಕಥಾ ರೂಪವಾಗಿ ಅದು ಹೊರಹೊಮ್ಮಲು ಅಸಾಧ್ಯ. ಕಥೆಗಾರನ ಆಲಸ್ಯ ಅಥವಾ ಅಸಮರ್ಥತೆಯಿಂದ ಕೆಲವು ಹಾಗೇ ಉಳಿಯುತ್ತವೆ. ನಿಜ ಘಟನೆಗಳನ್ನು ಕಥೆಯಾಗಿಸುವಾಗ ಕೆಲ ಕಾಲ್ಪನಿಕ ಅಂಶಗಳನ್ನು ಸೇರಿಸಬೇಕಾಗುತ್ತದೆ.

ಕಥೆಗೆ ಹಂದರ ನಿರ್ಮಿಸಲು ಅಸಾಧ್ಯವಾಗುವುದರಿಂದ ಅವು ಹಾಗೇ ಉಳಿಯುತ್ತವೆ. ಲೇಖಕನಿಗೆ ಸಾಮಾಜಿಕ ಜವಾಬ್ದಾರಿಯೂ ಇರಬೇಕು."

ಕಥನ ಕುತೂಹಲ, ಪುಟ ೬೬

ಸಂ. ಮೋಹನ ನಾಗಮ್ಮನವರ.

ಮೇಲಿನ ಮಾತುಗಳ ಮೂಲಕ ಸಾದರ ಅವರು ಕತೆಗಾರನ ಸಮಸ್ಯೆ, ಜವಾಬ್ದಾರಿಗಳನ್ನು ತಿಳಿಸುತ್ತಾರೆ. ಕಥೆ ಹೆಣೆಯುವ ಕೌಶಲ್ಯ ನಮ್ಮಲ್ಲಿಲ್ಲದಿದ್ದರೆ ಕಲೆಗಾರಿಕೆ ಅಲ್ಲಿ ಇಲ್ಲದೆ ಕೇವಲ ಶುಷ್ಕವಾದ ವರದಿಯಾಗಿ ಬಿಡುತ್ತದೆ. ಅಲ್ಲಿ ಕಲಾತ್ಮಕತೆಗೆ ಅವಕಾಶವೇ ಇರುವುದಿಲ್ಲ. ಆದ್ದರಿಂದಲೇ ಇತ್ತೀಚೆಗೆ 'ಸಂಕಥನ' ಎಂಬ ಮಾತನ್ನ ಬಳಸಲಾಗುತ್ತಿದೆ. ಕಲಾತ್ಮಕವಾಗಿ ಅದನ್ನು ಕಥಿಸಿದಾಗಲೇ ಅದು ಬಹು ಆಯಾಮಗಳನ್ನೊಳಗೊಂಡ ಉತ್ತಮ ಕಥೆಯಾಗುವುದು. ಒಂದು ಉತ್ತಮ ಕಥೆ ಸಾಮಾಜಿಕ , ರಾಜಕೀಯ, ಆರ್ಥಿಕ ಆಯಾಮಗಳನ್ನು ಅಂತರ್ಗತವಾಗಿಸಿಕೊಳ್ಳುತ್ತದೆ. ಸಾಮಾಜಿಕ ಒಳಿತನ್ನು ಬಯಸುತ್ತದೆ. ಬದಲಾವಣೆಯನ್ನು ಬಯಸದ ನಿಶ್ಚಲ ಸಂಕಥನಗಳು ಶೋಷಣೆಯ ಪರವಾಗಿರುತ್ತವೆ. ಇವು ಯಥಾ ಸ್ಥಿತಿಯನ್ನು ಪ್ರತಿಪಾದಿಸುತ್ತವೆ. ಆದರೆ ಸಾದರ ಅವರ ಕಥೆಗಳು ನಿಶ್ಚಲ ಸಂಕಥನಗಳಲ್ಲ. ಅವು ಜಂಗಮ ಸಂಕಥನಗಳಾಗಿರುವುದರಿಂದ ಅವೆಲ್ಲವೂ ಸಾಮಾಜಿಕ ಸಮಾನತೆಯ ಹಸಿವಿನ ನೆಲೆಗಳನ್ನು ಶೋಧಿಸಿ ಅಸಮಾನತೆಯನ್ನು ಹೋಗಲಾಡಿಸುವಂತೆ ನಮ್ಮನ್ನು ಒತ್ತಾಯಿಸುತ್ತವೆ. ಇವರ ಕಥೆಗಳಲ್ಲಿ ಮಾಸ್ತಿಯಲ್ಲಿರುವಂತೆ ನೈತಿಕತೆಯೂ ಹಾಸುಹೊಕ್ಕಾಗಿದೆ. 'ಬಿಕ್ರ'ನ ಕಥೆಯಲ್ಲಿ ಅನೈತಿಕವಾಗಿ ಹಣ ಮಾಡುವುದು, 'ಸರಿಗಾಳಿ'ಯ ಮನೋಹರನ ತೊಳಲಾಟ, 'ಬೆಳಕುಮಬ್ಬಿನ ಹೆಜ್ಜೆಯಾಟ'ದ ಆತ-ಆಕೆಯ ಮಾನಸಿಕ ಒಳತೋಟಿ-ಈ ಇಂತಹ ಪಾತ್ರಗಳು ಮಾಸ್ತಿ ಪರಂಪರೆಗೆ ಸೇರಿದ್ದರೂ ಕೂಡಾ ಕಥೆಯ ರೂಪಕ ಗುಣದಿಂದಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಆಯಾಮಗಳನ್ನು ಪಡೆದುಕೊಂಡು ಬಿಡುತ್ತವೆ. ಈ ರೀತಿ ಆಯಾಮಗಳನ್ನು ವಿಸ್ತರಿಸಿಕೊಂಡಿರುವುದರಿಂದಲೇ ಎರಡೂ ಪರಂಪರೆಗಳನ್ನು ಮೈಗೂಡಿಸಿಕೊಳ್ಳಲು ಸಾಧ್ಯವಾಗಿದೆ.

ಸಾಮಾಜಿಕ ಮತ್ತು ಆರ್ಥಿಕವಾಗಿ ಮನುಷ್ಯರೆಲ್ಲರ ಒಳಿತು ಮುಖ್ಯವಾದಾಗ ಆರ್ಥಿಕ ಪ್ರಗತಿ ಮತ್ತು ಸಾಮಾಜಿಕ ಸಮಾನತೆ ನೆಲೆಸುತ್ತದೆ. ಇಂತಹ ವ್ಯವಸ್ಥೆಯಲ್ಲಿ ಅತ್ಯಂತ ಕನಿಷ್ಠನಿಗೆ ಸಾಮಾಜಿಕ ಮತ್ತು ಆರ್ಥಿಕ ನ್ಯಾಯ ದೊರೆಯುತ್ತದೆ. ಮಾನವೀಯ ಮೌಲ್ಯಗಳ ಆಧಾರದ ಮೇಲೆ ಸಾಮಾಜಿಕ ಮತ್ತು ಆರ್ಥಿಕ ಆದರ್ಶಗಳು ವ್ಯಕ್ತವಾಗುತ್ತಿರುತ್ತವೆ. ಇಂತಹ ಆಶಯವನ್ನು ಒಳಗೊಂಡಿರುವ ಕಥೆ 'ಬಿಕ್ರ'.

ಬಿಕ್ರ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದವನು. ಸಾಹುಕಾರ ಸಣ್ಣಪ್ಪ ಮುಂದುವರಿದವನು, ಪ್ರಬಲನಾದವನು. ಹಣ ಮಾಡುವ ಹುನ್ನಾರಗಳನ್ನು ಬಲ್ಲ ಸಣ್ಣಪ್ಪ ಖಾಸಗಿ ಸ್ಮಶಾನವನ್ನು ತೆಗೆದು ಹೆಣ ಸುಡಲು ಬಂದವರಿಂದ ಇಂತಿಷ್ಟು ಶುಲ್ಕ ಎಂದು ವಸೂಲು ಮಾಡುವ ಉದ್ದೇಶ ಅವನದು. ಇಲ್ಲಿ ಹೆಣ ಸುಡುವವನೇ ಬಿಕ್ರ. ಬರುವ ಹೆಣಗಳ ಆಧಾರದ ಮೇಲೆ ಅವನಿಗೆ ಹಣ ಸಿಗುತ್ತದೆ. ಆದ್ದರಿಂದ ಇವನಿಗೆ ಹೆಣ ಸುಡುವುದು ಹೊಟ್ಟೆಪಾಡಿನ ಕಾಯಕ. ಸಣ್ಣಪ್ಪನಿಗೆ ಹಣ ಮಾಡುವ ಉದ್ದೇಶ. ಹೆಚ್ಚು ಜನ ಸತ್ತರೆ ಹೆಚ್ಚು ಹಣ. ಬಿಕ್ರನಿಗೂ ಅಷ್ಟೆ ಹೆಣ

ಬಂದರೆ ಅವನ ತುತ್ತಿನ ಚೀಲ ತುಂಬುತ್ತದೆ. ಒಬ್ಬನಿಗೆ ಐಷಾರಾಮಿ ಜೀವನಕ್ಕೆ ಹಣ, ಮತ್ತೊಬ್ಬನಿಗೆ ತುತ್ತಿನ ಚೀಲ ತುಂಬಿಸಿಕೊಳ್ಳುವುದಕ್ಕಾಗಿ ಹಣ. ಇಬ್ಬರೂ ಈ ಹಣವನ್ನು ಸಂಪಾದಿಸುವ ದಾರಿ ಮಾತ್ರ ಅಮಾನವೀಯವಾದದ್ದು. ಇಲ್ಲಿ ಆರ್ಥಿಕತೆ ತನ್ನ ನೈತಿಕತೆಯನ್ನು ಕಳೆದುಕೊಳ್ಳುತ್ತದೆ. ಮನುಷ್ಯ ಸಾಯುವುದನ್ನೇ ಎದುರು ನೋಡುವ ಈ ಮಾನಸಿಕ ಸ್ಥಿತಿಯೇ ಭೀಭತ್ಸವಾದದ್ದು. ಬಿಕ್ರನಿಗೆ ಅನಿವಾರ್ಯವಾದರೂ ಸಹ ಅನೈತಿಕವೇ. ಹಸಿವನ್ನು ಹಿಂಗಿಸಿಕೊಳ್ಳಲು ಈ ಮಾರ್ಗವನ್ನು ಅನುಸರಿಸುತ್ತಾನೆ. ಸಣ್ಣಪ್ಪನದು ಬೇರೆ ಬಗೆಯದು. ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯಿರುವ ವ್ಯವಸ್ಥೆಯ ಸ್ವರೂಪ ಇದಾಗಿದೆ. ಇದನ್ನು ಗಾಂಧೀಜಿಯವರ ಮಾತುಗಳ ಮೂಲಕ ಸ್ಪಷ್ಟ ಪಡಿಸುತ್ತೇನೆ.

> "ನೈತಿಕ ಮೌಲ್ಯಗಳನ್ನು ಅಲಕ್ಷಿಸುವ ಮತ್ತು ತಳ್ಳಿಹಾಕುವ ಆರ್ಥಿಕ ವ್ಯವಸ್ಥೆ ಅಸತ್ಯ.... ಎಲ್ಲಾ ನೀತಿಯೂ ತನ್ನ ಹೆಸರಿಗೆ ತಕ್ಕುದಾಗಿರಬೇಕಾದರೆ ಜೊತೆ ಜೊತೆಗೇ ಒಳ್ಳೆಯ ಅರ್ಥ ವ್ಯವಸ್ಥೆಯೂ ಆಗಿರಬೇಕು. ಅದೇ ರೀತಿ ನಿಜವಾದ ಆರ್ಥಿಕತೆ ಎಂದೂ ಅತ್ಯುನ್ನತ ನೈತಿಕ ಮಟ್ಟದೊಡನೆ ಘರ್ಷಣೆ ಮಾಡುವುದಿಲ್ಲ. ಬಲಿಷ್ಠರು ಧನ ಪಿಶಾಚಿಯ ಪೂಜೆ ಮಾಡಿ ದುರ್ಬಲರನ್ನು ತುಳಿದು ಸಂಪತ್ತನ್ನು ದೋಚಿಕೊಳ್ಳುವಂತೆ ಮಾಡುವ ಎಲ್ಲಾ ಆರ್ಥಿಕತೆಯೂ ಸುಳ್ಳಿನದು; ಭೀಕರ ವಿಜ್ಞಾನ, ಅದು ಮರಣಕಾರಕ. ನಿಜವಾದ ಆರ್ಥಿಕತೆ ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯುತ್ತದೆ. ಎಲ್ಲರ ಒಳಿತನ್ನು ಸಾಧಿಸುತ್ತದೆ."
>
> ಹರಿಜನ ಪತ್ರಿಕೆ - ೯.೧೦.೧೯೩೭

ಗಾಂಧಿ ಪ್ರಣೀತ ಆರ್ಥಿಕ ಮತ್ತು ಸಾಮಾಜಿಕ ದೃಷ್ಟಿಕೋನದ ಆಶಯವುಳ್ಳ 'ಬಿಕ್ರ' ಕಥೆ 'ಸರ್ವರ ಸರ್ವಹಿತ' ಎಂಬ ಆಶಯವನ್ನು ರೂಪಕಾತ್ಮಕವಾಗಿ ಅಭಿವ್ಯಕ್ತಿಸುವ ಕಥೆಯಾಗಿದೆ.

ಇದೇ ಕಥೆ ಒಂದು ರೂಪಕ ಇಲ್ಲವೇ ಪ್ರತಿಮೆಯಾಗಿ ಮೈತಳೆದಿದೆ. ಇದು ಶ್ರೇಷ್ಠಕಥೆಯ ಮೂಲ ಲಕ್ಷಣ. ಕಥೆಯಲ್ಲಿರುವ ಘಟನೆಗಳು, ಸಂಭಾಷಣೆ, ವರ್ಣನೆಗಳು ಈ ಎಲ್ಲವೂ ಸೇರಿ ಹೊರಹೊಮ್ಮಿಸುವ ಅರ್ಥ ಮುಖ್ಯವಾದದ್ದು. ರೂಪಕದ ಮೂಲಕವೇ ಸಾಮಾಜಿಕ, ಆರ್ಥಿಕ, ರಾಜಕೀಯ ವಿಚಾರಗಳನ್ನು ಹೇಳುವಂತಹ ಕಥೆಗಳು ತೇಜಸ್ವಿ, ಲಂಕೇಶ್, ಅನಂತಮೂರ್ತಿ, ದೇವನೂರು ಮಹಾದೇವ ಅಂತಹವರಲ್ಲಿ ಮಾತ್ರ ಕಾಣಲು ಸಾಧ್ಯ.

ಇಡೀ ಕಥೆ ಒಂದು ರೂಪಕ ಇಲ್ಲವೇ ಪ್ರತಿಮೆಯಾಗಿ ಮೈತಳೆದಿರುವ ಮತ್ತೊಂದು ಕಥೆ 'ಬೆಳಕು ಮಬ್ಬಿನ ಹೆಜ್ಜೆಯಾಟ'. ಇಲ್ಲಿ ಬರುವ ದೊಡ್ಡಮರ, ಸಮುದ್ರದ ಪರಿಸರ ಅಲ್ಲಿರುವ ಆತ ಮತ್ತು ಆಕೆ ಇವರ ಮೂಲಕ ಸೃಜನಶೀಲತೆಯ ವಾಸ್ತವಗಳನ್ನು ಬಿಚ್ಚಿಡುವುದರ ಜೊತೆಗೆ ಬದುಕಿನಲ್ಲಿರುವ ಭ್ರಮೆ ಮತ್ತು ವಾಸ್ತವಗಳ ಅರಿವನ್ನು ಮೂಡಿಸುತ್ತದೆ. ಸೃಜನಶೀಲ ಕೃತಿಯಲ್ಲಿ ಭಾವನೆ, ಕನಸು-ಕಲ್ಪನೆಗಳಿಷ್ಟರಷ್ಟೇ ಸಾಲದು. ಅದು ಬದುಕಿನ ಆಳಕ್ಕೆ ಇಳಿದು ಬದುಕಿನ ವಾಸ್ತವತೆಗಳ ಎಲ್ಲಾ ಮಗ್ಗುಲುಗಳನ್ನು ಶೋಧಿಸಬೇಕು. ಆಗ ಮಾತ್ರ ಅದು ಸಫಲ ಬರಹವಾಗುತ್ತದೆ. ಓದುಗನಿಗೆ ಬದುಕಿನ ಕಟು ವಾಸ್ತವದ ಅರಿವನ್ನು ಮೂಡಿಸುತ್ತದೆ. ಬರೀ ಭಾವುಕತೆ ತುಂಬಿದ್ದರೆ ಮನುಷ್ಯನಿಗೆ

ಬದುಕಿನ ವಿವರಗಳು ಲಭ್ಯವಾಗದೆ ಕನಸಿನ ಲೋಕದಲ್ಲಿಯೇ ಮುಳುಗಿ ಹೋಗಿ ಬದುಕಿನ ಇತರೆ ಮಗ್ಗುಲುಗಳನ್ನು ಕಾಣದೆ ಹೋಗಬಹುದು. ಸೃಜನಶೀಲ ಕೃತಿಯಲ್ಲಿ ಎಲ್ಲವನ್ನೂ ಹಿಡಿದಿಡಲು ಸಾಧ್ಯವಾಗದೆ ಹೋಗಬಹುದು. ಈ ಮಾತುಗಳನ್ನು ಗಮನಿಸಿ :

> "ಎಷ್ಟೆಲ್ಲ ಸತಾಯಿಸಿ ನೋಯಿಸಿ ಪರೀಕ್ಷಿಸಿ ಕೊನೆಗೂ ತನ್ನ ಕೈ ಬಿಡಲಿಲ್ಲವಲ್ಲ! ಎಂಬ ಕೃತಜ್ಞತಾಭಾವ ಆಕೆಯಲ್ಲಿ ಉಕ್ಕತೊಡಗಿತ್ತು. ಪರಸ್ಪರರ ಮುಖಗಳು ಕಾಣದಷ್ಟು ಕತ್ತಲೆ ದಟ್ಟವಾಗಿತ್ತು. ಗಾಢವಾಗಿ ಬಿಗಿದಪ್ಪಿಕೊಂಡಿದ್ದ ಆ ಎರಡೂ ಜೀವಗಳು ಹಾಗೇ ನೆಲಕ್ಕೊರಗಿದವು. ಎಷ್ಟೊತ್ತಿನವರೆಗೆ ಅವು ಹಾಗೇ ಇದ್ದವೋ....! ಹಿಂದಿನ ಎಲ್ಲಾ ಕಥೆಗಳನ್ನು ತನ್ನ ಮೌನದ ಗರ್ಭದಲ್ಲಿ ಬರೆದುಕೊಂಡಿದ್ದ ತೀರದಡಿಯ ಆ ದೊಡ್ಡಮರ ಅವರು ಹೆಜ್ಜೆಯಾಟ ಆಡುತ್ತಾ ಮುಂದೆ ಮುಂದೆ ಬಂದಂತೆ, ದೂರ ದೂರ ಬಲುದೂರ ಉಳಿದ ಕಾರಣದಿಂದ ಮುಂದಿನ ಆ ಎಲ್ಲಾ ವಿದ್ಯಮಾನವನ್ನು ಮೌನದ ಭಾಷೆಯಲ್ಲಿ ದಾಖಲಿಸಿಕೊಳ್ಳಲು ಅದಕ್ಕೂ ಸಾಧ್ಯವಾಗಲಿಲ್ಲ".
>
> ಪುಟ ೫೩-೫೪

ಆದುದರಿಂದ ಭಾಷೆಗೆ ಬದುಕಿನ ಎಲ್ಲ ವಿವರಗಳನ್ನು ದಾಖಲಿಸಲು ಎಷ್ಟು ಸಾಮರ್ಥ್ಯವಿದೆಯೋ ಅಷ್ಟೇ ಮಿತಿಗಳೂ ಇವೆ. ಬದುಕಿನ ಕಟುವಾಸ್ತವಗಳನ್ನು ಕೃತಿಯಲ್ಲಿ ವ್ಯಕ್ತಪಡಿಸದೆ ಬರೀ ಭಾವೋದ್ರೇಕವನ್ನುಂಟು ಮಾಡುವ ವಿವರಗಳನ್ನು ಕೃತಿಯಲ್ಲಿ ತಂದರೆ ಅದು ಓದುಗನನ್ನು ದಾರಿ ತಪ್ಪಿಸುತ್ತದೆ ಎಂಬ ಆಶಯವನ್ನು ಸಹ ಈ ಕಥೆ ವ್ಯಕ್ತಪಡಿಸುತ್ತದೆ.

ಭಾವುಕತೆಯು ಕೆಲವು ನಿಮಿಷಗಳ ಮಟ್ಟಿಗೆ ಒಂದು ವಿಶೇಷ ರಸವನ್ನು ಮನಸ್ಸಿನಲ್ಲಿ ಉದ್ದೀಪಿಸಿ ಏನನ್ನೋ ಸಾಧಿಸಿದಂತೆ, ಗಳಿಸಿದಂತಹ ಭಾವನೆಯನ್ನುಂಟು ಮಾಡುತ್ತದೆ. ಕ್ರಮೇಣ ಇದೇ ನಿಷೆಯಂತಾಗುತ್ತದೆ. ಇಂತಹ ತೃಪ್ತಿಗಾಗಿ ಅವನು / ಅವಳು ಕೀಳು ಅಭಿರುಚಿಗಳನ್ನು ಬೆಳೆಸಿಕೊಂಡು ಅದರಲ್ಲಿಯೇ ಕಾಲ ಕಳೆದು ಬಿಡುತ್ತಾನೆ/ಳೆ. ಭಾವುಕತೆಯೇ ದೊಡ್ಡದು ಎಂದು ತಪ್ಪಾಗಿ ತಿಳಿದುಕೊಳ್ಳುವುದು ಮನುಷ್ಯನ ದೌರ್ಬಲ್ಯದ ಒಂದು ಲಕ್ಷಣ. ಅತಿ ಸಹಜವಾಗಿ ಗದ್ಗದಿತರಾಗಿ ಬಿಡುವ 'ತಮ್ಮಾ' ಎಂದು ಸಂಬೋಧಿಸುವಂತಹ ಜನರನ್ನು ಕಾಣಬಹುದು. ಯಾರ ದಯೆ ಸಹಜವಾಗಿಯೇ ಹೊರಹೊಮ್ಮುವುದೋ ಅಂತಹ ಭಾವಾನುಭವ ಮತ್ತು ಭಾವ ಪ್ರಕಾಶವನ್ನೇ ಫಲಲಾಭ ಎಂದು ಎಣಿಸುವಂತಹ ಜನರನ್ನು ಕಾಣಬಹುದು. ಇಂತಹವರು ಸುತಾರಾಂ ಅಲ್ಲಿಯೇ ನಿಂತುಹೋಗುತ್ತಾರೆ. ಅವರು ಹೆಚ್ಚು ದೂರ ಮುಂದುವರಿಯುವುದಿಲ್ಲ. ಭಾವುಕತೆಯೇ ಲಕ್ಷ್ಯ ಎಂದು ಒಂದು ವೇಳೆ ತಪ್ಪು ಮಾಡಿದರೆ ಅದು ನಿರರ್ಥಕ, ಅನಿಷ್ಟಕಾರಕವಾಗುತ್ತದೆ. ಇದನ್ನು ಒಂದು ದೃಷ್ಟಾಂತದ ಮೂಲಕ ವಿವರಿಸಬಹುದು.

ಮರವು ಎರಡು ರೀತಿಯಲ್ಲಿ ಆಹಾರ ಸಂಗ್ರಹಿಸುತ್ತದೆ. ಒಂದು: ಎಲೆಗಳ ಮೂಲಕ ಗಾಳಿ ಬೆಳಕುಗಳಿಂದ. ಎರಡು: ಬೇರಿನಿಂದ ತನ್ನ ಆಹಾರವನ್ನು ಆಕರ್ಷಿಸಿಕೊಳ್ಳುತ್ತದೆ. ಮಳೆಗಾಲ, ಚಳಿಗಾಲ,

ವಸಂತಕಾಲದಲ್ಲಿ ಆಯಾ ವಾಯುಮಾನಕ್ಕೆ ಅನುಗುಣವಾಗಿ ಎಲೆಗಳು ಚಂಚಲಗೊಂಡು ಅವುಗಳಿಂದ ತಾವು ಏನನ್ನು ತೆಗೆದುಕೊಳ್ಳಬೇಕಾಗಿದೆಯೋ ಅಷ್ಟನ್ನು ತೆಗೆದುಕೊಂಡು ನಂತರ ಒಣಗಿ ಉದುರಿ ಬೀಳುತ್ತವೆ. ಇದು ಭಾವುಕತೆ. ಆದರೆ ಬೇರಿಗೆ ಭಾವುಕತೆಯಾಗಲಿ ಚಂಚಲತೆಯಾಗಲೀ ಇಲ್ಲ. ಸದಾ ಸ್ಥಬ್ಧವಾಗಿದ್ದು, ದೃಢವಾಗಿದ್ದು, ಗಂಭೀರತೆಯ ನಡುವೆ ತನ್ನನ್ನು ಹರಿಸಿಕೊಂಡು ಎಡೆಬಿಡದೆ ತನ್ನ ಪೂರ್ಣಯತ್ನದಿಂದ ಆಹಾರ ಸಂಗ್ರಹಿಸಿಕೊಳ್ಳುತ್ತದೆ. ನಮ್ಮ ಬದುಕಿಗೂ ಬೇರು ಮತ್ತು ಎಲೆ ಎಂಬ ಎರಡು ದಿಕ್ಕುಗಳು. ಬೇರು ವಾಸ್ತವ, ಎಲೆ ಭಾವುಕ. ಬೇರಿನ ಕಡೆಯಿಂದ ಆಹಾರ ಸಂಗ್ರಹಿಸುವುದೇ ಮುಖ್ಯ. ಇದು ಬದುಕಿನ ಕಟು ವಾಸ್ತವದ ದಿಕ್ಕು, ಭಾವುಕತೆಯ ದಿಕ್ಕಲ್ಲ. ಬೇರಿನ ಮೂಲಕ ಹೀರಿಕೊಂಡ ಆಹಾರ ಪ್ರಾಣವನ್ನು ವಿಸ್ತಾರಗೊಳಿಸುತ್ತದೆ. ಇದಿಲ್ಲದಿದ್ದರೆ ಮರ ಬದುಕುವುದಿಲ್ಲ. ಎಲೆಗಳೆಲ್ಲಾ ಉದುರಿದರೂ ಮರ ಬದುಕಬಲ್ಲದು. ಆದ್ದರಿಂದ ಭಾವುಕತೆ ಬದುಕನ್ನು ಅಲ್ಲಾಡಿಸುತ್ತಿರುತ್ತದೆ. ಬೇರು ಅಂದರೆ ವಾಸ್ತವತೆ, ಅಲುಗಾಡದೆ ಹಿಡಿದುಕೊಂಡಿರುವಲ್ಲಿಯೇ ಹಿಡಿದುಕೊಂಡಿರುತ್ತದೆ. ಗಂಭೀರತೆಯಿಂದ ಗಂಭೀರತೆಗೆ ಹೋಗಿ ಇಳಿಯುತ್ತದೆ. ವಾಸ್ತವತೆಯ ಅರಿವಿದ್ದಾಗ ಭಾವುಕತೆ ಸಹಾಯಕವಾಗಬಹುದು. ವಾಸ್ತವತೆ ಬೇರು ಇದ್ದಾಗ, ಭಾವುಕತೆ - ಎಲೆ ತಾನಾಗಿ ಅರಸುತ್ತಾ ಬರುತ್ತದೆ. ಬೇರು ಮರವನ್ನು ಹಿಡಿದಿಟ್ಟಿದೆ. ಆದುದರಿಂದ ಭಾವುಕತೆಯ ಬೆನ್ನಟ್ಟಿ ಅದು ಹೋಗುವುದಿಲ್ಲ. ಭಾವುಕತೆಯೇ ವಾಸ್ತವದ ಹತ್ತಿರಕ್ಕೆ ಬರುತ್ತದೆ. ಈ ಕತೆಯಲ್ಲಿ ಬರುವ ಆಕೆ - ಆತನ ಹೆಜ್ಜೆಗಳಲ್ಲಿ ಹೆಜ್ಜೆಯನ್ನಿಟ್ಟು ಹೋಗುವುದು ಇದನ್ನೇ ಧ್ವನಿಸುತ್ತದೆ. ಶಕ್ತಿವಂತ ಬರಹಗಾರನಿಗೆ ಎಲ್ಲವನ್ನೂ ಹಿಡಿದಿಡುವಂತಹ ಸಾಮರ್ಥ್ಯ ಬೇರಿನಂತೆ ತನಗೆ ತಾನೇ ಒದಗಿ ಬರುತ್ತದೆ. ಈ ಸಂಕಲನದ ಅತ್ಯುತ್ತಮ ಕತೆ ಇದಾಗಿದೆ.

ಬಸವರಾಜ ಸಾದರ ಅವರಿಗೆ ಸೂಕ್ಷ್ಮವಾದ ಕಥನ ಕಲೆ ಗೊತ್ತಿದೆ. ಕಥಿಸುವ ಕ್ರಮ ಅವರಲ್ಲಿ ಅಂತರ್ಗತವಾಗಿರುವುದರಿಂದಲೇ 'ಬಿಕ್ರ', 'ಬೆಳಕು ಮಬ್ಬಿನ ಹೆಜ್ಜೆಯಾಟ' ದಂತಹ ಕಥೆಗಳನ್ನು ಬರೆಯಲು ಸಾಧ್ಯವಾಗಿರುವುದು. ಇಂತಹದೇ ಮತ್ತೊಂದು ಕಥೆ 'ತಪ್ದಂಡ'. ಇದೂ ಕೂಡಾ ಸಂಕಲನದ ಅತ್ಯುತ್ತಮ ಕಥೆಯೇ.

ಬಹುಸಂಖ್ಯಾತ ಬಡವರನ್ನು ಮರುಳು ಮಾಡುವ ಮೂಲಕ ಅವರ ಸಹಕಾರದೊಂದಿಗೆ ಅವರನ್ನು ಆಳುತ್ತಾ ಸದಾ ಅಧಿಕಾರ ಚಲಾಯಿಸಲು ಅವರಿಂದಲೇ ಒಪ್ಪಿಗೆಯನ್ನು ಪಡೆಯುವ ಕೆಲವೇ ಜನರ ನಿರ್ದಿಷ್ಟ ಗುಂಪೊಂದರ ಹುನ್ನಾರಗಳನ್ನು ಬಯಲು ಮಾಡುವುದೇ 'ತಪ್ದಂಡ' ಕಥೆಯ ಆಶಯವಾಗಿದೆ. ಬಲಾಢ್ಯರ ಪ್ರಭಾವ ಪ್ರತಿಷ್ಠೆಗಳಿಗೆ ಕೆಳಜಾತಿ/ವರ್ಗವು ಮಾರು ಹೋಗಿರುತ್ತದೆ. ಇವರು ತಿರುಗಿಬಿದ್ದರೆ ಕ್ರಾಂತಿಯೇ ಆಗಬಹುದು. ಆದರೆ ಪ್ರತಿಷ್ಠಿತ ವರ್ಗವು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಸ್ತ್ರಗಳನ್ನು ಪ್ರಯೋಗಿಸಿ ತಮ್ಮ ಪ್ರಾಬಲ್ಯವನ್ನು ಒಪ್ಪಿಕೊಳ್ಳುವಂತಹ ಹುನ್ನಾರಗಳನ್ನು ಸೃಷ್ಟಿಸುತ್ತದೆ. ಇಲ್ಲಿ ಬರುವ ಶೆಟ್ಟರ ಸಂಗಪ್ಪ, ದೊಡ್ಮಠದ ಮಲ್ಲಯ್ಯನವ್ರು, ಜೋಯ್ಸರ ಗುಂಡಾಚಾರ್‍ರು, ಪೋಲೀಸ್ ಪಾಟೀಲರಂಗನಗೌಡ್ರು, ಸಾವ್ಕಾರ ಶಿವಣ್ಣನವ್ರು, ಇದರ ಜೊತೆಗೆ ಗೌಡ್ರ ಮಾಸ್ತರು. ಇವರೆಲ್ಲರೂ ಒಂದು ಗುಂಪಾಗಿ ಹುನ್ನಾರಗಳನ್ನು ಸೃಷ್ಟಿಸುವ ಮೂಲಕ ಕೆಳಜಾತಿ/ವರ್ಗವನ್ನು ಹಿಡಿತದಲ್ಲಿಟ್ಟುಕೊಳ್ಳುವಂತಹವರು. ಇವರ ನೆಲೆಗಳನ್ನು ಬುಡಮೇಲು ಮಾಡಬಲ್ಲಂತಹ ಬೂದಿ ಮುಚ್ಚಿದ ಕೆಂಡದಂತಹ ಶಕ್ತಿ ಬಡಜನತೆ/ಜಾತಿಗಳಲ್ಲಿದೆ ಎಂಬುದು ಪ್ರತಿಷ್ಠಿತರಿಗೆ ಗೊತ್ತಿದ್ದರೂ

ಅವರ ಒಪ್ಪಿಗೆಯ ಮೂಲಕವೇ ತಮ್ಮ ಹತೋಟಿಯಲ್ಲಿಟ್ಟುಕೊಂಡಿರುತ್ತಾರೆ. ಕೆಳಗಿನ ಸಾಲುಗಳು ಈ ನನ್ನ ಮಾತುಗಳನ್ನು ಸ್ಪಷ್ಟಪಡಿಸುತ್ತವೆ.

> "ಮಾಸ್ತರ ಮಾತು ಕೇಳಿ ಬಸಲಿಂಗನ ಎದಿ ಒಳಗೊಳಗS ಕುದ್ಯಾಕತ್ತಿತು. ಆದ್ರ ಆ ಕುದೀ ಹೊರಗ ಹಾಕೊವ್ಯಾಳೆ ಅದಾಗಿರಲಿಲ್ಲ. ಹಿಂಗಾಗಿ ಅಂವಾ ಎಲ್ಲಾನೂ ನುಂಗಿಕೋಬೇಕಾಗಿತ್ತು."
>
> ಪುಟ-೫

> "ಗುರುಗೋಳ, ಹಂಗನಬ್ಯಾಡ್ರೀ.... ಮ್ಯಾಲಿನ ನೀರು ಮ್ಯಾಲS ಹರೀಬೇಕು. ತೆಳಗಿನ ನೀರು ತೆಳಗS ಹರೀಬೇಕು. ಇಲ್ಲಂದ್ರ ಶಾಪಹತ್ತಿ ಸುಟ್ಟು ಸತ್ತಹೋದೇವಿ ನಾವು"
>
> ಪುಟ-೬

ಪ್ರತಿಷ್ಠಿತ ವರ್ಗದ ಸಾಂಸ್ಕೃತಿಕ ಮೌಲ್ಯಗಳು ಮತ್ತು ನಂಬಿಕೆಗಳನ್ನು ಕೆಳಜಾತಿ/ವರ್ಗಗಳು ಅನುಕರಿಸಿ, ಸ್ವೀಕರಿಸಿ ಆಚರಿಸುತ್ತಿದ್ದಾಗ ಒಳ್ಳೆಯದೋ ಕೆಟ್ಟದ್ದೋ ಎಂಬ ದ್ವಂದ್ವಾತ್ಮಕ ಗೊಂದಲವುಂಟಾಗುತ್ತದೆ. ಹೀಗಾಗುವುದರಿಂದ ಪ್ರತಿಷ್ಠಿತ ವರ್ಗದ ಹಿತಾಸಕ್ತಿ ಕಾಪಾಡಿಕೊಳ್ಳಲು ನೆರವಾಗುತ್ತದೆ. ಇದು ಅಸಮಾನತೆ, ದಬ್ಬಾಳಿಕೆಗಳು ತುಂಬಾ ಸಹಜ ಮತ್ತು ಬದಲಿಸಲಾಗದಂತಹವು ಎಂದು ಒಪ್ಪಿಕೊಳ್ಳುವಂತೆ ಮಾಡಿಬಿಡುತ್ತದೆ. 'ತಪ್ದಂಡ' ಕತೆಯಲ್ಲಿ ಆಗುವುದು ಇದೇ. ಬಡಜನರ ಆಲೋಚನಾ ಕ್ರಮ, ಭಾವನೆ, ನಂಬಿಕೆಗಳನ್ನು ಬದಲಾಯಿಸುವ, ಅವರ ನೈತಿಕ ನಿಯಮಗಳನ್ನು ಕೂಡಾ ಬದಲಾಯಿಸಿಕೊಳ್ಳುವಂತೆ ಮಾಡುವ ಶಕ್ತಿ ಆಳುವ ವರ್ಗಗಳಿಗಿರುತ್ತದೆ. ಇವರ ಎಲ್ಲಾ ಹುನ್ನಾರಗಳ ಹಿಂದೆ ಇರುವ ದಬ್ಬಾಳಿಕೆ ಮತ್ತು ಅನುಸರಿಸಿಕೊಂಡು ಹೋಗುವಂತೆ ಮಾಡುವ ಒಳ ಉದ್ದೇಶಗಳನ್ನು ಲಂಕೇಶ್, ತೇಜಸ್ವಿ, ದೇವನೂರ ಮಹಾದೇವರ ಕಥೆಗಳು ಬಯಲಿಗೆಳೆಯುತ್ತವೆ. ಇಂತಹ ಅನನ್ಯತೆ ಸಾದರ ಅವರ ಕಥೆಗಳಲ್ಲಿ ಇದೆ ಎಂಬುದಕ್ಕೆ ಈ ಕಥೆಯೇ ಸಾಕ್ಷಿ. ಬಸಲಿಂಗನಿಂಗನಿಗೆ ಸಾಮಾಜಿಕ ಅತೃಪ್ತಿಯ ಕನ್ಸಂಟ್ರೈಜೇಷನ್ (ಪ್ರಜ್ಞೀಕರಣ) ಇದೆ. ತನ್ನನ್ನು ಶೋಷಿಸುತ್ತಿದ್ದಾರೆಂಬುದು ಅವನಿಗೆ ಗೊತ್ತಿದೆ. ನ್ಯಾಯಸ್ಥರು ದಂಡ ವಿಧಿಸಿದಾಗ ಕಡಿಮೆ ಮಾಡುವಂತೆ ಕೇಳುತ್ತಾನೆ. ಅವನ ಮಾತುಗಳು ಅರಣ್ಯರೋಧನವಾಗುತ್ತವೆ. ಆ ಸಂದರ್ಭದ ಮಾತುಗಳು ಹೀಗಿವೆ :

"ಅಲ್ಲಿದ್ದವರ್ಗೆ ಯಾರ್ಗೂ ಅಂವನ ಕಳ್ಳಿ
ನ್ಯಾಗಿನ ನೋವು ತಿಳಕೊಳ್ಳುವಂತಾ ಮನಸ್ಯಾರ
ಕಳ್ಳು ಇರ್ಲಿಲ್ಲ. ಮ್ಯಾಲಿನ ಜಾತಿ ಮತ್ತ
ಹಣಾ ಅನ್ನೂ ಮದದಾಗ ಅವ್ರಕಳ್ಳು, ಕಣ್ಣ
ಕಳಗೊಂಡು ಕುಡ್ಡ ಆಗಿದ್ವು"-ಪುಟ-೧೪

ಶೋಷಕ ಸನ್ನಿವೇಶದಲ್ಲಿ ಸಾಮಾಜಿಕ ಅತೃಪ್ತಿ ಇದ್ದರೂ ಮೌನವಾಗಿದ್ದುಬಿಡುತ್ತಾನೆ. ಶೋಷಿತರ ಸಂಸ್ಕೃತಿ 'ಮೌನಸಂಸ್ಕೃತಿ'. ಮೌನಸಂಸ್ಕೃತಿಯ ಜನ ಮೂಕಪ್ರಾಣಿಗಳಂತೆ ಎಲ್ಲವನ್ನೂ ಸಹಿಸಿಕೊಳ್ಳುತ್ತಾ

ಬದುಕುವುದನ್ನು ಅಭ್ಯಾಸ ಮಾಡಿಕೊಳ್ಳುತ್ತಾರೆ. 'ತಪ್ದಂಡ' ವಿಧಿಸಿದ ಮೇಲೆ ತನ್ನ ಮಗನೊಂದಿಗೆ ಮೌನವಾಗಿ ಮನೆಗೆ ಹೋಗುತ್ತಾನೆ.

'ಅವನ ಮಾತೆಲ್ಲಾನ್ನೂ ಮೌನ ನುಂಗಿಹಾಕಿತ್ತು.
ಮನಸ್ಯಾ ಮನಸ್ಯಾನ ಮ್ಯಾಗ ಹೆಂತೆಂಥಾ
ಅನ್ಯಾಯ ಮಾಡಕತ್ಯಾನಲ್ಲ...ಛೆ...ಛೆ...
ಇದನ್ನು ನೋಡೋದು ಬ್ಯಾಡಾ ಅನಕೊಂತ
ಅಷ್ಟರಾಗ ಸೂರಜಾನೂ ಕತ್ತಲ ಲೋಕ
ದಾಗ ಕಾಲಿಡಾಕತ್ತಿದ' -ಪುಟ ೨೮

ಈ ಮಾತುಗಳೇ ಸಾಕು, ಮೌನ ಸಂಸ್ಕೃತಿಯ ಎಲ್ಲಾ ಲಕ್ಷಣಗಳನ್ನು ಪ್ರತಿಮಾತ್ಮಕವಾಗಿ ಸ್ಪಷ್ಟಪಡಿಸಿಬಿಡುತ್ತವೆ. ಬಸಲಿಂಗ ಮಾಡಿರುವ ತಪ್ಪಾದರೂ ಎಂತಹುದು? ಅವನ ಮಗ ತಾನು ಹೊಡೆಸಿಕೊಂಡ ಚಪ್ಪಲಿಯಿಂದಲೇ ಗೌಡ್ರ ಮಾಸ್ತರ ಮಗನಿಗೆ ಹೊಡೆದದ್ದು. ಇದನ್ನು ತಪ್ಪು ಎಂದು ಒಪ್ಪಿ ಮಗನಿಗೆ ಹೊಡೆದದ್ದು. ಇದನ್ನು ತಪ್ಪು ಎಂದು ಒಪ್ಪಿಕೊಳ್ಳುತ್ತಾನೆ. ಈ ಮೂಲಕ ಅಮಾನವೀಕರಣದಿಂದ ಮಾನವೀಕರಣ ಹೊಂದಲು ಪ್ರಯತ್ನಿಸುತ್ತಾನೆ. ಆದರೆ ಸಾಧ್ಯವಾಗುವುದಿಲ್ಲ. ಶೋಷಣೆ, ದಬ್ಬಾಳಿಕೆ ಇತ್ಯಾದಿಗಳಲ್ಲಿ ಮುಳುಗಿರುವ ಶೋಷಕರು ನೊಂದವರನ್ನು ಬಿಡುಗಡೆ ಮಾಡುವ ಮನಸ್ಥಿತಿಯನ್ನು ಪಡೆದಿರುವುದೇ ಇಲ್ಲ. ಗ್ರಾಮೀಣ ಪ್ರದೇಶದ ಸಾಂಸ್ಕೃತಿಕ ಪರಿಸರದಿಂದ ಹುಟ್ಟಿ ಬರುವ ಎಲ್ಲ ಬರೆಹಗಳು ಸಬಾಲ್ಟರ್ನ್ ಪರವಾಗಿ ದನಿಯೆತ್ತಿ ಮಾತನಾಡಲು ಮತ್ತು ಪ್ರತಿಭಟಿಸಲು ತಮ್ಮೊಳಗೆ ಅಂತಸ್ಥವಾದ ಒಂದು ಪ್ರತಿಧ್ವಂಸಕ ಶಕ್ತಿಯನ್ನು ಹೊಂದಿರುತ್ತವೆ ಎಂಬುದಕ್ಕೆ ಸಾದರ ಅವರ ಈ ಕಥೆಯೇ ಉತ್ತಮ ನಿದರ್ಶನವಾಗಿದೆ.

ಈ ಸಂಕಲನದ ಮತ್ತೊಂದು ಕಥೆ 'ಮಟ್ಟಿಪೇಣ್ಸೇಲು.' ಗ್ರಾಮಾಂತರ ಪ್ರದೇಶಕ್ಕೆ ರಾಜಕೀಯ ಪ್ರವೇಶ ಮಾಡಿ ಅಣ್ಣ ತಮ್ಮಂದಿರಲ್ಲೇ ದ್ವೇಷಾಸೂಯೆಗಳನ್ನು ಬಿತ್ತುವುದನ್ನು ಹೇಳುತ್ತಲೇ ಅಲ್ಲಿನ ನೈಸರ್ಗಿಕ ಸಂಪತ್ತು ಹಾಳಾಗುತ್ತಿರುವುದರಿಂದುಂಟಾಗುವ ದುಷ್ಪರಿಣಾಮಗಳನ್ನು ಮನವರಿಕೆ ಮಾಡಿಕೊಡುತ್ತದೆ. 'ಬಿಕ್ರ' ಕಥೆಯಂತೆ ಅನೈತಿಕವಾಗಿ ಹಣ ಮಾಡುವುದನ್ನು ವಿಡಂಬಿಸುವ ಕುಟುಂಬಗಳು ವಿಘಟನೆಯತ್ತ ಸಾಗಿ ಮಾನವೀಯ ಸಂಬಂಧಗಳು ನಾಶವಾಗುವ ಪರಿಯನ್ನು ಅನನ್ಯವಾಗಿ ಅಭಿವ್ಯಕ್ತಿಸುವ ಈ ಕಥೆಯು ಜಾಗತೀಕರಣದ ಫಲಿತಗಳನ್ನು ಸಹ ತನ್ನಲ್ಲಿ ಅಂತರ್ಗತಗೊಳಿಸಿಕೊಂಡಿದೆ.

ಕನ್ನಡ ಕಥಾ ಸಾಹಿತ್ಯದ ಪರಂಪರೆಯನ್ನು ಮೈಗೂಡಿಸಿಕೊಂಡು ರೂಪಕ, ಪ್ರತಿಮೆಗಳ ಮೂಲಕ ಹೇಳುವ ಕಥನ ಕಲೆಯನ್ನು ರೂಢಿಸಿಕೊಂಡಿರುವ ಸಾದರ ಅವರು 'ತಪ್ದಂಡ' 'ಬಿಕ್ರ' 'ಬೆಳಕು ಮಬ್ಬಿನ ಹೆಜ್ಜೆಯಾಟ'ದಂತಹ ಕಥೆಗಳನ್ನು ಹೆಚ್ಚು ಹೆಚ್ಚು ಬರೆಯಲಿ ಎಂಬುದು ನಮ್ಮೆಲ್ಲರ ಆಶಯ.

ಎಚ್. ದಂಡಪ್ಪ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಒಂದನೇ ವೃತ್ತ, ಡಿ.ಸಿ. ಕಾಂಪೌಂಡ್, ಧಾರವಾಡ.

'ದೀಪ ಸಾಲಿನ ನಡುವೆ' ಚೆಲುವು-ಒಲವಿನ ಕಾವ್ಯ

ಪ್ರೊ|| ಎಂ.ಎಸ್. ರಘುನಾಥ್

'ಎಲ್ಲರಿಗೊಳಿತನು ಬಯಸಲಿ ಕವನ' ಎಂಬ ಮೂಲ ಆಶಯದಿಂದ ಕಳೆದ ಆರು ದಶಕಗಳಿಂದ ಕಾವ್ಯ ಸೃಷ್ಟಿಯಲ್ಲಿ ತೊಡಗಿರುವ ಕೆ.ಎಸ್. ನರಸಿಂಹಸ್ವಾಮಿಯವರು ಕನ್ನಡಿಗರ ಒಲವಿನ ಕವಿ. ಕಾವ್ಯರಸಿಕರ ಹೃದಯದಲ್ಲಿ ಶಾಶ್ವತ ಸ್ಥಾನ ಪಡೆದಿರುವ ಕವಿ. ತಮ್ಮ ಎಂಭತ್ತೊಂಭತ್ತರ ವಯೋಮಾನದಲ್ಲಿಯೂ ಕಳೆದ ವರ್ಷದ ಅಂತ್ಯದಲ್ಲಿ ಹೊರತಂದ 'ದೀಪ ಸಾಲಿನ ನಡುವೆ' ಕಾವ್ಯ ಸಂಕಲನ ಅವರಲ್ಲಿ ಪುಟಿಯುತ್ತಿರುವ ಕಾವ್ಯ ಸೃಷ್ಟಿ ಚೈತನ್ಯಕ್ಕೆ ಸಾಕ್ಷಿಯಾಗಿದೆ. ವೃದ್ಧಾಪ್ಯದಿಂದ ದೃಷ್ಟಿ ಮಾಂದ್ಯವಾಗಿದ್ದರೂ ಸಹ ಮಿತ್ರರೊಬ್ಬರಿಂದ ತಮ್ಮ ಕವಿತೆಗಳನ್ನು ಬರೆಸುತ್ತಾರೆ. (ಜಾನ್ ಮಿಲ್ಟನ್ ಅಂಧನಾದ ಮೇಲೆ ಮಹಾಕಾವ್ಯ ರಚಿಸಿದ್ದು ನೆನಪಾಗುವುದಿಲ್ಲವೆ ?) ನರಸಿಂಹಸ್ವಾಮಿಯವರ ಇಲ್ಲಿನ ಕವಿತೆಗಳು ಅವರ ಕಾವ್ಯ ಸಂವೇದನೆ, ಮೈಸೂರ ಮಲ್ಲಿಗೆಯಷ್ಟು ಇಂಪಾಗಿವೆ. ಕಂಪನ್ನು ಸೂಸುತ್ತಿವೆ. ಅವರ ಕಣ್ಣಿನ ದೃಷ್ಟಿ ಮಂದವಾಗಿದ್ದರೂ, ಅವರ ಅಂತರಂಗದ ದೃಷ್ಟಿ ತುಂಬ ಸೂಕ್ಷ್ಮವಾಗಿದೆ, ಸಂವೇದನಾಶೀಲವಾಗಿದೆ. ಅದಕ್ಕೆ ಕವಿ ಹೇಳುತ್ತಾರೆ.

'ಕಣ್ಣೇ ಹೋಯಿತೆಂದು ನನಗೆ ಬಂದಿದೆ ಚಿಂತೆ/ಒಳಗಣ್ಣು ಕವಿತೆಯನು ನೇಯುವವು ಒಳಗೊಳಗೆ.' ದೃಷ್ಟಿ ಮಂದವಾಗಿದ್ದರೂ ಅವರ ಕಾವ್ಯ ಮಂದವಾಗಿಲ್ಲ, ಅದರ ಸೃಷ್ಟಿ ಕುಂಠಿತಗೊಂಡಿಲ್ಲ.

'ಒಳಗಣ್ಣ ಮುಂದೆ ನಾನು ನನ್ನ ಕವಿತೆಯ ಕಂಡೆ/ಕವಿತೆ ಸಾವಿರ ಕಣ್ಣ ತೆರೆದು ಕಂಡಿತು ನನ್ನೆ' ಈ ಕವಿಗೆ ತಮ್ಮ ಕಾವ್ಯದ ವಿಸ್ತಾರದಂತೆಯೇ, ಇತಿಮಿತಿಗಳ ಅರಿವೂ ಇದೆ.

"ಕಡಲು ಭೋರ್ಗರೆಯುವುದು, ಆಕಾಶ ಮಿಂಚುವುದು ಎಲ್ಲವನು ಒಳಗೊಳುವುದೆನ್ನ ಕವಿತೆ/ಯಾರು ಏನೆಂದರೂ ಸುಮ್ಮನಿರಬೇಕೆಂದು ನನಗೆ ಹೇಳಿದ್ದುಂಟು ನನ್ನ ಕವಿತೆ." ಅಷ್ಟೇ ಅಲ್ಲ, ಕಾವ್ಯದ ಸಾರ್ಥಕತೆಯೂ ಆಗಿದೆ.

'ಬದುಕಿ ಬಾಳುವ ಮಂದಿಗರ್ಥವಾಯಿತು, ಕವಿತೆ' ಅನುಭವಗಳಾಚೆಗಿದೆ ನನ್ನ ಬದುಕೆ.'

ಕೆಎಸ್‌ನ ಅವರು ಮೂಲತಃ ಚೆಲುವಿನ ಆರಾಧಕರು. ಆದರೆ ಅವರ ಈ ಧೋರಣೆ ಸಾಕಷ್ಟು ಬದಲಾವಣೆಗಳನ್ನು ಕಂಡಿದೆ. ಚೆಲುವು ಮತ್ತು ಒಲವು ಎರಡೂ ಅವರ ಧೋರಣೆಗೆ ಪರಸ್ಪರ ಪೂರಕವಾಗಿದೆ.

'ಚೆಲುವ ನೋಡುತ ಮುಂದೆ ಮುಂದೆ ನಡೆವುದೆ ಚೆಂದ/ಒಲವಿನಾಶೀರ್ವಾದ ತುಂಬ ಚಂದ' (ನೀ ಚೆಂದ ನಮ್ಮ ಮನೆಗೆಲ್ಲಾ) ಎಂದು ಜೋಗುಳ ಹಾಡುತ್ತಾರೆ ಮಗುವೊಂದನ್ನು ಕುರಿತು. ಕವಿಯ ದೃಷ್ಟಿಯಲ್ಲಿ ಚೆಲುವೇ ಬದುಕು.

'ಹುಟ್ಟು ಸಾವುಗಳ ನಡುವಿನ ಬದುಕು ಬಲು ಚೆಂದ/ದೀಪಗಳ ದಾಟುತ್ತ ನಡೆಯುವುದು ಚೆಂದ.'

ಒಲವು ಚೆಲುವು ಎರಡರ ಸಂಯೋಗವೇ ಬದುಕು. ಅದಕ್ಕೆ ಅರ್ಥ ಬರುವುದೂ ಕೂಡ ಅದರಿಂದಲೇ.

'ಚೆಲುವು ಚಿತ್ರದ ಹಾಗೆ ಒಲವದರ ಕೆಂಪು ನಗೆ/ಬದುಕಿಗರ್ಥವು ಬರುವುದದರಿಂದಲೇ ಒಲವು ಚೆಲುವಾಗುವುದು ಒಂದು ಬಾಳಿನ ಪುಣ್ಯ/ನಾನಂತು ಬದುಕಿರುವುದದರಿಂದಲೇ' (ಮಧುಗಿರಿಯಲ್ಲಿ ಕಂಡಾಗ)

ದೀಪ ಆರಬಹುದು ಗಾಳಿಗೆ. ಆದರೆ 'ಗಾಳಿಗಾರುವುದಿಲ್ಲ ಒಲವ ಸೊಡರು' ಅದು ಕವಿಯ ನಿಲುವು, ನಂಬಿಕೆ. ಹಾಗೆ ನೋಡಿದರೆ ಮಳೆಯಿಲ್ಲದ ಭೂಮಿಯೂ ಕವಿಗೆ ಭಿನ್ನ ರೀತಿಯಲ್ಲಿ ಕಾಣುವುದು.

'ಹಸಿರಾಗಿದೆ ಭೂಮಿಯ ಮೈ
ಹಸಿವಾದರು ಅದಕೆ ನರ್ತಿಸುತಿದೆ ಥಕ ಥಕ ಥೈ
ಏನಾಗಿದೆಯೇ ಅದಕೆ (ನಾಡಪಾಡು)

ಚೆಲುವು ವಿಭಿನ್ನ ಅವಸ್ಥಾಂತರಗಳನ್ನು ಪಡೆಯುವ ಶಕ್ತಿಯಾಗಿ ಕವಿ ಕಾಣುತ್ತಾರೆ. ಅದರ ಒಂದು ಮಜಲು ತೋದರೂ ಮತ್ತೊಂದು ಕಾದಿರುತ್ತದೆ.

'ಚೆಲುವು ಮತ್ತೆ ಬರುವುದೇನು
ಕೇಳುತ್ತಿದೆ ಬದುಕು
ಗಾಳಿಯೊಂದು ಬೀಸುತಿಹುದು
ಅದಕು ಇದಕು ಎದಕು' (ಸ್ವಭಾನು)

ಕವಿ ಬೇಂದ್ರೆಯವರ ಸಾಲು ಇಲ್ಲಿ ಅರ್ಥಪೂರ್ಣವಾಗಿ ಬಳಕೆಯಾಗಿದೆಯೆನ್ನಬಹುದು.

'ಚೆಲುವು ಒಲವುಗಳಲ್ಲಿ ಬಾಳ ಹಾದಿಯ ಕಂಡೆ/ಹೂವ ಪರಿಮಳದಲ್ಲಿ ಧನ್ಯನಾದೆ' (ಮಲ್ಲಿಗೆಯ ನನ್ನಾಯ್ಕೆ) ಇಂಥ ಸಾಲುಗಳಲ್ಲಿ, ಚೆಲುವು ಒಲವಿನ ಸಂಸರ್ಗದಲ್ಲಿ ಕವಿಯ ಧನ್ಯತೆ ಮಾರ್ಮಿಕವಾಗಿ ವ್ಯಕ್ತವಾಗಿದೆ.

ಹಾಗೆಂದ ಮಾತ್ರಕ್ಕೆ ಈ ಕವಿಗೆ ವಾಸ್ತವದ ಅರಿವು ಇಲ್ಲವೆನ್ನಲಾಗುವುದಿಲ್ಲ. ನೀಲಾಕಾಶದ ಏರುಪೇರುಗಳೂ ಕವಿಗೆ ಸಹಜ. ಅದೇ ಬದುಕಿನ ಸವಾಲು.

'ಸಿಡಿಲಾಗಿ ಮಿಂಚಾಗಿ ನಾನೆ ಕಾಣಿಸಿಕೊಂಡು/ದಾರಿಯನು ತೋರುತಿಹ ಮನುಜ ನಾನು' ಈ ಸವಾಲನ್ನು ಎದುರಿಸುವ ಹೋರಾಟದಲ್ಲಿ ಕವಿ ಸಾರ್ಥಕತೆ ಕಂಡುಕೊಳ್ಳುತ್ತಾರೆ.

'ದೀಪ ಸಾಲಿನ ನಡುವೆ ನಾನು ನನ್ನನು ಕಂಡೆ/ಧನ್ಯೋಸ್ಮಿ ಎಂದು ನಾನಂದುಕೊಂಡೆ.' (ಹಸಿದ ಮಗು)

ಸುಮತೀಂದ್ರ ನಾಡಿಗರು ಈ ಸಂಗ್ರಹದ ಮುನ್ನುಡಿಯಲ್ಲಿ ಸರಿಯಾಗಿಯೇ ಗುರುತಿಸಿರುವಂತೆ "ನರಸಿಂಹಸ್ವಾಮಿಯವರ ಕವಿತೆ ಲೋಕದ ಜತೆಗೆ ಮಾತುಕತೆ ನಡೆಸುವ ರೀತಿಯದು." ಜನ ಅವರಿಗೆ ಏನಾದರೂ ಹೇಳಲಿ, ಅದಕ್ಕೆ ಅವರು ಪ್ರತಿಕ್ರಿಯಿಸುತ್ತಾರೆ.

"ಚಳಿಗಾಲದಲ್ಲಿ ಚಳಿ, ಮಳೆಗಾಲದಲ್ಲಿ ಮಳೆ/ಬೇಸಗೆಯಲ್ಲಿ ಬಿಸಿಲು ಉರಿವುದೆಂದು/ಬಲ್ಲವರು ಹೇಳುವರು ಪಂಚಾಂಗವ ತೆರೆದು/ಪ್ರಕೃತಿ ನಿಯಮವಿದೆಂದು ಅವರುತ್ತರ." (ಪಂಚಾಂಗ ಮತ್ತು ಮಳೆ)

ಬೇರೆಯವರು ಹೇಳಿದ್ದನ್ನೆಲ್ಲಾ ಕೇಳಿದ ಮೇಲೆ ಅವರು ಉತ್ತರಿಸುತ್ತಾರೆ ಮೆಲುದನಿಯಲ್ಲಿ :

'ನನ್ನಲ್ಲಿ ಕೂಡ ಪ್ರಾಚೀನ ಪಂಚಾಂಗವಿದೆ
ಅದರಂತೆ ಬರಲಿಲ್ಲ ಯಾವ ಮಳೆಯೂ
ನಮ್ಮ ನಿಯಮಗಳೆಲ್ಲ ಪ್ರಕೃತಿ ನಿಯಮದ ಜತೆಗೆ
ಹೊಂದಿಕೊಂಡರೆ ಮಾತ್ರ ನಮ್ಮದು ಸರಿ.'

ಏನೇ ಆಗಲಿ ಕವಿಗೆ ಬದುಕಿನಲ್ಲೇ ಅದಮ್ಯ ಉತ್ಸಾಹ, ನಂಬಿಕೆ. ಅದರಿಂದ ಕವಿ ಒಂದಿಷ್ಟೂ ವಿಚಲಿತರಾಗುವುದಿಲ್ಲ.

'ಸೋಲು ಗೆಲವುಗಳಲ್ಲಿ ಮುಂಬರಿಯುವೆ ನಾನು
ನಾನು ಅಂಜುವುದಿಲ್ಲ ಬಿರುಗಾಳಿಗೆ
ನನ್ನ ನಂಬಿಕೆಯಲ್ಲಿ ಅಡಿಯನಿಡುವೆನು ನಾನು
ನಾನೆ ನಕ್ಷತ್ರ ನೀಲಾಕಾಶ ನಾನೆ. (ನನ್ನ ನೆರಳು)

ನಕ್ಷತ್ರದ ರೂಪಕ ಕೆಎಸ್‌ನ ಅವರ ಕಾವ್ಯದಲ್ಲಿ ವಿಪುಲವಾಗಿ ಕಾಣಿಸಿಕೊಳ್ಳುತ್ತಿದೆ. ಈಗ್ಗೆ ಎರಡು ವರ್ಷದ ಹಿಂದೆ ಪ್ರಕಟವಾದ ಅವರ ಕಾವ್ಯ ಸಂಗ್ರಹದ ಹೆಸರು 'ಎದೆತುಂಬ ನಕ್ಷತ್ರ'. ಅದರಲ್ಲಿ ಕವಿ ಹೇಳಿದಂತೆ :

ಎಷ್ಟು ನಕ್ಷತ್ರಗಳು ಬಾನೊಳಿರುವವೊ, ಕಾಣೆ/ತಾರೆಗಳ ಮೌನಕ್ಕೆ ಅರ್ಥವೇನು ? (ತನ್ನ ವಾರಿಗೆ ತಾನು ಲೋಕದುರುಳು)

ಆ ಸಂಗ್ರಹದ 'ಮುನ್ನುಡಿ ಕವಿತೆ'ಯಲ್ಲಿ ಜಿ.ಎಸ್. ಶಿವರುದ್ರಪ್ಪನವರು ಬರೆದಂತೆ :

'ಎದೆ ತುಂಬ ನಕ್ಷತ್ರಗಳ ಬಚ್ಚಿಟ್ಟುಕೊಂಡ
ಚೈತನ್ಯಕ್ಕೆ ಕತ್ತಲೆಯ ಭಯವಿಲ್ಲ'

ತಾರೆಗಳ ಮೌನದ ನಿಗೂಢತೆಗೆ ಮಾತು ಕೊಟ್ಟ ಕವಿ ನಮ್ಮನ್ನೂ ಮುಗ್ಧರನ್ನಾಗಿಸುತ್ತಿರುವುದು ಕಂಡುಬರುತ್ತದೆ.

ಚೆಲುವು, ಬದುಕು, ಅದರಾಚೆಗೂ ಸ್ವಾಭಾವಿಕವಾಗಿಯೇ ಚಿಂತನೆ ನಡೆಸುವ ಕವಿ ಕಾವ್ಯದಲ್ಲಿ ಅಭಿವ್ಯಕ್ತಿಸುತ್ತಾರೆ. 'ದೇವರು ಇದ್ದಾನೊ ಇಲ್ಲವೊ, ಇದ್ದರೆ ಅವನು ಕಾಣಿಸಿಕೊಳ್ಳಲಿ' ಎನ್ನುವುದು ಅವರ ಆಧ್ಯಾತ್ಮಿಕತೆಯಾಗಿದೆ. ದೇವರಿಗೂ 'ನೀನೆ ನಾನು' ಎಂದು ಹೇಳುವಂಥ ಹಂತವನ್ನು ತಲುಪಿರುವುದು ಆಶ್ಚರ್ಯವನ್ನುಂಟು ಮಾಡುತ್ತದೆ.

'ಕತ್ತಲೆಗೆ ಬತ್ತಲೆಗೆ ನಾನು ಹೆದರುವುದಿಲ್ಲ
ಬಿಂಬ ಪ್ರತಿಬಿಂಬಗಳ ನಡುವೆ ನಿಂತಿದ್ದೇನೆ.
ನೀನು ನಾನೇ ಪ್ರಭುವೆ, ನೀನು ನಾನು
ನೀನು ಯಾರೂ ಅಲ್ಲ, ನೀನೆ ನಾನು' (ನೀನೆ ನಾನು)

ಆ ದೇವರ ಅನ್ವೇಷಣೆಯಲ್ಲಿ ಕವಿ ಬಹುದೂರ ಸಾಗುತ್ತಾರೆ. ಚಿತ್ರ ೧ ರಲ್ಲಿ :

'ದೇವರಿದ್ದಾನೆ ಎನುವರು ಕೆಲರು
ಅವನಿಲ್ಲವೆನ್ನುವರು ಇನ್ನು ಕೆಲರು
ಹಗಲು ರಾತ್ರಿಗಳಲ್ಲಿ ಉರುಳುತ್ತಲಿದೆ ಲೋಕ,
ಇಹನೊ ಇಲ್ಲವೊ ಎಂಬ ಚಿಂತೆ ಇರದೆ'

ಎಂದು ಹೇಳಿದ ಕವಿ ಚಿತ್ರ ೨ ರಲ್ಲಿ ಈ ತೀರ್ಮಾನಕ್ಕೆ ಬರುತ್ತಾರೆ:

'ದೇವರಿದ್ದಾನೆ ಸರಿ, ಗೊತ್ತಿಲ್ಲ ಎಲ್ಲೆಂದು
ಎಲ್ಲಿದ್ದರೂ ಬರಬೇಕು ಅವನು ಹೊರಗೆ !'

ಇದೇ ಕೆಎಸ್‌ನ ಅವರ ಕಾವ್ಯಯಶಸ್ಸಿನ ಗಾಥೆ. ಚೆಲುವು, ಬದುಕು, ಅವುಗಳರ್ಥದ ಅನ್ವೇಷಣೆ, ಅನ್ವೇಷಣೆಯ ದೀರ್ಘ ಹಾದಿಯ ಪಯಣ. ಅದು ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಕರೆದಂತೆ 'ಇಹದ ಪರಿಮಳ ಹಾದಿ'ಯಾದರೆ, ಜಿ.ಎಸ್. ಶಿವರುದ್ರಪ್ಪ ಅವರ ಪ್ರಕಾರ "ತುಂಬು ಹೊಳೆಯಂತೆ ಗಂಭೀರವಾಗಿ ಹರಿಯುತ್ತಲೇ ಇರುವ ಎಂದಿಗೂ ಮುಗಿಯದ ಹಾಡು".

●

ಪ್ರೊ।। ಎಂ.ಎಸ್. ರಘುನಾಥ್, ಹೆಚ್‌ಐಜಿ-೪೦, ೬ನೇ ಮೇನ್, ಕೆಹೆಚ್‌ಬಿ ಕಾಲೋನಿ, ೨ನೇ ಹಂತ, ಬಸವೇಶ್ವರನಗರ, ಬೆಂಗಳೂರು - ೫೬೦ ೦೭೯

ಲೇಖಕರಿಗೆ ವಿನಂತಿ

ಅಕಾಡೆಮಿಯ ತ್ರೈಮಾಸಿಕ ಪತ್ರಿಕೆ 'ಅನಿಕೇತನ'ದ ಸ್ವರೂಪದಲ್ಲಿ ರಚನಾತ್ಮಕ ಬದಲಾವಣೆಗಳನ್ನು ತರಬೇಕೆಂಬ ಹಂಬಲವನ್ನು ತಾವು ಇದುವರೆಗಿನ ಸಂಚಿಕೆಗಳ ಮೂಲಕ ಗಮನಿಸಬಹುದಾಗಿದೆ. ಕನ್ನಡದ ಶ್ರೇಷ್ಠ ಲೇಖಕರನ್ನೆಲ್ಲ ಒಳಗೊಳ್ಳುವಂತೆಯೂ ಹಾಗೂ ಹೊಸ ಸಂವಾದ, ಸಂವೇದನೆಗಳ ಶಕ್ತ ವೇದಿಕೆಯಾಗಿ ಪತ್ರಿಕೆ ಗಂಭೀರ ಸಾಹಿತ್ಯ ಚಿಂತನೆಗಳ ಅಭಿವ್ಯಕ್ತಿಯಾಗಿ ರೂಪುಗೊಳ್ಳಬೇಕೆಂಬುದೂ ನಮ್ಮ ಆಶಯವಾಗಿದೆ. ಕನ್ನಡದ ಹಿರಿಯ ಹಾಗೂ ಭರವಸೆಯ ಹೊಸ ಪೀಳಿಗೆಯ ಲೇಖಕರೆಲ್ಲರ ಭಾಗವಹಿಸುವಿಕೆಯೇ ಪತ್ರಿಕೆಗೆ ಜೀವದ್ರವ್ಯವಾದ್ದರಿಂದ ತಮ್ಮ ಅಮೂಲ್ಯ ಸಹಕಾರ ಅತ್ಯಗತ್ಯ.

ಅನ್ಯಭಾಷೆಯ ಶ್ರೇಷ್ಠ ಬರಹಗಳ ಅನುವಾದದೊಂದಿಗೆ, ಸ್ವತಂತ್ರ ಬರಹಗಳನ್ನು ಆಹ್ವಾನಿಸುತ್ತಿದ್ದೇವೆ. 'ಅನಿಕೇತನ'ಕ್ಕಾಗಿ ಕವಿತೆ / ಕಥೆ / ಕಿರುನಾಟಕ / ವಿಮರ್ಶಾತ್ಮಕ / ವೈಚಾರಿಕ ಲೇಖನ / ಪ್ರಬಂಧ / ಸಾಂಸ್ಕೃತಿಕ ಚಿಂತನೆ ಹಾಗೂ ಅನುವಾದಗಳನ್ನು ಕಳುಹಿಸಿ ಕೊಡುವುದರ ಮೂಲಕ ನಮ್ಮ ಪ್ರಯತ್ನಕ್ಕೆ ಸಹಕರಿಸಬೇಕೆಂದು ಕೋರುತ್ತಿದ್ದೇವೆ. ದಯವಿಟ್ಟು ಬರೆಯಿರಿ. ಪತ್ರಿಕೆಗೆ ಹೊಸ ರೂಪ ಕೊಡಬೇಕೆಂಬ ಪ್ರಯತ್ನಗಳ ನಮ್ಮೊಂದಿಗೆ ಸದಾ ನೀವಿರುತ್ತೀರೆಂಬುದೇ ನಮ್ಮ ಧೈರ್ಯ ಹಾಗೂ ವಿಶ್ವಾಸ.

ಅನುವಾದಗಳಾದರೆ ಮೂಲ ಲೇಖಕರ ಹೆಸರು, ವಿಳಾಸ, ಮೂಲ ಬರಹದ ಭಾಷೆಯ ವಿವರ ಅಗತ್ಯ. ಅನುಮತಿ ಪತ್ರದ ಜೆರಾಕ್ಸ್ ಪ್ರತಿ ಜೊತೆಯಲ್ಲಿರುವುದು ಅಪೇಕ್ಷಣೀಯ. ಬರವಣಿಗೆ ಹಾಳೆಯ ಒಂದೇ ಮಗ್ಗುಲಲ್ಲಿದ್ದು, ಸ್ಫುಟವಾಗಿ, ಓದಲು ಅನುಕೂಲವಾಗುವಂತಿರಲಿ.

ಬರಹಗಳನ್ನು ಕಳುಹಿಸಬೇಕಾದ ವಿಳಾಸ :
ಸಂಪಾದಕರು, 'ಅನಿಕೇತನ', ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

-ಸಂಪಾದಕರು



ನಾವು ಕೀಳುಜನ ಅಂತಾ ನಂಬಿಸಲು .....

ನಾವು ಕೀಳುಜನ ಅಂತಾ ನಂಬಿಸಲು ವಸಾಹತುಶಾಹಿಗಳು ಬಳಸಿದ ಸಾಧನಗಳೆಂದರೆ ಶಿಲುಬೆ, ಬಂದೂಕು ಮತ್ತು ಶಾಲೆಗಳು. ಈ ದ್ರಾಬೆಗಳು ನಮಗೆ ಕಲಿಸಿಕೊಟ್ಟ ಹಾಡುಗಳನ್ನು ನೋಡಿ: ''ಏನ್ ಮಜಾ ಐತೆ ಬಿಡ್ರೀ ಭತ್ತ ನೆಡೋದ್ರಾಗೆ? ಏನ್ರೀ ಐತೆ ಚಂದ ಭತ್ತ ನೆಡೋದ್ರಾಗೆ ?'' ಅಥವಾ ''ಅಮೆರಿಕ......ಅಮೆರಿಕ, ಸೋದರ ಸಂಬಂಧದ ಒಳಿತಿಗೆ ಕಿರೀಟ, ಅಮೆರಿಕಾ- ಅಮೆರಿಕಾ, ಹೊಳೆಯೋ ಕಡಲಿಂದ ಕಡಲಿನ ತನಕ ಅಮೆರಿಕಾ..............ಅಮೆರಿಕಾ''

ಆದರೆ, ಶಾಲೆಯಲ್ಲಿ ನಾವು ಮಾತೃಭಾಷೆಯಲ್ಲಿ ಮಾತಾಡಿದರೆ ಮಾತ್ರ ದಂಡ ಹಾಕುತ್ತಿದ್ದರು.

– ವಿಕ್ಟೋರಿಯ ತಾಲಿ -ಕರ್ಪೂಜ್
ಫಿಲಿಪೈನ್ಸ್